# ಹೆಳವರು

## ೧. ಅಧ್ಯಯನದ ಉದ್ದೇಶ ಮತ್ತು ಮಹತ್ವ

### ಪೀಠಿಕೆ

ಇಂಡಿಯಾದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಹಲವು ಬಗೆಯ ಜಾತಿ ಸಮುದಾಯಗಳು ಕಂಡುಬರುತ್ತವೆ. ಸಾವಿರಾರು ವರ್ಷಗಳ ಕಾಲ ಪೋಷಿಸಿಕೊಂಡು ಬಂದಿರುವ ಈ ವಿಷಯ ಸಾಮಾಜಿಕ ವ್ಯವಸ್ಥೆಯಲ್ಲಿ ವಿಕ್ಷಿಪ್ತ ಆಳ್ವಿಕೆ ಮತ್ತು ಅಸಹಾಯಕ ಶರಣಾಗತಿಗಳು ಅನೂಚಾನವಾಗಿ ನಡೆದು ಬಂದಿದೆ. ಅಲ್ಪಸಂಖ್ಯಾತ ಆಳುವ ವರ್ಗ ಬಹುಸಂಖ್ಯಾತ ಶ್ರಮಿಕರನ್ನು ಹೀನಾಯವಾಗಿ ಜಾತಿ ಶ್ರೇಣಿಗಳಲ್ಲಿ ಜೋಡಿಸಿಕೊಂಡು ಬಂದಿದೆ. ಮೇಲು ನೋಟಕ್ಕೆ ಇದು ಕೇವಲ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಬಹುಸಂಖ್ಯಾತ ಶ್ರಮಿಕರನ್ನು ವಂಚಿಸುವ ಹುನ್ನಾರದಂತೆ ಕಂಡರೂ ಸಹ, ಈ ಹುನ್ನಾರದ ಹಿಂದೆ ಶ್ರಮಿಕರ ಉತ್ಪಾದನೆಯ ಮೇಲೆ ಮೈಲ್ವರ್ಗಗಳು ನಿರ್ಣಾಯಕ ಹಿಡಿತ ಸಾಧಿಸುವ ರಾಜಕಾರಣ ವ್ಯವಸ್ಥಿತವಾಗಿ ಕೆಲಸ ಮಾಡುತ್ತ ಬಂದಿದೆ. ಮನುಷ್ಯನ ಬದುಕಿಗೆ ರೂಪ ಕೊಡುವ, ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ತಲೆ ಎತ್ತಿ ನಡೆಯುವ ಆತ್ಮ ಪ್ರತ್ಯಯವನ್ನು ಸಂಚಯಿಸುವ ಆರ್ಥಿಕ ಸ್ವಾವಂಬನೆಯನ್ನೇ ಈ ದೇಶದ ಆಳುವ ವರ್ಗ ನಾಶಮಾಡುತ್ತ ಬಂದಿದೆ. ಬಹುಸಂಖ್ಯಾತ ಶ್ರಮಿಕರು ಇನ್ನೂ ಆರ್ಥಿಕ ರಂಗದಲ್ಲಿ ಶತಮಾನಗಳಷ್ಟು ಹಿನ್ನೆಡೆ ಅನುಭವಿಸಿರುವುದಕ್ಕೆ ಈ ದೇಶದಲ್ಲಿ ನಿರಂತರವಾಗಿ ಸಾಕಿಕೊಂಡು ಬಂದಿರುವ ಅಮಾನವೀಯ ಅಸಮಾನತೆಯೇ ಕಾರಣ. ವೃತ್ತಿಗನುಗುಣವಾಗಿ ಜಾತಿಗಳನ್ನು ವಿಂಗಡಿಸಿದರೂ ಸಹ, ಉತ್ಪಾದನೆಯ ಅತ್ಯಂತಿಕ ಫಲಗಳನ್ನು ಆಳುವ ವರ್ಗವೇ ಅನುಭವಿಸುತ್ತಾ ಬಂದಿದೆ. ಆದರೆ ಕಸಬುಗಳನ್ನಾಧರಿಸಿ ರೂಪುಗೊಂಡ ಸಾಮಾಜಿಕ ಅಸಮಾನತೆ ಮತ್ರ ಸಮುದಾಯಗಳನ್ನು ನಿರಂತರವಾಗಿ ಕಾಡುತ್ತಲೇ ಬಂದಿದೆ. ಇದರ ಜೊತೆಗೆ ಉತ್ಪಾದನಾ ಕ್ಷೇತ್ರದಲ್ಲಿ ಯಾವ ಆಯ್ಕೆಗಳೂ ಇಲ್ಲದೆ ಆತ್ಮ ಪ್ರತ್ಯಯವಿಲ್ಲದ ಅಸಹಾಯಕ ಸ್ಥಿತಿಯಲ್ಲಿ ಬಹುಸಂಖ್ಯಾತ ಶ್ರಮಿಕರು ಈ ದೇಶದ ಚರಿತ್ರೆಯುದ್ದಕ್ಕೂ ಬದುಕಿ ಬಂದಿದ್ದಾರೆ.

ಒಂದು ದೇಶದ ಚರಿತ್ರೆಯ ನಿರ್ಮಾಣದಲ್ಲಿ ಆ ದೇಶದ ಉತ್ಪಾದನಾ ಶಕ್ತಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಒಂದು ದೇಶದ ಸಮಾಜ, ಸಂಸ್ಕೃತಿ ಮತ್ತು ಐಕ್ಯತೆಗಳು ಸಾಧಿತವಾಗುವುದು ಆ ದೇಶದ ಶ್ರಮಿಕರಿಂದಲೇ, ಆದರೆ ಭಾರತವೆಂಬ ದೇಶದ ಚರಿತ್ರೆಯುದ್ದಕ್ಕೂ ನಡೆದ ಅನೇಕ ಯುದ್ಧಗಳಲ್ಲಿ ಸಂಘರ್ಷಗಳಲ್ಲಿ ತಮ್ಮನ್ನು ಅರ್ಪಿಸಿಕೊಂಡು, ಈ ದೇಶದ ಸಂಸ್ಕೃತಿ ಸೌಧದ ಅಡಿಗಲ್ಲುಗಳಾಗಿ ಬದುಕಿಗೆ ಹಂಬಲಿಸುತ್ತಿವೆ. ಈ ದೇಶಕ್ಕೆ ಸಾವಿರಾರು ವರ್ಷಗಳ ಇತಿಹಾಸ, 'ಹೆಮ್ಮೆ'ಯಿಂದ ಹೇಳಿಕೊಳ್ಳಲಾಗುವ ಸಾಸ್ಕೃತಿಕ ಪರಂಪರೆ ಇದ್ದರೂ ಇವುಗಳನ್ನು ನಿರ್ಮಾಣ ಮಾಡಿದ ಸಮುದಾಯಗಳು ಇಂದಿಗೂ ಒಪ್ಪೊತ್ತಿನ ಊಟಕ್ಕೆ ದಿಕ್ಕಿಲ್ಲದೆ ದಿನ ಕಳೆಯುತ್ತಿವೆ. ಕಾರಣ ಆರ್ಥಿಕ ಮತ್ತು ಉತ್ಪಾದನಾ ಕ್ಷೇತ್ರದ ಮೇಲೆ ಆಳುವ ವರ್ಗಗಳು ಸಾಧಿಸಿದ ಹಿಡಿತವು ಜಾತಿ ವ್ಯವಸ್ಥೆಯನ್ನು ಲೌಕಿಕವಾಗಿ ಪೋಷಿಸಿಕೊಂಡು ಬಂದಿದೆ. ಜಾತಿ ವ್ಯವಸ್ಥೆಯ ಸಂರಕ್ಷಣೆಯೆಂದರೆ, ಅತ್ಯಂತಿಕವಾಗಿ ಆಳುವ ವರ್ಗಗಳು ಉತ್ಪಾದನಾ ಕ್ಷೇತ್ರದ ಮೇಲೆ ಸಾಧಿಸುವ ನಿರ್ಣಾಯಕ ಹಿಡಿತವೆಂದೇ ಅರ್ಥ. ಅಲೌಕಿಕ ಕಾರಣಗಳು, ಹುಟ್ಟಿನಿಂದಾಗಿಯೇ ತನ್ನ ಬದುಕಿನ ಕಾಲಾವಧಿಯ ಉದ್ದಕ್ಕೂ ಸಾಮಾಜಿಕ ಮತ್ತು ಆರ್ಥಿಕ ಅಧಿಕಾರಿಗಳಿಲ್ಲದೆ ತುಟಿ ಕಚ್ಚಿ ಬದುಕಿ ಇಲ್ಲವಾಗುವ ಅನೇಕ ಜಾತಿ ಸಮುದಾಯಗಳು ಇಂದೂ ಇಂಡಿಯಾದಲ್ಲಿ ಜೀವಂತವಾಗಿವೆ. ಸಾವಿರಾರು ವರ್ಷಗಳ ಕಾಲ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗದ ಯಜಮಾನರಾಗಿ ಈ ದೇಶದ ವಿಷಮತೆಯನ್ನು ಸಾಂಗೋಪಾಂಗವಾಗಿ ರಕ್ಷಿಸಿಕೊಂಡು ಬಂದವರು ಇನ್ನೂ ಆಳುವ ವರ್ಗವಾಗಿದ್ದುಕೊಂಡೇ ಭ್ರಮೆಗಳನ್ನು ಹಂಚುತ್ತಿದ್ದಾರೆ. ಈ ಭೂಮಿಯ ಯಾವುದೋ ನಿರ್ವಾತದಲ್ಲಿರುವ ಗ್ರಹಿವೊಂದರಲ್ಲಿ ಜೀವಸಂಕುಲವಿದೆಯೋ ಇಲ್ಲವೋ ಎಂದು ಶೋಧಿಸಲು ಮನುಷ್ಯ ಆಕಾಶವನ್ನು ಗುರಿ ಮಾಡಿ ಹಾರುತ್ತಿದ್ದರೆ, ಇಂಡಿಯಾದ ದನಿ ಇಲ್ಲದ ಸಮುದಾಯಗಳು ಈ ಹೊತ್ತಿನ ಊಟಕ್ಕೆ ಬೀದಿಗಳಲ್ಲಿ ಬೆವರಾಗಿ, ಪರಂಪರೆಯ ನಿಕೃಷ್ಠ ಕಸಬುಗಳನ್ನೆ ಅವಲಂಬಿಸಿ ಬದುಕುತ್ತಿವೆ. ಈ ಸಮುದಾಯಗಳಿಗೆ ವರ್ತಮಾನದಲ್ಲಿ ವೃತ್ತಿಗಳನ್ನು ಬದಲಿಸಿಕೊಳ್ಳುವಷ್ಟು ಆತ್ಮ ವಿಶ್ವಾಸವಿಲ್ಲ. "ಜಾತಿ ಪದ್ಧತಿಯಿಂದಾದ ಈ ವೃತ್ತಿ ವಿಭಾಗ ಅಥವಾ ಕೆಲಸಗಳ ನೇಮಕವು ಖಂಡಿತವಾಗಿ ವಿನಾಶಕಾರಿಯಾಗಿದೆ. ಉದ್ಯಮ ಎಂದೂ ನಿಂತ ನೀರಲ್ಲ. ಅದರಲ್ಲಿ ತೀವ್ರವಾದ ಹಾಗೂ ಆಕಸ್ಮಿಕವಾದ ಬದಲಾವಣೆಗಳಾಗುತ್ತಲೇ ಇರುತ್ತವೆ. ಹೀಗೆ ಬದಲಾವಣೆಗಳಾಗುತ್ತಿರುವಗ

ವ್ಯಕ್ತಿಗೆ ತಮ್ಮ ವೃತ್ತಿಯನ್ನು ಬದಲಾಯಿಸುವ ಸ್ವಾತಂತ್ರ್ಯ ಅವಶ್ಯಕವಾಗುತ್ತದೆ. ಬದಲಾಗುವ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಾತಂತ್ರ್ಯವಿಲ್ಲದಿದ್ದರೆ ಅವನಿಗೆ ಜೀವನೋಪಾಯವೇ ಅಸಾಧ್ಯವಾಗುವುದು. ಜಾತಿ ಪದ್ಧತಿಯಲ್ಲಿ ಇಂತಹ ಸ್ವಾತಂತ್ರ್ಯವಿಲ್ಲ. ತನ್ನ ಜಾತಿಗೆ ಹೊಸದಾದ ವೃತ್ತಿಯನ್ನು ಕೈಕೊಳ್ಳುವ ಬದಲಾಗಿ, ಉಪವಾಸ ಬೀಳುವದೇ ಹಿಂದೂವಿನ ಗತಿಯಾಗಿದ್ದರೆ, ಅದಕ್ಕೆ ಮೂಲಕಾರಣ ಜಾತಿಯೇ ಆಗಿದೆ" (ಡಾ. ಅಂಬೇಡ್ಕರ್, ಸಂ. ೧, ಪು ೬೮, ೧೯೯೦) ಎನ್ನುತ್ತಾರೆ ಅಂಬೇಡ್ಕರ್. ಅಂದರೆ ಜಾತಿ ವ್ಯವಸ್ಥೆಯ ಆಚರಣೆಯು ಅಂತಿಮವಾಗಿ ಒಂದು ವ್ಯವಸ್ಥಿತ ಆರ್ಥಿಕ ವಂಚನೆಯೇ ಆಗಿದೆ. ಯಾವುದೇ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗದ ಆತ್ಮ ಪ್ರತ್ಯಯವನ್ನು ನಾಶ ಮಾಡಬೇಕೆಂದರೆ, ಮೊದಲು ಆ ಸಮುದಾಯದ ಆರ್ಥಿಕ ಸ್ವಾವಲಂಬನೆಯನ್ನು ನಾಶ ಮಾಡಲಾಗುತ್ತದೆ. ಇಂಡಿಯಾದ ಜಾತಿ ಶ್ರೇಣೀಕರಣ ಶತಮಾನಗಳಿಂದ ಈ ಕೆಲಸವನ್ನು ಶ್ರದ್ಧೆಯಿಂದ ಮಾಡಿಕೊಂಡು ಬಂದಿದೆ. ಈ ಕಾರಣಕ್ಕಾಗಿ ಜಗತ್ತಿನ ಎಲ್ಲ ಬಗೆಯ ಅಸಮಾನತೆಗಳಿಗಿಂತ, ಶೋಷನೆಗಳಿಗಿಂತ ಇಂಡಿಯಾದ ಸಾಮಾಜಿಕಾರ್ಥಿಕ ರಂಗದ ವಿಷಮತೆ ಮತ್ತು ಶೋಷಣೆಯ ಆಯಾಮಗಳು ಅತ್ಯಂತ ಕ್ರೂರವಾದವುಗಳು.

ಜಾಗತೀಕರಣದ ಈ ಹೊತ್ತು ಜಗತ್ತಿನ ಎಲ್ಲ ಸಮುದಾಯಗಳು ಆರ್ಥಿಕ ಸ್ವಾಲಂಬನೆಯ ಮೂಲಕ ತಮ್ಮ ಬದುಕಿಗೆ ಆತ್ಮಪ್ರತ್ಯಯವನ್ನು ತಂದು ಕೊಳ್ಳುವತ್ತ ಹೆಜ್ಜೆ ಹಾಕುತ್ತಿವೆ ಎಂದು ನಂಬಲಾಗಿದೆ. ಮನುಷ್ಯ ದೇವರನ್ನೇ ನಿಬ್ಬೆರಗಾಗಿಸುವ ಸಾಧನೆಗಳನ್ನು ಮಾಡುತ್ತ ಅಚ್ಚರಿಗಳನ್ನು ಸೃಷ್ಟಿಸುತ್ತಿದ್ದಾನೆ. ಔದ್ಯೋಗಿಕ ರಂಗದಲ್ಲಿ ರೂಪುಗೊಂಡ ಉದ್ಯೋಗವಕಾಶಗಳನ್ನು ಪಡೆಯುವತ್ತ ಸಮುದಾಯಗಳು ವೇಗವಾಗಿ ಹೆಜ್ಜೆ ಇರಿಸುತ್ತಿವೆ. ಸಮುದಾಯಗಳ ಪರಂಪರೆಯ ಕುರುಹುಗಳು ಇಲ್ಲವಾಗುತ್ತಾ ಹೋಗುತ್ತಿವೆ. ದಿನ ಬೆಳಗಾದರೆ ಈ ಭೂಮಿಯ ಮೇಲೆ ಮನುಷ್ಯ ಅದ್ಭುತಗಳನ್ನು ಎತ್ತಿ ನಿಲ್ಲಿಸುತ್ತಿದ್ದಾನೆ. ಸುಖದ ಆಯಾಮಗಳು ಮನುಷ್ಯನ ಬದುಕನ್ನು ಅವರಿಸಿಕೊಳ್ಳುತ್ತಿವೆ. ಆದರೆ ಇಂಡಿಯಾದಲ್ಲಿ ಸಾವಿರ ವರ್ಷಗಳ ಹಿಂದಿನ ಸಮಾಜ ಇನ್ನೂ ಜೀವಂತವಾಗಿರುವ ವೈರುಧ್ಯ ಕಣ್ಣಿಗೆ ಎದ್ದು ಕಾಣುತ್ತಿದೆ. ಒಂದೆಡೆ ಜಗತ್ತಿನ ಅನಂತ ಸುಖಗಳನ್ನು ಅನುಭವಿಸುವ ಕಾರ್ಪೋರೇಟ್ ಜಗತ್ತು ಬದುಕುತ್ತಿದ್ದರೆ, ಅದರ ಕೂಗಳತೆಯ ದೂರದಲ್ಲಿ ಗವಿಗಳಲ್ಲಿ ವಾಸಿಸುತ್ತಾ ಗಡ್ಡೆಗೆಣಸುಗಳನ್ನು ತಿನ್ನುತ್ತಾ ಬದುಕುತ್ತಿರುವ ಆದಿವಾಸಿ ಸಮುದಾಯಗಳು ಅಸ್ತಿತ್ವದಲ್ಲಿವೆ. ಇದು ದೇಶವೊಂದರ ಸಮಾಜದ ಅಮಾನವೀಯ ಮತ್ತು ಅನೈಸರ್ಗಿಕ ಬೆಳವಣಿಗೆ. ಇದು ಇಂಡಿಯಾದಂತಹ ಪಾರಂಪರಿಕ ಸಮಾಜದಲ್ಲಿ ಸಹಜವಾಗಿಯೇ ಮೈದಾಲಿಬಿಡುವ ವೈರುಧ್ಯವೂ ಹೌದು.

ಇಂದಿಗೂ ಇಂಡಿಯಾದ ದುಡಿದ ವರ್ಗಗಳಿಗೆ ಆರ್ಥಿಕ ಸ್ವಾಲಂಬನೆ ಇಲ್ಲ. ಇಲ್ಲಿನ ಕೆಲಜಾತಿಗಳು ತಮ್ಮ ಪಾರಂಪರಿಕ ವೃತ್ತಿಗಳಲ್ಲಿಯೇ ಬದುಕುವ ಅನಿವಾರ್ಯತೆಯನ್ನು ಅನುಭವಿಸುತ್ತಿವೆ. ಅದರಲ್ಲೂ ಪಾರಂಪರಿಕ ವೃತ್ತಿಗಳಲ್ಲಿ ಬುದುಕುತ್ತಿರುವುದು ಹೆಚ್ಚಾಗಿ ಈ ದೇಶದ ಕೆಳಜಾತಿಗಳು. ಅದರಲ್ಲೂ ಅಲೆಮಾರಿಗಳು ಮತ್ತು ಅರೆಅಲೆಮಾರಿಗಳೂ ಹೆಚ್ಚಾಗಿ ರೂಢಿಗತ ಅರ್ಥ ವ್ಯವಸ್ಥೆಯನ್ನೇ ನೆಚ್ಚಿಕೊಂಡು ಇನ್ನೂ ತಮ್ಮ ಪಾರಂಪರಿಕ ಕಸಬುಗಳನ್ನು ಬಿಟ್ಟುಕೊಡಲಗದ ಸ್ಥಿತಿಯಲ್ಲಿ ಈ ಸಮುದಾಯಗಳಿವೆ. ಇಂತಹ ಸಮುದಾಯಗಳಲ್ಲಿ ಹೆಳವ ಸಮುದಾಯವೂ ಒಂದು.

ಈ ಸಮಾಜದ ಪರಿಚಯವಿರುವ ಎಲ್ಲರಿಗೂ ಹೆಳವರೆಂದಾಕ್ಷಣ ಕೆಲವು ಸ್ಪಷ್ಟ ಚಿತ್ರಗಳು ಕಣ್ಮುಂದೆ ಬರುತ್ತವೆ. ಎತ್ತಿನ ಮೇಲೆ ಚಿಪ್ಪೋಡುಗಳನ್ನು ಹಿಡಿದುಕೊಂಡು ತಮ್ಮ ಒಕ್ಕಲು ಮನೆಗಳಿಗೆ ಅಲೆದು ಅವರ ವಂಶಾವಳಿ ಹೇಳಿ ತಮ್ಮ ವರ್ಷದ ಪಾಲನ್ನು (ಭಿಕ್ಷೆ) ಅವರಿಂದ ಪಡೆಯುವ ಒಂದು ವಿಶಿಷ್ಟ ಸಮುದಾಯವಿದು. ಆಧುನಿಕ ಪೂರ್ವ ಕರ್ನಾಟಕದ ಸಮಾಜದಲ್ಲಿ ಹೆಳವರಿಗೆ ತಮ್ಮ ಒಕ್ಕಲು ಮನೆಗಳ ಉತ್ಪಾದನೆಯಲ್ಲಿ ಒಂದು ನಿಶ್ಚಿತ ಪಾರಂಪರಿಕ ವಾರ್ಷಿಕ ಪಾಲು ಇರುತ್ತಿತ್ತು. ಜೊತೆಗೆ ಸಾಮಾಜಿಕ ಗೌರವವೂ ಸಾಂದರ್ಭಿಕವಾಗಿ ಲಭ್ಯವಾಗುತ್ತಿತ್ತು. ಆದರೆ ಇಂದು ಹೆಳವರಿಗೆ ಅಂತಹ ಅವಕಾಶಗಳಿಲ್ಲ. ಅವರೇ ಹೇಳುವಂತೆ ಇಂದು ಹೆಳವರಿಗೆ ನಿಶ್ಚಿತ ಉತ್ಪಾದನೆಯೂ ಇಲ್ಲ ಸಾಮಾಜಿಕ ಗೌರವವೂ ಇಲದಂತಾಗಿದೆ. ವರ್ತಮಾನದಲ್ಲಿ ಹೆಳವರೆಲ್ಲರೂ ಪಾರಂಪರಿಕ ವೃತ್ತಿಯನ್ನು ಅವಲಂಬಿಸಿಲ್ಲ. ಹಲವರಿಗೆ ತಮ್ಮ ಪಾರಂಪರಿಕ ವೃತ್ತಿಯಲ್ಲಿ ಮುಂದುವರೆಯುವ ಮನಸ್ಸಿಲ್ಲ. ಈಗಾಗಲೇ ಕೆಲವರು ಆಧುನಿಕ ಶಿಕ್ಷಣದಿಂದಾಗಿ ನೌಕರಿ ಪಡೆದು ತಮ್ಮ ಸಮುದಾಯದ ಪರಂಪರೆಯಿಂದ 'ಹೊರಗಿನವರಾಗಿ' ಬದುಕುತ್ತಿದ್ದಾರೆ. ಪರಂಪರೆಯ ವೃತ್ತಿಯಲ್ಲಿಯೇ ಬದುಕುತ್ತಿರುವ ಗುಂಪು ಮಾತ್ರ ಅಲೆಮಾರಿಯಾಗಿಯೇ ಬದುಕುತ್ತಿದೆ. ಈ ಅಲೆಮಾರಿ ಗುಂಪಿಗೆ ತಮಗಿಂತ ಭಿನ್ನವಾದ ವೃತ್ತಿಗಳಲ್ಲಿ ಬದುಕುತ್ತಿರುವ ತಮ್ಮವರೇ 'ಹೊರಗಿನವರಾಗಿ' ಕಾಣುತ್ತಾರೆ. ಇವರು ತಮ್ಮ ವೃತ್ತಿಗೆ ಸಂಬಂಧಿಸಿದಂತೆ ತಮ್ಮ

ಬಂಧುಗಳನ್ನೇ ಅನುಮಾನಿಸುತ್ತಾರೆ. ಇನ್ನು 'ಹೊರಗಿನವರಿಗೆ' ಈ ಅಲೆಮಾರಿಗಳ ಬದುಕಲ್ಲಿ ಪ್ರವೇಶವಿಲ್ಲ. ಹಾಗೊಂದು ವೇಳೆ ಪ್ರವೇಶ ಸಿಕ್ಕರೂ ಅವರಿಂದ ಯಾವ ಮಾಹಿತಿಯನ್ನೂ ಪಡೆಯಲು ಸಾಧ್ಯವಿಲ್ಲ. ಇಂದು ಹೆಳವರಲ್ಲಿ ಮೂರು ಗುಂಪುಗಳು ಕಂಡುಬರುತ್ತವೆ. ಆ ಗುಂಪುಗಳು ಈ ಕೆಳಗಿನಂತಿವೆ.

೧. ಪಾರಂಪರಿಕ ವೃತ್ತಿಯಲ್ಲಿಯೇ ಮುಂದುವರೆದು ಅಲೆಮಾರಿಗಳಾಗಿ ಬದುಕುತ್ತಿರುವವರು.

೨. ಪಾರಂಪರಿಕ ವೃತ್ತಿಯಲ್ಲಿ ಗೌರವವಿಟ್ಟುಕೊಂಡೂ ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿಕೊಳ್ಳಲು ಭಿನ್ನ ವೃತ್ತಿಗಳನ್ನು ಅವಲಂಬಿಸಿರುವವರು.

೩. ಪಾರಂಪರಿಕ ವೃತ್ತಿಯಲ್ಲಿ ಯಾವ ಗೌರವವೂ ಇಲ್ಲದೆ ಆಧುನಿಕ ಶಿಕ್ಷಣ ಪಡೆದು ಸರಕಾರಿ ಉದ್ಯೋಗದಲ್ಲಿರುವವರು.

ಪ್ರಸ್ತುತ ಅಧ್ಯಯನವು ಹೆಳವರ ಸಾಮಾಜಿಕ ಆರ್ಥಿಕ ಸ್ಥಿತಿಗಳನ್ನು ವಿವರಿಸಿಕೊಳ್ಳುವ ಒಂದು ಪ್ರಯತ್ನವಾಗಿದೆ. ಕರ್ನಾಟಕದಾದ್ಯಂತ ಬದುಕುತ್ತಿರುವ ಹೆಳವರನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

**೨. ಯೋಜನೆಯ ಗುರಿಗಳು**

ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಇಂದು ಹೆಳವರು ವಾಸಿಸುತ್ತಿದ್ದಾರೆ. ಆಧುನಿಕವಾಗಿ ಹೆಳವರಲ್ಲಿ ಅನೇಕ ವೃತ್ತಿಗಳನ್ನು ಅವಲಂಬಿಸಿರುವವರಿದ್ದಾರೆ. ಪ್ರಸ್ತುತ ಅಧ್ಯಯನವು ಹೆಳವ ಸಮುದಾಯದ ಚಾರಿತ್ರಿಕ ಬೆಳವಣಿಗೆ ಮತತು ವರ್ತಮಾನದ ಸ್ಥಿತಿಗತಿಗಳನ್ನು ವಿವರಿಸಲು ಪ್ರಯತ್ನಿಸುತ್ತದೆ. ಪ್ರಸ್ತುತ ಅಧ್ಯಯನದ ಉದ್ದೇಶಗಳು ಈ ಕೆಳಗಿನಂತಿವೆ.

೧. ಹೆಳವ ಸಮುದಾಯದ ಚಾರಿತ್ರಿಕ ಬೆಳವಣಿಗೆಯನ್ನು ವಿವರಿಸಿಕೊಳ್ಳುವುದು.

೨. ಹೆಳವ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸುವುದು.

೩. ಹೆಳವ ಸಮುದಾಯದ ಆರ್ಥಿಕ ಬದುಕಿನ ರೂಪಾಂತರಗಳನ್ನು ಕಂಡುಕೊಳ್ಳುವುದು.

೪. ಹೆಳವ ಸಮುದಾಯದ ವರ್ತಮಾನದ ಸಾಮಾಜಿಕಾರ್ಥಿಕ ಸ್ಥಿತಿಗತಿಗಳನ್ನು ವಿವರಿಸಿಕೊಳ್ಳುವುದು.

**ಅಧ್ಯಯನ ವಿಧಾನ**

ಮುಖ್ಯವಾಗಿ ಇದು ಕ್ಷೇತ್ರಕಾರ್ಯಧಾರಿತ ಅಧ್ಯಯನವಾಗಿದೆ. ಈಗಾಗಲೇ ಈ ಸಮುದಾಯದ ಮೇಲೆ ನಡೆದ ಅಧ್ಯಯನಗಳನ್ನು ಗಮನಿಸಿ, ಅದರ ಹಿನ್ನೆಲೆಯಲ್ಲಿ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿರುವ ಈ ಸಮುದಾಯದ ವರ್ತಮಾನದ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವ ಸಲುವಾಗಿ ಈ ಕೆಳಗಿನ ವಿಧಾನಗಳನ್ನು ಅವಲಂಬಿಸಿದೆ.

**೧. ಚಾರಿತ್ರಿಕ ವಿಧಾನ**

ಪ್ರಸ್ತುತ ಅಧ್ಯಯನದಲ್ಲಿ ಹೆಳವ ಸಮುದಾಯದ ಚಾರಿತ್ರಿಕ ಬೆಳವಣಿಗೆಯನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಹೆಳವ ಸಮುದಾಯವು ಇಂಡಿಯಾದ ಪಾರಂಪರಿಕ ಸಮಾಜದಲ್ಲಿ ಬೆಳೆದು ಬಂದ ಬಗೆಯನ್ನು ವಿವರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಜೊತೆಗೆ ಬೇರೆ ಬೇರೆ ಸಾಹಿತ್ಯ ಕೃತಿಗಳಲ್ಲಿ ಹೆಳವರ ಕುರಿತು ಇರುವ ಉಲ್ಲೇಖಗಳನ್ನು ಬಳಸಿಕೊಳ್ಳಲಾಗಿದೆ. ಏಕೆಂದರೆ ಪಾರಂಪರಿಕ ಸಮಾಜದಲ್ಲಿ ಬದುಕುವ ಸಮುದಾಯಗಳ ವರ್ತಮಾನದ ಬದುಕಿನ ಗುಟ್ಟುಗಳು ಬಹುತೇಕ ಚರಿತ್ರೆಯಲ್ಲಿ ಅಡಗಿರುತ್ತವೆ. ಈ ಕಾರಣದಿಂದಾಗಿ

ಚಾರಿತ್ರಿಕ ಭೌತವಾದದ ಹಿನ್ನೆಲೆಯಲ್ಲಿ ಹೆಳಲು ಸಮುದಾಯದ ಚಾರಿತ್ರಿಕ ರೂಪಾಂತರಗಳನ್ನು ಅಧ್ಯಯನಕೊಳ್ಳಪಡಿಸಲು ಪ್ರಯತ್ನಿಸಲಾಗಿದೆ.

**೨. ಪ್ರಶ್ನಾವಳಿ ವಿಧಾನ**

ಹೆಳವ ಸಮುದಾಯದ ವರ್ತಮಾನದ ಸ್ಥಿತಿಗತಿಗಳನ್ನು ಕಂಡುಕೊಳ್ಳುವ ಸಲುವಾಗಿ ಕೆಲವು ಮಾದರಿಗಳನ್ನು ಆಯ್ಕೆ ಮಾಡಿಕೊಂಡು ಸಾಮಾಜಿಕಾರ್ಥಿಕ ಸಂಗತಿಗಳನ್ನು ಅಂಕಿ ಸಂಖ್ಯೆಗಳ ಮೂಲಕ ಕ್ರೋಢೀಕರಿಸಲು ಪ್ರಯತ್ನಿಸಲಾಗಿದೆ. ಅದಕ್ಕಾಗಿ ಒಂದು ನಿಶ್ಚಿತ ಪ್ರಶ್ನಾವಳಿಯನ್ನು ರೂಪಿಸಿಕೊಳ್ಳಲಾಗಿದೆ. ಸದರಿ ಪ್ರಶ್ನಾವಳಿಯು ಆಯ್ದುಕೊಂಡ ಕುಟುಂಬದ ಸಾಮಾನ್ಯ ಮಾಹಿತಿಯನ್ನು ಕಲೆ ಹಾಕುವ ಸಲುವಾಗಿ ರೂಪಿಸಲ್ಪಟ್ಟಿದೆ. ಕುಟುಂಬವೊಂದರ ಸಮಗ್ರ ಮಾಹಿತಿಯನ್ನು ಅಂಕೆ ಸಂಖ್ಯೆಗಳಲ್ಲಿಯೂ ಈ ಪ್ರಶ್ನಾವಳಿಯು ದಾಖಲಿಸುತ್ತದೆ.

**೩. ಸಂದರ್ಶನ ವಿಧಾನ**

ಕರ್ನಾಟಕದಾದ್ಯಂತ ಇರುವ ಹೆಳವಸಮುದಾಯದ ವಿವಿಧ ಗುಂಪುಗಳ ಆಯ್ದ ವ್ಯಕ್ತಿಗಳನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ಪ್ರಸ್ತುತ ಸಂದರ್ಶನದ ಮೂಲಕ ಒಬ್ಬ ವ್ಯಕ್ತಿಯನ್ನು ಮುಖ್ಯವಾಗಿಟ್ಟುಕೊಂಡು ಸಮುದಾಯದ ಒಟ್ಟಾರೆ ತಿಳುವಳಿಕೆಯನ್ನು ಸಂಗ್ರಹಿಸಲಾಗಿದೆ. ಈ ಸಲುವಾಗಿ ಪ್ರಶ್ನಾವಳಿಯನ್ನು ರೂಪಿಸಿಕೊಳ್ಳಲಾಗಿದೆ. ಈ ವಿಧಾನದ ಮೂಲಕ ವಿವಿಧ ವ್ಯಕ್ತಿಗಳನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ಈ ಸಂದರ್ಶನ ವಿಧಾನದ ಮೂಲಕ ಪಡೆದ ಅನುಭವವನ್ನು ಪ್ರಸ್ತುತ ಅಧ್ಯಯನಲದಲ್ಲಿ ಮುಖ್ಯವಾಗಿ ಬಳಸಿಕೊಳ್ಳಲಾಗಿದೆ.

**೪. ಮಾದರಿಗಳ ಆಯ್ಕೆ**

ಈ ಯೋಜನೆಯು ಅಲ್ಪಾವಧಿಯದ್ದಾಗಿರುವುದರಿಂದ ಹೆಳವ ಸಮುದಾಯದ ಸಮಗ್ರ ಸಮೀಕ್ಷೆಯನ್ನು ಕೈಗೊಳ್ಳಲಾಗಿಲ್ಲ. ಹೆಳವ ಸಮುದಾಯದ ಸಾಮಾಜಿಕರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಸ್ಯಾಂಪಲಿಂಗ್ ಸರ್ವೆ ವಿಧಾನವನ್ನು ಅನುಸರಿಸಲಾಗಿದೆ. ಮುಖ್ಯವಾಗಿ ಹೆಳವರಲ್ಲಿ ಎತ್ತಿನ ಹೆಳವರು, ಚಾಪೆ ಹೆಳವರು ಮತ್ತು ಗಂಟೆ ಹೆಳವರು ಎಂಬ ಮೂರು ಉಪಪಂಗಡಗಳಿವೆ. ಈ ಮೂರೂ ಉಪಪಂಗಡಗಳು ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ವಾಸಿಸುತ್ತಿವೆ. ಕರ್ನಾಟಕದ ವಾಯುವ್ಯ ಜಿಲ್ಲೆಗಳಲ್ಲಿ ಎತ್ತಿನ ಹೆಳವರು, ಈಶಾನ್ಯ ಭಾಗದಲ್ಲಿ ಚಾಪೆ ಹೆಳವರು ಮತ್ತು ದಕ್ಷಿಣ ಕರ್ನಾಟಕದಲ್ಲಿ ಗಂಟೆ ಹೆಳವರು ವಾಸಿಸುತ್ತಿದ್ದಾರೆ. ಈ ಮೂರು ಉಪಪಂಗಡಗಳು ವಾಸಿಸುವ ಎಲ್ಲ ಜಿಲ್ಲೆಗಳಲ್ಲಿ ಸರ್ವೆ ಕೆಲಸ ಅಸಾಧ್ಯವಾದ ಕಾರಣ ಕೆಲವು ಆಯ್ದ ಜಿಲ್ಲೆಗಳಲ್ಲಿನ ಗ್ರಾಮಗಳನ್ನು ಸ್ಯಾಂಪಲಿಂಗ್ ಸರ್ವೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ಕೆ ಮಾಡಿಕೊಂಡ ಜಿಲ್ಲೆಗಳಲ್ಲಿ ಹೆಳವರ ಮೂರು ಪಂಗಡಗಳೂ ವಾಸಿಸುತ್ತಿವೆ. ಈ ಕಾರಣದಿಂದಾಗಿ ನಾವು ಮಾಡಿದ ಸ್ಯಾಂಪಲಿಂಗ್ ಸರ್ವೆಯಲ್ಲಿ ಹೆಳವರ ಮೂರೂ ಪಂಗಡಗಳಿಂದ ಮಾದರಿಗಳನ್ನು ಆಯ್ದುಕೊಂಡಂತಾಗಿದೆ. ಜೊತೆಗೆ ಕರ್ನಾಟಕದ ಬೇರೆ ಬೇರೆ ಪ್ರದೇಶದಲ್ಲಿ ವಾಸಿಸುವ ಹೆಳವ ಸಮುದಾಯವು ನಮ್ಮ ಸ್ಯಾಂಪಲಿಂಗ್ ಸರ್ವೆಯ ವ್ಯಾಪ್ತಿಗೆ ಒಳಪಟ್ಟಂತಾಗಿದೆ.

**ಈ ಕೆಳಗಿನ ಜಿಲ್ಲೆಗಳ ಗ್ರಾಮಗಳಲ್ಲಿ ಸರ್ವೆ ಮಾಡಲಾಗಿದೆ.**

**೧. ಬೀದರ್ ಜಿಲ್ಲೆ**

೧. ಔರಾದ್

೨. ಬೀದರ್

೩. ಭಂಗೂರು

೪. ಸೋಮರಾಜಪುರ

೫. ಮಲ್ಕಾಪುರ

೬. ಚಿದ್ರಿ

೭. ಅಷ್ಟೂರು

**೨. ಗುಲ್ಬರ್ಗಾ ಜಿಲ್ಲೆ**

೧. ಮಾಗಾಂವ್

೨. ಗುಲ್ಬರ್ಗಾ

೩. ರಟಗಲ್

೪. ಮಟಕೆ

೫. ಯಾಳಗಿ

**೩. ಬೆಳಗಾವಿ ಜಿಲ್ಲೆ**

೧. ಶಿಲ್ತಿಭಾವಿ

೨. ಹುಲಿಕಟ್ಟಿ

೩. ಹಿರೇನಂದಿ

೪. ಜೋಕಾನಹಟ್ಟಿ

೫. ಗೋಕಾಕ್

೬. ಶಿವಪುರ

೭. ಮುನ್ನಾಳ

೮. ಮೂಡಲಗಿ

೯. ಮುಸಗುಪ್ಪಿ

೧೦. ಧರಮಿಟ್ಟಿ

೧೧. ಸಂಗನಕೇರಿ

೧೨. ಬೆಂಚಿನ ಮರಡಿ

೧೩. ಗೋಜನಹಟ್ಟಿ

೧೪. ತಾಳಕಟ್ನಾಳ್

**೪. ಹಾವೇರಿ ಜಿಲ್ಲೆ**

೧. ಸೋಮಸಾಗರ

**೫. ಚಿತ್ರದುರ್ಗ ಜಿಲ್ಲೆ**

೧. ಜಡೇಕುಂಟೆ
೨. ರಂಗನಾಥಪುರ
೩. ಗೋಪನಹಳ್ಳಿ
೪. ದಿಂಡಾವರ
೫. ಬುರುಡೆಕುಂಟೆ

**೬. ಚಿಕ್ಕಮಗಳೂರು ಜಿಲ್ಲೆ**

೧. ಹರಳಘಟ್ಟ
೨. ಹೆಳವರ ಹಟ್ಟಿ

**೭. ಮಂಡ್ಯ ಜಿಲ್ಲೆ**

೧. ಹೆಳವರ ಕೊಪ್ಪಲು
೨. ಕುಡಲ ಕುಪ್ಪೆ
೩. ಬೊಮ್ಮೂರ ಅಗ್ರಹಾರ
೪. ಹೆಳವರ ಹಟ್ಟಿ

ಈ ಮೇಲಿನ ಏಳು ಜಿಲ್ಲೆಗಳ ೩೮ ಗ್ರಾಮಗಳನ್ನು ಸರ್ವೆ ಮಾಡಲು ಆಯ್ಕೆ ಮಾಡಿಕೊಳ್ಳಲಾಗಿದೆ.

**೫. ಅಂಕಿ ಅಂಶಗಳ ಸಂಗ್ರಹಣೆ**

ಈ ಹಿಂದೆ ಉಲ್ಲೇಖಿಸಿದ ಏಳು ಜಿಲ್ಲೆಗಳಲ್ಲಿನ ೩೮ ಗ್ರಾಮಗಳನ್ನು ಸರ್ವೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಒಂದು ನಿಶ್ಚಿತ ಪ್ರಶ್ನಾವಳಿಯನ್ನು ರೂಪಿಸಿ, ಈ ೩೮ ಗ್ರಾಮಗಳಲ್ಲಿ House Hold Survey ಮಾಡಲಾಗಿದೆ. ಮುಖ್ಯವಾಗಿ ಈ ಪ್ರಶ್ನಾವಳಿಯಲ್ಲಿ ಹೆಳವ ಸಮುದಾಯದ ಕುಟುಂಬವೊಂದರ ಸಾಮಾನ್ಯ ಮಾಹಿತಿಯನ್ನು ಮತ್ತು ಮನೆ ಮಾದರಿ, ಭೂಹಿಡುವಳಿ, ಪಶು ಸಂಪತ್ತು ಮತ್ತು ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಕುರಿತು ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ.

**೬. ಅಧ್ಯಯನದ ಮಿತಿ**

ಈ ಯೋಜನೆಯನ್ನು ಕೇವಲ ಆರು ತಿಂಗಳಲ್ಲಿ ಪೂರ್ಣಗೊಳಿಸಲಾಗಿದೆ. ಈಗಾಗಲೇ ಹೆಲವ ಅಲ್ಲದೆ ೧೦೦೦ ಕುಟುಂಬಗಳ House Hold Surveyಯನ್ನು ಮಾತ್ರ ಮಾಡಲಾಗಿದೆ. ಜೊತೆಗೆ ಒಂದು ನೂರು ಜನ ಹೆಳವ ಸಮುದಾಯದ ಪ್ರಮುಖರನ್ನು ಸಂದರ್ಶಿಸಲಗಿದೆ. ಹೆಳವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ವಿವರಿಸುವುವುದು ಈ ಅಧ್ಯಯನದ ಉದ್ದೇಶವಾಗಿದೆ. ಅಲ್ಪಾವಧಿಯಲ್ಲಿ ಈ ಅಧ್ಯಯನ ರೂಪುಗೊಂಡಿದೆ.

## ೭. ಅಧ್ಯಯನದ ವ್ಯಾಪ್ತಿ

ಹೆಳವರು ಕರ್ನಾಟಕದ ೨೭ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ೨೦೦೫ನೇ ಇಸ್ವಿಯಲ್ಲಿ ಕರ್ನಾಟಕ ರಾಜ್ಯ ಹೆಳವರ ಸಂಘ ನಡೆಸಿದ ಗಣತಿಯ ಪ್ರಕಾರ ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿಹೆಚ್ಚು ಅಂದರೆ ೧೩೯೨೩ ಜನ ವಾಸಿಸುತ್ತಿದ್ದರೆ, ಕೊಪ್ಪಳ ಜಿಲ್ಲೆಯಲ್ಲಿ ಅತಿಕಡಿಮೆ ಅಂದರೆ ೩೦೨ ಜನ ವಾಸ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಒಟ್ಟು ೨೭ ಜಿಲ್ಲೆಗಳಲ್ಲಿ ೧೩,೦೧೬ ಕುಟುಂಬಗಳು ವಾಸವಾಗಿದ್ದು, ೭೫,೭೮೪ ಜನಸಂಖ್ಯೆಯನ್ನು ಈ ಸಮುದಾಯ ಹೊಂದಿದೆ. ಪ್ರಸ್ತುತ ಅಧ್ಯಯನವು ಅಲ್ಪಾವಧಿಯದ್ದಾದ್ದರಿಂದ, ಅಧ್ಯಯನದ ಉದ್ದೇಶಗಳಿಗೆ ಅನುಗುಣವಾಗಿ ಕರ್ನಾಟಕದ ಏಳು ಜಿಲ್ಲೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಬೀದರ್, ಗುಲ್ಬರ್ಗಾ, ಬೆಳಗಾವಿ, ಹಾವೇರಿ, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಮಂಡ್ಯ ಜಿಲ್ಲೆಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಏಳು ಜಿಲ್ಲೆಗಳ ೩೮ ಗ್ರಾಮಗಳಲ್ಲಿ ವ್ಯಾಪಕ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ. ಒಟ್ಟು ೧೦೦೦ ಕುಟುಂಬಗಳ ಅಂಕಿಅಂಶಗಳನ್ನು ನಿಶ್ಚಿತ ಪ್ರಶ್ನಾವಳಿಯ ಮೂಲಕ ಸಂಗ್ರಹಿಸಲಾಗಿದೆ. ಹೆಳವ ಸಮುದಾಯದ ವಿವಿಧ ಪಂಗಡಗಳು ನನ್ನ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ. ಸರ್ವೆಗೆ ಒಳಪಟ್ಟ ಹೆಳವ ಸಮುದಾಯದ ಜಿಲ್ಲೆ ಮತ್ತು ತಾಲೂಕುವಾರು ಜನಸಂಖ್ಯೆ ಕೋಷ್ಟಕ ಒಂದರಲ್ಲಿದೆ.

**ಹೆಳವ ಸಮುದಾಯದ ಭೌಗೋಳಿಕ ನೆಲೆಗಳು**

ಹೆಳವರು ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಚದುರಿದಂತೆ ವಾಸಿಸುತ್ತಿದ್ದಾರೆ. ಇವರು ಶುದ್ಧಾಂಗವಾಗಿ ಅಲೆಮಾರಿಗಳಲ್ಲ. ಅರೆ ಅಲೆಮಾರಿಗಳಾಗಿ ಉತ್ತರ ಕರ್ನಾಟಕದಲ್ಲಿ ಜಾರಿಯಲ್ಲಿದೆ. ಪಾರಂಪರಿಕ ವೃತ್ತಿಯನ್ನು ಅವಲಂಬಿಸಿರುವವರು ಮಾತ್ರ ಅರೆ ಅಲೆಮಾರಿ ಗುಂಪುಗಳಲ್ಲಿ ಊರುಗಳನ್ನು ಸುತ್ತುತ್ತಾರೆ. ಈ ಬಗೆಯ ಪಾರಂಪರಿಕ ವೃತ್ತಿಯ ಅವಲಂಬನೆಯು ಹೆಚ್ಚಾಗಿ ಉತ್ತರ ಕರ್ನಾಟಕದ ಬೆಳಗಾಂ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕಂಡು ಬರುತ್ತದೆ. ಈ ಹಿಂದೆ ಹೇಳಿದಂತೆ ಹೆಳವರು ಕರ್ನಾಟಕದ ೨೭ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅತಿ ಹೆಚ್ಚು ಹೆಳವ ಜನಸಂಖ್ಯೆ ಇದ್ದು, ಕೊಪ್ಪಳದಲ್ಲಿ ಅತಿ ಕಡಿಮೆ ಜನ ಹೆಳವರು ವಾಸಿಸುತ್ತಿದ್ದಾರೆ. ೨೦೦೫ನೇ ಸಾಲಿನಲಿ ಹೆಳವ ಸಮುದಾಯದ ಸಂಘಟನೆಯ ಕೈಗೊಂಡು ಜನಗಣತಿಯ ಪ್ರಕಾರ ಹೆಳವರ ಜನಸಂಖ್ಯೆ ೭೫,೭೮೪. House Hold Survey ಯ ಮೂಲಕ ವಿವಿಧ ಜಿಲ್ಲೆಗಳಲ್ಲಿನ ತಾಲೂಕುವಾರು ಹೆಳವರ ಜನಸಂಖ್ಯೆಯನ್ನು ಕೋಷ್ಟಕ ೧ ರಲ್ಲಿ ಕೊಡಲಗಿದೆ.

**ಕೋಷ್ಟಕ ೧: ಹೆಳವರ ಜಿಲ್ಲಾ ಮತ್ತು ತಾಲೂಕುವಾರು ಜನಸಂಖ್ಯೆ**

| ಕ್ರ ಸಂ | ಜಿಲ್ಲೆ | ತಾಲೂಕು | ಕುಟುಂಬಗಳ ಸಂಖ್ಯೆ | ಒಟ್ಟು ಜನಸಂಖ್ಯೆ | ಗಂಡು | ಹೆಣ್ಣು |
|---|---|---|---|---|---|---|
| ೦೧ | ಚಿಕ್ಕಮಗಳೂರು | ಕಡೂರು | ೮೦ | ೪೫೩ | ೨೪೧ | ೨೧೨ |
| ೦೨ | ಚಿತ್ರದುರ್ಗ | ಹಿರಿಯೂರು | ೯೦ | ೪೨೩ | ೨೨೦ | ೨೦೩ |
| | | ಚಳ್ಳಕೆರೆ | ೧೩೮ | ೫೩೪ | ೨೮೧ | ೨೫೩ |
| ೦೩ | ಮಂಡ್ಯ | ಶ್ರೀರಂಗಪಟ್ಟಣ | ೩೪ | ೧೨೬ | ೬೨ | ೬೪ |
| | | ಪಾಂಡವಪುರ | ೪೦ | ೧೭೮ | ೯೦ | ೮೮ |

| | | | | | | |
|---|---|---|---|---|---|---|
| ೦೪ | ಬೀದರ್ | ಬೀದರ್ | ೧೩೭ | ೭೧೫ | ೩೩೭ | ೩೩೮ |
| | | ಔರಾದ್ | ೧೫ | ೮೩ | ೪೩ | ೪೦ |
| ೦೫ | ಗುಲ್ಬರ್ಗಾ | ಗುಲ್ಬರ್ಗಾ | ೫೩ | ೨೭೪ | ೧೪೪ | ೧೩೦ |
| | | ಚಿಂಚೋಳಿ | ೧೦ | ೪೮ | ೨೨ | ೨೬ |
| | | ಅಳಂದ | ೦೩ | ೧೨ | ೦೭ | ೦೫ |
| | | ಸುರಪುರ | ೪೪ | ೨೦೩ | ೧೦೬ | ೯೭ |
| ೦೬ | ಬೆಳಗಾಂ | ಗೋಕಾಕ್ | ೨೭೦ | ೧೨೩೩ | ೭೦೬ | ೫೨೭ |
| ೦೭ | ಹಾವೇರಿ | ಹಾನಗಲ್ | ೮೬ | ೩೫೬ | ೧೮೫ | ೧೭೧ |
| | | ಒಟ್ಟು | ೧೦೦೦ | ೪೬೩೮ | ೨೪೮೪ | ೨೧೫೪ |

## ಕೃತಜ್ಞತೆಗಳು

ಈ ಅಧ್ಯಯನ ವರದಿಯನ್ನು ರೂಪಿಸಲು ನಮ್ಮನ್ನು ಪ್ರೇರೇಪಿಸಿದ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಡಾ. ಬಿ ಎ ವಿವೇಕ ರೈ ಅವರಿಗೆ ಮತ್ತು ಈ ಅಧ್ಯಯನಕ್ಕೆ ಹಣಕಾಸಿನ ನೆರವು ನೀಡಿದ ಹಿಂದುಳಿದ ವರ್ಗಗಳ ಇಲಾಖೆಯ ಅಂದಿನ ಆಯುಕ್ತರಾಗಿದ್ದ ಮೊನ್ನಪ್ಪನವರಿಗೆ, ಈ ಯೋಜನೆಯ ನೀಲನಕ್ಷೆ ತಯಾರಿಸಿ ಅಧ್ಯಯನಕ್ಕೆ ಅನುವು ಮಾಡಿಕೊಟ್ಟ ಹಿರಿಯರಾದ ಡಾ. ಹಿ ಚಿ ಬೋರಲಿಂಗಯ್ಯನವರಿಗೆ ಮೊದಲು ಕೃತಜ್ಞತೆಗಳು ಸಲ್ಲಬೇಕು.

ಅಧ್ಯಯನಕ್ಕಾಗಿ ಊರೂರು ಸುತ್ತುವಾಗ ನನ್ನ ಜೊತೆ ಅಲೆದಾಡಿ ವಿವರಗಳನ್ನು ಸಂಗ್ರಹಿಸಲು ನನ್ನ ವಿದ್ಯಾರ್ಥಿ ಮಿತ್ರ ಇಸ್ಮಾಯಿಲ್ ಜಬ್ಬೀರ್ ಅಪಾರವಾಗಿ ಶ್ರಮಿಸಿದ್ದಾರೆ. ಕಡೂರಿನ ವಕೀಲರಾದ ಎಂ ಎಸ್ ಹೆಳವರ್, ಬೆಂಗಳೂರಿನ ಶ್ರೀ ಬಸವ ಭೃಂಗೇಶ್ವರ ಸ್ವಾಮೀಜಿ ಅನೇಕ ವಿಷಯಗಳನ್ನು ನನ್ನೊಡನೆ ಚರ್ಚಿಸಿದ್ದಾರೆ. ಬೆಂಗಳೂರಿನ ವಕೀಲರಾದ ಶ್ರೀ ಚಂದ್ರಶೇಖರ್, ರಾಮಸ್ವಾಮಿ ಮತ್ತು ಗೋಕಾಕಿನ ಅಮೃತ ಹೆಳವಿ, ಹೆಳವರ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪನವರು ವಿಶೇಷವಾಗಿ ನೆರವಾಗಿದ್ದಾರೆ. ಪ್ರಶ್ನಾವಳಿಯಲ್ಲಿನ ಅಂಕೆಸಂಖ್ಯೆಗಳನ್ನು ಕೋಷ್ಟಕಗಳಲ್ಲಿ ಹಿಡಿದಿಡಲು ನಮ್ಮ ವಿಭಾಗದ ವಿದ್ಯಾರ್ಥಿಗಳು ನೆರವಾಗಿದ್ದಾರೆ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಚಂದ್ರಮಾ ಎಸ್ ಕಣಗಲಿ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ಶ್ರೀ ಗಣಪತಿಯವರು ಉಪಯುಕ್ತ ಆಕರ ಸಾಮಗ್ರಿಗಳನ್ನು ನೀಡಿದ್ದಾರೆ. ಜೊತೆಗೆ ಊರೂರು ಅಲೆದಾಡಲು ಹೋದಾಗೆಲ್ಲ ತಮ್ಮ ಅಪಾರ ತಿಳುವಳಿಕೆಯನ್ನು ನನ್ನ ಜೊತೆ ಹಂಚಿಕೊಂಡ ಹೆಳವ ಸಮುದಾಯದ ಎಲ್ಲ ಬಂಧುಗಳಿಗೆ ನನ್ನ ಕೃತಜ್ಞತಾಪೂರ್ವಕ ನಮಸ್ಕಾರಗಳು.

ಈ ವರದಿಯು ೨೦೦೬ರಲ್ಲಿ ಸಿದ್ಧಗೊಂಡು ದೇವರಾಜು ಅರಸು ಸಂಶೋಧನಾ ಸಂಸ್ಥೆಗೆ ಸಲ್ಲಿಸಲ್ಪಟ್ಟಿತ್ತು ಕೇವಲ ಆರು ತಿಂಗಳ ಅವಧಿಯಲ್ಲಿ ಸಿದ್ಧಗೊಂಡ ವರದಿ ಇದು. ಕೆಲವು ಅಕ್ಷರ ದೋಷಗಳನ್ನು ಸರಿಪಡಿಸಿರುವುದನ್ನು ಬಿಟ್ಟರೆ ವರದಿ ಯಥಾವತ್ತು ಹಾಗೆಯೇ ಪ್ರಕಟವಾಗುತ್ತಿದೆ. ಇದನ್ನು ಪ್ರಕಟಿಸಲು ಮುಂದಾದ ನಮ್ಮ ಪ್ರೀತಿಯ ಕುಲಪತಿಗಳಾದ ಡಾ, ಎ ಮುರಿಗೆಪ್ಪನವರಿಗೆ ಮತ್ತು

ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿಯವರಿಗೆ ಧನ್ಯವಾದಗಳು. ಹಾಗೆಯೇ ಪುಟಗಳನ್ನು ವಿನ್ಯಾಸಗೊಳಿಸಲು ಸಹಾಯ ಮಾಡಿದ ಸುಜ್ಞಾನಮೂರ್ತಿಯವರಿಗೆ ಮತ್ತು ಪ್ರಸಾರಾಂಗದ ಆಡಳಿತವರ್ಗಕ್ಕೆ ವಂದನೆಗಳು.

**ಎ. ಎಸ್. ಪ್ರಭಾಕರ**

# ವಿಭಾಗದ ಮಾತು

ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಡಕಟ್ಟು ಅಧ್ಯಯನ ವಿಭಾಗವು ಕಳೆದ ಒಂದುವರೆ ದಶಕದಿಂದ ಹಲವು ಉಪಯುಕ್ತ ಯೋಜನೆಗಳನ್ನು ಹಮ್ಮಿಕೊಂಡು ನಿರ್ವಹಿಸುತ್ತಾ ಬಂದಿದೆ. ಆರಂಭದಲ್ಲಿ ವಿಭಾಗವು ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದ ೧೩ ಬುಡಕಟ್ಟು ಮಹಾಕಾವ್ಯಗಳು ರಾಜ್ಯದಲ್ಲಿ ಅಷ್ಟೇ ಅಲ್ಲ ರಾಷ್ಟ್ರಮಟ್ಟದಲ್ಲಿ ಹೊಸ ಚರ್ಚೆಯ ಹುಟ್ಟಿಗೆ ಕಾರಣವಾದವು. ಈ ಬುಡಕಟ್ಟು ಮಹಾಕಾವ್ಯ ಮಾಲೆಯಲ್ಲಿ ಈಗ ೧೩ ಮಹಾಕಾವ್ಯಗಳು ಪ್ರಕಟವಾಗಿದ್ದು ಇನ್ನೂ ಎರಡು ಕಾವ್ಯಗಳು ಪ್ರಕಟನೆಯ ಹಂತದಲ್ಲಿವೆ. ನಂತರ ನಾವು ಆರಂಭಿಸಿದ ಬುಡಕಟ್ಟು ಅಧ್ಯಯನ ಮಾಲೆಯು ಕರ್ನಾಟಕದ ಬುಡಕಟ್ಟುಗಳ ವಿಶಿಷ್ಟ ಆಯಾಮಗಳನ್ನು ಓದುಗರ ಮುಂದಿಟ್ಟು ಜನಪ್ರಿಯವಾಯಿತು. ಮತ್ತು ನಾವು ಹೊರತರುತ್ತಿರುವ ಬುಡಕಟ್ಟು ಅಧ್ಯಯನ ಪತ್ರಿಕೆಯು ಒಂದು ವಿಶಿಷ್ಟ ಓದುಗರ ಬಳಗವನ್ನು ಮತ್ತು ಪತ್ರಿಕೆಗೆ ಬರೆಯುವ ಲೇಖಕರ ವಲಯವನ್ನೇ ವಿಸ್ತರಿಸುತ್ತಿದೆ. ಇದರ ಜೊತೆಗೆ ಪ್ರತಿ ವರ್ಷ ನಾವು ಆಯೋಜಿಸುತ್ತಿರುವ ಬುಡಕಟ್ಟು ಸಮ್ಮೇಳನಗಳು ಕರ್ನಾಟಕದ ಬುಡಕಟ್ಟುಗಳ ಕಲೆ, ಸಂಸ್ಕೃತಿಗಳನ್ನು ಮತ್ತು ಬುಡಕಟ್ಟು ಸಮುದಾಯಗಳ ವರ್ತಮಾನದ ಸಂಕಷ್ಟಗಳನ್ನು ಜನರ ಮುಂದಿಡುವ ಸೂಕ್ತ ವೇದಿಕೆಯಾಗಿ ರೂಪುಗೊಳ್ಳುತ್ತಿವೆ.

ಪ್ರಸ್ತುತ ಅಲೆಮಾರಿ ಮತ್ತು ಅರೆಅಲೆಮಾರಿ ಸಮುದಾಯಗಳ ವರದಿಗಳನ್ನು ವಿಶ್ವವಿದ್ಯಾಲಯವು ಪ್ರಕಟಿಸುತ್ತಿದೆ. ೨೦೦೯ನೇ ಇಸ್ವಿಯಲ್ಲಿ ಹಿಂದುಳಿದ ವರ್ಗಗಳ ಆಯೋಗದ ಆಯುಕ್ತರಾಗಿದ್ದ ಶ್ರೀ ಮೊನ್ನಪ್ಪನವರು ಮತ್ತು ಅಂದಿನ ಕುಲಪತಿಗಳಾಗಿದ್ದ ಬಿ ಎ ವಿವೇಕ ರೈ ಅವರ ಒತ್ತಾಸೆಯ ಮೇರೆಗೆ ಈ ವರದಿಗಳು ರೂಪುಗೊಂಡವು. ಈ ವರದಿಗಳನ್ನು ರೂಪಿಸಲು ಶ್ರೀ ದೇವರಾಜ ಅರಸು ಸಂಶೋಧನಾ ಸಂಸ್ಥೆಯ ಧನಸಹಾಯ ಮಾಡಿತ್ತು. ಕರ್ನಾಟಕದ ವಿಶಿಷ್ಟ ಅಲೆಮಾರಿಗಳ ವರ್ತಮಾನದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು, ಅಭಿವೃದ್ಧಿಗೆ ಬೇಕಾದ ಅಂಕಿಅಂಶಗಳು ಮತ್ತು ಅವರ ಜನಾಂಗಿಕ ವಿವರಗಳುಳ್ಳ ವರದಿಯನ್ನು ಸಿದ್ಧಪಡಿಸಿ ಕೊಡಲು ಸರಿ ಸಂಸ್ಥೆ ನಮ್ಮನ್ನು ಕೋರಿತ್ತು. ಈ ಸಮುದಾಯಗಳ ವರದಿಗಳನ್ನು ವಿಭಾಗವು ಸಿದ್ಧಪಡಿಸಿ ೨೦೦೯ರಲ್ಲಿಯೇ ದೇವರಾಜ ಅರಸು ಸಂಸ್ಥೆಗೆ ಒಪ್ಪಿಸಿತ್ತು. ಮೊದಲ ಹಂತದಲ್ಲಿ ಕುಣಬಿ, ಬುಂಡೆಬೆಸ್ತ, ಒಕ್ಕಲಿಗ, ಗೊಂದಲಿಗರು ಮತ್ತು ಹೆಳವ ಸಮುದಾಯಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಸದರಿ ಸಂಶೋಧನಾ ಸಂಸ್ಥೆಯ ಅಪೇಕ್ಷೆಯಂತೆ ಕೇವಲ ಆರು ತಿಂಗಳಲಿ ಈ ವರದಿಗಳು ಸಿದ್ಧಗೊಂಡವು. ಅವು ಈಗ ಪುಸ್ತಕ ರೂಪದಲ್ಲಿ ಈಗ ಪ್ರಕಟವಾಗುತ್ತಿವೆ.

***

# ಶಬ್ದಪಾಮಾರ್ಗಮಶ್ಯಕಂ

ಕರ್ನಾಟಕದ ಆಧುನಿಕ ಚರಿತ್ರೆಯಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ - ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ: ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕೊಳ್ಳವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚಾಲುಕಾಗುವ ಈ ಸಂದರ್ಭದಲ್ಲಿ ಕನ್ನಡ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶಿಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬು ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ: ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗವು ಹಿಂದುಳಿದ ವರ್ಗಗಳ ಇಲಾಖೆಯ ಶ್ರೀ ದೇವರಾಜ ಅವರು ಸಂಶೋಧನ ಸಂಸ್ಥೆಗಾಗಿ ಕೈಗೊಂಡ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಅಧ್ಯಯನವು, ವರದಿಗಳ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಇದೀಗ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಯೋಜನೆಗಳನ್ನು ಅನುಷ್ಠಾನಗೊಳಿಸುವ ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆಂದು ದೃಷ್ಟಿಯಿಂದ ಈ ಪ್ರಕಟಣೆಗಳು ಸಮಾಜದಲ್ಲಿ ಉಪಯೋಗಕ್ಕೆ ಬರುತ್ತವೆ ಎಂಬುದು ವಿಶ್ವವಿದ್ಯಾಲಯದ ನಂಬಿಕೆ. ನಮ್ಮ ವಿಶ್ವವಿದ್ಯಾಲಯದ ಅಧ್ಯಾಪಕರಾದ ಡಾ. ಎ.ಎಸ್. ಪ್ರಭಾಕರ ಅವರು ತುಂಬ ಶ್ರಮ ವಹಿಸಿ ಪುಸ್ತಕ ಸಿದ್ಧಪಡಿಸಿದ್ದಾರೆ. ಅವರಿಗೆ ವಿಶ್ವವಿದ್ಯಾಲಯದ ಪರವಾಗಿ ಧನ್ಯವಾದಗಳು ಸಲ್ಲುತ್ತವೆ.

ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ ಹಾಗೂ ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

# ೧. ಹೆಳವರೆಂದರೆ ಯಾರು?

## ಪೀಠಿಕೆ

'ಹೆಳವ' ಎಂಬ ಹೆಸರು ಈ ಸಮುದಾಯಕ್ಕೆ ಏಕೆ ಬಂದಿತು ಎಂಬುದನ್ನು ವಿಶ್ಲೇಷಿಸಲು ವಿದ್ವಾಂಸರು ಹಲವು ಪ್ರಯತ್ನಗಳನ್ನು ಮಾಡಿದ್ದಾರೆ. ಹೆಳವ ಪದದ ಹುಟ್ಟಿನ ಕುರಿತು, ಅದರ ಪದಶಃ ಅರ್ಥದ ಕುರಿತು ಅನೇಕ ಜಿಜ್ಞಾಸೆಗಳು ನಡೆದಿವೆ. ಮುಖ್ಯವಾಗಿ ಈ ಹೆಸರು ಸದರಿ ಸಮುದಾಯಕ್ಕೆ ಬರಲು ಕಾರಣವೇನು ಎಂಬ ಕುರಿತ ಚರ್ಚೆಗಳು ಎರಡು ಬಗೆಗಳಲ್ಲಿ ನಡೆದಿವೆ. ೧) 'ಹೆಳವ' ಎಂಬ ಪದದ ಶಬ್ದಕೋಶದ ಅರ್ಥವನ್ನು ಪರಿಗಣಿಸಿ ಮತ್ತು ಹೆಳವರ ಸೃಷ್ಟಿಪುರಾಣ, ಅಂದರೆ ಅವರು ತಮ್ಮ ಹುಟ್ಟಿನ ಕುರಿತು ಹೇಳುವ ಮೌಖಿಕ ಚರಿತ್ರೆಯನ್ನು ಆಧರಿಸಿ ಕೆಲವರು ಚರ್ಚೆ ನಡೆಸಿದ್ದಾರೆ. ೨) 'ಹೆಳವ' ಎಂಬ ಪದವು 'ಹೇಳುವವ' ಎಂಬ ಪದದಿಂದ ನಿಷ್ಪತ್ತಿಯಾಗಿದೆ ಎಂದು ಕೆಲವರು ಚರ್ಚಿಸಿರುವುದು ಕಂಡು ಬರುತ್ತದೆ.

ಸಮುದಾಯಗಳ ಸಾಮಾಜಿಕ ಚರಿತ್ರೆಯನ್ನು ಬರೆಯುವಾಗ ಸಾಮಾನ್ಯವಾಗಿ ಸಾಮಾಜಿಕ ಮಾನವಶಾಸ್ತ್ರಜ್ಞರು ಅಭಿಜಾತ (classical) ದಾಖಲೆಗಳನ್ನು ಹುಡುಕಿಕೊಂಡು ಹೋಗುವುದು ಸಾಮಾನ್ಯ. ಈ ಅಭಿಜಾತ ದಾಖಲೆಗಳೆಂದರೆ, ಮಹಾಕಾವ್ಯಗಳು, ಶಾಸನಗಳೂ ಮತ್ತು ಶಿಷ್ಟ ಪುರಾಣದಲ್ಲಿನ ಉಲ್ಲೇಖಗಳು. ಉದಾಹರಣೆಗೆ, ಪಂಪನ ಆದಿಪುರಾಣದಲ್ಲಿ ಯಾವುದಾದರೊಂದು ಸಮುದಾಯದ ಉಲ್ಲೇಖ ಮತ್ತು ಅವರ ವೃತ್ತಿಗೆ ಸಂಬಂಧಿಸಿದ ಸಂಗತಿಗಳು ಉಲ್ಲೇಖಿತಗೊಂಡಿದ್ದರೆ ಅದೇ ಉಲ್ಲೇಖವನ್ನು ಆಧರಿಸಿ ಕೆಲವು ತೀರ್ಮಾನಗಳಿಗೆ ಬರುವುದು ಒಂದು ವಾಡಿಕೆಯಂತೆ ನಡೆದು ಬಂದಿದೆ. ಈ ಬಗೆಯ ಅಭಿಜಾತ ದಾಖಲೆಗಳನ್ನು ನೆಚ್ಚಿಕೊಳ್ಳುವ ವಿದ್ವಾಂಸರು ತಾವು ಅಧ್ಯಯನ ಮಾಡುವ ಸಮುದಾಯವೇ ಶತಮಾನಗಳಿಂದ ಕಟ್ಟಿಕೊಂಡು ಬಂದ ಮೌಖಿಕ ಇತಿಹಾಸವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಕೆಲವೊಮ್ಮೆ ಈ ಬಗೆಯ ಜಾನಪದ ಆಕರವನ್ನು ಒಂದು ಪ್ರಮಾಣಬದ್ಧ ದಾಖಲೆ ಎಂದು ಪರಿಗಣಿಸುವಾಗ ಶಿಷ್ಟ ಆಕರದ ಜೊತೆ ಮೌಖಿಕ ಚರಿತ್ರೆಯನ್ನು ಹೋಲಿಸಿ ಅದರ ಪ್ರಮಾಣಬದ್ಧತೆಯನ್ನೇ ಪ್ರಶ್ನಿಸುವುದು ಕನ್ನಡದ ಶೈಕ್ಷಣಿಕ ಸಂದರ್ಭದಲ್ಲಿ ವಾಡಿಕೆಯೆಂಬಂತೆ ನಡೆದುಕೊಂಡು ಬಂದಿದೆ. ಉಪಸಂಸ್ಕೃತಿ ಮಾಲೆಯ ಪುಸ್ತಕಗಳಲ್ಲಿ ಮತ್ತು ಸಮುದಾಯ ಅಧ್ಯಯನ ಕೈಗೊಂಡ ಯಾವುದೇ ಪಿ.ಎಚ್.ಡಿ ಪ್ರಬಂಧದಲ್ಲಿ ಲಿಖಿತ ದಾಖಲೆಗಳನ್ನು ಮಾತ್ರ ಪ್ರಮಾಣಬದ್ಧ ಆಕರಗಳೆಂದು ನಂಬುವ ಪ್ರವೃತ್ತಿ ಕಾಣಿಸುತ್ತದೆ. ಇಲ್ಲಿ ಅಧ್ಯಯನಕ್ಕೊಳಗಾಗುವ ಸಮುದಾಯ ತಾನೇ ತನ್ನ ಚರಿತ್ರೆಯನ್ನು ಕಟ್ಟಿಕೊಂಡು ಬಂದಿದ್ದರೂ ಅದು 'ನಮ್ಮ' ಸಮಾಜದ ಇತಿಹಾಸವನ್ನು ಬರೆಯುವಾಗ ನಂಬಲಾರ್ಹವಲ್ಲದ ಆಕರವಾಗುತ್ತದೆ. ಲಿಖಿತ ಮತ್ತು ಶಿಷ್ಟ ಆಕರಗಳನ್ನು ಪ್ರಮಾಣಬದ್ಧವೆಂದು ನಂಬುವ ಮುಗ್ಧತೆಯನ್ನು ಯುರೋಪಿನ ಮಾನವಶಾಸ್ತ್ರದ ಅಧ್ಯಯನ ವಿಧಾನವು ನಮ್ಮಲಿ ಹುಟ್ಟು ಹಾಕಿದೆ. ಆಯಾ ಕಾಲಘಟ್ಟದ ಸಮಾಜದ ಚರಿತ್ರೆಯನ್ನು ಬರೆಯುವಾಗ ಲಿಖಿತ ಮತ್ತು ಶಿಷ್ಟ ಆಕರಗಳು ನಿಖರ ಮತ್ತು ನಂಬಲಾರ್ಹ ಚಿತ್ರಣವನ್ನು ನೀಡುತ್ತವೆ ಎಂದು ಇಂದಿಗೂ ನಂಬಲಾಗುತ್ತದೆ.

ಹೆಳವರೆಂದರೆ ಯಾರು? ಅವರಿಗೆ ಈ 'ಹೆಳವ' ಎಂಬ ಹೆಸರು ಯಾಕಾಗಿ ಬಂದಿತು? ಎಂದು ತೀರ್ಮಾನಿಸುವಾಗೆಲ್ಲ ಈ ಬಗೆಯ ಶೈಕ್ಷಣಿಕ ನಂಬಿಕೆ ಬಹುತೇಕ ಎಲ್ಲ ಅಧ್ಯಯನಗಳಲ್ಲಿ ಕಾಣಿಸುತ್ತದೆ. ಹೆಳವ ಸಮುದಾಯದ ಕುರಿತು ವಿವಿಧ ವಿದ್ವಾಂಸರು ಈ ಕೆಳಗಿನಂತೆ ವಿವರಿಸಿದ್ದಾರೆ.

೧೯೦೯ರಲ್ಲಿ ದಕ್ಷಿಣ ಭಾರತದ ಆದಿವಾಸಿಗಳ ಮತ್ತು ವಿವಿಧ ಜಾತಿ ಸಮುದಾಯಗಳ ಅಧ್ಯಯನ ಕೈಗೊಂಡ ಎಡ್ಗರ್ ಥರ್ಸಟನ್ ಅವರು ಹೆಳವರನ್ನು ಹೀಗೆ ವಿವರಿಸುತ್ತಾರೆ. "ಹೆಳವ ಎಂದರೆ ಕಾಲಿಲ್ಲದವನು ಎಂದರ್ಥ. ಹೆಳವರೆಂದರೆ ಭಿಕ್ಷೆ ಬೇಡುತ್ತ ಬದುಕುವ ಒಂದು ಜನವರ್ಗ. ಇವರು ಬಳ್ಳಾರಿ, ಮೈಸೂರು ಮುಂತಾದ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ಇವರು ಹಳ್ಳಿಗಳ ಚರಿತ್ರೆಯನ್ನು ಕಟ್ಟಿಕೊಂಡು ಬಂದವರು. ಇವರು ಸಾಮಾನ್ಯವಾಗಿ ಎತ್ತಿನ ಮೇಲೆ ಹತ್ತಿಕೊಂಡು ಹಳ್ಳಿಗಳನ್ನು ಸುತ್ತುತ್ತಾರೆ. ಹೀಗೆ ಎತ್ತಿನ ಮೇಲೆ ಹತ್ತಿಕೊಂಡು ತಮ್ಮ ಒಕ್ಕಲು ಮನೆಗಳಿಗೆ ಹೋಗುವಾಗ ತಮ್ಮ ಕಾಲುಗಳನ್ನು ಉಣ್ಣೆಯ ಚದಾರದಿಂದ ಮುಚ್ಚಿಕೊಂಡಿರುತ್ತಾರೆ. ಇವರು ತಮ್ಮ ಒಕ್ಕಲು ಮನೆಗಳಿಗೆ ತೆರಳಿ ಅವರ ಕುಟುಂಬದ ಇತಿಹಾಸವನ್ನು ಹೇಳುತ್ತಾರೆ."[1]

೧೯೩೦ರಲ್ಲಿ ಮೈಸೂರಿನ ಆದಿವಾಸಿಗಳ ಮತ್ತು ಜಾತಿ ಸಮುದಾಯಗಳ ಅಧ್ಯಯನ ಮಾಡಿದ ಎಚ್. ವಿ. ನಂಜುಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ಅವರು ಈ ಕೆಳಗಿನಂತೆ ಅಭಿಪ್ರಾಯಪಡುತ್ತಾರೆ. "ಹೆಳವ ಎಂದರೆ ಕಾಲಿಲ್ಲದವನು ಎಂದರ್ಥ. ಹೆಳವರೆಂದರೆ ಒಂದು ಭಿಕ್ಷುಕ ಜನವರ್ಗ. ಇವರು ಒಕ್ಕಲಿಗರ ಮನೆಯಲ್ಲಿ ಮಾತ್ರ ಭಿಕ್ಷೆ ಬೇಡುತ್ತಾರೆ. ಇವರು ರಾಜ್ಯದ ಎಲ್ಲ ಕಡೆ ವಾಸಿಸುತ್ತಿದ್ದಾರೆ."[2]

೧೯೨೨ರಲ್ಲಿ ಬಾಂಬೇ ಪ್ರಾಂತ್ಯದ ಜನಸಮುದಾಯಗಳ ಅಧ್ಯಯನ ಮಾಡಿದ ಎಂಥೋವನ್ ಅವರು ಹೆಳವರನ್ನು ಹೀಗೆ ವಿವರಿಸುತ್ತಾರೆ. "ಹೇಳವರೆಂದರೆ ಕಾಲಿಲ್ಲದವರೆಂದು ಅರ್ಥ. ಹೆಳವರು ಪಾರಂಪರಿಕ ಭಿಕ್ಷಾವೃತ್ತಿಯನ್ನು ಅನುಸರಿಸಿಕೊಂಡು ಬದುಕುತ್ತಿರುವ ಜನವರ್ಗವಾಗಿದೆ. ಇವರು ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಕರಾವಳಿ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ಹೆಳವರು ಹಿಂದೂಗಳಲ್ಲಿನ ಭಿಕ್ಷುಕ ಸಮುದಾಯವಾಗಿರುವ ಪಂಗುಲರನ್ನು ಕೆಲವು ಸಂಗತಿಗಳಲ್ಲಿ ಹೋಲುತ್ತಾರೆ. ಇವರು ತಾವು ಲಿಂಗಾಯ್ತರೆಂದು ಹೇಳಿಕೊಂಡರೂ ಲಿಂಗಾಯತರಿಗಿಂತ ಇವರು ಭಿನ್ನರು. ಹೆಳವರು ತಾವು ನಿಜಾಮನ ರಾಜ್ಯದ ಕಲ್ಯಾಣದಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ."[3]

೧೯೫೦ರ ಸುಮಾರಿಗೆ ಹೈದರಾಬಾದ್ ನಿಜಾಮನ ಪ್ರಾಂತ್ಯದ ಸಮುದಾಯಗಳನ್ನು ಅಧ್ಯಯನ ಮಾಡಿದ ಸಯದ್ ಸಿರಾಜ್ ಉಲ್ ಹಸನ್ ಅವರ ವಿವರಣೆ ಹೀಗಿದೆ "ಪಿಚ್ಚ ಕುಂಟಲ, ಪಿಚ್ಚಗುಂಟ, ಭಕ್ತೋಳ್ಳು ಮತ್ತು ಗೊಲ್ಲಕುಲಮ್ ಎಂದು ವಿವಿಧ ಹೆಸರುಗಳಿಂದ ಕರೆಯಲ್ಪಡುವ ಈ ಸಮುದಾಯ ಮೂಲತಃ ತೆಲುಗು ದೇಶದ ಅಲೆಮಾರಿ ಭಿಕ್ಷುಕ ಸಮುಧಾಯವಾಗಿದೆ. ಇವರು ವಿವಿಧ ವಂಶಾವಳಿಗಳ ವಿವರಗಳನ್ನು ದಾಖಲಿಸುವ ವಂಶಾವಳಿಶಾಸ್ತ್ರಜ್ಞರು ಮತ್ತು ಚಾಪೆ ಹೆಣೆಯುವವರು, 'ಪಿಚ್ಚಕುಂಟ' ಭಿಕ್ಷಾ ಕುಂಟ್ಲು (Bhiksha Kuntlu) ಎಂಬ ಪದದಿಂದ ಬಂದಿದೆ. (ಭಕ್ಷಾ - ಭಿಕ್ಷೆ ಬೇಡುವುದು, ಕುಂಟಾ ಎಂದರೆ ಕಾಲಿಲ್ಲದವನು) 'ಪಿಚ್ಚಗುಂಟ' ಎಂಬುದುದು ಕಾಲಿಲ್ಲದ ಭಿಕ್ಷುಕನಿಗೆ ಇರುವ ನಿಮದಾನಾತ್ಮಕ ಗುಣವಾಚಕವಾಗಿದೆ."[4]

ಬಿ.ಎಂ. ತೆಳಗಡಿಯವರು ಹೆಳವರನ್ನು ಕುರಿತು, "ಹೆಳವ, ಹೆಳವಯ್ಯ, ಒಕ್ಕಾಲ ಭೃಂಗಿ ನಂದಿವಾಲ ಮೊದಲಾದ ಹೆಸರುಗಳಿಂದ ಇವರನ್ನು ಕರೆಯುತ್ತಾರೆ. ಹೆಳವ, ಶಬ್ಧಕ್ಕೆ ಕಾಲಿಲ್ಲದವ, ಕುಂಟ, ಅಂಗಹೀನ ಎಂಬ ಅರ್ಥವಿದೆ ಎಂದು ವಿವರಿಸುತ್ತಾರೆ"[5]. ನಿಂಗಣ್ಣ ಸಣ್ಣಕ್ಕಿಯವರು "ಹೆಳವರಿಗೆ ಹೇಳುವವರು ಎಂಬುದು ಜಾನಪದರ ನಾಲಿಗೆಯ ಮೇಲಿರುವ ಅರ್ಥ ಜೀವಂತವಾಗಿದೆ. ಏನನ್ನು ಹೇಳುವವರು? ಜನಾಂಗಗಳ ಕಥೆಗಳನ್ನು ಹೇಳುವವರು, ತಿಳಿಸುವವರು ಎಂಬುದು ಜನಮನಗಳಲ್ಲಿ ಗೊತ್ತಿರದ ವಿಷಯವಾಗಿದೆ"[6] ಎನ್ನುತ್ತಾರೆ. ಪಿ.ಕೆ. ರಾಜಶೇಖರ್ ಅವರ ವಿವರಣೆ ಈ ರೀತಿ ಇದೆ "ಗಂಟೆ ಬಾರಿಸಿಕೊಂಡು ಕಿಣಿ ಕಿಣಿ ನಾದ ಮಡುತ್ತಾ ಕೊರಳಿನಲ್ಲೊಂದು ಭಾರಿ ಜೋಳಿಗೆಯನ್ನು ಹೊತ್ತು ದವಸ ಧಾನ್ಯಗಳ ಹೊರನ್ನು ಬಸವನ ಹೆಗಲಲ್ಲಿ ಹಾಕಿ ಮನೆ ಮನೆಯ ಮುಂದೆ ನಿಂತು ಕುಲಪುರಾಣಗಳನ್ನು ಹೇಳುವವರು ಹೆಳವರು"[7]. ಕೆ.ಎಸ್. ಸಿಂಗ್‌ರವರು ತಮ್ಮ 'ಇಂಡಿಯಾಸ್ ಕಮ್ಯುನಿಟಿಸ್' ಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ. "ಹೆಳವ ಎಂಬ ಕರ್ನಾಟಕದ ಈ ಸಮುದಾಯವನ್ನು ಆಂಧ್ರ ಪ್ರದೇಶದಲ್ಲಿ 'ಪಿಚ್ಚಗುಂಟ್ಲ' ಎಂದು ಮಹಾರಾಷ್ಟ್ರದಲ್ಲಿ 'ಹೆಳ್ವೆ' ಎಂದು ಕರೆಯಲಾಗುತ್ತದೆ. ಹೆಳವ ಎಂದರೆ ಕುಂಟ ವ್ಯಕ್ತಿ ಎಂದು ಅರ್ಥ"[8].

ಪೀಪಲ್ ಆಫ್ ಇಂಡಿಯಾ ಮಾಲಿಕೆಯಲ್ಲಿ ಕರ್ನಾಟಕದ ಸಮುದಾಯಗಳು ಕುರಿತು ಎರಡು ಸಂಪುಟಗಳು ಪ್ರಕಟವಾಗಿವೆ. ಸಂಪುಟ ಎರಡರಲ್ಲಿ ಆರ್. ಗುಪ್ತ ಎನ್ನುವವರು ಹೆಳವರ ಕುರಿತು ಹೀಗೆ ವಿವರಿಸುತ್ತಾರೆ. "ಹೆಳವರು ಆಂಧ್ರಪ್ರದೇಶದಲ್ಲಿ ಪಿಚ್ಚಗುಂಟ್ಲ ಎಂದು ಕರೆಯಲ್ಪಡುತ್ತಾರೆ. 'ಹೆಳವ' ಎಂದರೆ ಕುಂಟ ವ್ಯಕ್ತಿ ಎಂದರ್ಥ"[9]. ಜೀ.ಶಂ. ಪರಮಶಿವಯ್ಯನವರು ತಮ್ಮ ಗ್ರಂಥದಲ್ಲಿ ಹೆಳವರನ್ನು ಕುರಿತು ಈ ರೀತಿ ವಿವರಿಸುತ್ತಾರೆ. "ಒಕ್ಕಲಿಗರ ಒಂದು ವರ್ಗವೆಂದೇ ನಂಬುತ್ತಾರೆ. ಹೆಳವನಾಗಿದ್ದ ಇವರ ಮೂಲ ಪುರಷ ಒಕ್ಕಲಿಗರ ಮೂಲ ಪುರುಷರಲ್ಲಿ ಒಬ್ಬನೆಂದೂ, ಅಂಗವಿಕಲನಾಗಿ ಅಸಹಾಯಕನಾಗಿದ್ದುರಿಂದ ಅವನು ಉಳಿದ ಸೋದರರನ್ನು ಆಶ್ರಯಿಸಿ ಜೀವಿಸಬೇಕಾಯಿತೆಂದೂ ಕತೆಗಳಿವೆ. ಕ್ರಮೇಣ ಈ ಹೆಳವನ ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳು ಬೆಳೆದು ಒಂದು ಪ್ರತ್ಯೇಕ ವರ್ಗವಾಗಿಯೇ ಉಳಿದರು"[10]. ಹಿರಿಯ ಜಾನಪದ ವಿದ್ವಾಂಸರಾದ ಎಚ್.ಎಲ್. ನಾಗೇಗೌಡರು ಹೆಳವರ ಬಹುತೇಕ ಎಲ್ಲ ಐತಿಹ್ಯ ಮತ್ತು ದಂತಕಥೆಗಳನ್ನು ಗಮನದಲ್ಲಿಟ್ಟುಕೊಂಡು ಹೆಳವರ ಕುರಿತು ಹೀಗೆ ವಿಶ್ಲೇಷಿಸುತ್ತಾರೆ. "ಸೂಕ್ಷ್ಮವಾಗಿ ಗಮನಿಸಿದಾಗ 'ಹೆಳವರು

ಹೆಳವರೂ ಹೌದು, ಹೇಳುವವರೂ ಹೌದು' ಎಂದು ಹೇಳಬೇಕಾಗುತ್ತದೆ. ಇವರ ಮೂಲ ಪುರಷ ಹೆಳವನಾಗಿದ್ದ ಕಾರಣ ಇವರು ಹೆಳವರು. ಅವರು ತಮ್ಮ ಕುಲಗಳ ವೃತ್ತಾಂತವನ್ನು ಹೇಳುವವರಾದ್ದರಿಂದ "ಹೇಳುವವರು'"[11].

ಇನ್ನು ಕನ್ನಡದಲ್ಲಿ ಮಾನವಶಾಸ್ತ್ರೀಯ ವಿಧಾನದ ಮೂಲಕ ಹೆಳವರ ಕುರಿತು ನಡೆದ ಮೊದಲ ಶಾಸ್ತ್ರಬ್ದ ಅಧ್ಯಯನವೆಂದರೆ ಹರಿಲಾಲ್ ಪವಾರ್ ಅವರ 'ಕರ್ನಾಟಕದ ಹೆಳವರು ಒಂದು ಜಾನಪದೀಯ ಅಧ್ಯಯನ' ಎಂಬ ಮಹಾಪ್ರಬಂಧ. ೧೯೯೦ ರಲ್ಲಿ ಪವಾರ್ ಅವರು ಈ ಅಧ್ಯಯನವನ್ನು ಪೂರೈಸಿದ್ದಾರೆ. ಸಾಹಿತ್ಯ ಅಕಾಡೆಮಿಯಿಂದ ೧೯೯೩ರಲ್ಲಿ ಇದೇ ಲೇಖಕರ 'ಹೆಳವರ ಸಂಸ್ಕೃತಿ' ಎಂಬ ಪುಸ್ತಕ ಪ್ರಕಟವಾಗಿದೆ. ಪ್ರಾಯಶಃ ಸದರಿ ಪುಸ್ತಕವು ಪವಾರರ ಮಹಾಪ್ರಬಂಧದ ಸಂಕ್ಷಿಪ್ತ ರೂಪವೆಂದು ಕಾಣುತ್ತದೆ. ಈ ಪುಸ್ತಕದಲ್ಲಿ ಪವಾರ್ ಅವರು " ಕರ್ನಾಟಕದ ಜನಪದ ವೃಂದಗಳಲ್ಲಿ ಹೆಳವರದೂ ಒಂದು ವಿಶಿಷ್ಟ ಸಮೂಹ. ಸ್ಥಿರ ವಸತಿ ಕಲ್ಪನೆಯ ಕೃಷಿಕ ಗುಂಪನ್ನು ಹೊಂದಿಕೊಂಡೇ ಜೀವನ ನಡೆಸುತ್ತ ಬಂದ ಹೆಳವರು, ವಿವಿಧ ಪ್ರದೇಶದ ಪ್ರಭಾವಶಾಲಿ ಮನೆತನಗಳ ವಂಶಾವಳಿಗಳನ್ನು ತಮ್ಮ ಮೌಖಿಕ ಪರಂಪರೆಯ ಮೂಲಕ, ಕಾಲಾನಂತರ ಚಿಪ್ಪೋಡುಗಳಲ್ಲಿ ದಾಖಲೆಗೊಳಿಸಿ ಕಾಪಾಡಿಕೊಂಡು ಬಂದ ಹಿರಿಮೆ ಇವರದಾಗಿದೆ. ಕುಲಕೊಂಡಾಡುವುದನ್ನೇ ತಮ್ಮ ಮುಖ್ಯ ವೃತ್ತಿಯನ್ನಾಗಿ ಸ್ವೀಕರಿಸಿದ ಹೆಳವರು, ತಮ್ಮ ಉಪಜೀವನಕ್ಕೆ ಈ ವೃತ್ತಿಯನ್ನೇ ಹೆಚ್ಚಾಗಿ ಅವಲಂಬಿಸಿದ್ದು ಕಂಡು ಬರುತ್ತದೆ"[12]. ಎಂದು ವಿವರಿಸುತ್ತಾರೆ.

ಮೇಲಿನ ಎಲ್ಲ ಉಲ್ಲೇಖಗಳು ಬಹುತೇಕ ಎರಡು ಮುಖ್ಯ ತೀರ್ಮಾನಗಳಿಗೆ ಬರುತ್ತವೆ.

೧. ಹೆಳವರ ಮೂಲ ಪುರುಷನು ಹೆಳವನಾಗಿದ್ದ (ಕಾಲಿಲ್ಲದವನು) ಅವನು ಭಿಕ್ಷೆ ಬೇಡುತ್ತಾ ಬದುಕಿದನಾದ್ದರಿಂದ ಅವನ ಸಂತತಿಯು ಮುಂದೆ ಹೆಳವ ಸಮುದಾಯವಾಗಿ ರೂಪುಗೊಂಡಿತು.

೨. ಹೆಳವರು ವಂಶಾವಳಿಶಾಸ್ತ್ರಜ್ಞರು. ಅವರು ತಮ್ಮ ಒಕ್ಕಲುಗಳ ವಂಶಾವಳಿಯನ್ನು ಹೇಳುವವರು. ಈ ಹೇಳುವ ವೃತ್ತಿಯಿಂದಾಗಿಯೇ ಇವರಿಗೆ ಹೆಳವ ಎಂಬ ಹೆಸರು ಬಂದಿರಬೇಕು ಎಂಬ ತೀರ್ಮಾನಕ್ಕೆ ಬರುತ್ತಾರೆ.

ವಂಶಾವಳಿಯನ್ನು 'ಹೇಳುವ'ದರಿಂದ ಇವರಿಗೆ 'ಹೆಳವ' ಎಂಬ ಹೆಸರು ಬಂದಿರಬಹುದೇ ಹೆಳವ ಸಮುದಾಯದ ಹಿರಿಯರ ಜೊತೆ ಚರ್ಚಿಸಲಾಯಿತು. ಆದರೆ ಯಾರೂ ವಂಶಾವಳಿ 'ಹೇಳುವ" ಕಾರಣಕ್ಕಾಗಿ ಹೆಳವ ಎಂಬ ಹೆಸರು ಬಂದಿತು ಎಂಬ ಅಭಿಪ್ರಾಯವನ್ನು ಪುಷ್ಟೀಕರಿಸಲಿಲ್ಲ. ಈ ಅಧ್ಯಯನಕ್ಕೆ ಹೆಳವರ ಹೆಸರನ್ನು ವಿಶ್ಲೇಷಿಸುವ ಉದ್ದೇಶವಿಲ್ಲದಿದ್ದರೂ ಸಹ ಕುತೂಹಲಕ್ಕೆ ಈ ಕುರಿತು ಹಲವರ ಜೊತೆ ಚರ್ಚಿಸಲಾಯಿತು. ಹೆಳವ ಸಮುದಾಯದ ಹಿರಿಯರು ತಮ್ಮ ಸಮುದಾಯದ ಮೂಲ ಪುರಷನ ಹುಟ್ಟಿನ ಕುರಿತು ಹೇಳುತ್ತಿದ್ದ ಸೃಷ್ಟಿಪುರಾಣಗಳನ್ನು ಸಂಗ್ರಹಿಸಲಾಯಿತು. ಹೆಳವರು ತಮ್ಮ ಮೂಲಪುರಷನ ಹುಟ್ಟಿನ ಕುರಿತು ಹೇಳುವ ಸೃಷ್ಟಿಪುರಾಣಗಳು ಈಗಾಗಲೇ ವಿವಿಧ ವಿದ್ವಾಂಸರಿಂದ ಸಂಗ್ರಹವಾಗಿರುವುದರಿಂದ ಅವುಗಳನ್ನೇ ಈ ಅಧ್ಯಯನದಲ್ಲಿ ಬಳಸಲಾಗಿದೆ. ಈ ಸೃಷ್ಟಿಪುರಾಣಗಳು ಹೆಳವ ಸಮುದಾಯದ ಹುಟ್ಟಿನ ಮೇಲೆ ಬೆಳಕು ಚೆಲ್ಲುತ್ತವೆ.

**ಹೆಳವ ಸಮುದಾಯ ಕುರಿತು ಇರುವ ಪುರಾಣಗಳು**

ಬಹುತೇಕ ಕೆಳಜಾತಿ ಮತ್ತು ದುಡಿವ ವರ್ಗಗಳ ಇತಿಹಾಸ ಅವುಗಳ ಮೌಖಿಕ ಸಾಹಿತ್ಯದಲ್ಲಿ ಹುದುಗಿರುತ್ತದೆ. ಈ ದೇಶದ ಅಭಿಜಾತ ಆಕರ ಸಾಮಾಗ್ರಿಗಳಲ್ಲಿ ಈ ಸಮುದಾಯಗಳ ಚಿತ್ರಣ ಅತ್ಯಂತ ಅಸ್ಪಷ್ಟವಾದದ್ದು. ಜೊತೆಗೆ ಈ ಅಭಿಜಾತ ಆಕರಗಳು ಕಟ್ಟಿಕೊಡುವ ಇತಿಹಾಸವೂ ಸಹ ಅರ್ಧ ಸತ್ಯದ್ದಾಗಿರುತ್ತದೆ. ಈ ಕಾರಣದಿಂದಾಗಿ ಆಯಾ ಸಮುದಾಯದ ಮೌಖಿಕ ಸಾಹಿತ್ಯವನ್ನೇ ನಾವು ಚರಿತ್ರೆಯ ಆಕರವನ್ನಾಗಿ ಪರಿಗಣಿಸಬೇಕಿದೆ. ಈ ಮೌಖಿಕ ಆಕರಗಳನ್ನು ಪ್ರಮಾಣಬದ್ಧ ಆಕರಗಳೆಂದೇ ವಿದ್ವಾಂಸರು ಪರಿಗಣಿಸಬೇಕು. ಇಂಡಿಯಾದ ಶೋಷಿತ ಸಮುದಾಯಗಳ ಇತಿಹಾಸವು ಆಯಾ ಸಮುದಾಯಗಳು ಕಟ್ಟಿಕೊಂಡು ಬಂದ ಪುರಾಣಗಳಲ್ಲಿ ಮತ್ತು ಕಥೆಗಳಲ್ಲಿ ಅಡಕವಾಗಿರುತ್ತದೆ. ಹೆಳವ ಸಮುದಾಯದ ಕುರಿತು ಇರುವ ಪುರಾಣಗಳನ್ನು, ಈ ಸಮುದಾಯದ ಚರಿತ್ರೆಯನ್ನು ಕಟ್ಟಿಕೊಡುವಾಗ ಮುಖ್ಯವಾಗಿ ಗಮನಿಸಬೇಕಾಗುತ್ತದೆ.

**ಪುರಾಣ – ೧**

ಒಕ್ಕಲಿಗ ವ್ಯಕ್ತಿಯೊಬ್ಬನಿಗೆ ಏಳು ಜನ ಮಕ್ಕಳಿದ್ದರು. ಅದರಲ್ಲಿ ಕಿರಿಯವನು ಹುಟ್ಟುತ್ತಲೇ ಕುಂಟನಾಗಿದ್ದ. ತನ್ನ ಕಿರಿಯ ಮಗನನ್ನು ಅದರಲ್ಲೂ ಕುಂಟನಾಗಿದ್ದ ಕಾರಣಕ್ಕಾಗಿಯೇ ಏನೋ ಅವನ ತಾಯಿ ಆತನನ್ನು ತುಂಬಾ ಪ್ರೀತಿಸುತ್ತಿದ್ದಳು. ಇದನ್ನು ಕಂಡು ಉಳಿದ ಆರು ಜನ ಅಣ್ಣಂದಿರು ತಾವು ದುಡಿಯುತ್ತಿರುವುದನ್ನು ನೋಡಿಯೂ ಏನೂ ದುಡಿಯದ ಕುಂಟನನ್ನು ಪ್ರೀತಿಸುವ ತಾಯಿಯ ಪಕ್ಷಪಾತವನ್ನು ಆಕ್ಷೇಪಿಸುತ್ತಿದ್ದರು. ಅಲ್ಲದೆ ತಮ್ಮ ಕಿರಿಯ ಸಹೋದರನನ್ನು ಈ ಕಾರಣಕ್ಕಾಗಿಯೇ ದ್ವೇಷಿಸುತ್ತಿದ್ದರು. ಜೊತೆಗೆ ತಮ್ಮ ಅಂಗವಿಕಲ ಸಹೋದರನನ್ನು ಕೊಲ್ಲಲು ಪ್ರಯತ್ನಿಸಿದರು. ಹಾಗೆ ಅವರು ಕೊಲ್ಲುವ ಪ್ರಯತ್ನ ಮಾಡಿದಾಗೆಲ್ಲ ಕುಂಟ ಸಹೋದರನನ್ನು ಅವರ ಮನೆಯ ಹೋರಿಯೊಂದು ಸದಾ ರಕ್ಷಿಸುತ್ತಿತ್ತು. ತಮ್ಮ ಪ್ರಯತ್ನಗಳೆಲ್ಲ ವಿಫಲವಾದಾಗ ಅವರು ತಮ್ಮ ಆಸ್ತಿ ಹಂಚಿಕೆ ಮಾಡಿಕೊಂಡು ಕುಂಟ ತಮ್ಮನನ್ನು ಒಂಟಿಯಾಗಿಸಲು ಮುಂದಾದರು. ಕುಂಟ ವ್ಯಕ್ತಿ ಆಸ್ತಿಯನ್ನು ತೆಗೆದುಕೊಂಡು ದುಡಿದು ಬದುಕಲು ಸಾಧ್ಯವೇ ಎಂದು ಯೋಚಿಸಿದ ಶಿವನು ಅಣ್ಣ ತಮ್ಮಂದಿರ ಮಧ್ಯೆ ರಾಜೀ ಸೂತ್ರವೊಂದನ್ನು ಏರ್ಪಡಿಸಿದನು. ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಲ್ಲವನ್ನು ಆರು ಜನ ಅಣ್ಣತಮ್ಮಂದಿರು ಹಂಚಿಕೊಳ್ಳಬೇಕು. ಆದರೆ ಅಂಗವಿಕಲ ತಮ್ಮ ತನ್ನ ಅಣ್ಣಂದಿರ ಮನೆಗೆ ಎತ್ತಿನ ಮೇಲೆ ಹೋಗಿ ಗಂಟೆ ಬಾರಿಸಿ ಅವರಿಂದ ತನ್ನ ಪಾಲು ಪಡೆದು ಬದುಕಬೇಕು ಎಂದು ಶಿವನು ತೀರ್ಪು ನೀಡಿದನು. ಅಣ್ಣಂದಿರು ಅವನಿಗೆ ಬೇಕಾದ ದಾನ ನೀಡುತ್ತಾ ಬಂದರು. ಕುಂಟ (ಹೆಳವ) ವ್ಯಕ್ತಿ ಎತ್ತಿನ ಮೇಲೆ ಏರಿ ಗಂಟೆ ಬರಿಸುತ್ತಾ ಅಣ್ಣಂದಿರ ಮನೆಗೆ ಹೋಗಿ ತನ್ನ ಪಾಲನ್ನು ಪಡೆಯುವುದು ಮುಂದುವರೆದುಕೊಂಡು ಬಂದಿತು. ಮುಂದೆ ಈತನ ತಲೆಮಾರಿನ ಎಲ್ಲರೂ ಇದೇ ವೃತ್ತಿಯನ್ನು ಅನುಸರಿಸಿಕೊಂಡು ಬಂದರು. ಈ ಕುಂಟ (ಹೆಳವ) ನ ಸಂತತಿಯೇ ಮುಂದೆ ಹೆಳವರೆಂದು ಕರೆಯಲ್ಪಟ್ಟರು. ಇವರು ತಮ್ಮ ಒಕ್ಕಲಿಗರ ಮನೆಗೆ ಹೋಗಿ ಅವರ ಕುಲಗೋತ್ರಗಳ ಇತಿಹಾಸವನ್ನು ಹೇಳುತ್ತ ಭಿಕ್ಷೆ ಪಡೆಯುತ್ತ ಜೀವಿಸಲಾರಂಭಿಸಿದರು.[13]

**ಪುರಾಣ – ೨**

ಹೆಳವರು ತಮ್ಮನ್ನು ನಿಜಾಮನ ಆಳ್ವಿಕೆಗೊಳಪಟ್ಟಿದ್ದ ಕಲ್ಯಾಣದಿಂದ ಬಂದವರೆಂದು ಹೇಳುತ್ತಾರೆ. ಹನ್ನೆರಡನೇ ಶತಮಾನದ ಹೊತ್ತಿಗೆ ಶೈವಧರ್ಮವು ಅವನತಿಯ ಕಡೆಗೆ ಸಾಗುತ್ತಿತ್ತು. ಆಗ ಜೈನ ಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಅದನ್ನು ನೋಡಿದ ಶಿವನು ತನ್ನ ಪ್ರಮಥರನ್ನು ಕರೆದು ಭೂಮಿಗೆ ಹೋಗಿ ಲಿಂಗಾಯಿತ ಧರ್ಮವನ್ನು ಉಳಿಸಿ ಎಂದು ಆಜ್ಞಾಪಿಸುತ್ತಾನೆ. ಹೀಗೆ ಶಿವನ ಆಜ್ಞೆಯಂತೆ ಭೂಮಿಗೆ ಬಂದ ಪ್ರಮಥರಲ್ಲಿ ಒಕ್ಕಾಲು ಭೃಂಗಿಯೂ (ಒಂಟಿಕಾಲಿನ ಭೃಂಗಿ) ಒಬ್ಬನು. ಹೆಳವರು ತಮ್ಮನ್ನು ಈ ಒಕ್ಕಾಲು ಭೃಂಗಿಯ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರೆ. ಭೂಮಿಗೆ ಬಂದ ಪ್ರಮಥರೆಲ್ಲ ಮಾಸಲು ಕಂದು ಬಣ್ಣದ ಉಡುಪನ್ನು ಧರಿಸಿದ್ದರು. ಜೊತೆಗೆ ಎತ್ತುಗಳ ಮೇಲೆ ಕುಳಿತುಕೊಂಡು ಮನೆ ಮನೆಗೆ ಹೋಗಿ ಶಿವನ ಗುಣಗಾನ ಮಾಡಲಾರಂಭಿಸಿದರು. ಹೆಳವರು ತಮ್ಮನ್ನು ಈ ಒಕ್ಕಾಲು ಭೃಂಗಿಯ ವಂಶಸ್ಥರೆಂದು ಹೇಳಿಕೊಳ್ಳುತ್ತಾ ಎತ್ತುಗಳು ಮೇಲೆ ಹತ್ತಿಕೊಂಡು ಒಕ್ಕಲು ಮನೆಗಳಿಗೆ ಹೋಗಿ ಶಿವನ ಕಥೆಗಳನ್ನು ಹೇಳಿ ಭಿಕ್ಷೆ ಬೇಡುವುದನ್ನೇ ವೃತ್ತಿಯನ್ನಾಗಿಸಿಕೊಂಡರು. ಒಕ್ಕಾಲು ಭೃಂಗಿ ತಮ್ಮ ಮೂಲ ಪುರಷನಾಗಿದ್ದರಿಂದಾಗಿ, ಈವತ್ತಿನ ಹೆಳವರೂ ಸಹ ಕಾಲನ್ನು ಬಟ್ಟೆಯಿಂದ ಮರೆ ಮಾಡಿಕೊಳ್ಳುತ್ತಾರೆ.[14]

**ಪುರಾಣ – ೩**

ದೇವಲೋಕದಲ್ಲಿ ವಿಷ್ಣು, ಲಕ್ಷ್ಮಿ, ಬ್ರಹ್ಮ ಸರಸ್ವತಿ ಮತ್ತು ಶಿವ ಪಾರ್ವತಿಯರ ವಿವಾಹ ಏರ್ಪಟ್ಟಿತ್ತು. ಇವರ ವಿವಾಹ ನಡೆಯುವ ಸಂದರ್ಭದಲ್ಲಿ ವಧುವರರ ಗೋತ್ರಗಳನ್ನು ಹೇಳುವ ವ್ಯಕ್ತಿಯೊಬ್ಬನ ಅವಶ್ಯಕತೆ ಉಂಟಾಯಿತು. ಆಗ ಮಣ್ಣಿನಿಂದ ಬೊಂಬೆಯೊಂದನ್ನು ಮಾಡಿ ಅದಕ್ಕೆ ಜೀವ ತುಂಬಲಾಯಿತು. ಈ ಬೊಂಬೆಯ ಒಂದು ಕಾಲು ಕುಂಟಾಗಿತ್ತು. ತ್ರಿಮೂರ್ತಿಗಳಿಂದ ಜೀವ ಪಡೆದ ಈ ವ್ಯಕ್ತಿಯು ನವ ವಧುವರರ ಗೋತ್ರಗಳನ್ನು ಹೇಳಿದನು. ತ್ರಿಮೂರ್ತಿಗಳು ಈ ಕುಂಟ ವ್ಯಕ್ತಿಯನ್ನು ಗೋತ್ರ ಹೇಳುವ ಈ ವೃತ್ತಿಯನ್ನೇ ಅವಲಂಬಿಸಿ ಬದುಕು ಎಂದು ಆಶೀರ್ವದಿಸಿದರು. ಈ ಕುಂಟ ವ್ಯಕ್ತಿಯ ವಂಶದವರೇ ಈ ಪಿಚ್ಚಗುಂಟಲ ಸಮುದಾಯವಾಗಿದೆ. ಇವರೇ

ಮುಂದೆ ಗೋತ್ರ ಹೇಳುವ ವಂಶಾವಳಿಶಾಸ್ತ್ರಜ್ಞರಾಗಿ ರೂಪುಗೊಂಡರು. ಇವರು ಕಾಪು ಮತ್ತು ಗೊಲ್ಲ ಸಮುದಾಯದ ಮನೆಗಳಿಗೆ ಹೋಗಿ ಗೋತ್ರ ಹೇಳುತ್ತಾ ಭಿಕ್ಷೆ ಬೇಡಿ ಬದುಕುತ್ತಿದ್ದಾರೆ.[15]

**ಪುರಾಣ – ೪**

ಏಳು ಜನಗೊಲ್ಲ ಮಹಿಳೆಯರಿಗೆ ಮಕ್ಕಳಿರಲಿಲ್ಲ. ಇವರು ತಮಗೆ ಸಂತಾನ ಕರುಣಿಸುವಂತೆ ಶಿವನನ್ನು ಬೇಡಿದರು. ಶಿವ ಅವರಿಗೆ ಒಬ್ಬ ಕುಂಟ ಬಾಲಕನನ್ನು ಕೊಟ್ಟನ್ನು. ಅಲ್ಲದೆ ಶಿವನ ವರದಿಂದಾಗಿ ಈ ಏಳು ಜನ ಮಹಿಳೆಯರು ಗರ್ಭಿಣಿಯರಾದರು. ಅಲ್ಲದೆ ಏಳೂ ಜನ ಏಳು ಹೆಣ್ಣು ಕೂಸುಗಳಿಗೆ ಜನ್ಮ ನೀಡಿದರು. ದೇವರ ಅಣತಿಯಂತೆ ತನ್ನ ಏಳೂ ಜನ ಹೆಣ್ಣು ಮಕ್ಕಳನ್ನು ಕುಂಟ ಬಾಲಕನಿಗೆ ಕೊಟ್ಟು ಮದುವೆ ಮಾಡಿದರು. ಆನಂತರ ಈ ಕುಂಟ ವ್ಯಕ್ತಿಯು ಶಂಖ, ಗಂಟೆ, ಒಂದು ಎತ್ತು ಮತ್ತು ಗಜಶೂಲವನ್ನು ಪಡೆದುಕೊಂಡು ಅಲೆಮಾರಿಯಾಗಿ ಭಿಕ್ಷೆ ಬೇಡುತ್ತ ಬದುಕಲಾರಂಭಿಸಿದ. ಎತ್ತಿನ ಮೇಲೆ ಹತ್ತಿಕೊಂಡು ಊರೂರು ಸುತ್ತತೊಡಗಿದ. ಪಿಚ್ಚಗುಂಟ್ಲ ಸಮುದಾಯದವರು ಈತನನ್ನೇ ತಮ್ಮ ಮೂಲ ಪುರುಷ ಎಂದು ಹೇಳಿಕೊಳ್ಳುತ್ತಾರೆ.[16]

**ಪುರಾಣ – ೫**

ಶಿವನ ಒಡ್ಡೋಲಗದಲ್ಲಿ ವಿರಾಜಿಸುವ ಶಿವಗಣದಲ್ಲಿ ಶೃಂಗಿ ಹಾಗೂ ಒಕ್ಕಾಲ ಭೃಂಗಿ ಪ್ರಮುಖರು. ಶೃಂಗಿ ಶಿವಪಾರ್ವತಿಯರನ್ನು ಸಮಾನವಾಗಿ ಗೌರವಿಸುತ್ತಿದ್ದ, ಭಕ್ತಿಯಿಂದ ಇಬ್ಬರಿಗೂ ಕೈಮುಗಿಯುತ್ತಿದ್ದ, ಒಕ್ಕಾಲಭೃಂಗಿಯ ಸ್ವಭಾವ ವಿಚಿತ್ರವಾಗಿತ್ತು. ಅವನು ತನ್ನ ಒಲವನ್ನೆಲ್ಲ ಶಿವನಿಗೆ ಮಾತ್ರ ಮೀಸಲಾಗಿಟ್ಟಿದ್ದ. ಪಾರ್ವತಿಗೆ ನಮಸ್ಕಾರವನ್ನು ಮಾಡುತ್ತಿರಲಿಲ್ಲ. ಈ ಸೋಜಿಗದ ಸಂಗತಿಯನ್ನರಿತ ನಾರದ, ಭೃಂಗಿಯ ಭಕ್ತಿಯ ರೀತಿಯನ್ನು ಒಮ್ಮೆ ಪಾರ್ವತಿಗೆ ತಿಳಿಸಿದ. ಸ್ವಾಭಿಮಾನಿಯಾದ ಪಾರ್ವತಿ ಇದನ್ನು ಸೂಕ್ಷ್ಮವಾಗಿ ಗಮನಿಸಿ, ಭೃಂಗಿಯನ್ನುದ್ದೇಶಿಸಿ 'ನಿನ್ನ ದೇಹದಲ್ಲಿ ಪ್ರವಹಿಸುವ ಶಕ್ತಿಯ ಸಂಚಯವೆಲ್ಲ ನನ್ನದಾಗಿದ್ದರೂ ನೀನು ನನಗೇಕೆ ನಮಸ್ಕರಿಸುವುದಿಲ್ಲ, ಗೌರವಿಸುವುದಿಲ್ಲ' ಎಂಧು ಪ್ರಶ್ನಿಸಿದಳು. ನಿರ್ವಿಕಾರ ಮನಸ್ಸಿನಿಂದ ಭೃಂಗಿ 'ದೇವಿ, ಶಿವನೇ ನನ್ನ ಪರಮ ದೈವ, ಅವನೊಬ್ಬನೇ ಸರ್ವಶಕ್ತ, ಸಂರಕ್ಷಕ, ಆದ್ದರಿಂದ ನನ್ನ ಭಕ್ತಿ ಅವನೊಬ್ಬನಿಗೇ ಮೀಸಲಾಗಿದೆ' ಎಂದು ಉತ್ತರಿಸದ. ಅವನ ಮಾರುತ್ತರ ಕೇಳಿ, ಪಾರ್ವತಿ ಕೆರಳಿ ಕೆಂಡವಾದಳು. ಅವನ ದೇಹದಲ್ಲಿರುವ ತನ್ನ ಶಕ್ತಿಯನ್ನೆಲ್ಲ ಸೆಳೆದುಕೊಂಡಳು, ಭೃಂಗಿ ನಿಶ್ಚೇಷ್ಟಿತ ಮಾಂಸದ ಮುದ್ದೆಯಾಗಿ ಬಿದ್ದ. ತನ್ನ ಪರಮ ಭಕ್ತಿನಿಗೊದಗಿದ ದುರಂತವನ್ನು ಕಂಡು ಪರಮಾತ್ಮನ ಹೃದಯ ಕರಗಿತು ಕರುಣೆಯಿಂದ ಭೃಂಗಿಗೆ ತನ್ನ ಶಕ್ತಿಯನ್ನೇ ಧಾರೆಯೆರೆದ. ಅದರಿಂದ ಭೃಂಗಿ ಸ್ವಲ್ಪ ಚೇತರಿಸಿಕೊಂಡನಾದರೂ, ಸರಿಯಾಗಿ ಚಲಿಸುವ ಶಕ್ತಿ ಬರಲಿಲ್ಲ. ಬೇರಾವ ಕೆಲಸ ನಿರ್ವಹಿಸಲು ಅವನು ಅಸಮರ್ಥನಾದ, ಅದರಿಂದ ಅನುಕಂಪಗೊಂಡ ಪರಮಾತ್ಮ ಅವನಿಗೆ ನಂದಿವಾಹನ ಕೊಟ್ಟ. ಆದರ ಮೇಲೆ ಕುಳಿತು ಭಕ್ತರ ವಂಶಾವಳಿಯನ್ನು ಹೇಳಿ, ಜೀವಿಸೆಂದು ಆಶೀರ್ವದಿಸಿದ. ಆ ಒಕ್ಕಾಲ ಭೃಂಗಿಯ ವಂಶಜರೇ ಮುಂದೆ ಹೆಳವರಾದರು[17].

**ಪುರಾಣ – ೬**

ಶಿವನ ಆಸ್ಥಾನದಲ್ಲಿರುವ ೬೩ ಪುರಾತನರಲ್ಲಿ ಒಕ್ಕಾಲ ಭೃಂಗಿಯೂ ಒಬ್ಬ. ಅವನಿಗೆ ಬಲಗಾಲು, ಅವನ ಹೆಂಡತಿಗೆ ಎಡಗಾಲು ಇದ್ದಿರಲಿಲ್ಲ. ಆದರೂ, ಅವನು ಭಕ್ತಿಯಿಂದ ನರ್ತನ ಮಾಡಿ, ಶಿವನಿಗೆ ಬಲಗೈಯಿಂದ, ಪಾರ್ವತಿಗೆ ಎಡಗೈಯಿಂದ ನಮಸ್ಕರಿಸುತ್ತಿದ್ದ ಅವನು ನಮಸ್ಕರಿಸುವ ವಿಚಿತ್ರ ರೀತಿಯನ್ನು ಕಂಡು, ಪಾರ್ವತಿ ಅವನನ್ನೊಮ್ಮೆ 'ಹೀಗೇಕೆ"? ಎಂಧು ವಿಚಾರಿಸಿದಳು. ಅದಕ್ಕೆ ಭೃಂಗಿ, 'ನಮ್ಮಪ್ಪನ ಎಡಕ್ಕೆ ಕುಳಿತು ಮದುವೆ ಆಗಿರುವುದರಿಂದ ನೀನು ಎಡ, ನಮ್ಮಪ್ಪ ಬಲ, ಆದ್ದರಿಂದ ನಿನಗೆ ಎಡಗೈಯಿಂಧ ಎಡಕ್ಕೆ ನಮಸ್ಕರಿಸುವೆನು.' ಎಂದು ನುಡಿದ. ಕುಪಿತಳಾದ ಪಾರ್ವತಿ, ಅವನಲ್ಲಿರುವ ತನ್ನ ಶಕ್ತಿ ಸಂಚಯದ 'ರೋಮ'ಗಳನ್ನು ಕೇಳಿದಳು. ಅದರಿಂದ ಸ್ವಲ್ಪವೂ ಧೃತಿಗೆಡದ ಅವನು, ಹೆಬ್ಬೆರಳಿನಿಂದ ಹಿಡಿದು ತನ್ನ ಇಡೀ ದೇಹದ ತ್ವಚವನ್ನು ಸುಲಿದುಕೊಟ್ಟನು. ಕಳವಳಗೊಂಡ ಸಕಲ ಪುರಾತನರು, ಭೃಂಗಿಯನ್ನುದ್ಧರಿಸಲು ಪರಮಾತ್ಮನಲ್ಲಿ ಪ್ರಾರ್ಥಿಸಿದರು. ಪ್ರಸನ್ನನಾದ ಶಿವನು, ಅವನನ್ನು ಮುನ್ನಿನಂತೆ

ಮಾಡಿ, ನಂದಿವಾಹನ ಕೊಟ್ಟನು. ಅದರ ಮೇಲೆ ಕುಳಿತು, ೬೩ ಪುರಾತನರ ವಂಶಾವಳಿ ಹೊಗಳುತ್ತಾ ಜೀವಿಸೆಂದು ಆಶೀರ್ವದಿಸಿದ. ಆ ಒಕ್ಕಾಲ ಭೃಂಗಿಯ ವಂಶಜರೇ ಹೆಳವರಾದರು.[18]

**ಪುರಾಣ – ೭**

ನಾರದನಿಗೆ ಅರವತ್ತು ಮೂರು ಮಕ್ಕಳಂತೆ, ಅವರಲ್ಲಿ ಒಬ್ಬ ಕುಂಟ ಹುಟ್ಟಿದನಂತೆ. ನಾರದನು ಭಕ್ತಿಯಿಂದ ಶಿವನನ್ನು ಪ್ರಾರ್ಥಿಸಿ, ಕುಂಟ ಮಗನಿಗೆ ಜೀವನೋಪಾಯವನ್ನು ಕಲ್ಪಿಸಿಕೊಂಡು ಎಂದು ಕೇಳಿದಂತೆ, ಆಗ ಶಿವನು ಒಂದು ನಂದಿಯನ್ನು ಕೊಟ್ಟು, ಅದರ ಮೇಲೆ ಕೂತು ಅರವತ್ತು ಮೂರು ಜನ ಪುರಾತನರ ವಂಶಾವಳಿಯನ್ನು ಹೇಳಿಕೊಂಡು ಜೀವಿಸು ಎಂದು ಹೇಳಿದನಂತೆ. ಅಂದಿನಿಂದ ಎತ್ತು ಅವರಿಗೆ ಬಳುವಳಿಯಾಗಿ ಬಂದು, 'ಎತ್ತಿನ ಹೆಳವರು' ಎಂದು ಹೆಸರಾಯಿತಂತೆ.[19]

**ಪುರಾಣ – ೮**

ಒಂದಾನೊಂದು ಕಾಲದಲ್ಲಿ ಮೂವತ್ತಮೂರು ಕೋಟಿ ದೇವಾದಿ ದೇವತೆಗಳು ಶಿವನೊಡ್ಡೋಲಗದಲ್ಲಿ ಸಭೆ ಸೇರಿದರು. ಆ ಸಭೆಯಲ್ಲಿ ಶೃಂಗಿ ಹಾಗೂ ಭೃಂಗಿ ಅಷ್ಟೇ ಪ್ರಮುಖರು. 'ಶೃಂಗಿ' ಶಿವಪಾರ್ವತಿಯರನ್ನು ಸರಿಸಮವಾಗಿ ಭಕ್ತಿಗೌರವದಿಂದ ಕೈಮೂಗಿಯುತ್ತಿದ್ದನು. ಆದರೆ ಭೃಂಗಿಯ ಭಕ್ತಿ ಶಿವನೊಬ್ಬನಿಗೆ ಮೀಸಲು. ಈ ಸೋಜಿಗದ ಸಂಗತಿಯನ್ನರಿತ ಪಾರ್ವತಿಯು ಭೃಂಗಿಯನ್ನುದ್ದೇಶಿಸಿ, ಶಿವನೊಬ್ಬನಿಗೆ ನಮಸ್ಕಾರ ಮಾಡುವಿ, ನನಗೇಕೆ ನಮಸ್ಕರಿಸುವುದಿಲ್ಲ? ಎಂಧು ಕೇಳಿದಳು. ಆಗ ತಾಯಿ ನನ್ನ ಪರಮದೈವ ಶಿವನೊಬ್ಬನೇ, ನನ್ನ ಭಕ್ತಿ ಗೌರವ ಶಿವನೊಬ್ಬನಿಗೆ ಮೀಸಲಿಟ್ಟಿರುವೆ ಎಂದನು. ಈ ಮಾತುಗಳನ್ನು ಸಹಿಸದೇ ಕುಪಿತಳಾದ ಪಾರ್ವತಿ ಕ್ಷಣಾರ್ಧದಲ್ಲಿಯೇ ಭೃಂಗಿಗೆ ಕೈಕಾಲು ಊನವಾಗುವಂತೆ ಶಾಪ ವಿಧಿಸಿದಳು. ಮಾತ್ರವಲ್ಲ ಅವನ ದೇಹದಲ್ಲಿರುವ ರಕ್ತ ಮಾಂಸಗಳನ್ನು ದೃಷ್ಟಿಮಾತ್ರದಿಂದಲೇ ಹೀರಿಕೊಂಡಳು. ಕೊನೆಗೆ ಅಲ್ಲಿ ಉಳಿದದ್ದು ಭೃಂಗಿಯ ಎಲುಬಿನ ಹಂದರ. ಅದು ಕೂಡ ಕಣ್ಣ ಮೂಂದೆ ಇರಬಾರದೆಂದು ಆಕಾಶ ಭೂಮಿಯ ಮಧ್ಯ ಹಾರಾಡುವಂತೆ ಮಾಡಿದಳು. ಶಿವನಿಗೆ ಈ ವಿಷಯ ನಾರದನಿಂದ ಗೊತ್ತಾದಾಗ, ಪಾರ್ವತಿಯನ್ನು ಕರೆದು ಕೋಪದಿಂದ ಗದರಿಸಿದನು. ಅವರಿಬ್ಬರ ನಡುವೆ ವಾಗ್ವಾದ ನಡೆಯಿತು. ಭೃಂಗೇಶ್ವರ ನನ್ನ ಮಗ, ಅವನ ಭಕ್ತಿ ಗೌರವಕ್ಕೆ ಮೆಚ್ಚಿರುವೆನು, ಅವನಿಗೆ ಈ ಶಿಕ್ಷೆ ಆಗಬಾರದೆಂದು ಹೇಳಿ ತನ್ನ ಕೈಯಲ್ಲಿಯ ತ್ರಿಶೂಲ ಆಧಾರವಾಗಿಟ್ಟನು. ಕ್ಷಣಾರ್ಧದಲ್ಲಿಯೇ ಭೃಂಗಿಯ ಎಲುಬಿನ ಹಂದರ ತ್ರಿಶೂಲದ ಮೇಲೆ ಬಂದು ನಿಂತಿತು. ಕೊನೆಗೆ ಪಾರ್ವತಿ ಸೋತೆನೆಂದು ಶಿವನಿಗೆ ಶರಣಾದಳು. ಶಿವನ ಅಪ್ಪಣೆ ಮೇರೆಗೆ ಭೃಂಗೇಶ್ವರನಿಗೆ ವಿಧಿಸಿದ ಶಾಪ ಹಿಂತೆಗೆದುಕೊಂಡು, ಮತ್ತೆ ರಕ್ತ ಮಾಂಸವನ್ನು ಧಾರೆ ಎರೆದಳು. ಭೃಂಗೇಶ್ವರನಿಗೆ ಶಿವನಂದಿ ಮತ್ತು ಲಿಂಗ ಮುದ್ರೆ ಕೊಟ್ಟು ಈ ಭೂಮಂಡಲ ಇರುವವರೆಗೆ ನಿನ್ನ ಕೀರ್ತಿ ಚಿರಾಯುವಾಘಲಿ. ಜಾತಿ ಮತ ಭೇದವನ್ನು ಅರಿತು ಕುಲಗೋತ್ರ ಆಗುಹೋಗುಗಳನ್ನು ಹೊಗಳುತ್ತ ಅವರಿಂದ ಸಂಭಾವನೆಯಾಗಿ ದವಸ ಧಾನ್ಯಗಳನ್ನು ಪಡೆದು ಜೀವನ ಸಾಗಿಸು ಎಂದು ಆಶೀರ್ವದಿಸಿ ಮಾಯವಾದರು. ಮುಂದೆ ಭೃಂಗೇಶ್ವರನಿಂದ ಹೆಳವ ಪರಂಪರೆ ಬೆಳೆಯಿತು. ಕಾರಣ ಭೃಂಗೇಶ್ವರ ಹೆಳವರ ಮೂಲಪುರುಷನೆಂದು ಐತಿಹ್ಯ.[20]

**ಪುರಾಣ – ೯**

ಬಸವಣ್ಣನವರ ಕಾಲದದಲ್ಲಿ ಒಕ್ಕಲು ಗೌಡನಿಗೆ ಏಳು ಜನ ಗಂಡುಮಕ್ಕಳಿದ್ದರು. ಅವರಲ್ಲಿ ಕಿರಿಯವ ಹುಟ್ಟಾ ಅಂಗಹೀನ ಇದ್ದ. ಆದ್ದರಿಂದ ಜನರು ಅವನನ್ನು 'ಹೆಳವ' ಎಂದೇ ಕರೆಯುತ್ತಿದ್ದರು. ಮಕ್ಕಳು ದೊಡ್ಡವರಾದ ಬಳಿಕ ಯೋಗ್ಯ ಕನ್ಯೆ ನೋಡಿ ಮದುವೆ ಮಾಡಿದರು. ಆದರೆ ಹೆಳವನಿಗೆ ಯಾರೂ ಹೆಣ್ಣು ಕೊಡಲಿಲ್ಲ. ಮುಂದೆ ಅಣ್ಣಂದಿರು ಬೇರೆಯಾದರು. ಎಲ್ಲರಿಗೂ ಆಸ್ತಿಯನ್ನು ಸಮಾನಾಗಿ ಹಂಚಿಕೊಟ್ಟರು. ಹೆಳವನಿಗೆ ಏನೂ ಕೊಡಲಿಲ್ಲ. ಅವರೆಲ್ಲರೂ ದಿನನಿತ್ಯ ಪ್ರತಿಯೊಬ್ಬರ ಮನೆಗೆ ಬಂದು ಊಟ ಮಾಡಿ ಹೋಗು, ಆಸ್ತಿಯಲ್ಲಿ ಪಾಲು ತೆಗೆದುಕೊಂಡು ನೀನೇನ್ ಮಾಡ್ತಿ ಎಂದು ಹೇಳಿದರು. ಹೆಳವನ ತಾಯಿ ಸದಾ ಅವನಿಗೆ ಬೆಂಗಾವಲಾಗಿ ಇದ್ದಳು. ಕುಂಟ ಮಗ ಹೇಗೆ ಜೀವನ ಸಾಗಿಸುವನು ಎಂದು ಚಿಂತೆ ಮಾಡುತ್ತಿದ್ದಳು. ಹೆಳವನು ಯಾರ ಹಂಗಿನಲಲ್ಯೂ ಇರಬಾರದೆಂದು

ಯೋಚಿಸಿ ಬಡಬಗ್ಗರಿಗೆ ಅನ್ನದಾತನಾಗಿದ್ದ ಬಸವಣ್ಣನವರ ಬಳಿ ಕಲ್ಯಾಣಕ್ಕೆ ಬಂದನು. ಅಲ್ಲಿ ಸಾವಿರಾರು ಜನ ದೀನದಲಿತರಿಗೆ ಮತ್ತು ಶರಣರಿಗೆ ಸ್ಥಳಾವಕಾಶವಿತ್ತು. ಅವರ ಮಧ್ಯದಲ್ಲಿಯೇ ಹೆಳವ ಇರತೊಡಗಿದ.

ಬಸವಣ್ಣನವರು ಕಲ್ಯಾಣದಲ್ಲಿ ಅರವತ್ತ ಮೂರು ಜನ ಶಿವಶರಣರಿಗೆ ಒಂದೊಂದು ಕಾಯಕ ಒದಗಿಸಿಕೊಟ್ಟಿದ್ದರು. ಆಗ ಹೆಳವನು ಬಸವಣ್ಣನವರ ಬಳಿ ಬಂದು ನನಗೂ ಯಾವುದಾದರೊಂದು ಕಾಯಕ ಕೊಡಬೇಕೆಂದು ಕೇಳಿಕೊಂಡನು. ಆಗ ಬಸವಣ್ಣನವು ಹೆಳವನಿಗೆ ಯಾವ ಕೆಲಸ ಹಚ್ಚಬೇಕು? ಇವನು ಕುಂಟ ಇವನಿಗೆ ಕೆಲಸ ಹಚ್ಚಿದರೆ ಹೇಹೆ ಮಾಡುವನು ಎಂದು ಯೋಚಿಸಿದರು. ಕೊನೆಗೆ ಒಂದು ಉಪಾಯ ಮಾಡಿ ಹೆಳವನಿಗೆ ಕುಳಿತುಕೊಳ್ಳಲಿಕ್ಕೆ ನಂದಿ ಕೊಟ್ಟು ಪ್ರತಿದಿನ ಬೆಳಗಾಗುವ ಪೂರ್ವದಲ್ಲಿಯೇ ಅರವತ್ತ ಮೂರು ಜನ ಪುರೋಹಿತರ ಮನೆಗಳಿಗೆ ಹೋಗಿ ಅವರ ಆಗುಹೋಗುಗಳ ಬಗ್ಗೆ ವಿಚಾರಿಸಿಕೊಂಡು ಬರಬೇಕೆಂದು ಹೇಳಿದರಂತೆ. ಹೆಳವನು ದಿನಾಲು ಅದೇ ವೃತ್ತಿ ಮಾಡತೊಡಗಿದ. ಇದು ಒಂದು ವೃತ್ತಿಯಾಗಿಯೇ ಬೆಳೆಯಿತು. ಮುಂದೆ ಪುರೋಹಿತರು ಯಾವ ಊರುಗಳಿಗೆ ಹೋಗಿ ನೆಲೆಸಿದರೋ ಅಲ್ಲಯೋ ಹೋಗತೊಡಗಿದ. ಇವನನ್ನು ಕಂಡು ಕಾಳು - ಕಡಿಗಳನ್ನು ಕೂಡತೊಡಗಿದರು. ಇದು ಒಂದು ವೃತ್ತಿಯಾಗಿಯೇ ಮುಂದುವರಿಯಿತು.

ಕೆಲವು ದಿನಗಳಾದ ಬಳಿಕ ಹೆಳವನಿಗೆ ಮದುವೆಯಾಯಿತು. ಅವನ ಹೊಟ್ಟೆಯಿಂದ ಮಕ್ಕಳು, ಮರಿಮಕ್ಕಳು ಹುಟ್ಟಿಕೊಂಡರು. ಅವರು ಕೂಡ ಇದೇ ವೃತ್ತಿಯ್ನು ಅವಲಂಬಿಸಿಕೊಂಡರು. ಹೆಳವನ ಹೊಟ್ಟೆಯಿಂದು ಹುಟ್ಟಿದ್ದಕ್ಕೆ ಜನ ಹೆಳವನ ಮಕ್ಕಳು ಎಂದು ಕರೆಯತೊಡಗಿದರು.[21]

**ಪುರಾಣ – ೧೦**

ವಿಜಯನಗರ ಪಟ್ಟಣದಲ್ಲಿ ಭೂಮಿಪುತ್ರನಾಗಿ ಮುದ್ದುರಾಜೇಗೌಡ ಹುಟ್ಟಿದ. ಹನ್ನೆರಡು ವರ್ಷ ಅಲ್ಲಿ ಒಗೆತನ ಮಾಡಿಕೊಂಡಿರಬೇಕಾದರೆ 'ಸುಲ್ತಾನ್ ಮಹಮದ್' ವಿಜಯನಗರವನ್ನು ಆಕ್ರಮಿಸಿಕೊಂಡು ಒಕ್ಕಲು ಮಕ್ಕಳಿಗೆ ಕಿರುಕುಳಕೊಡತೊಡಗಿದ. ರಾಜೇಗೌಡನಿಗೆ ಹದಿನೆಂಟು ಮಂದಿ ಗಂಡು ಮಕ್ಕಳು, ಹದಿನೆಂಟು ಮಂದಿ ಹೆಣ್ಣು ಮಕ್ಕಳು. ತನ್ನಷ್ಟೇ ವೈಭವದಿಂದ ಬಾಳುತ್ತಿದ್ದ ರಾಜೇಗೌಡನ, ಅವನ ಮಕ್ಕಳ ಕಂಚಿನ ಕದಗಳನ್ನು ಕೀಳಿಸಿ ಹಾಳುಗೆಡವಬೇಕೆಂಬುದು ಸುಲ್ತಾನನ ಇಚ್ಛೆಯಾಯಿತು. ಅವನ ಕಿರುಕುಳವನ್ನು ತಾಳಲಾರದೆ ಅಟ್ಟದಲ್ಲಿದ್ದ 'ಹೊನ್ನು ಚಿನ್ನ' ವನ್ನೆಲ್ಲ ಹೇರಿಕೊಂಡು 'ಅವು ಗೋವನ್ನೆಲ್ಲ' ಸಾಗಿಸಿಕೊಂಡು ಮುಂದಲ ಸೀಮೆಗೆ ಹೊರಟರು.

'ಹತ್ತಚಿತ್ತೆ' ಮಳೆಯಾಗಿ ಕರುಹೊಳೆ ತುಂಬಿ ಪರಿಯುತ್ತಿತ್ತು. ಮುಂದೆ ಇವರಿಗೆ ದಾರಿಯೇ ತೋರದೆ ಗಂಗಮ್ಮನನ್ನು ಬೇಡಿದರು, ಒಂದು 'ಬಂಡಿ ಹೊಳೆ' ದಾರಿ ಬಿಡುವಂತೆ. ಗಂಗಮ್ಮ ಮಾತಾಡಲಿಲ್ಲ. ಮತ್ತೆ ಮತ್ತೆ ಬೇಡಿದರು. "ನಿನ್ನ ಗಂಗೆ ದಡದಲ್ಲಿ ನೂರೊಂದು ಊರ ಕಟ್ಟುತೀವಿ, ನೂರೊಂದು ಕೇರಿ ಮಾಡುತೀವಿ, ನಮಗೆ ಆಚೆಗೆ ಬಿಟ್ಟುಕೊಡುತಾಯಿ" ಎಂದು ಬಿದ್ದು ಬಿದ್ದು ಬೇಡಿದರು. ಗಂಗೆಗೆ ಕರುಣೆ ಬಂದಿತು. 'ಕೆಳಗಲ ನೀರೆಲ್ಲ ಬಸ್ತು ಹೋಯಿತು, ಮೇಗಲ ನೀರೆಲ್ಲ ನಂದಿ ಪರ್ವತವಾಗಿ ನಿಂತು ಹೋಯಿತಂತೆ, ಶಿವನೆ!'

ಗಂಗೆಯನ್ನು ದಾಟಿ ಬಂದು ಆಚೆಯ ದಡದಲ್ಲಿ ದೊಡ್ಡ ಗ್ರಾಮವನ್ನು ಕಟ್ಟಿದರು. ಗಂಗೆಗೆ ಬಲಿಕೊಡಬೇಕು. ಯಾರನ್ನು ಕೊಡಬೇಕೆಂದು ಯೋಚನೆಯಾಯಿತು. ನಟ್ಟನಡುವೆ ಹುಟ್ಟಿದ ಜಲದೀರು ಬಪ್ಪರಾಯನಿಗೆ ಇಲ್ಲದ 'ಹುಚ್ಚು ತೊಳಗ ಬಂತಂತೆ: ಇಲ್ಲದ ಬೆಪ್ಪು ತೊಳಗ ಬಂದು ಬಿಟ್ಟಿತು. ಚಿನ್ನದ ಗಂಡುಗತ್ತರಿ ಮಾಡಿಸಿಕೊಂಡು' ನಡು ಗಂಗೆಗೆ ಹೋಗಿ "ಸುಲ್ತಾನ ಮಹಮದನಿಗೆ ದಾರಿಬಿಡಬೇಡ" ಎಂದು ಹೇಳಿ, ತಲೆಯನ್ನು ಕತ್ತರಿಸಿ ಗಂಗಮ್ಮನಿಗೆ ಅರ್ಪಿಸಿದ. ಆಗಿ ಗಂಗೆ "ಇವತ್ತಿನ ದಿನದಲ್ಲಿ ನನ್ನ ಗಂಗೆ ಒಳಗೆ ಒಬ್ಬ ಹತನೆಮಾಡಿದರೆ, ನನ್ನ ಮುಂದಿನ ಗಂಗೆಗೆ ಮಗನಾರು? ತುಂಬಿದ ಕೆರೆ ತೂಬೆತ್ತಾಕಿಲ್ಲ!" ಎಂದು ಯೋಚಿಸಿ ಗಂಗೆ ಬೊಪ್ಪರಾಯನ ಪ್ರಾಣವನ್ನು ಪಡೆದಳು. "ತುಂಬಿದ ಕೆರೆಯಲ್ಲಿ ಮೀನು ಮಿಡಚೆ ಹಿಡಕೊಂಡು. ನನ್ನ ಗಂಗೆ ಮಗನಾಗಿ ಅಂಬಿಗರೋನಾಗಿ ಇರಪ್ಪ" ಎಂದು ಹರಸಿದಳು.

ಮುಂದೆ 'ಕರುಹೊಳೆ'ಯ ತೀರದ ಗ್ರಾಮದ ಗೌಡಗಳು ಹನ್ನೆರಡು ವರ್ಷ ಬದುಕುಬಾಳು ಮಾಡಿ 'ನೂರೊಂದು ಕುಲ, ಹದಿನೆಂಟು ಪಣಕಟ್ಟು' ಹಂಚಿಕೊಳ್ಳಬೇಕೆಂದು ಕುಲಜಾತಿ ಹಂಚುವಾಗ 'ಕುಂತಿದ್ದವನು ಕುಂಚ ಒಕ್ಕಲಿಗನದ, ನಿಂತಿದ್ದವನು ನಿಜೊಕ್ಕಲಿಗನಾದ, ಬೆಳ್ಳೆ ಹುಟ್ಟಿದಾಗ ಬೆಳ್ಳಿಗುಲದವನಾದ...' ಹೀಗೆ ಒಂದೊಂದು ಕುಲವಾಗಿ ನಿಂತಾಗ ಹದಿನೆಂಟು ಗೌಡಗಳ ಪೈಕಿ, ಒಬ್ಬ ಹೆಳವ. ಅವನಿಗೂ ಹದಿನೆಂಟರಲ್ಲಿ ಒಂದು ಪಾಲು ತೆಗೆದರು. ಎಲ್ಲರೂ ತಮ್ಮ ಹೆಂಡತಿ ಮಕ್ಕಳು ಕಟ್ಟಿಕೊಂಡವರು ಇಚ್ಛೆ ಬಂದ ಕಡೆ ಹೋದರು. ಹೆಳವನನ್ನು ಯಾರೂ ಮಾತಾಡಿಸಲಿಲ್ಲ. ಅನ್ನ ನೀರು ಇಲ್ಲದೆ ಹೆಳವ ಕಣ್ಣೀರು ಹರಿಸುತ್ತಿದ್ದ. ಗಂಗೆಗೆ ಬಿದ್ದು ಪ್ರಾಣ ಬಿಡಬೇಕೆಂದು ಹೆಳವ ಕಾಲಿಲ್ಲದ್ದರಿಂದ ಉರುಳಿಕೊಂಡು ಹೋಗುತ್ತಿದ್ದದನ್ನು ಶಿವಪಾರ್ವತಿಯರು ನೊಡಿದರು. ನೊಳೇಣಿಯಲ್ಲಿ ಇಳಿದು ಬಂದು ಅವನ ಕಷ್ಟವನ್ನು ವಿಚಾರಿಸಿದರು. ಅವನಿಗೆ 'ಶಿವಚಿತ್ತ' ಕೊಟ್ಟು "ನೀನು ಬಸವೇಶ್ವರ ಎಲ್ಲಿ ಹೋಗುವುದಾದರೆ ಅಲ್ಲಿಗೆ ಹೋಗಿ ಶ್ರೀಶೈಲವನ್ನು ಸೇರಿಕೋ" ಮಕ್ಕಳಲ್ಲಿ ಒಬ್ಬಳನ್ನು ಹೆಂಡತಿಯಾಗಿಯೂ ಪಡೆದ. ಅವನ ಹೊಟ್ಟೆಯಲ್ಲಿ ಹದಿನೆಂಟು ಮಂದಿ ಗಂಡುಮಕ್ಕಳು ಹುಟ್ಟಿದರು. ಶಿವನ ಇಚ್ಛೆಯಂತೆ ಕುಲಜಾತಿಯನ್ನು ಹಂಚಿಕೊಂಡು ಅವರ ಮನೆಯ ಬಾಗಿಲಿಗೆ ಹೋಗಿ 'ಧರ್ಮದ ಪಾಲನ್ನು' ಪಡೆಯುವಂತಾಯಿತು. 'ದಾಯಾದ ಪಾಲ'ನ್ನೆಲ್ಲ ಅವರಿಗೆ ಹಂಚಿ ತನ್ನ ಧರ್ಮದ ಪಾಲನ್ನು ಉಳಿದ ಅಣ್ಣಂದಿರಿಂದ ಪಡೆಯುವ ಅವಕಾಶ ಅವನಿಗೆ ಲಭ್ಯವಾಯಿತು. ಹೆಳವ ಪರಂಪರೆ ಹೀಗೆ ಬೆಳೆದು ಬಂದಿತು.[22]

**ಪುರಾಣ – ೧೧**

ಅನೇಕ ಶತಮಾನಗಳ ಇತಿಹಾಸ ಇರುವ ಹೆಳವರ ಬಗ್ಗೆ ಬೇರೆ ಏನಾದರೂ ಗ್ರಂಥದ ಆಧಾರಗಳಿವೆಯೇ ಎಂದು ನೋಡಿದಾಗ ಪಾಲ್ಕುರಿಕೆ ಸೋಮನಾಥನು ರಚಿಸಿದ 'ಪಂಡಿತಾರಾಧ್ಯ ಚರಿತೆ' ಎಂಬ ದ್ವಿಪದ ಕಾವ್ಯದಲ್ಲಿ ಶ್ರೀಶೈಲ ಪರ್ವತವನ್ನು ಏರುತ್ತಿದ್ದ 'ಪಿಚ್ಚುಕುಂಟುಲು' ಎಂಬ ಭಿಕ್ಷುಕರ ವರ್ಣನೆ ಇರುವುದನ್ನು ಕಾಣಬಹುದು. ಶ್ರೀಶೈಲಕ್ಕೆ ಹೋಗುವ ಭಕ್ತರನ್ನು ದಾನ ಮಾಡಿದರೆಂದು ಪಿಚ್ಚುಕುಂಟರು ಬೇಡುತ್ತಾರೆ. ಆ ಪಿಚ್ಚುಕುಂಟರ ವರ್ಣನೆ ಹೀಗಿದೆ.

ಶರೀರದ ಮೇಲ್ಭಾಗ ಬಹು ಸುಂದರ, ಕೆಳಗಿನ ಭಾಗ (ಕಾಲು, ಬೆರಳು, ಕುಂಡೆಗಳು)ಲೋಪಭೂಯಿಷ್ಠ. ಬೆರಳುಗಳಿಲ್ಲದ ಪದಗಳು, ಮಣ್ಣಿನಿಂದ ಮಾಡಲ್ಪಟ್ಟ ಕಾಲುಗಳು, ತೊಗಲಿನಿಂದ ಮಾಡಲ್ಪಟ್ಟ ಕಾಲುಗಳು, ಸಣ್ಣ ಕಾಲುಗಳು, ಗಿಡ್ಡ ಕಾಲುಗಳು, ಚಿಕ್ಕ ಚಿಕ್ಕ ಕೈಗಳು, ತೊಗಲು ಕೈಗಳು ಈ ರೀತಿ ಅಂಗಹೀನರಾಗಿಯೂ, ನೋಡಲು ಅಸಹ್ಯವಾಗಿಯೂ ಇರುತ್ತಾರೆ. ಇವರು ತಮ್ಮ ಸ್ತ್ರೀಯರನ್ನೂ (ಇವರು ಹೇಗಿದ್ದರೋ ತಿಳಿಯದು) ಆಶ್ರಿತರನ್ನೂ ಯಾತ್ರಿಕರಿಗೆ ತೋರಿಸಿ ದೈನ್ಯತೆಯ ನೋಟಗಳನ್ನು ಬೀರಿ ಕರುಣಾರಸವು ಉಕ್ಕಿಬರುವಂತೆ ಬೇಡಿಕೊಳ್ಳುತ್ತಿದ್ದರು. ಕಹಳೆಗಳನ್ನು (ಗಂಟೆಗಳನ್ನಲ್ಲ) ಹಿಡಿದು, ನೇತಾಡುವ ಜಡೆಗಳಿಂದ ಕೂಡಿ, ಕೋಣಗಳನ್ನು ಎತ್ತುಗಳನ್ನೂ ಹತ್ತಿ ಜನರೆಲ್ಲರೂ ದಾನಮಾಡಿರೇ! ಬಸವದಂಡನಾಯಕ ಬಹಳ ಒಳ್ಳೆಯ ದಾತ. ಅವನು ದೀನರನ್ನು ಬೇರೆ ದೇಶಗಳಿಗೆ ಕಳುಹಿಸದೆ ಭೂದಾನ ಇತ್ಯಾದಿ ದಾನಗಳನ್ನೂ ಕುದುರೆ ಎತ್ತುಗಳನ್ನು ಕೊಡುತ್ತಿದ್ದ ಅಂತಹ ದಾನಿ ಈ ಪ್ರಪಂಚದಲ್ಲಿ ಇಲ್ಲವೇ, ಮಲ್ಲಿನಾಥನೇ! ದೀನರನ್ನು ಬಾರೋ ಎಂದು ಕರೆದು ಗೃಹದಾನ ಇತ್ಯಾದಿಗಳನ್ನು ಮಾಡುತ್ತಿದ್ದ ಸಿರಿಯಾಲಶೆಟ್ಟಿ. ಸುಂದರ ಬಲ್ಲಹನ, ವೀರಚೋಳ, ಕರಿಕಲ ಚೋಡ, ಅರಿಯಮರಾಜ, ಏಣಾಧಿನಾಥಯ್ಯ ಚೇರಮರಾಜ, ಕರಯೂರಿ ಚೋಡ, ಶಿವಲಿಂಗದೇವ ಸಿದ್ಧರಾಮಯ್ಯ, ಸವರದ ನಾಚಯ್ಯ ಸರಿಮದೇವ ಮುಂತಾದವರನ್ನು ಹೋಲುವ ಸ್ವಾಮಿ ಭಕ್ತನು ಪ್ರಪಂಚದಲ್ಲಿ ಬೇರೊಬ್ಬನಿಲ್ಲವೇ ಮಲ್ಲಿನಾಥನೇ! ನಾವು ಕುರುಡರು, ಪಿಚ್ಚಿಗುಂಟರು. ನಮ್ಮನ್ನು ಬಾರೋ ಎಂದು ಕರೆದು ಕರುಣೆಯಿಂದ ನಮ್ಮ ಮಾತುಗಳನ್ನು ಕೇಳಿ ಅಯ್ಯೋ ಎನ್ನರೇ! ನಮ್ಮ ಮೇಲೆ ದಯೆ ತೋರಿರಪ್ಪಾ. ಸುಂಕರ ಬಂಕಯ್ಯ, ಸುರಿಯ ಬಂಕಯಯ್, ಸುರಿಯ ಚೌಡಯ್ಯ, ಶಂಕರ ದಾಸಯ್ಯ, ಲೆಂಕ ಮಂಚಯ್ಯ, ದೇವರ ದಾಸಯ್ಯ, ತೆಲುಗು ಬೊಮ್ಮಯ್ಯ, ಬಾಪೂಲಿ ಬ್ರಹ್ಮಯ್ಯ, ಬಾಚೇರಾಚಯ್ಯ - ಇಂತಹ ಭಕ್ತರನ್ನು ಹೋಲುವ ಸ್ವಾಮಿಭಕ್ತರು ಈ ಭೂಮಿಯಲ್ಲಿ ಬೇರೊಬ್ಬರಿಲ್ಲವೇ ಮಲ್ಲಿನಾಥನೇ! - ಹೀಗೆ ಹಾಡುತ್ತ ದಾನಮಾಡಿರೇ ಎಂದು ಬೇಡುತ್ತಾ ಪಿಚ್ಚುಕುಂಟರ ಸಮೂಹ ಬಂದಿತು.

ಅಲ್ಲದೆ ಈ ಪಿಚ್ಚುಕಕುಂಟರೆಲ್ಲರೂ ವೀರಶೈವರಾಗಿದ್ದರೆಂದೂ ಇವರ ಕಂಠಗಳಲ್ಲಿ ಲಿಂಗ, ಕೊರಳಲ್ಲಿ ರುದ್ರಾಕ್ಷಿಮಾಲೆ, ಹಣೆಯಲ್ಲಿ ವಿಭೂತಿ, ತಲೆಯ ಮೇಲೆ ದುಂಡಾದ ಕಿರೀಟ ಇದ್ದುವೆಂದೂ ವರ್ಣಿಸಲಾಗಿದೆ.

ಈ ವರ್ಣನೆ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಭಿಕ್ಷುಕರ ವಿವರವಾದ ವರ್ಣನೆ ಇದೆ. ಅವರ ವಾಹನಗಳೇನೆಂದು ಹೇಳಿದೆ. ಕೋಣಗಳೂ ಅವರ ವಾಹನವಾಗಿದ್ದವೆಂಬುದು ವಿಶೇಷ ಗಮನಾರ್ಹ. ಅವರಿಗೆ ಒಮ್ಮೆ ಆಶ್ರಯದಾತನಾಗಿದ್ದ ಬಸವಣ್ಣ ಮುಂತಾದವರ ಉಲ್ಲೇಕವಿದೆ. ಅವರೆಲ್ಲ ವೀರಶೈವರಾಗಿ ಲಿಂಗಧಾರಿಗಳಾಗಿದ್ದರೆಂದೂ ಹೇಳಲಾಗಿದೆ.[23]

**ಪುರಾಣ – ೧೨**

ಕಲ್ಯಾಣಪುರಿ ಪಟ್ಟಣದಲ್ಲಿ ಮುಕ್ಕಾಲು (ಮುಕ್ಕಾದ ಕಾಲು - ಊನಾದ ಕಾಲು) ಭೃಂಗೀಶ್ವರನು ಭಿಕ್ಷೆ ಬೇಡಿ ಜೀವಿಸುತ್ತಿದ್ದ. ಆಗ ರಾಜ್ಯ ಆಳುತ್ತಿದ್ದ ರಾಜ ಜೈನಮತದ ಬಿಜ್ಜಳ. ಅವನ ಮಂತ್ರಿ ಶಿವಾಚಾರದ ಬಸವಣ್ಣ. ಎಲ್ಲೆಲ್ಲೂ ಶಿವಾಚಾರವನ್ನೇ ಹೆಚ್ಚಿಸಬೇಕೆಂದು ಬಸವಣ್ಣನ ಆಸೆ. ಕಾಲಿಲ್ಲದ ಹೆಳವ (ಭೃಂಗೀಶ್ವರ) ನನ್ನು ಕರೆದು 'ನೀನು ಕುಂಟದ್ದೀ. ನಾನು ಕೊಟ್ಟಂತ ನಂದಿ ಹತ್ತಿಕೊಂಡು ಭಕ್ಷೆ ಆಡಿಕೊತ್ತಿರು' ಅಂತ ಹೇಳಿ ಎತ್ತಿನ ಕೊರಳಿಗೆ ಗಂಟೆ ಕಟ್ಟದ ಓಂ ಶಿವಾ, ಓಂ ಶಿವಾ ಎಂಬ ಶಬ್ದ ಆ ಗಂಟೆಯಿಂದ ಹೇಳಬಂತು ಹೆಳವನು ವಂಶಾವಳಿ, ಕುಲ, ಬೆಡಗ ಹೇಳಲು ಪ್ರಾರಂಭಿಸಲಾಗಿ ಹುಡುಗರು ಅವನ ನಂದಿವಾಹನವನ್ನು ಹಿಂಬಾಲಿಸಿದರು. ಎಲ್ಲೇಲ್ಲೂ ಶಿವನ ಶಬ್ದ ಹೆಚ್ಚಾಯಿತು. ಲಿಂಗಾಯತ ಮತ ಹೆಚ್ಚಿತು. ಬಿಜ್ಜಳನಿಗೆ ಚಿಂತೆ ಉಂಟಾಯಿತು. 'ಶಿವಾ ಆಂದೋನ ನಾಲಗೆ ಕೊಯ್ಯಬೇಕು, ವಿಭೂತಿ ಹಚ್ಚಿದೋನ ಹಣೆ ಕೆತ್ತಬೇಕು' ಎಂದು ಆಜ್ಞೆ ಮಾಡಿದ. ಕ್ರಮೇಣ ಕಲ್ಯಾಣಪುರಿ ಹಾಳಾಗಿ ಪಟ್ಟಣ ಒಡೆದು ಹದಿನೆಂಟು ಜಾತಿ ಆಗಿ ಜನರು ಬೇರೆ ಬೇರೆ ಕಡೆ ಹೊರಟರು. ಆದರೆ ಹೆಳವ ಮಾತ್ರ ಅಲ್ಲಿಯೇ ಉಳಿದ. ಆಗ ಪರಮೇಶ್ವರ ಪ್ರತ್ಯಕ್ಷನಾಗಿ ಹೆಳವನ ನಾಲಗೆಯ ಮೇಲೆ ನಾಲ್ಕಕ್ಷರ ಬರೆದು 'ನಿನನ್ ಬಾಯಲ್ಲಿ ಏನು ವಚನ ಬರ್ತದೆ ಅದು ಸುಳ್ಳಾಗಬಾರ್ದು' ಎಂದು ಹೇಳಿದ. ಅದರಂತೆ ಹೆಳವ ಎತ್ತಿನ ಮೇಲೆ ಕುಳಿತು ಹೊರಟ. ಕಲ್ಯಾಣಪುರಿ ಬಿಟ್ಟು ಬೇರೆ ಬೇರೆ ಊರುಗಳಲ್ಲಿ ನೆಲೆಸಿದ್ದವರಲ್ಲಿಗೆ ಅವನು ಹೋಗಿ 'ನೀವು ಕಲ್ಯಾಣಪುರಿಯಿಂದ ಬಂದೋರು, ನಿಮ್ಮ ತಾತ ಮುತ್ತಾತರು ಇಂಥಾವು. ನಿಮ್ಮ ಬೆಡಗು ಇಂಥಾದ್ದು' ಹೀಗೆಲ್ಲ ಹೇಳುತ್ತಾ ಅವರನ್ನು ಸಂತೋಷಪಡಿಸಿದ. ಅವರು ಅವನಿಗೆ ಹತ್ತುವುದಕ್ಕೆ ಎತ್ತು. ಉಡುವುದಕ್ಕೆ ಬಟ್ಟೆ ಕೊಟ್ಟರು. ಈ ಹೆಳವನಿಂದಲೇ ಹೆಳವ ಸಂತತಿ ಮುಂದುವರೆಯಿತು.[24]

**ಪುರಾಣ – ೧೩**

ಇನ್ನೊಂದು ಕತೆ ಬಾಗಲಕೋಟೆ ತಾಲ್ಲೂಕು ಮುಗಳೊಳ್ಳಿ ಹೆಳವರಿಂದ ಸಂಗ್ರಹಿಸಿದ್ದು. ಅದೇನೆಂದರೆ: ಕಕ್ಕಯ್ಯ, ಕವುರಯ್ಯ, ಎಕ್ಕದ ಮಾರಯ್ಯ, ಗಟ್ಟಿತಾಳ ಸಿದ್ದಯ್ಯ, ಹಡಪದ ಹಂಪಯ್ಯ, ಗುಂಡು ಬ್ರಹ್ಮಯ್ಯ, ಮ್ಯಾದರ ಕ್ಯಾತಯ್ಯ, ಅಂಬಿಗೇರ ಚೌಡಯ್ಯ ಇತ್ಯಾದಿ ೮೩ ಶರಣರೊಳಗೆ ಹೇಳಯ್ಯನವರೂ ಒಬ್ಬರು. ಈ ಹೇಳಯ್ಯನವರನ್ನು ಕಂಡರೆ ಬಸವಣ್ಣನವರಿಗೆ ತುಂಬ ಅಭಿಮಾನ. ಕಲ್ಯಾನ ಪಟ್ಟಣದಲ್ಲಿ ಬಸವಣ್ಣನವರು ತಮ್ಮ ನಿಯಮದಂತೆ ನಿತ್ಯವೂ ಒಂದು ಲಕ್ಷ ತೊಂಬತ್ತಾರು ಸಾವಿರ ಗಣಂಗಳಿಗೆ ಅನ್ನ ಪ್ರಸಾದ ಕೊಡುತ್ತಿದ್ದ ಕಾಲದಲ್ಲಿ ಹೇಳಯ್ಯನವರನ್ನು ಈ ಕಾರ್ಯಕ್ಕೆ ಮೇಲ್ವಿಚಾರಕರನ್ನಾಗಿ ನೇಮಿಸಿದರು. ಮೊದಲಮೊದಲು ನಯವಿನಯದಿಂದಲೇ ಮೇಲ್ವಿಚಾರಣೆ ಕೆಲಸ ಮಾಡುತ್ತಿದ್ದ ಹೇಳಯ್ಯನವರಿಗೆ ಅಧಿಕಾರದ ಮತ್ತು ತಲೆಗೇರಿತು. ಈ ಸುದ್ಧಿ ತಿಳಿದ ಬಸವಣ್ಣನವರು ಹೇಳಯ್ಯನವರ ಅಹಂಕಾರವನ್ನು ಪರೀಕ್ಷೆಮಾಡಿ 'ನೀವು ಕಡಿಬೆಡಿಕೊಂಡು ತಿನ್ನಿ' ಎಂದು ಶಾಪಕೊಟ್ಟರಂತೆ. ಈಗ ಇರುವವರು (ಹೆಳವರು) ಈ ಹೇಳಯ್ಯನವರ ವಂಶಸ್ಥರು. ಹೆಳವ ಜಾತಿ ಉತ್ಪತ್ತಿಯಾದುದೇ ಹೇಳಯ್ಯನವರಿಂದ. 'ಹೇಳಯ್ಯನವರಿಗೆ ಇದ್ದುದು ಒಂದೇ ಕಾಲು. ಆದ್ದರಿಂದ ಅವರನನ್ನು ಒಕ್ಕಾಲು ಭೃಂಗೀಶ್ವರ' ಎಂದೂ ಕರೆಯುತ್ತಿದ್ದರೂ ಬಸವಣ್ಣನವರ ಪ್ರಭಾವದಿಂದಾಗಿ ಅವರಿಗೆ ಲಿಂಗಧಾರಣೆಯೂ ಆಗಿತ್ತು. ಈಗ 'ಕಪ್ಪಕಡಿ' (ಮಾಂಸ ಇತ್ಯದಿ) ತಿನ್ನೋದು ಕುಡಿಯೋದು ಇದೆ ಅಂತ ಹೇಳಿ ಹೇಳಯ್ನವರಿಗೆ ಲಿಂಗಧಾರಣೆ ಆಗಿದ್ದ ವಿಷಯವನ್ನು ಬೇಕೆಂದೇ ಕೆಲವರು ಮುಚ್ಚಿಡುತ್ತಾರೆ.[25]

ಇವಕ್ಕಿಂತಲೂ ಇನ್ನೂ ಹೆಚ್ಚು ವಾಸ್ತವಿಕವಾದ ಅಂಶಗಳು ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕು ಹಂದ್ರಾಳದಿಂದ ವಲಸೆಬಂದ ಚಿಕ್ಕಮಗಳೂರು ಜಿಲ್ಲೆ ಕಡೂರಿನಲ್ಲಿ ನೆಲೆಸಿರುವ ಹೆಳವರಿಂದ ದೊರೆಯುತ್ತವೆ. ಅವೇನೆಂದರೆ ಹೆಳವ ಜಾತಿಯು ಬಸವಣ್ಣನವರ ಕಾಲದಿಂದ ಉದ್ಭವಿಸಿತು. ಅವರು ತಮ್ಮ ರಾಜ್ಯದಲ್ಲಿಯ ಹಳ್ಳಿಗಳಲ್ಲಿ ಇದ್ದ ಜನರ ಜನನ ಮರಣ ದಾಖಲೆಗಳನ್ನೂ ಬೇರೆ ಸ್ಥಳಗಳಿಂದ ತಮ್ಮ ರಾಜ್ಯಕ್ಕೆ ಬಂದ ಜನರನ್ನು ತಿಳಿದುಕೊಳ್ಳುವುದಕ್ಕೂ ಮತ್ತು ಸಂಬಂಧ ಬೆಳೆಸುವ ಜನರನ್ನು ಕಂಡುಹಿಡಿಯುವುದಕ್ಕೂ ಕೆಲವು ಜನರನ್ನು ನೇಮಿಸಿ ಇಂತಿಂಥ ಹಳ್ಳಿಗಳನ್ನು ಅವರಿಗೆ ವಹಿಸಿದ್ದರು. ಆ ಹಳ್ಳಿಗಳಿಗೆ ಹೋಗಲು ಅನುಕೂಲವಾಗಲೆಂದು ಅವರಿಗೆ ಮಾತ್ರ ಎತ್ತುಗಳನ್ನು ಒದಗಿಸಿದರು. ಈ ಎತ್ತುಗಳ ಮೇಲೆ ಹಳ್ಳಿಗಳ ಮನೆಮನೆಗೆ ಹೋಗಿ ವಹಿಸಿದ ಕಾಯಕ ಮಾಡುತ್ತಿದ್ದವರಿಗೆ ಹೇಳವರು ಎಂದು ಹೆಸರಿಟ್ಟರು. ಬಸವಣ್ಣನವರು ಕೆಲವು ಕುಂಟರನ್ನು ಈ ಕಾಯಕಕ್ಕೆ ನೇಮಿಸಿದ್ದರಿಂದ ಅವರ ವಂಶಜರೆಲ್ಲರೂ 'ಹೆಳವ' ಜನಾಂಗದವರೆಂದು ಮುಂದುವರೆದರು.[26]

[1] Edgar Thurston, K Rangachari, Castes & Tribes of Southern India, Vol, 2, P 328, 1909

[2] H.V. Nanjundiah, Ananth Krishnna Lyer, The Mysore Tribes And Castes, Vol, 3, P 309, 1909

[3] Enthoven R E, The Tribes And Castes of Bomby, Vol, 2, P 72, 1922

[4] Syed Siraj Ul Hasan, The Castes And Tribes of The H E H The Nizames Dominion, P 568, 1950

[5] ತೆಳಗಡಿಬಿಎಂ, ಹೆಳವರು, ಪು೧೩೦, ೧೯೮೦

[6] ನಿಂಗಣ್ಣಸಣ್ಣಕ್ಕಿ, ಹೆಳವರು, ಪು೧೯, ೧೯೮೦

[7] ರಾಜಶೇಖರ್ಪಿಕೆ, ಹೆಳವರು, ಪು೨೭೨, ೧೯೮೦

[8] Singh K S, Indias Communitises, P 1277, 1998

[9] Gupta R, People of India, Karnataka, P 622, 2008

[10] ಪರಮಶಿವಯ್ಯಜೀಸಂ, ಹೆಳವರು, ಪು೨೬೫, ೧೯೭೯

[11] ನಾಗೇಗೌಡಎಚ್ಎಲ್, ಹೆಳವರುಮತ್ತುಅವರಕಾವ್ಯಗಳು, ಪುxxi, ೧೯೮೨

[12] ಹರಿಲಾಲ್ಪವಾರ್, ಹೆಳವರಸಂಸ್ಕೃತಿ, ಪು೬, ೧೯೯೩

[13] Edgar Thurston, K Rangachari, Castes & Tribes Of Southern India, Vol, 1, P 310 1909

[14] Enthoven R E, The Tribes And Castes of Bomby, Vol, 2, P 72, 1922

[15] Syed Siraj Ul Hasan, The Castes And Tribes of The H E H The Nizames Dominion, P 569, 1950

[16] Ibid, P 569

[17] ತೆಳಗಡಿಬಿಎಂ, ಹೆಳವರು, ಪು೧೩೨, ೧೩೩೧೯೮೦

[18] ಅದೇ, ಪು, ೧೩೩

[19] ಚನ್ನಬಸಪ್ಪಗೊರು, ಕರ್ನಾಟಕದಜನಪದಕಲೆಗಳು, ಪು೧೯೩೧೯೮೦

[20] ಹರಿಲಾಲ್ಪವಾರ್, ಹೆಳವರಸಂಸ್ಕೃತಿ, ಪು೧೨, ೧೩., ೧೯೯೩

[21] ಹರಿಲಾಲ್ಪವಾರ್, ಹೆಳವರಸಂಸ್ಕೃತಿ, ಪು೧೩,೧೪, ೧೯೯೩

[22] ಪರಮಶಿವಯ್ಯಜೀಸಂ, ಹೆಳವರು, ಪು೨೬೫, ೨೬೬, ೧೯೭೯

[23] ನಾಗೇಗೌಡಎಚ್ಎಲ್, ಹೆಳವರುಮತ್ತುಅವರಕಾವ್ಯಗಳು, ಪುxii xii xiv, ೧೯೮೨

[24] ಅದೇ, ಪು, xv

[25] ಅದೇ, ಪು, xvi

[26] ಅದೇ, ಪು, xvi xvii

# ಈ ಯೋಜನೆಗಾಗಿ ಸಂದರ್ಶಿಸಲ್ಪಟ್ಟವರ ವಿವರಗಳು

| ಕ್ರ. ಸಂ. | ಹೆಸರು | ವಯಸ್ಸು | ಶಿಕ್ಷಣ | ವೃತ್ತಿ | ಸ್ಥಳ |
|---|---|---|---|---|---|
| ೦೧. | ಸಂಗಪ್ಪ ದಪ್ಪಿನವರ್ | ೬೫ | ಅ.ನ. | ಹೆಳವಿಕೆ | ಜೋಕಾನಟ್ಟಿ |
| ೦೨. | ಬಾಲಪ್ಪ ಸಿದ್ದಪ್ಪ ದೊಡ್ಮನಿ | ೪೮ | ಅ.ನ. | ಹೆಳವಿಕೆ | ಜೋಕಾನಟ್ಟಿ |
| ೦೩. | ಭೀಮಪ್ಪ ಸಿದ್ದಪ್ಪ ಹೆಳವರ್ | ೫೨ | ಅ.ನ. | ಹೆಳವಿಕೆ | ಮೂಡಲಗಿ |
| ೦೪ | ಮಾರುತಿ ಶಂಕರ್ ಹಳವರ್ | ೪೫ | ಅ.ನ. | ಹೆಳವಿಕೆ ಮೂಡಲಗಿ | |
| ೦೫ | ಸದಾಶಿವ ಈ. ಅಲಗೂರ | ೪೨ | ಅ.ನ. | ಹೆಳವಿಕೆ | ಬೆಂಚಿನ ಮರಡಿ |
| ೦೬ | ಅಪ್ಪಣ್ಣ ತಿಪ್ಪಣ್ಣ ಹೆಳವರ್ | ೪೮ | ಅ.ನ. | ಹೆಳವಿಕೆ | ಮುಲಸಗುಪ್ಪಿ |
| ೦೭ | ಬಸವರಾಜ್. ಲಕ್ಷ್ಮಣ ಹೆಳವರ್ | ೩೮ | ಅ.ನ. | ಹೆಳವಿಕೆ | ತಲಕಟನಾಳ |
| ೦೮ | ಲಕ್ಷ್ಮಣರಾವ್ ರಾ. ಅಂದಕೂಲ್ | ೬೦ | ಬಿ.ಎ. | ನಿ ನೌ ಬೀದರ್ | |
| ೦೯ | ಬಾಬುರಾವ್.ಶ.ಜಂಗ್ಲಾತ್ | ೪೮ | ೧೦ನೇ | ಕೂಲಿ | ಬೀದರ್ (ಶಾಗಂಜ್) |
| ೧೦ | ಶ್ರೀನಿವಾಸ ಹೆಳವರ್ | ೩೮ | ೩ನೇ | ಕೂಲಿ | ಮಲ್ಕಾಪೂರ |
| ೧೧ | ಸಿದ್ರಾಮ ಹೆಳವರ್ | ೩೮ | ೫ನೇ | ಕೂಲಿ | ಮಲ್ಕಾಪೂರ |
| ೧೨ | ತುಕಾರಾಂ ನರಸಪ್ಪ | ೪೨ | ಅ.ನ. | *ಚಾಹೆ | ಅಷ್ಟೂರು |
| ೧೩ | ಈಶ್ವರ ಸಿ.ಹಾದಿಮನಿ | ೪೫ | ಅ.ನ. | ಚಾ ಹೆ | ಹಳ್ಳಖೇಡ್ |
| ೧೪ | ಮಲ್ಲಪ್ಪ ಹೆಳವರ್ | ೪೦ ೩ನೇ | ಪೂಜಾರಿ | ದುಬಲಗುಂಡಿ | |
| ೧೫ | ಶಿವರಾಜ್ | ೩೫ | ಅ.ಐ. | ಕೂಲಿ | ಮಾಗಾಂವ್ |
| ೧೬ | ಬಸವರಾಜ್ ಎರಸನ್ | ೩೦ | ಅ.ನ. | ಚಾ ಹೆ | ಮಾಗಾಂವ್ |
| ೧೭ | ಶೋಭ ಎರಸನ್ | ೨೮ | ಅ.ನ. | ಚಾ ಹೆ | ಮಾಗಾಂವ್ |
| ೧೮ | ಮಲ್ಕಪ್ಪ ಆಕರಪು | ೩೮ | ಅ.ನ. | ಚಾ ಹೆ | ರಟಗಲ್ |
| ೧೯ | ಶಾಂತಾಬಾಯಿ ಎರಸನ್ | ೪೦ | ಅ.ನ. | ಕೂಲಿ | ರಟಗಲ್ |
| ೨೦ | ಬಸವರಾಜ್ ಹೆಳವರ್ | ೪೩ | ೫ನೇ | ರೈತ | ಯಾಳಗಿ |
| ೨೧ | ಮಲ್ಲಿಕಾರ್ಜುನ್ ಹೆಳವರ್ | ೪೬ | P.U.C. | ವಿದ್ಯಾರ್ಥಿಗುಲ್ಬರ್ಗಾ | |
| ೨೨ | ಶಿವಣ್ಣ ಹೆಳವರ್ | ೪೦ | ಅ.ನ. | ಕೂಲಿ ಹೆಳವರ ಕೊಪ್ಪಲು | |
| ೨೩ | ಚಿಕ್ಕಯ್ಯ ಹೆಳವರ್ | ೬೦ | ಅ.ನ. ಕೂಲಿ | ಹೆಳವರ ಕೊಪ್ಪಲು | |
| ೨೪ | ಮಾದು ಹೆಳವರ್ | ೪೫ | ಅ.ನ. | ಕೂಲಿ | ಬೊಮ್ಮೂರ್ ಅಗ್ರಹಾರ |
| ೨೫ | ಕೃಷ್ಣಪ್ಪ ಹೆಳವರ್ | ೪೫ | ಅ.ನ. | ಕೂಲಿ | ಹೆಳವರ ಹಟ್ಟಿ |
| ೨೬ | ಕೆಂಗಯ್ಯ ಹೆಳವರ್ | ೪೫ | ಅ.ನ. ಕೂಲಿ | ಹೆಳವರ ಕೊಪ್ಪಲು | |

| | | | | | |
|---|---|---|---|---|---|
| ೨೭ | ಲಕ್ಷ್ಮಮ್ಮ | ೭೦ | ಅ.ನ. ಕೂಲಿ | ಕೂಡಲ ಕುಪ್ಪೆ | |
| ೨೮ | ಚಿನ್ನಸ್ವಾಮಿ | ೩೦ | ೩ನೇ | ಕೂಲಿ | ಕೂಡಲ ಕುಪ್ಪೆ |
| ೨೯ | ಗೋವಿಂದಪ್ಪ | ೫೨ | ೧೦ನೇ | ಕೃಷಿ | ಜಡೇಕುಂಟೆ |
| ೩೦ | ಟಿ.ನಾಗೇಂದ್ರಪ್ಪ | ೫೦ | P.U.C | ವ್ಯಾಪಾರಿ | ಜಡೇಕುಂಟೆ |
| ೩೧ | ಈರಣ್ಣ ಹೆಳವರ್ | ೬೩ | ಅ.ನ. | ಹೆಳವಿಕೆ | ಜಡೇಕುಂಟೆ |
| ೩೨ | ಮೂಡ್ಲಪ್ಪ ಹೆಳವರ್ | ೭೦ | ಅ.ನ. | ಹೆಳವಿಕೆ | ದಿಂಡಾವರ |
| ೩೩ | ನಾಗರಾಜ್ ಕೊಲ್ಕಾರ | ೩೫ | ಅ.ನ. | ಕೂಲಿ | ದಿಂಡಾವರ |
| ೩೪ | ಮಾರಕ್ಕ ಕೊಂಚಿಗೇರಿ | ೩೫ | ಅ.ನ. | ಕೂಲಿ | ಗೋಪನಹಳ್ಳಿ |
| ೩೫ | ನರಸಿಂಹಪ್ಪ | ೪೦ | ಅ.ನ. | ಕೂಲಿ | ಗೋಪನಹಳ್ಳಿ |
| ೩೬ | ಶಾಂತಪ್ಪ | ೬೦ | ಅ.ನ. | ಕೂಲಿ | ಗೋಪನಹಳ್ಳಿ |
| ೩೬ | ಶಾಂತಪ್ಪ | ೬೦ | ಅ.ನ. | ಕೂಲಿ | ಹೆಳವರ ಹಟ್ಟಿ |
| ೩೭ | ತಿಪ್ಪಮ್ಮ | ೫೦ | ಅ.ನ. | ಕೂಲಿ | ಹೆಳವರ ಹಟ್ಟಿ |
| ೩೮ | ರುದ್ರಮ್ಮ | ೫೦ | ಅ.ನ | ಕೂಲಿ | ಹೆಳವರ ಹಟ್ಟಿ |
| ೩೯ | ಶ್ರೀನಿವಾಸ | ೪೬ | ೩ನೇ | ರೈತ | ಹೆಳವರ ಹಟ್ಟಿ |
| ೪೦ | ಗ್ಯಾರೆ ನೀಲಪ್ಪ | ೫೫ | ಅ.ನ | ಕೂಲಿ | ಹೆಳವರ ಹಟ್ಟಿ |
| ೪೧ | ಎಂ.ಎಸ್.ಹೆಳವರ್ | ೬೨ | L.L.B | ವಕೀಲ | ಕಡೂರು |
| ೪೨ | ರಂಗಪ್ಪ | ೪೦ | ಅ.ನ. | ಕೂಲಿ | ಕಡೂರು |
| ೪೩ | ಬಸಪ್ಪ ಛತ್ರದ | ೬೨ | ೨ನೇ | ಕೂಲಿ | ಸೋಮಸಾಗರ |
| ೪೪ | ಚಂದ್ರಪ್ಪ. ಬ.ಛತ್ರದ್ | ೩೩ | T.C.H | ಶಿಕ್ಷಕ | ಸೋಮಸಾಗರ |
| ೪೫ | ಶೇಖರಪ್ಪ ರೊಡ್ನವರ್ | ೬೦ | ೭ನೇ | ಕೂಲಿ | ಸೋಮಸಾಗರ |
| ೪೬ | ಶಿವಪ್ಪ. ಬ. ಅಕ್ಕೂರ್. | ೪೫ | ಅ.ನ. | ರೈತ | ಮಾಸನಕಟ್ಟೆ |
| ೪೭ | ನಾಗಮ್ಮ | ೭೦ | ಅ.ನ. | ಕೂಲಿ | ಮಾಸನಕಟ್ಟೆ |
| ೪೮ | ಮಾಂತೇಶಪ್ಪ ಗಿಡ್ಡಳ್ಳಿ | ೪೫ | ೫ನೇ | ಕೂಲಿ | ಮುಗಳಿಕಟ್ಟೆ |
| ೪೯ | ಶಿವಪ್ಪ ಚಿಕ್ಕಳ್ಳಿ | ೩೦ | ಅ.ನ. | ಕೂಲಿ | ಮುಗಳಿಕಟ್ಟೆ |
| ೫೦ | ರಮೇಶ್ ಕೊಂಡೂರು | ೩೮ | ೧೦ನೇ | ಮೆಕಾನಿಕ್ | ಸೋಮಸಾಗರ |

**_*ಚಾ ಹೆ ಚಾಪೆ ಹೆಳವರು_**

# ಹೆಳವರೆಂದರೆ ಯಾರು?

**ಕಥೆಗಳು**

ಹೆಳವರ ಹೆಳವರ ಕುರಿತ ಮೇಲಿನ ಕಥೆಗಳು ಪುರಾಣಗಳ ಜೊತೆ ತಮ್ಮನ್ನು ಸಮೀಕರಿಸಿಕೊಳ್ಳುತ್ತವೆ. ಪುರಾಣದ ಮತ್ತು ಇತಿಹಾಸದ ಕೆಲವು ವ್ಯಕ್ತಿಗಳು ಈ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಹೆಳವರ ಕುರಿತು ಕೆಲವು ಕಥೆಗಳೂ ಇವೆ. ಅವುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

**ಕಥೆ – ೧**

ಒಕ್ಕಲಿಗರು ಕುರುಬರು ಲಿಂಗಾಯಿತರ ಈ ಮೂವರು ದಾಯಾದಿಗಳೆಂದು ಹೇಳುವ ಹೆಳವರು ಆಸ್ತಿಪಸ್ತಿಯೆಲ್ಲ ಹಿಸ್ಸೆಯಾದಾಗ ತಮ್ಮ ಪಾಲೆಲ್ಲ ಈ ಮೂರು ಮನೆತನದವರಿಗೆ ಕೊಡಲ್ಪಟ್ಟಿತ್ತೆಂದೂ ಅವರೆಲ್ಲರೂ ವರ್ಷ ವರ್ಷ ತಮಗೆ ಕಾಳುಕಡಿಗಳನ್ನು ಕೊಟ್ಟು ನೆರವಾಗುತ್ತಿದ್ದರೆಂದೂ ಹೇಳಿ ಇದಕ್ಕೆ ಕಾರಣವಾದ ಹೆಳವನ ಕಥೆಯನ್ನು ಹೇಳುತ್ತಾರೆ. ನಾಲ್ಕು ಜನ ಅಣ್ಣ ತಮ್ಮಂದಿರಲ್ಲಿ ಕೊನೆಯವನು ಕುಂಟನಂತೆ. ಅವನು ಆಸ್ತಿಪಾಸ್ತಿಯನ್ನು ತೆಗೆದುಕೊಂಡು ಪ್ರತಿವರ್ಷವೂ ಬೆಳೆದ ಕಾಳುಕಡಿಯನ್ನು ಅವನಿಗೂ ಹಂಚುತ್ತಿದ್ದರಂತೆ. ಕುಂಟನಾದುದರಿಂದ ಕಿರಿಯವನನ್ನು ಹೆಳವಯ್ಯನೆಂದು ಕರೆಯುತ್ತಿದ್ದರಂತೆ. ಹೆಳವಯ್ಯನಿಗೆ ಮದುವೆ ಮಾಡಬೇಕೆಂದಾಗ 'ಕುಂಟನಿಗೇಕೆ ಮದುವೆ?' ಎಂದು ಎಲ್ಲರೂ ಅಣಕಿಸಿ ಹೆಣ್ಣು ಕೊಡಲಿಲ್ಲವಂತೆ. ಆಗ ತೆಲುಗುದೇಶದ ಕುಟುಂಬದವರು ಕಡು ಬಡವರಾಗಿದ್ದರಿಂದ ಹೊಟ್ಟೆಗಿಲ್ಲದೆ ಸಾಯುವುದಕ್ಕಿಂತ ಆ ಕುಂಟನ ಮನೆಯಲ್ಲಾದರೂ ಬದುಕಿಕೊಳ್ಳಲಿ ಎಂದು ಹೇಳಿ ತಮ್ಮ ಮಗಳನ್ನು ಹೆಳವಯ್ಯನಿಗೆ ಧಾರೆ ಎರೆದುಕೊಟ್ಟರಂತೆ. ಇದರಿಂದಾಗಿ ಹೆಳವಯ್ಯನ ಮಕ್ಕಳ ಮಾತೃಭಾಷೆ ತೆಲುಗಾದರೂ ವ್ಯವಹಾರ ಭಾಷೆ ಕನ್ನಡವಾಯಿತು.[1]

**ಕಥೆ – ೨**

'ಉತ್ತರ ಕರ್ನಾಟಕದಲ್ಲಿ ಕ್ರಿ.ಶ. ೧೫೮೦ರಲ್ಲಿ ಬಿಜಾಪುರ ಜಿಲ್ಲೆಯ ಬಾದಾಮಿಯಲ್ಲಿ ಶ್ರೀಶಂಕರಪ್ಪ ಎಂಬುವರು ಮಾದಪ್ಪಗೌಡ ಎಂಬವರಲ್ಲಿ ಜನಿಸಿದರು. ಇವರು 'ಗೌಡ' ಮನೆತನಕ್ಕೆ ಸೇರಿದ್ದು ಕೃಷಿ ಜೀವನ ಸಾಗಿಸುತ್ತಿದ್ದರು. ಮಾದಪ್ಪಗೌಡ ಎಂಬರಿಗೆ ಮುರು ಜನ ಗಂಡು ಮಕ್ಕಳಿದ್ದರು. ಒಂದನೇ ಮಗ ತಾಯಿ ಗರ್ಭದಿಂದ ಜನಿಸುವಾಗಲೇ ಕಾಲು ಇಲ್ಲದವನಾಗಿ (ಅಂಗವಿಕಲ) ಜನಿಸಿದನು. ಕನ್ನಡದಲ್ಲಿ ಹೆಳವ ಎಂದರೆ ಕಾಲಿಲ್ಲದವನೆಂಬ ಇನ್ನೊಂದು ಅರ್ಥವಿದೆ.[2]

ಈ ಪುರಾಣ ಮತ್ತು ಕಥೆಗಳಿಂದ ಕೆಲವು ಸಮಾನ ಅಂಶಗಳನ್ನು ಹೀಗೆ ಗುರುತಿಸಬಹುದು.

೧. ಒಂದು ಕೃಷಿಕ ಪರಂಪರೆಯ ಹಿನ್ನೆಲೆ ಈ ಸಮುದಾಯಕ್ಕೆ ಇದೆ. ಇವರ ಮೂಲ ಪುರುಷನೆಂದು ಹೇಳಲ್ಪಡುವ ವ್ಯಕ್ತಿಯ ಮೂಲದಲ್ಲಿ ಒಬ್ಬ ಕೃಷಿಕನ ಮಗ. ಆದರೆ ಕೃಷಿ ಮಾಡಲಾಗದ ವೈಕಲ್ಯ ಆತನಿಗೆ ಪ್ರಾಪ್ತವಾಗಿದೆ.

೨. ಶಿವನ ಆಜ್ಞೆ ಮೇರೆಗೆ ಕೈಲಾಸದ ಪ್ರಮಥರು ಧರ್ಮವನ್ನು ಉಳಿಸಲು ಭೂಮಿಗೆ ಬರುತ್ತಾರೆ. ಕೈಲಾಸದಿಂದ ಬಂದ ಈ ತಂಡದಲ್ಲಿ ಒಂಟಿಕಾಲಿನ ಭೃಂಗಿಯೂ ಒಬ್ಬ. ಈತನನ್ನೂ ಸೇರಿದಂತೆ ಎಲ್ಲರೂ ಎತ್ತುಗಳ ಮೇಲೆ ಊರೂರಿಗೆ ಹೋಗಿ ಶಿವನ ಕಥೆಗಳನ್ನು ಹೇಳಲಾರಂಭಿಸಿದರು. ಒಂದು ಕಾಲಿನ ಭೃಂಗಿಯ ವಂಶದವರು ಹೆಳವರು.

೩. ತ್ರಿಮೂರ್ತಿಗಳಿಗೆ ತಮ್ಮ ಗೋತ್ರಗಳನ್ನು ತಿಳಿದುಕೊಳ್ಳಲು ವ್ಯಕ್ತಿಯೊಬ್ಬನ ಅವಶ್ಯಕತೆ ಇತ್ತು. ಅವರು ಬೊಂಬೆಯೊಂದನ್ನು ಮಾಡಿ ಅದಕ್ಕೆ ಜೀವ ಕೊಡುವ ಸಂದರ್ಭದಲ್ಲಿ ಆ ಬೊಂಬೆಯ ಕಾಲು ಊನಗೊಂಡು ಕುಂಟಾಯಿತು. ಹೀಗೆ ಜೀವ ಪಡೆದ ವ್ಯಕ್ತಿ

ತ್ರಿಮೂರ್ತಿಗಳ ಗೋತ್ರ ಕಾಲು ಊನಗೊಂಡ ಈ ವ್ಯಕ್ತಿಯನ್ನು ಗೋತ್ರಗಳನ್ನು ಹೇಳಲೆಂದೇ ತ್ರಿಮೂರ್ತಿಗಳು ಭೂಮಿಗೆ ಕಳುಹಿಸಿದರು.

೪. ಮಕ್ಕಳಾಗದ ಏಳು ಜನ ಹೆಣ್ಣುಮಕ್ಕಳಿಗೆ ವರದ ರೂಪದಲ್ಲಿ ಶಿವ ಅವರಿಗೆ ಕುಂಟ ವ್ಯಕ್ತಿಯನ್ನು ನೀಡುತ್ತಾನೆ. ಆತನಿಂದ ಅವರು ಏಳು ಮಕ್ಕಳನ್ನು ಪಡೆಯುತ್ತಾರೆ. ಮತ್ತು ಇವರೇ ಹೆಳವರಾಗುತ್ತಾರೆ. ಕುಂಟ ವ್ಯಕ್ತಿ ಹೆಳವರ ಮೂಲ ಪುರುಷನಗುತ್ತಾನೆ.

೫. ಒಕ್ಕಾಲ ಭೃಂಗಿ ಶಿವ ಪಾರ್ವತಿಯರ ಮಗ. ಈತ ಶಿವ ಪಾರ್ವತಿಯರಿಗೆ ನಮಿಸುವಾಗ ಶಿವನಿಗೆ ಹೆಚ್ಚು ಮಹತ್ವ ನೀಡುತ್ತಿರುತ್ತಾನೆ. ಪಾರ್ವತಿ ಸಿಟ್ಟಾಗಿ ಅವನನ್ನು ಶಿಪಿಸುತ್ತಾಳೆ. ಅವಳ ಶಿಕ್ಷೆಯಿಂದ ಭೃಂಗಿಗೆ ಶಾಶ್ವತ ವೈಕಲ್ಯ ಪ್ರಾಪ್ತಿಯಾಗುತ್ತದೆ. ಶಿವ ನಂದಿಯನ್ನು ಭೃಂಗಿಗೆ ಕೊಟ್ಟು ಭೂಲೋಕಕ್ಕೆ ಹೋಗಿ ಭಿಕ್ಷೆ ಬೇಡಿ ಬದುಕಲು ಹೇಳುತ್ಥಾನೆ.

೬. ಕೃಷಿಕನೊಬ್ಬನ ಏಳು ಜನ ಗಂಡು ಮಕ್ಕಳಲ್ಲಿ ಒಬ್ಬ ಒಂಟಿಕಾಲಿನವನು. ಸಹೋದರರು ಅವನನ್ನು ತಾತ್ಸಾರದಿಂದ ನೋಡಿ, ಅವನಿಗೆ ಆಸ್ತಿಯಲ್ಲಿ ಪಾಲುಕೊಡದೇ ಇದ್ದಾಗ, ಈತ ಕಲ್ಯಾಣಕ್ಕೆ ಬಂದು ಬಸವಣ್ಣನ ಆಣತಿಯ ಮೇರೆಗೆ ಮನೆ ಮನೆಗೆ ಹೋಗಿ ಭಕ್ಷೆ ಬೇಡಿ ಬದುಕಲರಂಬಿಸುತ್ತಾನೆ. ಈತನ ಮಕ್ಕಳೇ ಮುಂದೆ ಹೆಳವರಾದರು.

೭. ಒಕ್ಕಲಿಗ, ಕುರುಬ, ಲಿಂಗಾಯಿತರು ಮತ್ತು ಹೆಳವರು ದಾಯಾದಿಗಳು. ಇವರು ತಮ್ಮ ಆಸ್ತಿಯನ್ನು ಪಾಲು ಮಾಡಿಕೊಳ್ಳುವಾಗ ಹೆಳವರ ಮೂಲ ಪುರಷನಾದ ಕೊನೆಯವನು ಕುಂಟನಾಗಿದ್ದ ಕಾರಣಕ್ಕೆ ಈ ಮೂರೂ ಜನ ದಾಯಾದಿಗಳು ಅವನಿಗೆ ಆಸ್ತಿಯಲ್ಲಿ ಪಾಲು ಕೊಡದೆ ವರ್ಷಕ್ಕೆ ನಿಗದಿತ ಪ್ರಮಾಣದ ಕಾಳು ಕಡಿಯನ್ನು ಕೊಡಲಾರಂಭಿಸಿದರು. ಈ ಕುಂಟನಿಗೆ ಯಾರೂ ಹೆಣ್ಣು ಕೊಡದೇ ಇದ್ದಾಗ ಕಡು ಬಡವರಾದ ತೆಲುಗರು ಈತನಿಗೆ ಹೆಣ್ಣು ಕೊಟ್ಟರು. ಈತನಿಗೆ ಮಕ್ಕಳಾಗಿ ಮುಂದೇ ಇವರೇ ಹೆಳವರಾದರು. ಈ ಕಾರಣಕ್ಕಾಗಿ ಮನೆ ಭಾಷೆ ತೆಲುಗಾಯಿತು ಮತ್ತು ವ್ಯವಹಾರದ ಭಾಷೆ ಕನ್ನಡವಾಯಿತು.

ಈ ಮೇಲಿನ ಅಂಶಗಳನ್ನು ಗಮನಿಸಿದರೆ ಹೆಳವವರ ಮೂಲ ಪುರಷ ಹುಟ್ಟುತ್ತಲೇ ಅಂಗವಿಕಲನಾಗಿ ಹುಟ್ಟುತ್ತಾನೆ. ಇಲ್ಲವೇ ದೇವತೆಗಳ ಸಿಟ್ಟಿಗೆ ಕಾರಣವಾಗಿ ಅಂಗ ವೈಕಲ್ಯವನನ್ನು ಅನುಭವಿಸುತ್ತಾನೆ. ಒಟ್ಟಿನಲ್ಲಿ ಅಂಗವೈಕಲ್ಯ ಈ ಮೂಲ ಪುರಷನ ಸಾಮಾಜಿಕ ಮತ್ತು ಆರ್ಥಿಕ ಬದುಕನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಮುಖ್ಯವಾದ ಸಂಗತಿ ಯವುದೆಂದರೆ, ಹೆಳವರ ಮೂಲ ಪುರಷ ಒಂದು ಕೃಷಿಕ ಕುಟುಂಬದಿಂದ ಬಂದವನು ಮತ್ತು ಏಳು ಜನ ಮಕ್ಕಳಾಗದೆ ಪರಿತಪಿಸುತ್ತದ್ದ ಪಶುಪಾಲಕ ಗೊಲ್ಲ ಸಮುದಾಯಕ್ಕೆ ಸೇರಿದ ಹೆಣ್ಣುಮಕ್ಕಳನ್ನು ಮದುವೆಯಾಗುವನು. ಮತ್ತೊಂದು ಕಥೆಯಲ್ಲಿ ಈತ ತನ್ನದಲ್ಲದ ಭಾಷೆಯಾದ ತೆಲುಗರ ಬಡ ಕುಟುಂಬದ ಮಹಿಳೆಯನ್ನು ಮದುವೆಯಾಗುತ್ತಾನೆ. ಕೈಲಾಸದ ಗಣಗಳಲ್ಲಿ ಪ್ರಮುಖನಾದ ಈತ ಧರ್ಮವನ್ನು ಉಳಿಸಲು ಭೂಮಿಗೆ ಬಂದವನು. ಮತ್ತು ಈತನ ಎಲ್ಲ ಆಗುಹೋಗುಗಳಲ್ಲಿ ಶಿವ ಪ್ರಮುಖ ಪಾತ್ರ ವಹಿಸುತ್ತಾನೆ. ಸಾಮಾನ್ಯವಾಗಿ ಈ ಬಗೆಯ ಅಲೆಮಾರಿ ಸಮುದಾಯಗಳ ಸೃಷ್ಟಿ ಪುರಾಣಗಳಲ್ಲಿ ಶಿವ ಆಪತ್ ರಕ್ಷಕನಾಗಿ ನಿಲ್ಲುವುದು ಸಹಜ.ಹುಟ್ಟುತ್ತಾ ಕೃಷಿಕನಾಗಿರುವ ಹೆಳವನು ಪಶುಪಾಲಕ ಗೊಲ್ಲ. ಮಹಿಳೆಯರನ್ನು ಮದುವೆಯಾಗಿ ಎರಡು ಭಿನ್ನ ಸಮುದಾಯಗಳ ನಡುವೆ ಸೇತುವೆಯಆಗುತ್ತಾನೆ. ಈ ಸಂಸರ್ಗದಿಂದ ಹೆಳವ ಸಮುದಾಯ ರೂಪುಗೊಳ್ಳುತ್ತದೆ. ಹೆಳವರು ಕೃಷಿಕ ಸಮುದಾಯಗಳನ್ನು ಆಶ್ರಯಿಸಿಯೇ ತಮ್ಮ ಪಾರಂಪರಿಕ ಕುಲಕಸಬನ್ನು ರೂಢಿಸಿಕೊಂಡು ಬಂದಿದ್ದಾರೆ. ಈ ಆರ್ಥಿಕ ಅವಲಂಬನೆಯೇ ಅವರಿಗೆ ಅಲೆಮಾರಿತನವನ್ನೂ ದಯಪಾಲಿಸಿದೆ. ಮತ್ತು ಈ ಅಲೆಮಾರಿತನಕ್ಕೆ ಮುಖ್ಯವಾಗಿ ಬಳಸುವುದು ಎತ್ತನ್ನ. ಎತ್ತು ಕೃಷಿ ಸಂಸ್ಕೃತಿಯನ್ನು ಪ್ರತಿನಿಧಿಸುವ ಪ್ರಾಣಿ.

ಪೌರಾಣಿಕವಾಗಿ ಹೀಗೊಂದು ವಿಲಕ್ಷಣ ಸನ್ನಿವೇಶದಲ್ಲಿ ಹೆಳವರ ಮೂಲ ಪುರುಷ ಪಡೆಯುವ ಅಂಗ ವೈಕಲ್ಯ, ಅವಲಂಬಿಸುವ ವೃತ್ತಿ ಮತ್ತು ಅನ್ಯ ಸಮುದಾಯದ ಜೊತೆಗಿನ ಸಂಕರನ, ಇಂದಿಗೂ ಹೆಳವ ಸಮಾಜದ ಪರಿಪ್ರೇಕ್ಷ್ಯದಲ್ಲಿ ಇವೆಲ್ಲ ಸಂಕೇತದ ಮಟ್ಟದಲ್ಲಿ ತನ್ನ ಕುರುಹುಗಳನ್ನು ಉಳಿಸಿಕೊಂಡು ಬಂದಿವೆ. ಹೀಗಾಗಿ ಹೆಳವರು ಅಲೆಮಾರಿಗಳೇ? ಹೌದು. ಆದರೆ ಶುದ್ಧಾಂಗ ಅಲೆಮಾರಿಗಳೇನಲ್ಲ. ಪಾರಂಪರಿಕ ವೃತ್ತಿಯನ್ನು ಅವಲಂಬಿಸಿರುವ ಹೆಳವರ ಉಪಪಂಗಡಗಳ ಅನೇಕ ಗುಂಪುಗಳು ವರ್ಷದ ಕೆಲ ಅವಧಿಯಲ್ಲಿ ತಮ್ಮ

ಒಕಕ್ಲು ಮನೆಗಳಿಗೆ ಪಾಲು ಕೇಳಲು ಎತ್ತಿನಗಾಡಿ ಮತ್ತು ದನ ಕರುಗಳ ಸಮೇತ ಊರು ಬಿಡುತ್ತಾರೆ. ಊರೂರು ಅಲೆಯುತ್ತಾರೆ. ಇಲ್ಲೂ ಅವರು ತಮ್ಮ ಒಕ್ಕಲುಗಳಿಂದ ಬೇಡಿ ಪಡೆಯುವುದು ಧಾನ್ಯ ಮತ್ತು ದನ ಕರುಗಳನ್ನು ಮಾತ್ರ. ಉತ್ತರ ಕರ್ನಾಟಕದಲ್ಲಿ ಈ ಅಲೆಮಾರಿ ಗುಂಪುಗಳು ತುಸು ಹೆಚ್ಚೇ ಇವೆ. ಅಲೆಮಾರಿತನ, ಭಿಕ್ಷೆ ಬೇಡುವುದು, ಚಿಪ್ಪೋಡಿನಲ್ಲಿಯ ಅವರು ಬರೆದ ವಂಶಾವಳಿಯೇ ಚರಿತ್ರೆಯ ನಿಜದ ಪಾಠಗಳೆಂದು ನಂಬುವುದು ಸರ್ವೇಸಾಮಾನ್ಯ. ಅಲೆಮಾರಿತನ ಅವರಿಗೆ ಒಂದು ರೀತಿಯಲ್ಲಿ ಒಪ್ಪಿತ ಸ್ಥಿತಿ. ಕುಲಕೋಂಡಾಡುವದು 'ಪರಂಪರೆಯ ಕಸಬು' ಆ ಕಾರಣದಿಂದ ಈ ಗುಂಪುಗಳಿಗೆ ಅದು ಪ್ರಿಯವಾದದ್ದು. ಅಲೆಮಾರಿತನ ಮತ್ತು ಭಿಕ್ಷೆ ಬೇಡುವುದನ್ನು ಇವರು ತಮ್ಮ ಅಭಿವೃದ್ಧಿಗೆ ಮತ್ತು ಸ್ವಾಭಿಮಾನಕ್ಕೆ ದಕ್ಕೆ ತರುತ್ತದೆ ಎಂದು ಭಾವಿಸುವುದೇ ಇಲ್ಲ. ಅವರ ಜೊತೆ ಅಲೆಮಾರಿತನ ಬಿಟ್ಟುಕೊಟ್ಟು ನೆಲೆನಿಲ್ಲುವ ಕುರಿತು ಚರ್ಚಿಸುತ್ತಿದ್ದಾಗ ಈ ಅಧ್ಯಯನಕಾರನನ್ನು ಈ ಅಲೆಮಾರಿ ಗುಂಪಿನ ಮುಖಂಡರು ಖಾರವಾಗಿ ತರಾಟೆಗೆ ತೆಗೆದುಕೊಂಡ ಪ್ರಸಂಗವೂ ನಡೆದು ಹೋಯಿತು. 'ಹೆಳವತನ' ಪರಂಪರೆಯಿಂದ ಬಂದ ಕಾರಣಕ್ಕೆ ಅವರಿಗೆ ಅದರ ಮೇಲೆ ಭಾವುಕವಾದ ಅವಲಂಬನೆ ಇದೆ. ಪುರಾಣದ ಕಥೆಗಳು, ವೃತ್ತಿಯ ಮೇಲಿನ ರೂಢಿಗತ ಅವಲಂಬನೆ ಇವೆಲ್ಲ ಅವರ ಅಲೆಮಾರಿತನವನ್ನು ಸಮರ್ಥಿಸಿಕೊಳ್ಳುವುದಕ್ಕೆ ಪೂರಕವಾಗಿಬಿಟ್ಟಿವೆ. ಹೆಳವರಲ್ಲದೆ ಅನೇಕ ಅಲೆಮಾರಿ ಸಮುದಾಯಗಳು, ಕುಲಕಸಬುಗಳನ್ನು ಬಿಟ್ಟು ಅಲೆಮಾರಿತನವನ್ನೂ ತೊರೆದು ನೆಲೆಸಿರುವ ತಮ್ಮದೇ ಸಮುದಾಯದ ಜನರನ್ನು ಈ ಅಲೆಮಾರಿಗಳು ಹೊರಗಿನವರಂತೆ ಪರಿಗಣಿಸುತ್ತಾರೆ.

ಈ ಮೇಲಿನ ಹೆಳವರ ಕುರಿತ ೧೪ ಪುರಾಣಗಳನ್ನು ಮತ್ತು ಈ ಎರಡು ಕಥೆಗಳನ್ನು ವಿಶ್ಲೇಷಿಸಿದರೆ ಹೆಳವರ ಮೂಲದ ಕುರಿತು ಕೆಲವು ಹೊಳಹುಗಳು ಸಿಗುತ್ತವೆ. ಈ ಎಲ್ಲ ಕಥೆಗಳಲ್ಲಿ ಹೆಳವರ ಮೂಲಪುರಷ ಹುಟ್ಟುತ್ತಲೇ ಕುಂಟನಾಗಿರುವುದು ಕಂಡು ಬರುತ್ತದೆ. ಮತ್ತು ದೇವಲೋಕದ ವ್ಯಕ್ತಿಯೊಬ್ಬ ಶಾಪಗ್ರಸ್ತನಾಗಿ ಭೂಲೋಕಕ್ಕೆ ಬಂದು ಹೆಳವ ವೃತ್ತಿಯನ್ನು ಆರಂಭಿಸಿದ ಸಂಗತಿ ಕೆಲವು ಕಥೆಗಳಲ್ಲಿ ವ್ಯಕ್ತವಾಗಿದೆ. ಕೆಲವು ಕಥೆಗಳಲ್ಲಿ ಹೆಳವರು ವಚನ ಚಳುವಳಿಯ ನಂತರದಲ್ಲಿ ಅಸ್ತಿತ್ವಕ್ಕೆ ಬಂದರು ಎಂಬ ಸಂಗತಿ ಗೊತ್ತಾಗುತ್ತದೆ.

**ವೈಕಲ್ಯದ ಶಾಪಗ್ರಸ್ತ ಹುಟ್ಟು**

ಇಂಡಿಯಾದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅಲೆಮಾರಿಗಳು ಸಹಜವಾಗಿಯೇ ಕೆಳಜಾತಿಯ ಸ್ಥಾನಮಾನ ಪಡೆದಿರುವುದು ನಮಗೆಲ್ಲ ಗೊತ್ತಿರುವ ಸಂಗತಿಯೇ ಆಗಿದೆ. ಆದರೆ ನೆಲೆನಿಂತು ನಿಶ್ಚಿತ ಆದಾಯದ ಮೂಲಗಳನ್ನು ಕಂಡು ಕೊಂಡಿರುವ ಕೆಳಜಾತಿಗಳಿಗೂ ಅಲೆಮಾರಿಗಳೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅನೇಕ ಭಿನ್ನತೆಗಳು ಇಂದಿಗೂ ಉಳಿದುಕೊಂಡು ಬಂದಿವೆ. ಈ ಅಲೆಮಾರಿಗಳ ಮೂಲವನ್ನು ಕಂಡುಕೊಳ್ಳುವ ಸಂದರ್ಭದಲ್ಲಿ ನಮಗೆ ಸಿಕ್ಕುವ ಆಕರಗಳೆಂದರೆ ಈ ಸಮುದಾಯಗಳೂ ಕಟ್ಟಿಕೊಂಡು ಬಂದ ಸೃಷ್ಟಿ ಪುರಾಣಗಳು. ಈ ಸೃಷ್ಟಿಪುರಾಣಗಳಲ್ಲಿ ಆಯಾ ಸಮುದಾಯಗಳು ರೂಪುಗೊಂಡ ಚಾರಿತ್ರಿಕ ಸಂದರ್ಭವು ದಾಖಲಾಗಿರುತ್ತದೆ. ಬಹುತೇಕ ಎಲ್ಲ ಅಲೆಮಾರಿಗಳ ಸೃಷ್ಟಿ ಪುರಾಣಗಳನ್ನು ಗಮನಿಸಿದರೆ, ಆಯಾ ಸಮುದಾಯಗಳ ಹುಟ್ಟು ಯವುದೋ ಪೌರಾಣಿಕ ವ್ಯಕ್ತಿಯ ಶಾಪದಿಂದ ಸಂಭವಿಸುತ್ತದೆ. ಇಲ್ಲವೆ ಹುಟ್ಟು ಅಂಗ ವೈಕಲ್ಯದಿಂದಲೇ ಒಂದು ಸಮುಧಾಯದ ಮೂಲ ಪುರುಷ ಜನಿಸುತ್ತನೆ. ಈ ಮೂಲಪುರಷ ಒಂದು ವಿಲಕ್ಷಣ ಚಾರಿತ್ರಿಕ ಅಥವಾ ಪೌರಾಣಿಕ ಸಂದರ್ಭದಲ್ಲಿ ಜನಿಸುತ್ತಾನೆ. ಈಗೆ ಜನಿಸುವ ವ್ಯಕ್ತಿ ತನ್ನ ಸಮುದಾಯದ ಒಟ್ಟಾರೆ ಸಾಮಾಜಿಕಾರ್ಥಿಕ ಚಟುವಟಿಕೆಗಳು ಚಾರಿತ್ರಿಕವಾಗಿ ರೂಪುಗೊಳ್ಳಲು ಒಟ್ಟಾರೆ ಸಾಮಾಜಿಕಾರ್ಥಿಕ ಚಟುವಟಿಕೆಳು ಚಾರಿತ್ರಿಕವಾಗಿ ರೂಪಗೊಳ್ಳಲು ಕಾರಣನಾಗುತ್ತಾನೆ. ಮತ್ತು ಆಸಮುದಾಯದ ಸಾಮಾಜಿಕಾರ್ಥಿಕ ಸ್ಥಿತಿಗತಿಗಳನ್ನು ಸಾಂಕೇತಿಕವಾಗಿ ಈತ ಪ್ರತಿನಿಧಿಸುತ್ತಾನೆ.

ಈ ಕಾರಣದಿಂದಾಗಿ, ಯಾವುದೋ ಕಾರಣದಿಂದ ಪ್ರಾಪ್ತವಾಗಿ ಬಿಡುವ ಶಾಪವು ಸಾಂಕೇತಿಕವಾಗಿ ಮಾತ್ರವಲ್ಲದೆ ಲೌಕಿಕ ಜಗತ್ತಿನಲ್ಲೂ ಈ ಸಮುದಾಯಗಳ ಸಾಮಾಜಿಕ ಆರ್ಥಿಕ ಚುಟುವಟಿಕೆಗಳನ್ನು ನಿರ್ಣಾಯಕವಾಗಿ ನಿಯಂತ್ರಿಸಿಬಿಡುತ್ತದೆ. ಹೀಗೆ ಸೃಷ್ಟಿಪುರಾಣಗಳನ್ನು ನಾವು ರಮ್ಯ ಜಗತ್ತುಗಳೆಂದು ಭಾವಿಸುತ್ತೇವೆ. ಆದರೆ ಆ ರಮ್ಯಜಗತ್ತುಗಳ ಒಳಗೂ ಅಲೆಮಾರಿಗಳು ಹುಟ್ಟು ವೈಕಲ್ಯದಿಂದ ಇಲ್ಲವೆ ಶಾಪದಿಂದ ಸಂಭವಿಸುತ್ತದೆ. ಈ ರಮ್ಯ ಜಗತ್ತುಗಳ ಒಳಗೆ ಈ ಸಮುದಾಯಗಳ ಬದುಕು ಛಿದ್ರಗೊಂಡೇ ದಾಖಲಾಗಿರುವುದನ್ನು ಕಾಣಬಹುದಾಗಿದೆ. ಯಾವುದೋ ಕಾಲದಲ್ಲಿ ಕಟ್ಟಿಕೊಂಡಿರಬಹುದಾದ ಸೃಷ್ಟಿಪುರಾಣಕ್ಕೂ ಅಲೆಮಾರಿಗಳ

ಇಂದಿನ ಸ್ಥಿತಿಗತಿಗಳಿಗೂ ಎಲ್ಲಿಂದೆಲ್ಲಿಯ ಸಂಬಂಧ ಎಂದು ಪ್ರಶ್ನಿಸಬಹುದು. ಅಲೆಮಾರಿಗಳ ಸದ್ಯ ಸ್ಥಿತಿಗೂ ಅವರು ಕಟ್ಟಿಕೊಂಡು ಬಂದಿರುವ ಸೃಷ್ಟಿಪರಾಣಗಳಲ್ಲಿನ ಅವುಗಳ ಹುಟ್ಟಿನ ಸಂಗತಿಗೂ ಸಾಂಕೇತಿಕ ಸಂಬಂಧವಿದೆ. ಈ ಕಾರಣದಿಂದಾಗಿ ಅವರ ಸೃಷ್ಟಿ ಪುರಾನಗಳು ಅಲೆಮಾರಿಗಳ ಸಾಮಾಜಿಕ ಚರಿತ್ರೆಯನ್ನು ರೂಪಿಸುವಾಗ ಮಹತ್ವದ ಪಾತ್ರ ವಹಿಸುತ್ತವೆ.

ಕರ್ನಾಟಕವನ್ನೂ ಸೇರಿದಂತೆ ದೇಶದ ಹಲವು ಅಲೇಮಾರಿಗಳ ಸೃಷ್ಟಿಪುರಾಣಗಳಲ್ಲಿ ಅಂಗವೈಕಲ್ಯದ ಮೂಲಪುರುಷ, ದೇವಲೋಕದಿಂದ ಶಾಪಗ್ರಸ್ತನಾಗಿ ಭೂಮಿಗೆ ಬರುವ ಮೂಲಪುರುಷ ಮತ್ತು ಭೂಮಿಗೆ ಬಂದ ಮೇಲೂ ಅನೇಕ ಕಾರಣಗಳಿಗೆ ತನ್ನ ಉತ್ಪಾದನೆಯ ಮೂಲಗಳನ್ನೇ ಕಳೆದುಕೊಂಡು ನಿರ್ಗತಿಕನಾಗಿ ಬಿಡುವ ಮೂಲಪುರಷರು ಸಿಗುವುದು ಸಾಮಾನ್ಯ. ಕರ್ನಾಟಕದ ನೇಕ ಅಲೆಮಾರಿ ಸಮುದಾಯಗಳು ಈ ಬಗೆಯ ಆತ್ಮನಿಂದನೆಯ್ಲಲಿಯತೇ ತಮ್ಮ ಸೃಷ್ಟಿಪುರಾಣಗಳನ್ನು ಕಟ್ಟಿಕೊಂಡಿವೆ. ಇಲ್ಲವೆ ಇಂತಹ ಸೃಷ್ಟಿಪುರಾಣಗಳನ್ನು ಕಟ್ಟಿಕೊಳ್ಳುವಂತೆ ಈ ಶ್ರೇಣೀಕೃತ ಸಮಾಜ ಅವರನ್ನು ಒತ್ತಾಯಿಸಿದೆ. ಶಿವನ ಸೇವೆಯನ್ನು ಮಾಡಲೆಂದೇ ಸುಡುಗಾಡು ಸಿದ್ಧರು. ತಮ್ಮ ಕೃಷಿ ಭೂಮಿಯನ್ನು ಕಳೆದುಕೊಳ್ಳುವ ಶಾಪಕ್ಕೆ ಒಳಗಾಗುತ್ತಾರೆ. ಪಾರ್ವತಿ ಶಾಪದಿಂದ ಸುಡುಗಾಡು ಸಿದ್ಧರು ತಮ್ಮ ಆರ್ಥಿಕ ಮೂಲಗಳನ್ನು ಕಳೆದುಕೊಂಡು ಶಿವನ ಸೇವೆಗೆ ನಿಲ್ಲುತ್ತಾರೆ.[3] ವ್ಯಾಘ್ರಾಸುರನ ಸಂಹಾರಕ್ಕೆ ಭೂಮಿಗೆ ಇಳಿದು ಬಂದು, ವ್ಯಾಘ್ರಾಸುರನನ್ನು ಕೊಂದ ನಂದಿಯನ್ನು ಲೋಕದ ಕಲ್ಯಾಣಕ್ಕಾಗಿ ಊರುರಲ್ಲಿ ಆಡಿಸಲೆಂದೇ ಕವಲೆತ್ತಿನವರು ತಮ್ಮನ್ನು ಗುರುತಿಸಿಕೊಳ್ಳುತ್ತಾರೆ.[4] ತಮ್ಮ ಸಹೋದರರಾದ ಮಾರ್ವಾಡಿಗಳು ತಮ್ಮ ಪಾಲಿನ ಆಸ್ತಿಯನ್ನು ಅಪಹರಿಸಿದರೆಂದು ದಕ್ಷಿಣಕ್ಕೆ ವಲಸೆ ಬಂದ ಹಕ್ಕಿಪಿಕ್ಕಿಗಳು ಇಮದಿಗೂ ಅಲೆಮಾರಿಗಳಾಗಿದ್ದಾರೆ.[5]

ಇದೇ ರೀತಿ ಹೆಳವರ ಮೂಲ ಪುರುಷ ಅಂಗ ವೈಕಲ್ಯದಿಂದಲೇ ಜನಿಸುತ್ತಾನೆ. ಇಲ್ಲ, ಕೈಲಾಸದ ಒಕ್ಕಾಲು ಭೃಂಗೇಶ್ವರ ಪಾರ್ವತಿಯ ಶಾಪಕ್ಕೆ ಒಳಗಾಗಿ ಭೂಲೋಕಕ್ಕೆ ಬರುತ್ತಾನೆ. ಇವರ ಮೂಲ ಪುರುಷ ಬಹುತೇಕ ಪುರಾಣಗಳಲ್ಲಿ ಶಾಪ್ಗ್ರಸ್ತನಾಗುತ್ತಾನೆ. ಜೊತೆಗೆ ವೈಕಲ್ಯ, ಅದು ಹುಟ್ಟು ವೈಕಲ್ಯ ಹೆಳವರ ಮೂಲ ಪುರುಷನಿಗೆ ಇತ್ತು ಎಂದು ಬಹುತೇಕ ಎಲ್ಲ ಪುರಾಣಗಳು ಹೇಳುತ್ತವೆ. ಈ ಕಾರಣದಿಂದ ಹೆಳವರ ಮೂಲಪುರುಷ ಕುಂಟನಾಗಿದ್ದ ಎಂಬುದು ತಿಳಿದು ಬರುತ್ತದೆ.

ಮತ್ತೆ ಈ ಪರುಣಗಳನ್ನು ಪ್ರಮಾಣಬ್ಧ ದಾಖಲೆಗಳೆಂದು ನಂಬುವ ಪ್ರಶ್ನೆ ಹಲವರನ್ನು ಕಾಡಬಹುದು. ಶೋಷಿತ ಜನಾಂಗಗಳ ಚರಿತ್ರೆ ಯಾವತ್ತೂ ಅಸಹಾಯಕತೆಯ ಕುಲುಮೆಯಲ್ಲಿ, ತೀವ್ರವಾದ ಆತ್ಮದ್ವೇಷದಲ್ಲಿ ರೂಪುಗೊಳ್ಳುತ್ತದೆ. ತಮ್ಮ ಮೂಲ ಪುರುಷ ಕುಂಟನಾಗಿದ್ದ, ಅಲ್ಲದೆ ಆತ ಶಾಪಗ್ರಸ್ತಾನಾಗಿ ಭೂಮಿಗೆ ಬಂದವನು ಎಂದು ಆತ್ಮ ದ್ವೇಷದ ಪುರಾಣ ಕಟ್ಟಿಕೊಳ್ಳುವಷ್ಟು ದುಡಿವ ವರ್ಗಗಳು ಅಸಹಾಯಕವಾಗಿವೆ. ಇಲ್ಲಿ ಹೆಳವರ ಮೂಲ ಪುರುಷನನ್ನು ಶಪಿಸುವುದಾಗಲಿ, ಅಂಗವೈಕಲ್ಯದಿಂದ ಅವನನ್ನು ಸೃಷ್ಟಿಸುವುದಾಗಲಿ ದೇವತೆಗಳೆ. ಅಂದರೆ ಮೇಲಿನ ಜನ, ಮೇಲಿನ ಜನರೆಂದರೆ ಆಳುವವರು, ಅಪ್ಪಣೆ ಜಾರಿ ಮಾಡುವವರು ಮತ್ತು ದುಡಿಸಿಕೊಳ್ಳುವವರು. ಈ ಕಾರಣದಿಂದ ಸೃಷ್ಟಿ ಪುರಾನಗಳು ಕೇವಲ 'ಕ್ಷುದ್ರ' ರಚನೆಗಳಲ್ಲದ. ಅವು ಕೆಳಜಾತಿಗಳ ಆತ್ಮದ್ವೇಷವನ್ನು ಆಂತರ್ಯದಲ್ಲಿಟ್ಟುಕೊಂಡ ತಪ್ತ ಜ್ವಾಲಾಮುಖಿಗಳು. ಇದರಿಂದಾಗಿ ಸೃಷ್ಟಿ ಪುರಾಣಗಳನ್ನು ನಾವು ಆಯಾ ಸಮುದಾಯಗಳ ಆತ್ಮ ಕಥೆಗಳೆಂದೇ ಭಾವಿಸಬೇಕಾಗುತ್ತದೆ. 'ಈ ಸೃಷ್ಟಿ ಪುರಾಣಗಳ ಮೂಲಕ ತಮ್ ಜಾತಿ ಅನುಸರಿಸಿಕೊಂಡು ಬಂದ ಆರ್ಥಿಕ ಚಟುವಟಿಕೆಗಳಿಗೆ ಇವರು ಒಂದು ಚರಿತ್ರೆಯ ಆಯಾಮವನ್ನು ಕಲ್ಪಿಸುತ್ತಾರೆ.[6] ಕಾರಣಈ ದೇಶದ ಚರಿತ್ರೆಯಲ್ಲಿ ಆಳುವವರಿಮದ ಈ ಅಲೆಮಾರಿಗಳು ತಮ್ಮ ಆರ್ಥಿಕ ಮೂಲಗಳನ್ನು ಕಳೆದುಕೊಳ್ಳುತ್ತಾ ಬಂದಿದ್ದಾರೆ. ನಿಶ್ಚಿತ ಆರ್ಥಿಕ ಮೂಲವನ್ನು ಕಳೆದುಕೊಂಡವನು ಪುರಾಣಗಳಲ್ಲಿ ಸಾಂಕೇತಿಕವಾಗಿ ಸಾಧ್ಯವಾಗದೆ ಆತ್ಮ ದ್ವೇಷದಲ್ಲಿ ನಲುಗುತ್ತಲೇ ಬುದುಕುತ್ತಾನೆ. ಕರ್ಮಸಿದ್ಧಾಂತವನ್ನು ಗಾಢವಾಗಿ ಪ್ರತಿಪಾದಿಸುವ ಭಾರತದಲ್ಲಿ 'ಪೂರ್ವಜನ್ಮದ' ಶಾಪದಿಂದ ಈ ಜನ್ಮದಲ್ಲಿ ನಿರ್ಗತಿಕನೆಂದು ಬದುಕಬೇಕಾದ ಸ್ಥಿತಿಯನ್ನು ಅನುಭವಿಸುತ್ತ ಆತ್ಮ ಮರುಕದಲ್ಲಿಯೇ ಬದುಕನ್ನೂ ಕಳೆಯುತ್ತಾನೆ.

ಹೀಗಾಗಿ ಹೆಳವ ಸಮುದಾಯಕ್ಕೆ 'ಹೆಳವ' ಎಂಬ ಹೆಸರು ಯಾಕಾಗಿ ಬಂದಿತು ಎಂದು ವಂಶಾವಳಿಗಳನ್ನು 'ಹೇಳುವ' ವೃತ್ತಿಯಿಂದ 'ಹೆಳವ' ಎಂಬ ಹೆಸರು ಬಂತು ಎಂಬುದಕ್ಕಿಂತ ಅವರ ಮೂಲ ಪುರಷ ಅಂಗವಿಕಲನಾಗಿದ್ದ ಕಾರಣಕ್ಕಾಗಿ ಅವರಿಗೆ ಈ ಹೆಸರು ಬಂದಿದೆ ಎಂದು ತೀರ್ಮಾನಕ್ಕೆ ಬರುವುದು ಹೆಚ್ಚು ಸೂಕ್ತ ಎಂದು ಕಾಣುತ್ತದೆ. 'ಹೇಳುವ' ಎಂಬ ಪದ ವಿರೂಪಗೊಂಡು 'ಹೆಳವ' ಎಂಬ

ಪದ ರೂಪಗೊಂಡಿತು ಎನ್ನುವುದು ತೀರಾ ಸಹಜ ತೀರ್ಮಾನದಂತೆ ಕಾಣುವುದೇ ಇಲ್ಲ. ಶಬ್ದನಿಷ್ಪತ್ತಿಶಾಸ್ತ್ರದ ಈ ವಿವರಣೆಯು, ಸ್ವತಃ ಹೆಳವ ಸಮುದಾಯ ಕಟ್ಟಿಕೊಂಡು ಬಂದ ಸೃಷ್ಟಿ ಪುರಾಣಗಳನ್ನೇ ಬದಿಗೆ ಸರಿಸಿ ಬಿಡುತ್ತದೆ. ಮತ್ತು ಶಬ್ದನಿಷ್ಪತ್ತಿಶಾಸ್ತ್ರದ ಮೂಲಕವೇ ಒಂದು ಸಮುದಾಯದ ಹೆಸರಿನ ಮೂಲವನ್ನು ಕಂಡುಕೊಳ್ಳುವುದು ಒಂದು ಬಗೆಯಲ್ಲಿ ಬರೀ ಶೈಕ್ಷಣಿಕ ಕಸರತ್ತಿನಂತೆ ಮಾತ್ರ ಕಾಣುತ್ತದೆ. ಈ ಕಾರಣದಿಂದ ಅಂಗವಿಕಲಾನಾದ ವ್ಯಕ್ತಿ ಇವರ ಮೂಲಪುರುಷನಾಗಿದ್ದ ಕಾರಣಕ್ಕಾಗಿ ಈ ಸಮುದಾಯಕ್ಕೆ 'ಹೆಳವ' ಎಂಬ ಹೆಸರು ಬಂದಿರಬೇಕು ಎಂದು ತೀರ್ಮಾನಿಸುವುದು ಸೂಕ್ತ.

[1] ರಾಜಶೇಖರ್ಪಿಕೆ, ಹೆಳವರು, ಪು೨೭೩, ೧೯೮೦

[2] ನಿಂಗಣ್ಣಸಣ್ಣಕ್ಕಿ, ಹೆಳವರು, ಪು೨೦, ೧೯೮೦

[3] ಖಂಡೋಬಪಿಕೆ, ಸುಡುಗಾಡುಸಿದ್ಧರಸಂಸ್ಕೃತಿ, ೧೯೯೩

[4] ಲಕ್ಷ್ಮೆಎಂಎಸ್, ಕವಲೆತ್ತಿನವರು, ೨೦೦೦

[5] ರಾಜಪ್ಪದಳವಾಯಿ, ಹಕ್ಕಿಪಿಕ್ಕಿಯರಸಂಸ್ಕೃತಿ, ೧೯೯೩

[6] ಪ್ರಭಾಕರಎಎಸ್, ಅಲೆಮಾರಿಗಳಶಾಪಗ್ರಸ್ತಪಯಣ, ಪು೧೦೨, ೨೦೦೫

## ૩. ಹೆಳವ ಸಮುದಾಯದ ಸಾಮಾಜಿಕತೆ

### ಪೀಠಿಕೆ

ಹೆಳವರು ಇಂದು ಶುದ್ಧಾಂಗವಾಗಿ ಅಲೆಮಾರಿಗಳೇನಲ್ಲ. ಆದರೆ ಅಲೆಮಾರಿಗಳಾಗಿದ್ದವರು. ಮತ್ತು ಈವತ್ತಿಗೂ ಈ ಸಮುದಾಯದ ಹಲವು ಗುಂಪುಗಳು ಅಲೆಮಾರಿಗಳಾಗಿ ಬದುಕುತ್ತಿವೆ. ಇಂಡಿಯಾದ ಬಹುತೇಕ ಅಲೆಮಾರಿಗಳು ಈ ದೇಶದ ಶ್ರೇಣಿಕೃತ ವ್ಯವಸ್ಥೆಯ ಕಾರಣಕ್ಕಾಗಿ ರೂಪುಗೊಂಡವರು. ಭಾರತದ ಸಮಾಜದ ಇಂತಹುದ್ದೇ ಕಾಲಘಟ್ಟದಲ್ಲಿ ಅಲೆಮಾರಿಗಳು ಸೃಷ್ಟಿಯಾದರು ಎಂದು ಹೇಳಲಾಗುವುದಿಲ್ಲ. ಭಾರತದ ಸಾಮಾಜಿಕ ವ್ಯವಸ್ಥೆ ಎಷ್ಟು ಸಂಕೀರ್ಣವೋ, ಆ ವ್ಯವಸ್ಥೆಯ ಅಂತರ್ಗತ ಭಾಗವಾಗಿರುವ ಅಲೆಮಾರಿಗಳು ರೂಪುಗೊಳ್ಳುವುದಕ್ಕೆ ಕಾರಣವಾಗಿರುವ ಸಾಮಾಜಿಕ ಆರ್ಥಿಕ ಸಂಗತಿಗಳೂ ಸಹ ಅಷ್ಟೇ ಸಂಕೀರ್ಣವಾಗಿವೆ. ಶ್ರೇಣೀಕರಣದ ಕಾರಣಕ್ಕಾಗಿ ಇಂಡಿಯಾದಲ್ಲಿ ಬದುಕುತ್ತಿರುವ ದುಡಿವ ಕೆಳಜಾತಿ ಸಮುದಾಯಗಳು ಯಾವ ಯಾವ ಹಂತಗಳನ್ನು ದಾಟಿ ಬಂದಿರುವರೋ ಆ ಎಲ್ಲ ಹಂತಗಳನ್ನು ಅಲೆಮಾರಿಗಳೂ ಹಾದು ಬಂದಿದ್ದಾರೆ. ಭಾರತದ ರಾಜಕೀಯಾರ್ಥಿಕ ಚಲನೆಗಳು ಇಲ್ಲಿನ ಉತ್ಪದನಾ ಸಂಬಂಧಗಳನ್ನು ಸ್ಪಷ್ಟವಾಗಿ ನಿಯಂತ್ರಿಸಿವೆ. ಈ ಕಾರಣದಿಂದಾಗಿ ಭಾರತದ ಸಮಾಜವು ಹಲವು ಸ್ತರಗಳಲ್ಲಿ ಛಿದ್ರಗೊಂಡಿದೆ. ಹೀಗಾಗಿ ಭಾರತದ ಸಮಾಜದ ಪ್ರಧಾನ ಲಕ್ಷಣವೆಂದರೆ ಜಾತಿವ್ಯವಸ್ಥೆ. ಜಾತಿ ವ್ಯವಸ್ಥೆಯ ಮುಖ್ಯ ಉದ್ದೇಶ ಈ ದೇಶದ ಸಮಾಜದ ಒಟ್ಟಾರೆಯ ರಾಜಕೀಯಾರ್ಥಿಕ ಸ್ಥಿತಿಯನ್ನು ಸಾಮಾಜಿಕ ಶ್ರೇಣೀಕರಣದ ಮೂಲಕ ಸಮರ್ಥಿಸುವುದು. ಈ ಶ್ರೇಣೀಕರಣ ಮತ್ತು ಜಾತಿ ವ್ಯವಸ್ಥೆ ದುಡಿವವರ ಮತ್ತು ದುಡಿಸಿಕೊಳ್ಳುವವರ ಮಧ್ಯೆ ಬಂದು ಅಸಹಜ ಸಾಮಾಜಿಕ ಸಂಬಂಧವಾಗಿ ಏರ್ಪಟ್ಟಿದೆ. ಈ ಕಾರಣದಿಂದಾಗಿ ಭಾರತದ ಶ್ರೇಣೀಕರಣವು ಜಗತ್ತಿನ ಎಲ್ಲ ತಾರತಮ್ಯ ವ್ಯವಸ್ಥೆಗಳಿಗಿಂತ ಹೆಚ್ಚು ಸಂಕೀರ್ಣವೂ ಮತ್ತು ಅಷ್ಟೇ ಕ್ರೂರ ವ್ಯವಸ್ಥೆಯಾಗಿದೆ.

ಭಾರತದಲ್ಲಿ ಒಂದು ಜಾತಿಯೆಂದರೆ, ಶ್ರಮ ವಿಭಜನೆಯ ಆಧಾರದಲ್ಲಿ ರೂಪುಗೊಂಡ ಒಂದು ಉತ್ಪಾದನಾ ಘಟಕ. ಪ್ರತಿಯೊಂದು ಜಾತಿ ಒಂದು ಸ್ವಯಂಪೂರ್ಣ ಉತ್ಪಾದನಾ ಘಟಕವಾಗಿ ತನ್ನ ಅಸ್ತಿತ್ವವನ್ನು ಸದಾ ಕಾಯ್ದುಕೊಳ್ಳುತ್ತಲೇ ಬಂದಿದೆ. ಜಾತಿಯೊಂದು ತನ್ನ ಆಚರಣೆ, ಲಾಂಛನ, ಭಾಷೆ ಇವುಗಳ ಮೂಲಕ ಭಾವನಾತ್ಮಕವಾಗಿ ತನ್ನ ಅಸ್ತಿತ್ವವನ್ನು ನಿಖರಗೊಳಿಸಿಕೊಳ್ಳುತ್ತಲ್ಲೇ ಬಂದಿದೆ.

ತಾನು ಅನುಸರಿಸುವ ಕಸುಬಿನಿಂದಾಗಿ ಒಂದು ಸಾಮಾಜಿಕ ಗುಂಪು ಸ್ವಯಂಪೂರ್ಣವಾಗಿ ಇನ್ನೊಂದು ಜಾತಿ ಸಮುದಾಯದಿಂದ ಅನೇಕ ಬಗೆಗಳಲ್ಲಿ ಭಿನ್ನವಾಗಿ ನಿಲ್ಲಲು ಯತ್ನಿಸುತ್ತದೆ. ಈ ಬಗೆಯ ಸ್ವಯಂಪೂರ್ಣತೆಂದು ಮತ್ತು ಅನನ್ಯತೆಯ ಕಾಳಜಿಗಳು ಸಮುದಾಯದ ಬದುಕಿನ ಒಟ್ಟಾರೆ ಚಲನಶೀಲತೆಯ ಭಾಗವಾಗಿರದೆ, ಈ ಶ್ರೇಣೀಕರಣದ ರಾಜಕೀಯ ಒತ್ತಡಗಳಿಂದಲೂ ರೂಪುಗೊಂಡಂತವುಗಳು. ಎಷ್ಟೋ ಸಲ ಅನನ್ಯತೆಯ ಕುರಿತ ಬಿಕ್ಕಟ್ಟು ಬಾಹ್ಯ ಜಗತ್ತಿನ ಒತ್ತಡಗಳ ಕಾರಣಕ್ಕೆ ಸಮುದಾಯಗಳನ್ನು ಕಾಡುತ್ತಲೇ ಇರುತ್ತದೆ. ಈ ಬಿಕ್ಕಟ್ಟಿನ ಕಾರಣಕ್ಕಾಗಿಯೇ ಭಾರತದ ಉತ್ಪಾದಕ ಶಕ್ತಿಗಳ ಸಾಮಾಜಿಕಾರ್ಥಿಕ ಸ್ಥಿತಿಗತಿಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಸಂಭವಿಸಲಿಲ್ಲ. ಕಾಲದಿಂದ ಕಾಲಕ್ಕೆ ಈ ದೇಶವನ್ನು ನಿಯಂತ್ರಿಸಿದ ಆಳುವ ವರ್ಗ ರೂಪಾಂತರಗೊಂಡಂತೆ ಇಲ್ಲಿನ ದುಡಿವ ವರ್ಗಗಳ ಜೀವನ ವಿಧಾನಗಳೂ ಬದಲಾಗುತ್ತಲೇ ಬಂದವು. ಆದರೆ ದುಡಿವ ವರ್ಗದ, ಕೆಳಜಾತಿಗಳ ರಾಜಕೀಯಾರ್ಥಿಕ ಬದುಕಲ್ಲಿ ಅಗಾಧ ಬದಲಾವಣೆಗಳು ಸಂಭವಿಸಲಿಲ್ಲ. ಈ ಕಾರಣದಿಂದ ಭಾರತದ ಕೆಳಜಾತಿಗಳು ತಮ್ಮ ಸಾಮಾಜಿಕ ಸ್ಥಿತಿಗತಿಗಳನ್ನು ಪರಂಪರೆಯ ಅವಶೇಷವೋ ಎಂಬತೆ ಅನಿವಾರ್ಯವಾಗಿ ಒಪ್ಪಿಕೊಂಡು ಬಂದಿವೆ ಅದರಲ್ಲಂತೂ ಅಲೆಮಾರಿಗಳು ಈ ದೇಶದ ಒಟ್ಟಾರೆ ಚರಿತ್ರೆಯ ಅನೂಹ್ಯ ಕಾಲಘಟ್ಟದಲ್ಲಿ ಬದುಕುತ್ತಿರುವಂತೆ ಭಾಸವಾಗುತ್ತಿದೆ.

ಸಾಮಾಜಿಕವಾಗಿ ಅಲೆಮಾರಿಗಳು ಯಾವತ್ತೂ ಉನ್ನತೀಕರಣಗೊಳ್ಳದಂತೆ ನಿಯಂತ್ರಿಸಿದ್ದು ಅವರ ಆರ್ಥಿಕ ಅವಲಂಬನೆ. ಆರ್ಥಿಕವಾಗಿ ಯಾವತ್ತೂ ಪರಾವಲಂಬಿಯಾಗಿ ಬದುಕಿದ ಅಲೆಮಾರಿಗಳು ಸಾಮಾಜಿಕವಾಗಿ ಅವಶೇಷಗಳ ಮಾದರಿಯಲ್ಲಿ ಬದುಕಿ ಬಂದಿದ್ದಾರೆ. ಕಾರಣ ಈ ದೇಶದ ಆರ್ಥಿಕ ಚರಿತ್ರೆಯ ಒಟ್ಟಾರೆ ಬೆಳವಣಿಗೆಯ ಒಂದು ಹಂತದಲ್ಲಿ ಜಡವಾಗಿ ನೆಲೆಯೂರಿದ ಅಲೆಮಾರಿ ಸಮುದಾಯಗಳು, ಈ ದೇಶದ ಸಮಾಜದ ಬೆಳವಣಿಗೆಯ ಓಘದಲ್ಲಿ ಸುಲ್ಲಿತವಾಗಿ ಹರಿದು ಬದಲಾಗಲಿಲ್ಲ. ಇದರಿಂದಾಗಿ ಒಮ್ಮೊಮ್ಮೆ ಈ ಅಲೆಮಾರಿಗಳು ಎಷ್ಟೋ ಶತಮಾನಗಳ ಹಿಂದೆ ವಿಕಾಸವಾಗದ ಹಂತದಲ್ಲಿಯೇ ಬದುಕುತ್ತಿದ್ದಾರೆ ಎಂದೆನ್ನಿಸಿಬಿಡುತ್ತದೆ. ಒಂದು ನಿಶ್ಚಿತ ಸಮುದಾಯಕ್ಕೆ ಸಾಮಾಜಿಕ, ರಾಜಕೀಯ ಸಮಗ್ರತೆ ಮತ್ತು ಚಹರೆಗಳು, ರೂಪುಗೊಳ್ಳುವುದು ಆ ಸಮುದಾಯ ಯಾವ ಬಗೆಯ ಉತ್ಪಾದನೆಯಲ್ಲಿ ತೊಡಗಿದೆ ಎಂಬುದನ್ನು ಅವಲಂಬಿಸಿರುತ್ತದೆ. ಅಲೆಮಾರಿಗಳ ಒಟ್ಟಾರೆಯ ಆರ್ಥಿಕತೆಯು ಈ ದೇಶದ ಊಳಿಗಮಾನ್ಯ ಮತ್ತು ಅರೆ ಊಳಿಗಮಾನ್ಯ ವ್ಯವಸ್ಥೆಯನ್ನು ಇಡಿಯಾಗಿ ಅವಲಂಬಿಸಿದ ಕಾರಣಕ್ಕೆ ಈ ಸಮುದಾಯಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳಲ್ಲಿ ಭಾರೀ ಬದಲಾವಣೆಗಳು ಸಂಭವಿಸಲಿಲ್ಲ. ಹೆಳವರೂ ಸಹ ಈ ದೇಶದ ಆರ್ಥಿಕತೆಯ ಎಲ್ಲ ಹಂತಗಳನ್ನೂ ದಾಟಿ ಬಂದಿದರೂ ಸಹ ಅಲೆಮಾರಿಗಳಾಗಿ, ಅರೆ ಅಲೆಮಾರಿಗಳಾಗಿ ಬದುಕುತ್ತಿದ್ದಾರೆ. ಈ ಅಧ್ಯಯದಲ್ಲಿ ಹೆಳವ ಸಮುದಾಯದ ಸಾಮಾಜಿಕ ಸಂರಚನೆಯನ್ನು ಅವಲೋಕಿಸಲಾಗಿದೆ.

**ಹೆಳವ ಸಮಾಜದ ಚಾರಿತ್ರಿಕ ಬೆಳವಣಿಗೆ**

ಭಾರತದ ಸಮಾಜದಲ್ಲಿ ಜಾತಿಯೊಂದು ನಿಶ್ಚಿತ ಉತ್ಪಾದನಾ ಘಟಕ ಎಂದು ಭಾವಿಸಲಾಗಿದೆ. ಒಂದು ನಿರ್ದಿಷ್ಟ ಸಂಸ್ಕೃತಿ, ಭಾಷೆ, ಜೀವನ ವಿಧಾನ ರೂಪುಗೊಳ್ಳಲು ಸಮಾಜವೊಂದಕ್ಕೆ ಆರ್ಥಿಕ ಸಮಗ್ರತೆಯೊಂದು ಸಾಧ್ಯವಾಗಲೇಬೇಕು. ಆರ್ಥಿಕತೆಯು ಸಮಾಜವೊಂದರ ಸಮಗ್ರ ಚಟುವಟಿಕೆಗಳ ಕೇಂದ್ರಬಿಂದು. ಈ ವಾದವನ್ನು ಜಗತ್ತಿನ ಬಹುತೇಕ ಎಲ್ಲ ಸಮಾಜಶಾಸ್ತ್ರಜ್ಞರು ಅನುಮೋದಿಸುತ್ತಾರೆ. ಭಾರತದ ಸಮಾಜದ ಚಾರಿತ್ರಿಕ ರೂಪಾಂತರಗಳನ್ನು ಅಧ್ಯಯನ ಮಾಡಿದ ಸಮಾಜಶಾಸ್ತ್ರಜ್ಞ ಭಗವತ್ ಶರಣ್ ಉಪಾಧ್ಯಾಯ "ಗತಕಾಲದಲ್ಲಿ ಸ್ಪಷ್ಟವಾದ ಆರ್ಥಿಕ ಕಾರಣಗಳೇ ಸಾಮಾಜಿಕ ವ್ಯವಸ್ಥೆಯನ್ನು ಹುಟ್ಟು ಹಾಕಿದವು ಎಂಬುದರಲ್ಲಿ ಸಂದೇಹವಿಲ್ಲ"[1] ಎನ್ನುತ್ತಾರೆ. ಈ ಕಾರಣದಿಂದ ನಿರ್ದಿಷ್ಟ ಸಮುದಾಯದ ಜೀವನ ವಿಧಾನದ ಬೆಳವಣಿಗೆಗೆ ಆರ್ಥಿಕ ಅಂಶಗಳು ಕಾರಣವಾಗುತ್ತವೆ. ಈ ಅಂಶವನ್ನು ಸ್ಪಷ್ಟಪಡಿಸಿಕೊಳ್ಳಲು ಭಾರತದ ಸಮಾಜದ ಚಾರಿತ್ರಿಕ ಬೆಳವಣಿಗೆಯನ್ನು ಅವಲೋಕಿಸಬಹುದಾಗಿದೆ.

ಭಾರತದಲ್ಲಿ ವರ್ಣಗಳ ಕಾಲದಿಂದ ಆರಂಭವಾದ ಸಮಾಜದ ವಿಭಜನೆಯ ಪ್ರಹಸನವು ಇಂದಿಗೂ ತನ್ನ ವಿಕಟ ಅಟ್ಟಹಾಸವನ್ನು ತಣಿಸಿಕೊಂಡಿಲ್ಲ. ಯಾವುದೋ ಕಾಲಘಟ್ಟದಲ್ಲಿ ಉತ್ಪಾದನೆಯ ವಿಧಗಳನ್ನು ಆಧರಿಸಿ ಶ್ರೇಷ್ಠ ಮತ್ತು ಕನಿಷ್ಠ ಆರ್ಥಿಕ ರಚನೆಗಳು ರೂಪುಗೊಂಡವು. ಶ್ರೇಷ್ಠ ಸ್ಥಾನಮಾನಗಳು ವರ್ಣ ವ್ಯವಸ್ಥೆಯ ಮೇಲಿನ ಸಮುದಾಯಗಳಿಗೆ ಮಾತ್ರ ದಕ್ಕಿದವು. ಆದರೆ

ಕನಿಷ್ಠವೆನ್ನಿಸುವ ಆರ್ಥಿಕ ಚುಟುವಟಿಕೆಗಳು ಬಹುಸಂಖ್ಯಾತ ದುಡಿವ ವರ್ಗಗಳ ಮೇಲೆ ಹೇರಲ್ಪಟ್ಟವು. ಅಂಬೇಡ್ಕರ್ ಈ ಚರ್ಚೆಯನ್ನು ಹೀಗೆ ವಿವರಿಸಿದ್ದಾರೆ. "ಸಾಮಾಜಿಕ ಶ್ರಮ ವಿಭಜನೆಯ ಕಟ್ಟಳೆಗೆ ಒಳಪಟ್ಟು ಉಳಿದ ವರ್ಗಗಳು ತಾರತಮ್ಯಗಳಿಗೆ ಒಳಗಾದವು. ಕೆಲವು ದೊಡ್ಡವಾದವು. ಉಳಿದವು ಸಣ್ಣಪುಟ್ಟ ಉಳಿದ ವರ್ಗಗಳು ತಾರತಮ್ಯಗಳಿಗೆ ಒಳಗಾದವು. ಕೆಲವು ದೊಡ್ಡವಾದವು. ಉಳಿದವು ಸಣ್ಣಪುಟ್ಟ ಗುಂಪುಗಳಾದವು. ವೈಶ್ಯ ಮತ್ತು ಶೂದ್ರ ವರ್ಗಗಳು ಮೂಲ ಜೀವ ದ್ರವ್ಯವಾಗಿದ್ದು ಇಂದಿನ ಅಸಂಖ್ಯಾತ ಜಾತಿಗಳಿಗೆ ಆಕರವಾದವು."[2]. ಒಟ್ಟಾರೆ ಸಮಾಜದ ಅಂತಃಸ್ಸತ್ವವಾದ ದುಡಿವ ವರ್ಗಗಳು ಆಳುವ ವರ್ಗದ ಅಟ್ಟಹಾಸಕ್ಕೆ, ಪರಮೋಚ್ಚ ಸಾಮಾಜಿಕ ಅಧಿಕಾರ ದಾಹಕ್ಕೆ ವಿಘಟಿತಗೊಂಡು ಜಾತಿಗಳಾದವು. ಕೇವಲ ಶ್ರಮ ವಿಭಜನೆಯ ಲೌಕಿಕ ಕಾರಣಕ್ಕೆ ವಿಭಜನೆಗೊಂಡ ಜಾತಿಗಳಿಗೆ ಅಲೌಕಿಕವೆನ್ನಿಸುವ, ಆಧ್ಯಾತ್ಮಿಕ ಸ್ತರದಲ್ಲಿ ಅವುಗಳನ್ನು ನ್ಯಾಯಬದ್ಧಗೊಳಿಸಲಾಯಿತು. ಶಾಸ್ತ್ರಗಳ ಮೂಲಕ, ಸಾಮಾಜಿಕ ಕಾನೂನುಗಳ ಮೂಲಕ ಜಾತಿಗಳೂ ಸಾಮಾಜಿಕವಾಗಿ ಸ್ವಯಂಪೂರ್ನಗೊಂಡವು. ಕೇವಲ ಜಾತಿಯೊಂದು ತನ್ನ ಅಸ್ತಿತ್ವದ ಕಾರಣವನ್ನು ಮುಖ್ಯವಾಗಿಸಿಕೊಂಡು ಈ ದೇಶದ ಪರಂಪರೆಯ ರಚನೆಗಳನ್ನು ಮೋಹಿಸಿತು ಈ ಕಾರಣಕ್ಕಾಗಿಯೇ ಜಾತಿಗಳು ತಮ್ಮ ಮಧ್ಯೆ ತೆಳುವಾದ ಬೇಲಿಗಳನ್ನೇ ಹೆಣೆದುಕೊಂಡವು. ದುರಂತವೆಂದರೆ, ಜಾತಿಯೊಂದು ಅಂತರಿಕವಾಗಿ ತನ್ನನ್ನು ತಾನೇ ಶ್ರೇಣಿಕರಣಕ್ಕೊಳಪಡಿಸಿಕೊಂಡಿತು. ಈ ಕಾರಣಕ್ಕಾಗಿ ಜಾತಿಯ ಒಳಗೇ ಶ್ರೇಷ್ಠ, ಕನಿಷ್ಠ ವೈರುಧ್ಯಗಳೂ ಬೆಳೆದು ನಿತಂವು. ಒಟ್ಟಾರೆಯಾಗಿ ಭಾರತದ ಜಾತಿ ಶ್ರೇಣೀಕರಣವು ಒಂದು ಅಸಹಜ ಸಾಮಾಜಿಕ ಸಂರಚನೆಯಗಿ ರೂಪುಗೊಂಡಿತು. ಮುಂದೆ ಈ ಸಂರಚನೆಯೇ ಕಾಲಕಾಲಕ್ಕೆ ವಿರಾಟ್ ನ್ಯಾಯಬದ್ಧ ಅಸ್ತಿತ್ವವನ್ನು ಪಡೆದುಕೊಂಡು ಬಿಟ್ಟಿತು.

ಇದರಿಂದಾಗಿ, ಭಾರತದ ಆರ್ಥಿಕ ರಂಗದಲ್ಲಾದ ಒಟ್ಟಾರೆ ಬದಲಾವಣೆಗಳಿಗೆ ಅನುಗುಣವಾಗಿ ಇಲ್ಲಿನ ಸಮಾಜದಲ್ಲಿ ಅನೇಕ ರೂಪಾಂತರಗಳು ಸಂಭವಿಸಿದವು. ಭಾರತದ ಆರ್ಥಿಕತೆ ಹೆಚ್ಚು ಹೆಚ್ಚು ಸಂಕೀರ್ಣಗೊಂಡಂತೆಲ್ಲ ಇಲ್ಲಿನ ಸಾಮಾಜಿಕ ರಚನೆಗಳೂ ಸಂಕೀರ್ಣಗೊಳ್ಳುತ್ತ ಹೋದವು. ಕಾಲ ಕಾಲಕ್ಕೆ ಶೋಷಕ ಮತ್ತು ಶೋಷಿತರ ಪಾತ್ರಗಳು ಬದಲಾಗುತ್ತ ಹೋದರೂ ಸಹ, ಅದೊಂದು ಕ್ಷಣಿಕ ಮೇಲಾಟವಾಗಿ ಕೊನೆಗೊಂಡಿತು. ಈ ದೇಶದ ಸಾಮಾಜಿಕ ಕಾನೂನುಗಳು ಮಾತ್ರ ದುಡಿವ ವರ್ಗ ಮತ್ತು ಮಹಿಳೆಯ ವಿಷಯದಲ್ಲಿ ಮಾತ್ರ ಕ್ರೂರವಾಗುತಲೇ ಹೋದವು. ಭಾರತದ ಒಟ್ಟಾರೆಯ ಆರ್ಥಿಕ ರೂಪಾಂತರಗಳು ದುಡಿವ ವರ್ಗಗಳು ಬದುಕಲ್ಲಿ ಹಿಂಸೆಯನ್ನು ಧಾರಾಳವಾಗಿ ಸಂಚಯಿಸಿ ವಿಜಯದ ನಗು ನಕ್ಕವು. ಈ ಆರ್ಥಿಕ ರೂಪಾಂತರಗಳು ನಿಶ್ಚಿತವಾಗಿ ದುಡಿವ ವರ್ಗಗಳನ್ನು ಹಿಂಸಿಸಿ ಪಶುಗಳು ಕಿತ್ತು ತಿಂದವು. ಭಾರತದ ಸಮಾಜದ ಚಾರಿತ್ರಿಕ ಬೆಳವಣಿಗೆಯನ್ನು ಸಾಮಾಜಶಾಸ್ತ್ರಜ್ಞರು ಅನೇಕ ಬಗೆಗಳಲ್ಲಿ ವಿಮಗಡಿಸುತ್ತಾರೆ. ಧರ್ಮಗಳ ಬೆಳವಣಿಗೆಯ ಆಧಾರದಲ್ಲಿ, ವೇದಗಳ ಕಾಲ, ಬೌದ್ಧರಕಾಲ, ಜೈನಧರ್ಮ, ವೈಷ್ಣವ ಧರ್ಮ ಹೀಗೆ ಆಯಾ ಕಾಲ ಘಟ್ಟದಲ್ಲಿ ಧರ್ಮಗಳು ಸಮಾಜದ ಮೇಲೆ ಸಾಧಿಸಿದ ಹಿಡಿತವನ್ನು ಆಧರಿಸಿ ಸಾಮಾಜಿಕ ಚರಿತೆಯನ್ನು ರೂಪಿಸುವ ಕ್ರಮವನ್ನು ಕೆಲವರು ಅನುಸರಿಸುತ್ತರೆ. ಇನ್ನು ಕೆಲವರು ಗುಪ್ತರಯುಗ, ಮೌರ್ಯರ ಯುಗ, ಶಾತವಾಹನರ ಯುಗ ಎಂದು ರಾಜರ ಆಳ್ವಿಕೆಯ ಆಧಾರದ ಮೇಲೆ ಈ ಸಮಾಜದ ಚಾರಿತ್ರಿ ಬೆಳವಣಿಗೆಯನ್ನು ಗುರುತಿಸಲು ಯತ್ನಿಸುತ್ತಾರೆ. ಆದರೆ ಮಾರ್ಕ್ಸ್‌ವಾದಿ ಅಧ್ಯಯನಕಾರರು ಸಮಾಜದ ಉತ್ಪಾದನೆಯ ವಿಧಾನದ ಆಧಾರದ ಮೇಲೆ ಅದರ ಚಾರತ್ರಿಕ ಬೆಳವಣಿಗೆಯನ್ನು ಅಧ್ಯಯನ ಮಾಡುತ್ತಾರೆ. ಒಂದು ಕಾಲಘಟ್ಟದ ಉತ್ಪಾದನಾ ವಿಧಾನವು ಆ ಕಾಲಘಟ್ಟದ ಉತ್ಪಾದನಾ ಸಂಬಂಧಗಳನ್ನು ಪ್ರಭಾವಿಸುತ್ತದೆ ಎಂಬ ಸಿದ್ಧಾಂತದ ಮೇಲೆ ಸಮಾಜದ ಚರಿತ್ರೆಯನ್ನು ಗ್ರಹಿಸಲು ಪ್ರಯತ್ನಿಸಲಾಗುತ್ತದೆ. ಈ ಕಾರಣದಿಂದ ಭಾರತದ ಸಮಾಜವನ್ನು,

೧. ಆದಿಮ ಸಮತಾವಾದಿ ಸಮಾಜ

೨. ರಾಜಶಾಹಿ ಯುಗ

೩. ಆರಂಭದ ಊಳಿಗಮಾನ್ಯ ಕಾಲ

೪. ಮಧ್ಯಯುಗೀನ ಊಳಿಗಮಾನ್ಯ ಕಾಲ

೫. ಸಾಮಂತಶಾಹಿ ಅಥವಾ ಅರೆ ಊಳಿಗಮಾನ್ಯ ಕಾಲ

೬. ವಸಾಹತು ಕಾಲಘಟ್ಟ

ಎಂದು ವಿಂಗಡಿಸಲಾಗುತ್ತದೆ. ಕೆಲವು ಸಲ ಈ ವಿಂಗಡನೆಯು ಸರಳವೂ ಮತ್ತು ಸಂಕೀರ್ಣವೂ ಆಗಿ ಕಾಣುತ್ತದೆ. ಅಲ್ಲದೆ ಸಮಾಜದ ಬೆಳವಣಿಗೆಯ ಹಂತಗಳನ್ನು ಸ್ಥೂಲವಾಗಿಯಾಗಲಿ, ನಿರ್ದಿಷ್ಟವಾಗಿಯಾಗಲಿ ವಿಂಗಡಿಸಲಾಗುವುದಿಲ್ಲ. ಆದರೆ ಸಾಮಾಜದ ಬೆಳವಣಿಗೆಗಳನ್ನು ಅಧ್ಯಯನ ಮಾಡುವ ಸಲುವಾಗಿ ಮೇಲಿನಂತೆ ಸರಳವಾಗಿ ವಿಂಗಡಿಸಬಹುದಾಗಿದೆ.

ಮೇಲಿನ ಆರು ಹಂತಗಳಲ್ಲಿ ಈ ದೇಶದ ದುಡಿವ ವರ್ಗ ಹಲವು ಬಗೆಯ ರೂಪಾಂತರಗಳಿಗೆ ಮುಖಾಮುಖಿಯಾಗುತ್ತ ಬಂದಿವೆ. ಈಗಾಗಲೇ ಹೇಳಿದಂತೆ ದುಡಿವ ವಿಭಜನಗೊಳ್ಳುತ್ತಾ ಹೋದವು. ಕೆಲವು ಜಾತಿಗಳು ಸಮಾಜದ ಉತ್ಪಾದನೆಯಲ್ಲಿ ಮುಖ್ಯ ಪಾತ್ರ ವಹಿಸಿದರೆ, ಇನ್ನು ಕೆಲವು ಜಾತಿಗಳು ಉತ್ಪಾದನೆಗೆ ಪೂರಕವಾಗುವ ಪೋಷಕ ವರ್ಗಗಳಾಗಿ ರೂಪುಗೊಂಡಿವು. ಕೃಷಿಯೆಂಬ ಪ್ರಧಾನ ಉತ್ಪಾದನೆಯನ್ನು ಪೋಷಿಸಲು, ಬಡಗಿ, ಕಮ್ಮಾರ, ಅಕ್ಕಸಾಲಿಗ, ಕುಂಬಾರ ಮುಂತಾದ ಕುಶಲಕರ್ಮಿ ಜಾತಿಗಳು ರೂಪುಗೊಂಡವು. ಹೀಗೆಯೇ ಸಮಾಜವನ್ನು ರಂಜಿಸುವ ಮನರಂಜಕವರ್ಗ ಮತ್ತು ಊಳಿಗಮಾನ್ಯ ಪ್ರಭುಗಳ ಆಶ್ರಯಿಸಿದ 'ಅನುತ್ಪಾದಕ' ಜಾತಿಗಳೂ ಹುಟ್ಟಿಕೊಂಡವು. ಮುಖ್ಯವಾಗಿ ಕುಶಲ ಕರ್ಮಿಗಳು ಮತ್ತು ಮನರಂಜಕ ಜಾತಿಗಳು ಮತ್ತು 'ಅನುತ್ಪಾದಕ' ಜಾತಿಗಳೆಲ್ಲ ಊಳಿಗಮಾನ್ಯ ಉತ್ಪದನಾ ವ್ಯವಸ್ಥೆಯನ್ನು ಅವಲಂಬಿಸಿಯೇ ಬದುಕಬೇಕಿತ್ತು. ಹೀಗೆ ಊಳಿಗಮಾನ್ಯ ವ್ಯವಸ್ಥೆಯನ್ನು ಒಪ್ಪಿಕೊಂಡ ಅದಕ್ಕೆ ಪೂರಕವಾಗುವ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಕೊಂಡ ಈ ಸಮುದಾಯಗಳು ಆರ್ಥಿಕವಾಗಿ ಸ್ವಯಂಪೂರ್ಣ ವಾಗಲಿಲ್ಲ. ಊಳಿಗಮಾನ್ಯ ಆರ್ಥಿಕತೆಯಲ್ಲಿ ಈ ಸಮುದಾಯಗಳು 'ಸೇವಕ ಸಮುದಾಯಗಳು' ಮತ್ತು 'ಅನುತ್ಪಾದಕ ಸಮುದಾಯಗಳು'. ಈ ಕಾರಣದಿಂದ ಊಳಿಗಮಾನ್ಯ ಆರ್ಥಿಕ ವ್ಯವಸ್ಥೆಯಲ್ಲಿ ಆದ ಬದಲಾವಣೆಗಳೆಲ್ಲ ಈ ವರ್ಗಗಳನ್ನು ಪ್ರಭಾವಿಸುತ್ತಿದ್ದವು. ಮತ್ತು ಯಾವಾಗ ಊಳಿಗಮಾನ್ಯ ವ್ಯವಸ್ಥೆಯು ಪಲ್ಲಟಗೊಂಡು ಆಧುನಿಕ ಉತ್ಪಾದನಾ ವ್ಯವಸ್ಥೆ ರೂಪಗೊಂಡಿತೋ ಅಂದಿನಿಂದ ಊಳಿಗಮಾನ್ಯ ವ್ಯವಸ್ಥೆಯನ್ನು ಅವಲಂಬಿಸಿದ್ದ ಸಮುದಾಯಗಳು ದಿಕ್ಕೆಟ್ಟು ಹೋದವು. ಈ ಸಮುದಾಯಗಳನ್ನು ಆರ್ಥಿಕವಾಗಿ ಪೋಷಿಸುತ್ತದ್ದ ಊಳಿಗಮಾನ್ಯತೆಯು ವಿಘಟನೆಗೊಂಡ ಮೇಲೆ ಕುಶಲಕರ್ಮಿಗಳು, ಮನರಂಜಕ ಸಮುದಾಯಗಳು ಮತ್ತು 'ಅನುತ್ಪಾದಕ' ಜಾತಿ ಸಮುದಾಯಗಳು ಅನಿವಾರ್ಯವಾಗಿ ತಮ್ಮ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳನ್ನು ಕಳೆದುಕೊಂಡವು.

ದಕ್ಷಿಣ ಭಾರತದ ಮಧ್ಯಕಾಲೀನ ಇತಿಹಾಸದಲ್ಲಿ ಬ್ರಾಹ್ಮಣ, ದೇವಾಲಯ ಮತ್ತು ಭೂಮಾಲಿಕ ತ್ರಿಕೂಟ ವ್ಯವಸ್ಥೆಯು ಕುಶಲಕರ್ಮಿಗಳನ್ನು ಮತ್ತು ಆಶ್ರತ ಸೇವಕ ಜಾತಿಗಳನ್ನು ಅತ್ಯಂತ ಹೀನಯವಾಗಿ ಶೋಷಣೆಗೊಳಪಡಿಸಿದ್ದವು. "ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ಕುಶಲಕರ್ಮಿ ವರ್ಗ ಮತ್ತು ಸೇವೆ ಮಾಡುವ ಉಳಿದ ಶೂದ್ರ ಜಾತಿಗಳು ಅನಿವಾರ್ಯವಾಗಿ ಬಿಟ್ಟಿ ಚಾಕರಿ ಮಾಡಬೇಕಿತ್ತು. ಈ ಬಿಟ್ಟಿ ಸೇವೆ ಸಾಮಾಜಿಕ ಕಟ್ಟಳೆಯ ಭಾಗವಾಗಿಯೇ ನ್ಯಾಯಬದ್ಧವಾಗಿತ್ತು. ಇದರಿಂದಾಗಿ ಈ ಎರಡೂ ವರ್ಗಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹೀನಾಯ ಶೋಷಣೆಗೆ ಒಳಪಟ್ಟವು"[3] ಎಂದು ಆರ್. ಎನ್. ನಂದಿಯವರು ವಿವರಿಸುತ್ತಾರೆ. ಈ ಹಂತದಲ್ಲಿಯೇ ಕರ್ನಾಟಕದಲ್ಲಿ ಕುಶಲಕರ್ಮಿ ಮತ್ತು ಕೆಳಜಾತಿ ಸಮುದಾಯಗಳ ಆಶಯಗಳ ಭಾಗವಾಗಿ ವಚನ ಚಳುವಳಿ ರೂಪುಗೊಂಡಿತು. ಆದರೆ ಸೀಮಿತ ಚೌಕಟ್ಟಿನ ಪ್ರತಿರೋಧದ ಕಾರಣಕ್ಕಾಗಿ ಮತ್ತು ಹಲವು ರಾಜಕೀಯ ಪಿತೂರಿಗಳ ಕಾರಣಕ್ಕಾಗಿ ಈ ಚಳುವಳಿ ದುರಂತದ ಅಂತ್ಯ ಕಂಡಿತು.

ಆದರೆ ಊಳಿಗಮಾನ್ಯ ಕಾಲಘಟ್ಟದಲ್ಲಿ ಈ ವರ್ಗಗಳ ಸೇವೆಯನ್ನು ನ್ಯಾಯಬದ್ಧಗೊಳಿಸಲಾಯಿತು. ಬ್ರಾಹ್ಮಣ ಮತ್ತು ದೇವಾಲಯಗಳ ಬಿಟ್ಟಿ ಚಾಕರಿಯ ಹೊರತಾಗಿ ಕುಶಲಕರ್ಮಿ ಮತ್ತು ಸೇವಕ ವರ್ಗವು ಭೂಮಾಲಿಕರನ್ನು ಅವಲಂಬಿಸಿತು. "ಈ ಕುಶಲಕರ್ಮಿಗಳ ಮತ್ತು ಸೇವಕ ವರ್ಗಗಳ ದುಡಿಮೆಗೆ ಮತ್ತು ಉತ್ಪಾದಿತ ವಸ್ತುಗಳಿಗೆ ಹಣದ ರೂಪದಲ್ಲಿ ಬೆಲೆ ನಿಗದಿ ಮಾಡಲಾಯಿತು. ಇಲ್ಲವೆ ಗೇಣಿ ಆಧಾರದಲ್ಲಿ ಭೂಮಾಲಿಕರು ತಮ್ಮ ಜಮೀನುಗಳನ್ನು ಈ ವರ್ಗಗಳಿಗೆ ಕೊಡಲಾರಂಭಿಸಿದರು. ಈ ಸಮುದಾಯಗಳು ಒಂದು ರೀತಿಯ ಜೀತದ ಕ್ರಮದಲ್ಲಿ ನಿರ್ದಿಷ್ಟಗೊಳ್ಳಲ್ಪಟ್ಟವು."[4] ಆದರೆ ಯಾವತ್ತು ಭೂಮಾಲಿಕ ವರ್ಗವು ತನ್ನ ಚಹರೆಗಳನ್ನು ಮತ್ತು ಆರ್ಥಿಕ ನಡೆಗಳನ್ನು ಬದಲಿಸುತ್ತಿತ್ತೋ ಆಗೆಲ್ಲ ಈ ಸಮುದಾಯಗಳು ವಿಚಲಿತಗೊಳ್ಳುತ್ತಿದ್ದವು. ಈ ಆರ್ಥಿಕ ಕಾರಣಕ್ಕಾಗಿಯೇ ಅಲೆಮಾರಿಗಳು ಭಾರತದ ಸಮಾಜದಲ್ಲಿ ರೂಪುಗೊಂಡರು. ಹೆಳವ ಸಮಾಜ ಇಂತಹ ಚಾರಿತ್ರಿಕ ಕಾಲಘಟ್ಟದಲ್ಲಿಯೇ ರೂಪುಗೊಂಡಿರಬೇಕು. ಜೊತೆಗೆ ಭೂಮಾಲಿಕ ಮತ್ತು ರಾಜಶಾಹಿ ವರ್ಗಗಳ ಸೇವೆಗೆಂದೇ ನಿಯುಕ್ತಗೊಂಡ ಕಾರಣಕ್ಕೆ ಹೆಳವರಂತಹ ಅನೇಕ ಅಲೆಮಾರಿ

ಸಮುದಾಯಗಳ ಸಮಾಜದಲ್ಲೂ ಊಳಿಗಮಾನ್ಯ ಗುಣ ಸಹಜವಾಗಿಯೇ ಸಂಚಯಿತಗೊಂಡಿದೆ. ಇವು ಊಳಿಗಮಾನ್ಯ ಸಾಮಾಜಿಕ ಮೌಲ್ಯಗಳನ್ನೇ ಅನುಸರಿಸಿಕೊಂಡು ಬಂದವು. ಇದರಿಂದಾಗಿ ಭಾರತದ ಕೆಳಜಾತಿ ಸಮುದಾಯಗಳು ತಮ್ಮ ಸ್ಮೃತಿಕೋಶದ ಒಳಗೆ ಎಂತಹುದೇ ಸಮಾನತೆಯ ಮತ್ತು ಜನತಾಂತ್ರಿಕ ಆಶಯಗಳನ್ನು ಹೊಂದಿದ್ದರೂ ಲೌಕಿಕದ ಬದುಕಲ್ಲಿ ಅವು ಊಳಿಗಮಾನ್ಯ ಸಮಾಜದ ಮೌಲ್ಯಗಳನ್ನು ಅಳವಡಿಸಿಕೊಂಡಿರುತ್ತವೆ. ಸಂಕೇತದ ಮಟ್ಟದಲ್ಲಿ ಆಚರಣೆಯ ರೂಪದಲ್ಲಿ ಈ ಸಮುದಾಯಗಳು ಆದಿಮ ಚಹರೆಗಳನ್ನು ಪ್ರಕಟಿಸುವುದನ್ನು ಬಿಟ್ಟರೆ, ನಿತ್ಯದ, ಬದುಕಲ್ಲಿ ಸಮುದಾಯಗಳು ಆದಿಮ ಚಹರೆಗಳನ್ನು ಪ್ರಕಟಿಸುವುದನ್ನು ಬಿಟ್ಟರೆ, ನಿತ್ಯದ ಬದುಕಲ್ಲಿ ತಮ್ಮನ್ನು ಶೋಷಣೆ ಮಾಡಿದ ಭೂಮಾಲಿಕ ವ್ಯವಸ್ಥೆಯ ಆಶಯಗಳನ್ನೇ ಪ್ರಕಟಿಸುತ್ತವೆ. ಈ ತರಹದ ಉದಾಹರಣೆಗಳನ್ನು ನೀವು ಹೆಳವರಲ್ಲಿ ಇಂದಿಗೂ ಕಾಣಬಹುದು.

ಹೆಳವರೂ ಸಹ ಈ ದೇಶದ ಎಲ್ಲ ಕೆಳಜಾತಿಗಳು ಅನುಸಂಧಾನ ಮಾಡಿದ ವಿವಿಧ ಸಾಮಾಜಿಕಾರ್ಥಿಕ ಸ್ವರಗಳನ್ನು ಹಾದು ಬಂದಿದಾರೆ. ಹೆಳವರು ಈ ದೇಶದ ಸಮಾಜ, ವರ್ಗ ಸಮಾಜವಾಗಿ ರೂಪುಗೊಂಡ ನಂತರದ ಕಾಲಘಟ್ಟದಲ್ಲಿ ಅಸ್ತಿತ್ವಕ್ಕೆ ಬಂದವರೆಂದು ಊಹಿಸಬಹುದಾಗಿದೆ. ಇವರು ಸೃಷ್ಟಿ ಪುರಾಣಗಳನ್ನು ಗಮನಿಸಿದರೆ, ಸಮಾಜದ ಮೂಲ ಘಟಕವಾದ ಕುಟುಂಬವು ಸ್ಪಷ್ಟವಾಗಿ ಅಸ್ತಿತ್ವಕ್ಕೆ ಬಂದಿರುವುದನ್ನು ಮತ್ತು ಊಳಿಗಮಾನ್ಯ ಕಾಲಘಟ್ಟದ ಸಮಾಜದ ಎಲ್ಲ ಲಕ್ಷಣಗಳನ್ನು ಇಲ್ಲಿ ಕಾಣಬಹುದಾಗಿದೆ. ಅಲ್ಲದೆ ಕಲ್ಯಾಣದ ಜೊತೆಗಿನ ಇವರ ಸಂಬಂಧವು ಸ್ಪಷ್ಟವಾಗಿ ಇವರನ್ನು ಊಳಿಗಮಾನ್ಯ ಕಾಲದ ಸಮಾಜದ ಸೃಷ್ಟಿಯೆಂದು ನಂಬಬಹುದಾಗಿದೆ. ಏಕೆಂದರೆ ಹೆಳವರ ಕುರಿತ ನಿರ್ದಿಷ್ಟ ಕಾಲಘಟ್ಟದ ಶಾಸನಗಳಾಗಿಲಿ, ಮಹಾಕಾವ್ಯಗಳಲ್ಲಿನ ಉಲ್ಲೇಖಗಳಾಗಲಿ ನಮಗೆ ಸಿಕ್ಕಿಲ್ಲ. ಇನ್ನು ಜನ್ನ ಕವಿಯ ಅನಂತನಾಥ ಪುರಾಣದಲ್ಲಿನ ಉಲ್ಲೇಖಗಳಾಗಲಿ ನಮಗೆ ಸಿಕ್ಕಲ್ಲ ಇನ್ನು ಜನ್ನ ಕವಿಯ ಅನಂತನಾಥ ಪುರಾಣದಲ್ಲಿನ ಉಲ್ಲೇಖವನ್ನು ಪವಾರ್ ಅವರು ನೀಡುತ್ತಾರೆ.[5] ಜನ್ನ ೧೩ನೇ ಶತಮಾನದ ಕವಿ. ಸೋಮನಾಥನ ಪಂಡಿತರಾಧ್ಯ ಚರಿತೆಯಲ್ಲಿನ ಉಲ್ಲೇಖವನ್ನು ಎಚ್. ಎಲ್. ನಾಗೇಗೌಡರು ನೀಡುತ್ತಾರೆ.[6] ಈ ಪಂಡಿತರಾಧ್ಯ ಚರಿತೆಯೂ ಸಹ ೧೩ ನೇ ಶತಮಾನದ ಕೃತಿಯಾದ್ದರಿಂದ ಹೆಳವರ ಕುರಿತ ಪ್ರಾಚೀನ ದಾಖಲೆಗಳೆಂದರೆ ಅವರ ಸೃಷ್ಟಿ ಪುರಾಣಗಳೆ. ಈ ಸೃಷ್ಟಿ ಪರಾಣಗಳ ಪ್ರಕಾರ ಹೆಳವರು ಊಳಿಗಮಾನ್ಯ ಕಾಲಘಟ್ಟದಲ್ಲಿ ಭೂಮಾಲಿಕ ವ್ಯವಸ್ಥೆಯನ್ನು ಆರ್ಥಿಕವಾಗಿ ಅವಲಂಬಿಸಿದ ಸಮುದಾಯವನಾಗಿ ರೂಪುಗೊಂಡಿರುವುದು ಸ್ಪಷ್ಟವಾಗುತ್ತದೆ.

ಈ ದೇಶದ ಸಮಾಜಗಳು ಅನೇಕ ರಾಜಕೀಯಾರ್ಥಿಕ ಮತ್ತು ಧಾರ್ಮಿಕ ಪ್ರಭಾವಗಳನ್ನು ಹಾದು ಬಂದು ಅನೇಕ ಬದಲಾವಣೆಗಳನ್ನು ಕಂಡಿವೆ. ಕೆಲವು ಸಮಾಜಗಳು ತಮ್ಮ ಚಹರೆಗಳನ್ನೇ ಕಳದುಕೊಂಡು ವಿಶ್ವಗ್ರಾಮದ ಸಮಗ್ರ ಸಮುದಾಯಗಳ ಮದ್ಯೆ ಸೇರಿ ಹೋಗಿವೆ. ಆದರೆ ಹೆಳವ ಸಮಾಜದಲ್ಲಿ ಬದಲಾವಣೆಗಳು ಸಂಭವಿಸಿದರೂ, ಪಾರಂಪರಿಕ ವೃತ್ತಿಯಲ್ಲಿ ಬದುಕುವ ಗುಂಪುಗಳು ಈ ಸಮುದಾಯದಲ್ಲಿ ಇನ್ನೂ ಇವೆ ಎಂಬುದೊಂದೇ ವಿಪರ್ಯಾಸ.

**೧. ಸಾಮಾಜಿಕ ಸಂರಚನೆ**

ಒಂದು ನಿರ್ದಿಷ್ಟ ಅಲೆಮಾರಿ ಸಮಾಜದ ಲಕ್ಷಣಗಳೆಲ್ಲವೂ ಹೆಳವರ ಸಮಾಜದಲ್ಲಿ ಅಂತರ್ಗತವಾಗಿವೆ. ಹೆಳವರು ಶುದ್ಧಾಂಗವಾಗಿ ಅಲೆಮಾರಿಗಳಾಗಿ ಉಳಿದುಕೊಂಡಿಲ್ಲ. ಈ ದೇಶವು ಹಾದು ಬಂದ ಅನೇಕ ರಾಜಕೀಯಾರ್ಥಿಕ ಮತ್ತು ದಾರ್ಮಿಕ ಪ್ರಭಾವಗಳನ್ನು ಎಲ್ಲ ಸಮುದಾಯಗಳಂತೆ ಈ ಸಮುದಾಯವೂ ಹಾದು ಬಂದು ತನ್ನಲ್ಲಿ ಅನೇಕ ಬದಲಾವಣೆಗಳನ್ನು ತಂದುಕೊಂಡಿದೆ. ನಿಶ್ಚಿತ ಆರ್ಥಿಕ ಮೂಲಗಳಿಲ್ಲದಿದ್ದರೂ ಚಾರಿತ್ರಿಕವಾಗಿ ಊಳಿಗಮಾನ್ಯ ವ್ಯವಸ್ಥೆಯನ್ನೇ ಅವಲಂಬಿಸಿ ಬದುಕಿದ ಕಾರಣಕ್ಕಾಗಿ ಈ ಸಮಾಜದಲ್ಲೂ ಊಳಿಗಮಾನ್ಯ ಮೌಲ್ಯಗಳು ಸಹಜವಾಗಿಯೇ ಮೇಳೈಸಿವೆ. ಕಾರಣ ಇದು ಪುರುಷ ಪ್ರಧಾನ ಸಮಾಜ. ಪುರುಷ ಕುಟುಂಬದ ಒಟ್ಟಾರೆ ನಿರ್ಣಯಗಳ ಕೇಂದ್ರಬಿಂದು. ಜಾತಿಯ ನಿಯಮಗಳೂ ಕಟ್ಟುನಿಟ್ಟಾಗಿವೆ. ಇಂದಿಗೂ ಕುಲಪಂಚಾಯ್ತಿಯು ನ್ಯಾಯ ನಿರ್ಣಯಗಳ ಸಂದರ್ಭದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಸ್ವಗೋತ್ರ ವಿವಾಹ ಮತ್ತು ವಿಧಿನಿಷೇಧಗಳು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿರುವುದರಿಂದಾಗಿ ಹೆಳವ ಸಮಾಜವು ತನ್ನ ಚಹರೆಗಳನ್ನು ಇನ್ನೂ ಉಳಿಸಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ಭಾರತದ ಎಲ್ಲ ಅಲೆಮಾರಿ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯಂತೆಯೇ ಹೆಳವರದೂ ಸಹ ಒಂದು ವಿಘಟಿತ ಸಮಾಜವಾಗಿದೆ. ಈ ಬಗೆಯ ವಿಘಟನೆಗೆ ಸಮುದಾಯಗಳ ಅಲೆಮಾರಿತನ ಮತ್ತು ಅಧಿಕಾರ ರಹಿತ ಸ್ಥಿತಿಗಳು ಕಾರಣವಾಗುತ್ತವೆ. ಯಾವ ಸಮುದಾಯಗಳಿಗೆ ಆರ್ಥಿಕ ರಂಗದಲ್ಲಿ ಪಾರಂಪರಿಕವಾಗಿ ಹಕ್ಕುಳಗ ಪ್ರಾಪ್ತವಾಗಿರುವುದಿಲ್ಲವೋ, ಯಾವ ಸಮುದಾಯಗಳು ಈ ದೇಶದ ಹೀನಾಯ ಶೋಷಣೆಗೆ ಒಳಗಾಗಿ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪರಾವಲಂಬಿಗಳಾಗಿ ಬದುಕಿ ಬಂದಿರುವವೋ ಆ ಎಲ್ಲ ಸಮಾಜಗಳು ಒಂದು ಅರ್ಥದಲ್ಲಿ ವಿಘಟಿತಗೊಂಡಿವೆ. ಒಂದು ರೀತಿಯಲ್ಲಿ ಭಗ್ನಗೊಂಡಿವೆ. ಈ ಭಗ್ನತೆಯು ಸಮುದಾಯದ ಚಹರೆಗಳನ್ನು ನಾಶ ಮಾಡುವಂತಹುದ್ದಲ್ಲ. ಈ ವಿಘಟನೆಯಲ್ಲಿಯೂ ಒಂದು ಬಗೆಯ ಸಾಹಿತ್ಯವಿದೆ. ಆದರೆ ಸಾಮಾಜಿಕ ಅಧಿಕಾರಗಳಿಲ್ಲದ ಸಮುದಾಯಗಳು ಸಹಜವಾಗಿಯೇ ಭಗ್ನಗೊಂಡು ವಿಘಟಿತವಾಗುತ್ತವೆ. ಇದಕ್ಕೆ ಹೆಳವರಲ್ಲಿಯ ಅನೇಕ ಉಪಪಂಗಡಗಳೇ ಸಾಕ್ಷಿ. ಜೊತೆಗೆ ಈ ವತ್ತಿನ ಉಪಪಂಗಡಗಳಲ್ಲಿ ಬದುಕುತ್ತಿರುವ ಸಮುದಾಯದ ಜನ ವರ್ತಮಾನದ ಕುರಿತು ಚಿಂತಿಸುತ್ತಿರುವುದನ್ನು ಗಮನಿಸಿದರೆ, ಒಂದೇ ಸಮುದಾಯದ ಒಳಿರುವ ಅನೇಕ ಅಭಿಪ್ರಾಯ ಬೇಧಗಳು ಮತ್ತು ಸಾಮಾಜದ ಚಹರೆಗಳ ಕುರಿತು ಅವರಿಗಿರುವ ಗ್ರಹಿಕೆಗಳು ಸ್ಪಷ್ಟವಾಗುತ್ತವೆ.

ಭಾರತದಲ್ಲಿ ಅಲೆಮಾರಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಪಿ. ಕೆ. ಮಿಶ್ರ ಅಲೆಮಾರಿಗಳನ್ನು ಪಾರಂಪರಿಕ ಭಾರತದ ಪ್ರತಿನಿಧಿಗಳೆಂದು ಕರೆಯುತ್ತಾರೆ.[7] ಹಿಂದೂ ಸಮಾಜದ ಪಳಯುಳಿಕೆಗಳನ್ನು ರಕ್ಷಿಸಿಕೊಂಡು ಬರುತ್ತಿರುವವರು ಎಂದು ಅಲೆಮಾರಿಗಳನ್ನು ಪರಿಗಣಿಸಲಾಗುತ್ತದೆ. ಆದರೆ ಯಾವ ಭಾರತದ, ಯವ ಪರಂಪರೆಯ ಪಳಯುಳಿಕೆಗಳನ್ನು ಅಲೆಮಾರಿಗಳು ಉಳಿಸಿಕೊಂಡು ಬರುತ್ತಿದ್ದಾರೆ? ಯಾಕಾಗಿ ಇವರೇ ಭಾರತದ ಪರಂಪರೆಯನ್ನು ರಕ್ಷಿಸಬೇಕು? ಎಂಬ ಪ್ರಶ್ನೆಗಳು ಈ ಚರ್ಚೆಗಳಲ್ಲಿ ಗೈರು ಹಾಜರಾಗುತ್ತವೆ.

ಮೊದಲೇ ಹೇಳಿದಂತೆ ಅಲೆಮಾರಿಗಳದು ಒಂದು ಬಗೆಯ ವಿಘಟಿತ ಸಮಾಜ. ಒಂದು ಕಾಲಘಟ್ಟದಲ್ಲಿ ಹೆಳವ ಸಮುದಾಯವು ಏಕ ಸ್ವರೂಪಿಯಾಗದ್ದಿರಬಹುದು. ಆದರೆ ಕಾಲಾನಂತರದಲ್ಲಿ ತಮ್ಮ ಅಲೆಮಾರಿತನದಿಂದ ಮತ್ತು ಭಿನ್ನ ಸಾಮಾಜಿಕಾರ್ಥಿಕ ಪ್ರಭಾವಗಳಿಂದ ಮತ್ತು ಹಲವು ಸಂದರ್ಭಗಳ ಅನಿವಾರ್ಯತೆಯ ಕಾರಣಗಳಿಗಾಗಿ ಹೆಳವರಲ್ಲಿ ಅನೇಕ ಪಂಗಡಗಳು ರೂಪಗೊಂಡಿರುವುದನ್ನು ಕಾಣಬಹುದಾಗಿದೆ. ಈ ಬಗೆಯ ಪಂಗಡಗಳು ಬಹುತೇಕ ಎಲ್ಲ ಅಲೆಮಾರಿಗಳಲ್ಲಿ ಇದೇ ಕಾರಣಕ್ಕಾಗಿ ರೂಪುಗೊಂಡಿವೆ.

**ಹೆಳವರ ಉಪ ಪಂಗಡಗಳು**

ಅಲೆಮಾರಿಗಳು ಬಹಳ ಸುಲಭವಾಗಿ ತಮ್ಮದಲ್ಲದ ಅಪರಿಚಿತ ಸಾಮಾಜಿಕ ಸಂದರ್ಭದ ಪ್ರಭಾವಗಳಿಗೆ ಬಹಳ ಬೇಗ ಪಕ್ಕಾಗುತ್ತಾರೆ. ಇದೊಂದು ಅನಿವಾರ್ಯದ ಸಾಮಾಜಿಕ ಪ್ರಕ್ರಿಯೆ. ಜೊತೆಗೆ ನಿಶ್ಚಿತ ಆರ್ಥಿಕ ಮೂಲಗಳಿಲ್ಲದ ಕಾರಣಕ್ಕೆ ಅಲೆಮಾರಿಗಳು ಅವಲಂಬಿಸುವ ಭಿನ್ನ ಆರ್ಥಿಕ ಚುಟುವಟಿಕೆಗಳು ಅವರ ಸಾಮಾಜಿಕ ಸ್ಥಾನಮಾನವನ್ನು ಬದಲಾಯಿಸುತ್ತಲೇ ಇರುತ್ತವೆ. ಈ ಕಾರಣದಿಂದಾಗಿ, ಅಲೆಮಾರಿಗಳಲ್ಲಿ ಸಹಜವಾಗಿಯೇ ಅನೇಕ ಉಪಪಂಗಡಗಳು ಸೃಷ್ಟಿಯಾಗುವುದು ಸಹಜ. ಹೆಳವರ ಸಮಾಜ ಒಂದು ಕಾಲಕ್ಕೆ ಒಂದೇ ಆರ್ಥಿಕ ಚುಟುವಟಿಕೆಯನ್ನು ಹೊಂದಿದ್ದ ಸಮಾಜವಾಗಿತ್ತು ಎನ್ನುವುದಕ್ಕೆ ಅವರ ಸೃಷ್ಟಿ ಪುರಾಣಗಳಲ್ಲಿಯೇ ಪುರಾವೆಗಳು ಸಿಕ್ಕುತ್ತವೆ. ವಂಶಾವಳಿಯನ್ನು ಹೇಳಿ ಭಿಕ್ಷೆ ಬೇಡುತ್ತಾ ಬದುಕುವುದು ಹೆಳವ ಸಮಾಜದ ಕುಲ ವೃತ್ತಿಯಾಗಿತ್ತು. ಪ್ರಾಯಶಃ ಆ ಕಾಲಘಟ್ಟದಲ್ಲಿ ಹೆಳವರ ಸಮಾಜದಲ್ಲಿ ಈಗಿರುವಂತೆ ಉಪ ಪಂಗಡಗಳು ಇದ್ದಿರಲಾರವು. ಆದರೆ ಈ ದೇಶದಲ್ಲಿ ಕಾಲದಿಂದ ಕಾಲಕ್ಕೆ ಬದಲಾದ ಆರ್ಥಿಕ ಚಟುವಟಿಕೆಗಳು ಆಳಿಸಿಕೊಳ್ಳಲ್ಪಡುವ ಸಮಾಜಗಳ ರೂಪಗಳನ್ನು ಬದಲಿಸುತ್ತಲೇ ಬಂದವು. ಏಕೆಂದರೆ ಯಾವ ಸಮುದಾಯ, ಯಾವ ಆರ್ಥಿಕತೆಯನ್ನು ಅವಲಂಬಿಸಿದೆ ಎನ್ನುವುದರ ಮೇಲೆ ಆ ಸಮಾಜದ ಲೌಕಿಕದ ರೂಪುರೇಷೆಗಳು ನಿರ್ಧಾರವಾಗುತ್ತಿದ್ದವು. ಅಲೆಮಾರಿಗಳು ಸಹಜವಾಗಿಯೇ ತಮಗೆ ಅನುಕೂಲವಾಗುವ ಸಾಂದರ್ಭಿಕ ಆರ್ಥಿಕ ಚಟುವಟಿಕೆಗಳನ್ನು ಅವಲಂಬಿಸುವುದು ಅನಿವಾರ್ಯವೂ ಆಗಿತ್ತು. ಈ ಕಾರಣದಿಂದ ಹೆಳವ ಸಮುದಾಯದಲ್ಲಿ ಭಿನ್ನ ವೃತ್ತಿಗಳಿಗನುತಗುಣವಾಗಿ ಅನೇಕ ಉಪಪಂಗಡಗಳಿನೆ. ಆ ಪಂಗಡಗಳ ಕುರಿತು ಈ ಭಾಗದಲ್ಲಿ ಚರ್ಚಿಸುವ ಅಗತ್ಯವಿದೆ.

ಎಚ್ ವಿ ನಂಜುಂಡಯ್ಯ ಮತ್ತು ಅನಂತ ಕೃಷ್ಣ ಅಯ್ಯರ್ ಹೆಳವರಲ್ಲಿ ಮುಖ್ಯವಾಗಿ ಎರಡು ಪಂಗಡಗಳನ್ನು ಗುರುತಿಸುತ್ತಾರೆ.

೧. ಗಂಟೆ ಹೆಳವರು

೨. ಬಸವನ ಹೆಳವರು ಅಥವಾ ಎತ್ತಿನ ಹೆಳವರು[8]

ನಿಜಾಮನ ಆಳಿಕೆಯ ಪ್ರದೇಶದ ಸಮುದಾಯಗಳ ಅಧ್ಯಯನ ಮಾಡಿದ ಸೈಯದ್ ಸಿರಾಜ್ ಉಲ್ ಹಸನ್ ರವರು ಹೆಳವರ ಪಂಗಡಗಳನ್ನು ಹೀಗೆ ಪಟ್ಟಿ ಮಾಡುತ್ತಾರೆ.

೧. ಗೊಲ್ಲ

೨. ತೆಲಗ ಅಥವಾ ಭಿಕ್ಷಾ

೩. ಗಂಟಾ

೪. ತುರುಕಾ

೫. ಸೊಗರು

೬. ಮಂಡ[9]

ಆರ್ ಗುಪ್ತಾ ಅವರು ಮೂರು ಉಪಪಂಗಡಗಳನ್ನು ಗುರುತಿಸುತ್ತಾರೆ.

೧. ಶಾಂತಿ ಹೆಳವ

೨. ಪಂಗಿ ಹೆಳವ

೩. ಎತ್ತಿನ ಹೆಳವ[10]

ಕೆ. ಎಸ್. ಸಿಂಗ್ ರವರು ಸಹ ಹೆಳವರ ಮೂರು ಪಂಗಡಗಳನ್ನು ಗುರುತಿಸುತ್ತಾರೆ.

೧. ಗಂಟಿ ಹೆಳವ

೨. ಪಂಗಿ ಹೆಳವ

೩. ಎತ್ತಿನ ಹೆಳವ[11]

ಬಿ. ಎಂ. ತೆಳಗಡಿಯವರು

೧. ಗಂಟೆ ಹೆಳವ

೨. ಎತ್ತಿನ ಹೆಳವ

೩. ಚಾಪೆ ಹೆಳವ ಎಂದು ಮೂರು ಪಂಗಡಗಳನ್ನು ಗುರುತಿಸುತ್ತಾರೆ.[12]

ನಿಂಗಣ್ಣ ಸಣ್ಣಕ್ಕಿಯರವರು ಹೆಳವರ ಉಪಪಂಗಡಗಳನ್ನು ಹೀಗೆ ಗುರುತಿಸುತ್ತಾರೆ.

೧. ಎತ್ತಿನ ಹೆಳವ ಅಥವಾ ವಸನ ಹೆಳವ (ಉತ್ತರ ಕರ್ನಾಟಕ)

೨. ಗಂಟೆ ಹೆಳವ (ದಕ್ಷಿಣ ಕರ್ನಾಟಕ).[13]

ಜೀ. ಶಂ. ಪರಮಶಿವಯ್ಯನವರು ಎರಡು ಉಪಪಂಗಡಗಳನ್ನು ಗುರುತಿಸುತ್ತಾರೆ.

೧. ಗಂಟೆ ಹೆಳವರು
೨. ಚಾಪೆ ಹೆಳವರು.[14]

ಎಚ್. ಎಲ್. ನಾಗೇಗೌಡರು ಈ ರೀತಿ ದಾಖಲಿಸುತ್ತಾರೆ.

೧. ಎತ್ತಿನ ಹೆಳವರು ಮತ್ತು ಬಸವನ ಹೆಳವರು (ಉತ್ತರ ಕರ್ನಾಟಕ)
೨. ಗಂಟೆ ಹೆಳವರು (ದಕ್ಷಿಣ ಕರ್ನಾಟಕ).[15]

ಶ್ರೀ ಹರಿಲಾಲ್ ಪವಾರ್ ಅವರು ವಿಸ್ತೃತ ಕ್ಷೇತ್ರಕಾರ್ಯದ ಮೂಲಕ ಹೆಳವರಲ್ಲಿನ ಅನೇಕ ಉಪಪಂಗಡಗಳನ್ನು ಹೀಗೆ ಗುರುತಿಸುತ್ತಾರೆ.

**ಪ್ರಮುಖ ಪಂಗಡಗಳು**

೧. ಎತ್ತಿನ ಹೆಳವರು (ಉತ್ತರ ಕರ್ನಾಟಕ)
೨. ಗಂಟೆ ಹೆಳವರು (ದ. ಕರ್ನಾಟಕ)
೩. ಚಾಪೆ ಹೆಳವರು (ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಶಿವಮೊಗ್ಗ)

**ಉಪ ಪಂಗಡಗಳು**

೧. ಹಂದಿ ಹೆಳವರು - ಬೀದರ್, ಗುಲ್ಬರ್ಗಾ, ಬಳ್ಳಾರಿ
೨. ದೂದಿ ಹೆಳವರು - ಬೀದರ್, ಗುಲ್ಬರ್ಗಾ, ಬಸವಕಲ್ಯಾಣ
೩. ಎತ್ತಿನೆಳವರು - ಬಳ್ಳಾರಿ, ರಾಯಚೂರು, ಗುಂತಕಲ್, ಅನಂತಪುರ, ಧಡೇಕರ್
೪. ಕೂಕಣಿ ಹೆಳವರು - ರಾಯಚೂರು, ಬಳ್ಳಾರಿ, ಕೊಟ್ಟೂರು, ಕೂಡ್ಲೀಗಿ
೫. ಮಂದಲ ಹೆಳವರು - ಮೈಸೂರು, ಬೆಂಗಳೂರು, ಕೋಲಾರ ಬಳ್ಳಾರಿ
೬. ಕಂಬಿ ಹೆಳವರು -
೭. ಅಡವಿ ಹೆಳವರು - ಗುಲ್ಬರ್ಗಾ
೮. ಊರ ಹೆಳವರು -
೯. ಸಾದು ಹೆಳವರು - ಚಿತ್ರದುರ್ಗ
೧೦. ಜಾತಿ ಹೆಳವರು -
೧೧. ತಂಬೂರಿ ಹೆಳವರು[16]

ಪ್ರಮುವಾಗಿ ಈ ಉಲ್ಲೇಖಗಳಿಂದ ತಿಳಿದು ಬರುವ ಸಂಗತಿ ಎಂದರೆ ಎತ್ತಿನ ಹೆಳವ, ಗಂಟೆ ಹೆಳವ ಮತ್ತು ಚಾಪೆ ಹೆಳವರನ್ನು ಬಹುತೇಕ ಎಲ್ಲ ವಿದ್ವಾಂಸರು ಗುರುತಿಸುವುದು. ಪ್ರಾಯಶಃ ಊಳಿಗಮಾನ್ಯ ಕಾಲಘಟ್ಟದ ನಂತರ ಹೆಳವರ ಸಮುದಾಯದ ವಲಸೆಗಳಿಂದ ಹಲವು ಉಪಪಂಗಡಗಳು ಹುಟ್ಟಿಕೊಂಡಿರಬಹುದು. ಆದರೆ ಹೆಳವರು ಮೂಲತಃ ಒಂದೇ ಆಗಿದ್ದರು. ಕಾಲಕ್ರಮೇಣ ಇವರು ಮುಖ್ಯವಾಗಿ ಮೂರು ಪಂಗಡಗಳಾಗಿ ಹರಿದು ಹಂಚಿ ಹೋದರು. ಇದಕ್ಕೆ ಮುಖ್ಯ ಕಾರಣ ಬದುಕಿನ ಅನಿವಾರ್ಯತೆ. ಅಂದರೆ ಆರ್ಥಿಕ ಕಾರಣಗಳು. ಸಾಮಾಜಿಕ ಸ್ಥಿತ್ಯಂತರಗಳಿಗೆ ಆರ್ಥಿಕ ಕಾರಣಗಳು ಬಹು ಮುಖ್ಯವಾಗುತ್ತವೆ. ಮತ್ತೆ ಹೆಳವರ ಈ ಮೂರು ಪಂಗಡಗಳಲ್ಲಿ ಅನೇಕ ಉಪ ಪಂಗಡಗಳಾಗಿ ಒಡೆದು ಹೋಗಿದ್ದರೆ. ಎಷ್ಟೆಲ್ಲಾ ಪಂಗಡಗಳಾಗಿದ್ದರೂ ಇವರಲ್ಲಿ (ಎತ್ತಿನ ಹೆಳವರು ಮತ್ತು ಗಂಟೆ ಹೆಳವರು) ಯಾವುದೇ ರೀತಿಯ ಮಹತ್ವದ್ದೆನ್ನಿಸುವ ವೈರುಧ್ಯಗಳು ಕಾಣಿಸುವುದಿಲ್ಲ. ಕುಲಕೊಂಡಾಡಲು ಹೋಗುವಾಗ ಎತ್ತಿನ

(ನಂದಿ) ಹೆಳವರು ಎತ್ತಿನ ಮೇಲೆ ಹೋಗುತ್ತಾರೆ. ತಮ್ಮ ಒಕ್ಕಲು ಮನೆಗಳಿಗೆ ಗಂಟೆ ಹೆಳವರು ಗಂಟೆಯನ್ನು ಆಯಾ ಒಕ್ಕಲುಮನೆಯವರೇ ಕೊಡಿಸಿರುತ್ತಾರೆ. ಜೊತೆಗೆ ಬೇರೆ ಬೇರೆ ಒಕ್ಕಲುಗಳು ಕೊಡಿಸಿರುವ ಗಂಟೆಗಳನ್ನು ಅದಲು - ಬದಲು ಮಾಡುವುದಿಲ್ಲ. ಉದಾ. ಗೊಲ್ಲರ ಒಕ್ಕಲಿಗೆ ಬಳಸುವ ಗಂಟೆಯನ್ನು ಗಾಣಿಗರ ಒಕ್ಕಲಿಗೆ ಬಳಸುವುದಿಲ್ಲ. ಉದಾ. ಗೊಲ್ಲರ ಒಕ್ಕಲಿಗೆ ಬಳಸುವ ಗಂಟೆಯನ್ನು ಗಾಣಿಗರ ಒಕ್ಕಲಿಗೆ ಬಳಸುವುದಿಲ್ಲ. ಈ ರೀತಿ ಬಳಸುವುದು ಅಪರಾಧವೆಂದೇ ಇವರು ನಂಬುತ್ತಾರೆ. ಮತ್ತು ಬೇರೆ ಒಕ್ಕಲಿಗೆ ಬಳಸುವುದರಿಂದ ಆ ಒಕ್ಕಲಿನವರು ಕುಲ ಕೊಂಡಾಡಲು ಬಿಡುವುದಿಲ್ಲ ಎನ್ನುತ್ತಾರೆ. ಈ ವೈರುಧ್ಯವೊಂದನ್ನು ಹೊರತು ಪಡಿಸಿದರೆ ಗಂಟೆ ಹೆಳವರು ಮತ್ತು ಎತ್ತಿನ ಹೆಳವರಲ್ಲಿ ಯವುದೇ ರೀತಿಯ ವೈರುಧ್ಯಗಳಿಲ್ಲ. ಎರಡೂ ಪಂಗಡಗಳ ಜೀವನ ವಿಧಾನದಲ್ಲಿ ಸಾಮ್ಯತೆಯೇ ಇದೆ.

ಆದರೆ ಚಾಪೆ ಹೆಳವರು, ಗಂಟೆ ಮತ್ತು ಎತ್ತಿನ ಹೆಳವರಲ್ಲಿ ಅನೇಕ ಸಾಮಾಜಿಕ ವೈರುಧ್ಯಗಳಿರುವುದನ್ನು ಕಾಣಬಹುದು. ಚಾಪೆ ಹೆಳವರು ಗಂಟೆ ಮತ್ತು ಎತ್ತಿನ ಹೆಳವರಂತೆ ಒಕ್ಕಲು ಮನೆಗಳಿಗೆ ಕುಲ ಕೊಂಡಾಡಲು ಹೋಗುವುದಿಲ್ಲ. ಗಂಟೆ ಮತ್ತು ಎತ್ತಿನ ಹೆಳವರಲ್ಲಿ (ಅನೇಕ ಕಡೆ) ಚಾಪೆ ಹೆಳವರು ಹೆಳವರೇ ಅಲ್ಲ ಅನ್ನುವಂತಹ ಅಭಿಪ್ರಾಯವಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಚಾಪೆ ಹೆಳವರು ಅವರಂತೆ ಕುಲ ಕೊಂಡಾಡಲು ಹೋಗದಿರುವುದು. ಇದರ ಜೋತೆಗೆ ಇವರು ಹಂದಿಗಳನ್ನು ಸಾಕುವುದರಿಂದ ಅವರಿಗೆ ಈ ರೀತಿ ಅನಿಸಿರಬೇಕು. ಚಾಪೆ ಹೆಳವರಂತೆಯೇ ಇನ್ನೂ ಇತರೇ ಪಪಂಗಡಗಳಿವೆ. ಅವರೂ ಕೂಡ ಇವರಿಗಿಂತ ಭಿನ್ನ. ಉದಾ. ಕೂಕಣಿ ಹೆಳವರು, ದೂದಿ ಹೆಳವರು, ತಿತ್ತಿ ಹೆಳವರು, ಮಂದಲ ಹೆಳವರು, ಕಂಬಿ ಹೆಳವರು, ಇತ್ಯಾದಿ. ಎತ್ತಿನ ಹೆಳವರು ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಕಂಡು ಬರುತ್ತಾರೆ. ಗಂಟೆ ಹೆಳವರು ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡು ಬರುತ್ತದೆ. ಆದರೆ ಚಾಪೆ ಹೆಳವರು ಬೀದರ್, ಗುಲ್ಬರ್ಗ, ಬಳ್ಳಾರಿ, ರಾಯಚೂರು, ಶಿವಮೊಗ್ಗ ಹೀಗೆ ಕರ್ನಾಟಕದ ಎಲ್ಲಾ ಕಡೆ ಕಂಡು ಬರುತ್ತಾರೆ. ಸಾಜಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಯಾವುದೇ ರೀತಿಯ ಕೊಡುಕೊಳೆಗಳಿದ್ದರೆ ಅದು ಗಂಟೆ ಹೆಳವರು ಮತ್ತು ಎತ್ತಿನ ಹೆಳವರ ಮಧ್ಯೆ ಮಾತ್ರವೇ. ಇದಕ್ಕೆ ಮುಖ್ಯ ಕಾರಣ ಇವರ ವೃತ್ತಿಗಳೇ ಎನ್ನಬೇಕು. ಚಾಪೆ ಹೆಳವರ ವೃತ್ತಿ, ಗಂಟೆ ಮತ್ತು ಎತ್ತಿನ ಹೆಳವರಿಗೆ ಸರಿ ಬರುವುದಿಲ್ಲ. ಚಾಪೆ ಹೆಳವರನ್ನು ಇವರು ಕೀಳಾಗಿಯೇ ಕಾಣುತ್ತಾರೆ. ಎತ್ತಿನ ಮತ್ತು ಗಂಟೆ ಹೆಳವರಲ್ಲಿ ಮಾತ್ರ ಕೊಡುಕೊಳ್ಳುವ ಸಂಬಂಧಗಳು ನಡೆಯುತ್ತವೆ. ಇವರಲ್ಲಿ ಪರಸ್ಪರ ಮದುವೆಗಳು ಸಾಧ್ಯ. ಆದರೆ ಒಂದೇ ಬೆಡಗಿನವರಲ್ಲಿ (ಉಪಪಂಗಡ) ಈ ತರಹದ ಮದುವೆಗಳು ನಡೆಯುವುದಿಲ್ಲ. ಅವರು ಒಂದೇ ಬಡೆಗಿನವರು ಸಹೋದರರಾಗುತ್ತಾರೆ ಎಂದು ನಂಬುತ್ತಾರೆ. ಚಾಪೆ ಹೆಳವರು ಮತ್ತು ಎತ್ತಿನ, ಹಂಟೆ ಹೆಳವರಲ್ಲಿ ಮದುವೆ ಸಂಬಂಧಗಳು ಜರುಗುವುದಿಲ್ಲ. ಹಾಗೇಯೇ ಹಬ್ಬ ಹರಿದಿನಗಳಲ್ಲಿಯೂ ಇವರ ನಡುವೆ ಯಾವುದೇ ರೀತಿಯ ಕೊಡುಕೊಳ್ಳುವಿಕೆಗಳು ನಡೆಯುವುದಿಲ್ಲ. ಗಂಟೆ, ಎತ್ತಿನ ಹೆಳವರು ಮುಖ್ಯವಾಗಿ ಯುಗಾದಿ, ದೀಪಾವಳಿಯಂತಹ ಹಬ್ಬಗಳನ್ನು ಆಚರಿಸುತ್ತಾರೆ. ಆದರೆ ಚಾಪೆ ಹೆಳವರು ಇಂತಹದ್ದೇ ಎಂಧು ಯಾವ ಹಬ್ಬಕ್ಕೂ ಹೆಚ್ಚಿನ ಒತ್ತು ಕೊಡುವುದಿಲ್ಲ. ಸಾಮಾನ್ಯವಾಗಿ ಎಲ್ಲ ಹಬ್ಬಗಳನ್ನೂ ಆಚರಿಸುತ್ತಾರೆ. ಇವರಿಗೆ ಯಾವುದೇ ರೀತಿಯ ಪ್ರತ್ಯೇಕ ದೇವಾಲಯಗಳಿಲ್ಲ. ತಮ್ಮ ಹಟ್ಟಿಗಳಲ್ಲಿಯೇ ಚಿಕ್ಕ ಪುಟ್ಟ ಕಟ್ಟೆಗಳನ್ನು ಕಟ್ಟಿಕೊಂಡು ಕಲ್ಲನ್ನಿಟ್ಟು ಅಥವಾ ಬೇವಿನ ಮರಕ್ಕೆ ಬಟ್ಟೆಗಳನ್ನು ಸುತ್ತಿ ಪೂಜಿಸುತ್ತಾರೆ. ಆದರೆ ಎತ್ತಿನ, ಗಂಟೆ ಹೆಳವರು ಮಾತ್ರ ಅಲ್ಲಲ್ಲಿ ತಮ್ಮ ಮೂಲ ಪುರುಷ 'ಹೆಳವಯ್ಯ'ನ ಗುಡಿಗಳನ್ನು ಕಟ್ಟಿಸಿಕೊಂಡು ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ. ಅಲ್ಲದೆ ವೃತ್ತಾಕಾರದ ಒಂದು ಗುಡಿಸಲನ್ನು ಕಟ್ಟಿಕೊಂಡು ಅದರಲ್ಲಿ ತಮಗಿಷ್ಟ ಬಂದ ದೇವರ ಫೋಟೋಗಳನ್ನಿಟ್ಟು ಪೂಜಿಸುತ್ತಾರೆ. ಈ ಗುಡಿಸಲಿನ ರಚನೆ ವಿಶಿಷ್ಟ. ಇದರ ಬಾಗಿಲು ಪೂರ್ವಕ್ಕೇ ಇರುತ್ತದೆ. ಇದರ ಎತ್ತರ ಮೂರರಿಂದ ನಾಲ್ಕು ಅಡಿ ಮಾತ್ರ ಇದಕ್ಕೆ ಕಾರಣದೇವರ ಎದುರು ಬಾಗಿ ಹೋಗಬೇಕೆನ್ನುವುದು. ಹೆಚ್ಚಾಗಿ ಹೆಳವರು ಹಟ್ಟಿಗಳಲ್ಲಿಯೇ ಗುಂಪು ಗುಂಪಾಗಿ ವಾಸಿಸುತ್ತಾರೆ.

[1] ಭಗವತ್ಶರಣರಉಪಾಧ್ಯಾಯ, ಭಾರತೀಯಸಮಾಜದಐತಿಹಾಸಿಕವಿಶ್ಲೇಷಣೆ, ಪು೧೫೩, ೧೯೫೦

[2] ಡಾ. ಅಂಬೇಡ್ಕರ್, ಡಾ.ಬಾಬಾಸಾಹೇಬ್‌ಅಂಬೇಡ್ಕರ್‌ರಹಗಳುಮತ್ತುಭಾಷಣಗಳು. ಸಂ. ೧. ಪು. ೨೪, ೧೯೯೦

[3] Ramendranath Nandi, State Formation Agrarian Growth And Social Change In Feudal South India Ad 600 - 1200, P 187, 2000

[4] Saki, Making History, Karnataka's People And Their Past, Vol - 1, P 175, 1998

[5] ಹರಿಲಾಲ್ಪವಾರ್, ಹೆಳವರಸಂಸ್ಕೃತಿ, ಪು೧೦, ೧೯೯೩

[6] ನಾಗೇಗೌಡಎಚ್ಎಲ್, ಹೆಳವರುಮತ್ತುಅವರಕಾವ್ಯಗಳು, ಪುxii, ೧೯೮೨

[7] Mishra Pk, The Study Of Nomads, P84, 1970

[8] The Mysore Tribes And Castes, H.V Nanjundiah, Ananth Krishnna Lyer, p 310,1922

[9] The Castes And Tribes Of The H E H The Nizames Dominion, Syed Siraj Ui Hasan, p 569, 1950

[10] Guptha r, People of India, Karnataka, P623, 2003,

[11] Singh K S, Indias Communities, P 1268, 1998

[12] ತೆಳಗಡಿಬಿಎಂ, ಹೆಳವರು, ಪು, ೧೩೧, ೧೯೮೦

[13] ನಿಂಗಣ್ಣಸಣ್ಣಕ್ಕಿ, ಹೆಳವರು, ಪು೨೦, ೧೯೮೦

[14] ಪರಮಶಿವಯ್ಯಜೀಶಂ, ಹೆಳವರು, ಪು೨೦, ೧೯೮೦

[15] ನಾಗೇಗೌಡಎಚ್ಎಲ್, ಹೆಳವರುಮತ್ತುಅವರಕಾವ್ಯಗಳು, ಪುxxxiv, ೧೯೮೨

[16] ಹರಿಲಾಲ್ಪವಾರ್, ಹೆಳವರಸಂಸ್ಕೃತಿ, ಪು೧೬, ೧೭, ೧೮, ೧೯, ೨೦, ೧೯೯೩

## ಹೆಳವ ಸಮುದಾಯದ ಸಾಮಾಜಿಕತೆ

ಹೆಳವರಲ್ಲಿ ನ್ಯಾಯ ತೀರ್ಮಾನಗಳು ಅಥವಾ ಯಾವುದೇ ವ್ಯಾಜ್ಯಗಳು ತಮ್ಮ ತಮ್ಮಲ್ಲಿಯೆ ಬಗೆಹರಿಯಲ್ಪಡುತ್ತವೆ. ಈ ಸಮುದಾಯದ ನ್ಯಾಯಪಂಚಾಯತಿಯೆ ಮುಖಂಡತ್ವ ವಂಶಪಾರಂಪರ್ಯವಾಗಿ ಬಂದುದಾಗಿರುತ್ತದೆ. ಯಾವುದೇ ಕಾರಣಕ್ಕೆ ಕೋರ್ಟು, ಕಛೇರಿಗೆ ಹೋಗುವುದಿಲ್ಲ. ಬಹುತೇಕ ತಮ್ಮಲ್ಲಿಯೇ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಕೋರ್ಟು ಕಛೇರಿಗೆ ಅಲೆಯುವ ಕೆಲವು ಉದಾಹರಣಗಳೂ ಸಿಗುತ್ತವೆ. ಒಂದು ವೇಳೆ ಹಗೆ ಕೋರ್ಟು, ಕಛೇರಿಗೆ ಹೋಗಿದ್ದೇ ಅದರೆ ಅಂತಹವರನ್ನು ಕುಲದಿಂದ ಹೊರ ಹಾಕುವ ಅಥವಾ ದಂಡ ವಿಧಿಸುವ ಪದ್ಧತಿ ಜಾರಿಯಲ್ಲಿದೆ. ಪ್ರಸ್ತುತ ಸಂದರ್ಭದಲ್ಲಿಯೂ ಕೂಡ ಈ ರೀತಿಯ ಪದ್ಧತಿ ಜಾರಿಯಲ್ಲಿದೆ ಎಂದರೆ ಆಶ್ಚರ್ಯದ ಸಂಗತಿಯೇ. ಹೆಳವರದು ಸಂಕೀರ್ಣ ಬದುಕು. ಆಧುನಿಕತೆಗೂ ಒಗ್ಗದೆ, ಪರಂಪರೆಯನ್ನು ಬಿಟ್ಟುಕೊಡದ ರೀತಿಯಲ್ಲಿಯೇ ಬದುಕುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಇವರು ಮಿಶ್ರಹಾರ ಪದ್ಧತಿಯನ್ನು ಅನುಸರಿಸುತ್ತಾರೆ. ಉತ್ತರ ಕರ್ನಾಟಕದ ಬಹುತೇಕ ಕಡೆಗಳಲ್ಲಿ ಸಸ್ಯಹಾರಿಗಳಿದ್ದಾರೆ. (ಬೀದರ್, ಗುಲ್ಬರ್ಗಾದ ಅನೇಕ ಕಡೆಗಳಲ್ಲಿ ಸಸ್ಯಾಹಾರವನ್ನು ಉಪಯೋಗಿಸುತ್ತಾರೆ). ಆಚರಣೆಗಳಿಗೆ ಸಂಬಂಧಿಸಿದಂತೆ ಇವರದು ಬಹು ಶಿಸ್ತಿನ ಜೀವನ, ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸುತ್ತಾರೆ. ಮತ್ತು ಕಟ್ಟು ನಿಟ್ಟಾದ ವಿಧಿನಿಷೇಧಗಳನ್ನು ಅನುಸರಿಸುತ್ತಾರೆ.

ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಹೆಳವರು ಅಂತಹ ಮೇಲ್ಮಟ್ಟದ ಸ್ಥಿತಿಯಲ್ಲಿ ಇಲ್ಲ, ಆದರೂ ಹೊಲೆಯರು, ಮಾದಿಗರು, ಕೊರವರು, ದುರುಗು ಮುರುಗಿಯರಿಗೆ ಹೋಲಸಿಸಿದರೆ ಇವರದು ಮೇಲ್ಮಟ್ಟದ ಬದುಕೇ ಅಗಿದೆ. ಇವರಿಗೆ ದೇವಾಲಯಗಲ್ಲಿ ಮುಕ್ತವಾದ ಪ್ರವೇಶವಿದೆ ಮತ್ತು ಮೇಲ್ವರ್ಗದ ಜನರ ಮನೆಗಳಲ್ಲಿಯೂ ಇವರಿಗೆ ಯಾವುದೇ ರೀತಿಯ ನಿರ್ಬಂಧಗಳಿಲ್ಲ. ಆದರೆ ಚಾಪೆ ಹೆಳವರಿಗೆ ಈ ರೀತಿಯ ಯಾವುದೇ ಭಾಗ್ಯವಿಲ್ಲ. ಇವರು ಎತ್ತಿನ ಹೆಳವರು ಮತ್ತು ಗಂಟೆ ಹೆಳವರ ಮನೆಗಳಲ್ಲಿಯೂ ಕೂಡ ಹೋಗುವಂತಿಲ್ಲ. ಚಾಪೆ ಹೆಳವರನ್ನು ಗಂಟೆ ಮತ್ತು ಎತ್ತಿನ ಹೆಳವರು ಕೀಳಾಗಿಯೇ ಕಾಣುತ್ತಾರೆ. ಅವರನನ್ನು ತಮ್ಮ ಮದುವೆ, ಇತ್ಯಾದಿ ಕಾರ್ಯಕ್ರಮಗಳಲ್ಲಿಯೂ ಕೂಡ ಕರೆಯುವುದಿಲ್ಲ. ಸಮಾಜದಲ್ಲಿ ಎತ್ತಿನ ಹೆಳವರು, ಗಂಟೆ ಹೆಳವರಿಗಿದ್ದಷ್ಟು ಗೌರವ, ಸ್ಥಾನಮಾನಗಳು ಚಾಪೆ ಹೆಳವರಿಗಿಲ್ಲ.

ಈ ಮೊದಲೇ ಹೇಳಿದಂತೆ ಈ ದೇಶದ ಶ್ರೇಣಿಕೃತ ವ್ಯವಸ್ಥೆ ಮತ್ತು ಊಳಿಗಮಾನ್ಯ ಸಮಾಜಗಳ ಪ್ರಭಾವದಿಂದ ಯಾವ ಜಾತಿ ಸಮುದಾಯಗಳು ಮುಕ್ತವಾಗಿಲ್ಲ. ಜಾತಿ ಜಾತಿಗಳ ನಡುವೆ ಅಂತರಗಳಿದ್ದಂತೆ, ಜಾತಿಗಳ ಒಳಗೇ ಇರುವ ಉಪಪಂಗಡಗಳ ನಡುವಯೆ ಆಂತರಿಕ ಶ್ರೇಣೀಕರಣ ರೂಪುಗೊಳ್ಳುತ್ತಲೇ ಬಂದಿದೆ. ಇದಕ್ಕೆ ಕಾರಣ ಒಂದೇ ಜಾತಿಯಲ್ಲಿನ ಜನರ ಗುಂಪುಗಳು ಅನುಸರಿಸುವ ಆರ್ಥಿಕ ಚಟುವಟಿಕೆಗಳು. ಎತ್ತಿನ ಹೆಳವರು ಮತ್ತು ಗಂಟೆ ಹೆಳವರು ಪರಂಪರೆಯ ವೃತ್ತಿಯನ್ನು ಅನುಸರಿಸಿ ತಮ್ಮ ಸಮಾಜದ ಒಳಗೇ ಶ್ರೇಷ್ಠರಾದರೆ, ಸಾಂದರ್ಭಿಕ ಅನಿವಾರ್ಯತೆಗೆ ಚಾಪೆ ಹೆಣೆಯುವ ವೃತ್ತಿಯನ್ನು ಅನುಸರಿಸಿದ ಚಾಪೆ ಹೆಳವರು ತಮ್ಮದೇ ಸಮುದಾಯದಲ್ಲಿ ಕನಿಷ್ಠರಾಗುತ್ತಾರೆ. ಈ ಕಾರಣದಿಂದಾಗಿ ಭಾರತದ ಜಾತಿ ಶ್ರೇಣೀಯಲ್ಲಿ ಶ್ರೇಷ್ಠ ಮತ್ತು ಕನಿಷ್ಠಗಳ ಮೌಲ್ಯ ಮಾಪನವು ಒಂದು ಜಾತಿ ಅಥವಾ ಜಾತಿಯ ಒಳಗಿನ ಉಪಪಂಗಡವು ಯಾವ ಬಗೆಯ ವೃತ್ತಿಯನ್ನು ಅನುಸರಿಸುತ್ತಿದೆ ಎಂಬುದನ್ನು ಅವಲಂಬಿಸಿದೆ.

ಇನ್ನು ಹೆಳವರಲ್ಲಿನ ಉಳಿದ ಉಪಪಂಗಡಗಳು ಈ ಸಮುದಾಯದ ನಿರಂತರ ಅಲೆಮಾರಿತನದಿಂದ ರೂಪುಗೊಂಡಿರುವ ಸಾಧ್ಯತೆ ಇದೆ. ಈ ಉಪಪಂಗಡಗಳು ಅನೇಕ ಬಗೆಯ ವೃತ್ತಿಗಳಲ್ಲಿ ತೊಡಗಿರುವುದು ಕೇವಲ ಸಂದರ್ಭದ ಅನಿವಾರ್ಯತೆಯ ಕಾರಣಕ್ಕೆ. ಅಲೆಮಾರಿಗಳ ಸಮಾಜದಲ್ಲಿ ಈ ಬಗೆಯ ವೈರುಧ್ಯಗಳು ಸಹಜ ಮತ್ತು ಅನಿವಾರ್ಯವೆಂದು ಕಾಣುತ್ತದೆ. ಮುಂದಿನ ಭಾಗದಲ್ಲಿ ಹೆಳವ ಸಮುದಾಯದ ಬಳಿಗಳು ಅಥವಾ ಬೆಡಗುಗಳನ್ನು ವಿವರಿಸಲಾಗಿದೆ.

ನಂಜುಂಡಯ್ಯ ಮತ್ತು ಅನಂತ ಕೃಷ್ಣ ಅಯ್ಯರ್ ಅವರು ಹೆಳವರ ಬಳಿಗಳನ್ನು ಹೀಗೆ ಪಟ್ಟಿ ಮಾಡುತ್ತರೆ.೧. ಅರಳಿ ಕುಲ - ಮರ

೨. ಅವರಿಕೆ ಕುಲ - ಒಂದು ಗಿಡ

೩. ಬಳಗರ ಕುಲ - ಈ ಪಂಗಡದವರು ಮದುವೆಯಲ್ಲಿ ಬಳೆಗಳನ್ನು ಪೂಜಿಸುತ್ತಾರೆ.

೪. ಬಂಡಿಕುಲ - ಎತ್ತಿನ ಬಂಡಿ

೫. ಬಂಗಾರ ಕುಲ - ಚಿನ್ನ

೬. ಬಸರಿ ಕುಲ - ಒಂದು ಮರ

೭. ಬೆಳ್ಳಿ ಕುಲ - ಬೆಳ್ಳಿ

೮. ಬೊಟ್ಟು ಕುಲ - ಹೆಂಗಸಿನ ಹೆಣೆಯ ಮೇಲಿನ ಹೊಳೆವ ತಿಲಕ

೯. ಗಡ್ಡಮು ಕುಲ - ಗಡ್ಡ

೧೦. ಗಂಟ ಕುಲ - ಗಂಟೆ

೧೧. ಹಂಚಿ ಕುಲ - ಒಂದು ಬಗೆಯ ಹುಲ್ಲು

೧೩. ಹೂವು ಕುಲ - ಹೂವು

೧೪. ಜ್ಯೋತಿ ಕುಲ - ಇವರು ದೀಪವನ್ನು ಬಾಯಿಯಿಂದ ಊದಿ ಆರಿಸುವುದಿಲ್ಲ

೧೫. ಕುಂಚಿ ಕುಲ - ಕೋಟು

೧೬. ಮರ್ರಿ ಕುಲ - ಒಂದು ಮರ

೧೭. ಮುಮ್ಮಡಿ ಕುಲ - ಒಂದು ಮರ

೧೮. ನೇರಳೆ ಕುಲ - ನೇರಳೆ ಜಂಬುಲ

೧೯. ಒರಳು ಕುಲ - ಒರಳು

೨೦. ಒಣಕೆ ಕುಲ - ಒಣಕೆ

೨೨. ಸಿಂಗರಾಜು ಕುಲ - ಸಿಂಹ

೨೩. ಸಿಪದಾ ಕುಲ - ಈ ಕುಲದವರು ಈ ಮರವನ್ನು ಪೂಜಿಸುತ್ತರೆ. ಕಡಿಯುವುದಿಲ್ಲ.

೨೪. ಉದುರು ಪಖು ಕುಲ - ಒಂದು ಮರ[1]

ಬಾಂಬೇ ಪ್ರಾಂತ್ಯದ ಸಮುದಾಯಗಳನ್ನು ಅಧ್ಯಯನ ಮಾಡಿದ ಆರ್. ಇ. ಥೋವನ್ ಹೆಳವರ ಹತ್ತು ಬೆಡಗುಗಳನ್ನು ಉಲ್ಲೇಖಿಸುತ್ತಾನೆ.

೦೧. ಯರಸನವ

೦೨. ಬೊಮ್ಮಲಿಂಗನವ

೦೩. ಅಂಧಕನವ

೦೪. ಸೋಮ ದೇವನವ

೦೫. ಕುಂಚಯನವ

೦೬. ತೆಂಕನವ

೦೭. ಬಂಡಿಯವ

೦೮. ಇಮ್ಮಡಿಯವ

೦೯., ಭೀಮಶೆಟ್ಟಿಯವ

೧೦. ಯಕಪಟ್ಟನವ[2]

ಸೈಯದ್ ಸಿರಾಜ್ ಉಲ್ ಹಸನ್‌ರವರು ಗೋತ್ರ ಮತ್ತು ಮನೆತನದ ಹೆಸರುಗಳೆಂದು ೨೪ ಬಳಿಗಳನ್ನು ಪಟ್ಟಿ ಮಾಡುತ್ತಾರೆ.

ಗೋತ್ರಗಳು

೦೧. ಇಟ್ಲ

೦೨. ಥಿಮೊಳ್ಳು

೦೩. ಗಂಟೆದೊಳ್ಳು

೦೪. ಬಂಡರೋಳ್ಳು

೦೫. ಯಿರ್ಲೋಳ್ಳು

೦೬., ಅಬ್ಬವವಂತಿನೋಳ್ಳು

೦೭. ಸಿಂಗಮೋಳ್ಳು

೦೮. ಸಂದ್ರವಲೋಳ್ಳು

೦೯. ಯಿರ್ಗೆತೋಳ್ಳು

೧೦. ಪರಂಥೋಳ್ಳು

೧೧. ಪಿದಮೊಳ್ಳು

೧೨. ಅಂತುಗುಳೋಳ್ಳು

ಮನೆತನದ ಹೆಸರುಗಳೂ

೧. ಕುಮ್ಮದವರು

೨. ತದ್ಲವರು

೩. ಭನಮ್ವರು

೪. ತಪಿರನಿವರು

೫. ಗಂಡಿಸರಿವರು

೬. ಅತ್ಯಲವರು

೭. ಬಟೊನಿವಂಡ್ಲು

೮. ಚಲುಕಿನವರು

೯. ಕುಂಕುಲವರು

೧೦. ಮರ್ಪುವರು

೧೧. ಕಟಿಯಲವರು

೧೨. ಪೊಪಲವರು[3]

ಕೆ. ಎಸ್. ಸಿಂಗ್ ಮತ್ತು ಗುಪ್ತರವರು ಅನಂತಕೃಷ್ಮ ಅಯ್ಯರ್ ಉಲ್ಲೇಖಿಸಿದ ಬಳಿಗಳೆ ಪುನಃ ಉಲ್ಲೇಖಿಸುತ್ತಾರೆ. ಆದರೆ ಶ್ರೀ ಹರಿಲಾಲ್ ಪವಾರ್ ಅವರು ೧.೨೨ ಬಳಿಗಳನ್ನು ಗುರುತಿಸುತ್ತಾರೆ,

೧. ಅಡಕಿಲವರು

೨. ಅಂಧಕಲವರು

೩. ಅವರಿಲವರು

೪. ಅರಳಿಲರು

೫. ಅಜ್ಜೆಲವರು

೬. ಅನೆಲವರು

೭. ಅರೆಲವರು

೮. ಆವಿನವಲರು

೯. ಇಮ್ಮಡಿಲವರು

೧೦. ಇರಲವರು

೧೧. ಉರಸನ್ನವರು

೧೨. ಉದಿಲವರು

೧೩. ಎಮ್ಮೆಲವರು

೧೪. ಎಕ್ಕೇಲವರು

೧೫. ಒನೆಕೆಲವರು

೧೬. ಓರಲವರು

೧೭. ಔಡಲವರು

೧೮. ಕಡಗದವರು

೧೯. ಕಡ್ಡೇಲವರು

೨೦. ಕಡಹಟ್ಟೆಲವರು

೨೧. ಕಂಬಳಿಲವರು

೨೨. ಕಸ್ತೂರಿಲವರು

೨೩. ಕಾಮಲವರು

೨೪. ಕುರಿಹಾಲಿನವರು

೧೫. ಕುಂಚಿಲವರು
೧೬. ಕೆಂಗುರಿಲವರು
೧೭. ಕೊಂಬಿನವರು
೧೮. ಕೋರಿಲವರು
೧೯. ಗಡ್ಡೆಲವರು
೩೦. ಗಾಲೇನವರು
೩೧. ಗೀಜಗನವರು
೩೨. ಗೋಪಾಲನವರು
೩೩. ಗೌಡಲವರು
೩೪. ಚಿಪ್ಪಡಲವರು
೩೫. ಚಿಟಿಮಲ್ಲನವರು
೩೬. ಚಿನ್ನಿಲವರು
೩೭. ಚಿನ್ನಿ ಕೋರಿಲವರು
೩೮. ಜಂಗಮಲವರು
೩೯. ಜಂಗಿನವರು
೪೦. ಜುಂಜಲವರು
೪೧. ಜೋತಿಲವುರ
೪೨. ಟಿಂಕಲದವರು
೪೩. ತುಪ್ಪದವರು
೪೪. ತುರಬಿನವರು
೪೫. ತೆಲಗಾಬತ್ತಲರು
೪೬. ದರ್ಶನಲವರು
೪೭. ದನೇಲರು
೪೮. ದಾಸರಿಲವರು
೪೯. ದಿಬ್ಬಕುಲದವರು
೫೦. ದೇವಾಲವರು
೫೧. ನಡ (ಹಟ್ಟಿ)ವಟ್ಟಿಲವರು
೫೨. ನೆರಲವರು
೫. ಪಳಸಿದವರು
೫೪. ಪರ್ವಲವರು
೫೫. ಪತ್ರೆಯವರು
೫೬. ಪುರಾತನದವರು
೫೭. ಪೆಟ್ಟಿಗೆಲದವರು
೫೮. ಬಂಡಿಲದವರು
೫೯. ಬಂಗಾದವರು
೬೦. ಬಸರಿಲವರು

೬೧. ಬಣ್ಣಗುಲದವರು

೬೨. ಬನ್ನಿಲವರು

೬೩. ಬಂಢಾರದವರು

೬೪. ಬಳೆಗಾರದವರು

೬೫. ಬಾಗಲದವರು

೬೬. ಭಾಳೆಲವರು

೬೭. ಭಾಚಿಳಟಙು

೬೮. ಬ್ಯಾಲನವರು

೬೯. ಬಿಳಿಗುರಿಲವರು

೭೦. ಬಿಳಿಗರಿಲವರು

೭೧. ಭೀಮನವರು

೭೨. ಬುಡಮಲ್ಲನವರು

೭೩. ಬೆಳಗೂಗಿನವರು

೭೪. ಬೆಳ್ಳಿಲವರು

೭೫. ಬೇವಿನವರು

೭೬. ಬೊಟ್ಟಿಲವರು

೭೭. ಬೊಮ್ಮ (ಬಮ್ಮ)ಡ ದೇವನವರು

೭೮. ಮಲ್ಲಗಿನವರು

೭೯. ಮಲ್ಲನವರು

೮೦. ಮಜ್ಜಲವರು

೮೧. ಮಳಕನ್ನೇಲವು

೮೨. ಮೆಟ್ಟಿಲವರು

೮೩. ಮೆಂಗಲವರು

೮೪. ಮಳಶೆಟ್ಟಿಲವರು

೮೫. ಮಾರಿಲವರು

೮೬. ಮ್ಯಾಕಲವರು

೮೭. ಮುರಿಂಡಲವರು

೮೮. ಮುಮ್ಮಡಲವರು

೮೯. ಮುತ್ತಿನ ಸತ್ತರಗಿಲವರು

೯೦. ಮೂರಾ ಹೆಂಡಿನವರು

೯೧. ಮನೆಗಲವರು

೯೨. ಯಾತ್ಪತ್ದವರು

೯೩. ಯಾಗಸತ್ತೇದವರು

೯೪. ರಾಯಣ್ಣದವರು

೯೫. ವಜಮೂನಿಯವರು

೯೬. ಶುಂಠಿಲವರು

೯೭. ಸಂಕಲವರು

೯೮. ಸಣ್ಣಕ್ಕಿಲವರು

೯೯. ಸದರಿನವರು

೧೦೦. ಸರ್ವಲವರು

೧೦೧. ಸಮೇಲವರು

೧೦೨. ಸಾವಂತಲವರು

೧೦೩. ಸಿಪಾರಲವರು

೧೦೪. ಸೋಮದೇವರನವರು

೧೦೫. ಹನಚಿಲವರು

೧೦೬. ಹಟ್ಟೇಲವರು

೧೦೭. ಹಂಗೇಬನ್ನೆಲವರು

೧೦೮. ಹಾಲಿನವರು

೧೦೯. ಹಾವುಲವರು

೧೧೦. ಹುಲಿನವರು

೧೧೧. ಹೆಣ್ಣಿನವರು

೧೧೨. ಹೊನ್ನುಂಗರದವರು

೧೧೩. ಹೊನ್ನಗಂಟಿಯವರು

೧೧೪. ಹೊನ್ನಭೇಜಿಯವರು

೧೧೫. ಹೊನ್ನ ಕಠಾರಿಯವರು

೧೧೬. ಹೊನ್ನ ವೀರಗಂಟೆಯವರು

೧೧೭. ಹೊನ್ನ ದಾಸ್ಯಾಳದವರು

೧೧೮. ಹೊನ್ನ ಸಿಂಪಗೆಯವರು

೧೧೯. ಹೊನ್ನ ಗುಳೇಲವರು

೧೨೦. ಹೊನ್ನ ಕೋರಿಲವರು

೧೨೧. ಹೊನ್ನ ಬನ್ನೆಲವರು

೧೨೨. ಹೂವುಲವರು[4]

ಮೇಲೆ ಪಟ್ಟಿ ಮಾಡಿರುವ ಬಳಿಗಳಿಗೂ ಹೊರತಾಗಿಸಿ ಇನ್ನೂ ಬೇರೆ ಬಳಿಗಳು ಇರಬಹುದು. ಆದರೆ ಇಲ್ಲಿ ಉಲ್ಲೇಖಗೊಂಡ ಬಳಿಗಳಲ್ಲಿ ಮರ, ಗಿಡ, ಸಸ್ಯ, ಪ್ರಾಣಿ ಮತ್ತು ವೃತ್ತಿಗಳ ಹೆಸರುಗಳಿಂದ ಉತ್ಪನ್ನಗೊಂಡ ಬಳಿಗಳಿವೆ. ಈ ಬಳಿಗಳನ್ನು ನೋಡಲಾಗಿ, ಹೆಳವರು ಒಂದು ಆದಿಮ ಕುರುಹುಗಳಿರುವ ಸಮಾಜ ಎಂದು ಪರಿಗಣಿಸಬಹುದಾಗಿದೆ. ಅಲ್ಲದೆ ಹೆಳವರ ಬಳಿಗಳಲ್ಲಿ ಕುರುಬ ಸಮಾಜದ ಕೆಲವು ಬಳಿಗಳು ಸಹ ಸೇರಿಕೊಂಡಿವೆ.

ಹೆಳವರು ತಮ್ಮ ಮೂಲ ಪುರುಷನ ಕುರಿತು ಹೇಳುವಾಗಿ ಪದುಮಣ್ಣ ಎಮದು ವ್ಯಕ್ತಿಯ ಹೆಸರನ್ನು ಹೇಳುತ್ತಾರೆ. ಈತ ಕುರುಬ ಸಮುದಾಯಕ್ಕೆ ಸೇರಿದವನು. ಹೆಳವರು ಇದೇ ಸಂಗತಿಯನ್ನು ಡಾ. ಎಚ್.ಎಲ್. ನಾಗೇಗೌಡರು ಸಹ ಉಲ್ಲೇಖಿಸುತ್ತಾರೆ.[5] ಪ್ರಾಯಶಃ ಸಮುದಾಯವಾಗಿರಬಹುದು. ಜೊತೆಗೆ ಒಂದು ಕಾಲಕ್ಕೆ ಹೆಳವರು ಪಶುಪಾಲಕರೂ ಆಗಿದ್ದಿರಬಹುದೆಂದು ಊಹಿಸಬಹುದಾಗಿದೆ.

**ವರ್ತಮಾನದ ಸಾಮಾಜಿಕ ಸ್ಥಿತಿಗತಿಗಳು**

ಈ ಮೊದಲೇ ಹೇಳಿದಂತೆ ಹೆಳವರು ಶುದ್ಧಾಂಗವಾಗಿ ಅಲೆಮಾರಿಗಳೇನಲ್ಲ. ಈ ಸಮುದಾಯದ ಹಲವು ಗುಂಪುಗಳು ಅಲೆಮಾರಿಗಳಾಗಿ ಬದುಕುತ್ತಿವೆ. ಈಗಲೂ ಅಲೆಮಾರಿಗಳಾಗಿ ಬದುಕುತ್ತಿರುವವರು ಎತ್ತಿನ ಹೆಳವ ಮತ್ತು ಗಂಟೆ ಹೆಳವ ಪಂಗಡದ ಕೆಲವು ಗುಂಪುಗಳೂ ತಮ್ಮ ಒಕ್ಕಲು ಮನೆಗಳಿಗೆ ತೆರಳಿ ತಮ್ಮ ಪಾರಂಪಕ ವೃತ್ತಿಗನುಗುಣವಾಗಿ ವಂಶಾವಳಿಯನ್ನು ಇವರು ಹೇಳುತ್ತಾರೆ. ಆದರೆ ಒಟ್ಟಾರೆಯಾಗಿ ಇವರ ಸಂಖ್ಯೆ ಕಡಿಮೆ ಎಂದೇ ಹೇಳಬೇಕು. ಬೆಳಗಾಂ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಕೆಳವರು ಇಂದಿಗೂ ಈ ವೃತ್ತಿಯನ್ನು ಜತನದಿಂದ ನಿರ್ವಹಿಸುತ್ತಿದ್ದಾರೆ. ತಮ್ಮ ಪಾರಂಪರಿಕ ವೃತ್ತಿಯ ಕುರಿತು ಇವರಿಗೆ ಇನ್ನಿಲ್ಲದ ಮೋಹ. ಇಂದಿಗೂ ಹೆಳವರ ಅನೇಕ ಉಪಪಂಗಡಗಳು ಲಾಭದಾಯಕವಲ್ಲದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ಸಾಮಾಜಿಕವಾಗಿ ಹಿಂದುಳಿದಿದ್ದಾರೆ.

ಎಲ್ಲಾ ಕೆಳಜಾತಿಗಳಿಗೆ ಸಾಮಾಜಿಕವಾಗಿ ಕೆನ ಪದರ ಸ್ಥಿತಿಯೊಂದಿರುತ್ತದೆ. ಈ ಸ್ಥಿತಿಯಲ್ಲಿರುವವರು ಶಿಕ್ಷಣ ಪಡೆದು ಸರಕಾರಿ ಹುದ್ದೆಯಲ್ಲಿದ್ದು ಸಾಮಾಜಿಕವಾಗಿ ಆರ್ಥಿಕವಾಗಿ ಮುಂದುವರೆದಿದ್ದಾರೆ. ಹೆಳವ ಸಮುದಾಯದಲ್ಲೂ ಕೆಲವರು ಆರ್ಥಿಕವಾಗಿ ಉನ್ನತಿಯನ್ನು ಸಾಧಿಸಿ ಸಾಮಾಜಿಕ ಸ್ಥಾನಮಾನಗಳನ್ನು ಪಡೆದಿದ್ದಾರೆ. ಆದರೆ ಇವರ ಸಂಖ್ಯೆ ಕಡಿಮೆಯಂದೇ ಹೇಳಬೇಕಾಗುತ್ತದೆ. ಮಧ್ಯ ಮತ್ತು ದಕ್ಷಿಣ ಕರ್ನಾಟಕದ ಹೆಳವರಲ್ಲಿ ಕೆಲವರು ಮಾತ್ರ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದಾರೆ. ಆದರೆ ಬಹುಸಂಖ್ಯಾತ ಹೆಳವರು ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿದ್ದಾರೆ. ಜಾಗತೀಕರಣದ ಈ ಸಂದರ್ಭದಲ್ಲಿಯೂ ಶತಮಾನಗಳ ಹಿಂದೆ ರೂಪುಗೊಂಡಿರಬಹುದಾಗಿ ಪಾರಂಪರಿಕ ಅಲೆಮಾರಿ ವೃತ್ತಿಗಳನ್ನು ಇನ್ನು ಈ ಸಮುದಾಯಗಳು ಅವಲಂಬಿಸಿ ಬದುಕುತ್ತಿವೆ ಎಂದರೆ ಅದು ಭಾರತದಲ್ಲಿ ಮಾತ್ರ. ಈ ಬಗೆಯ ವೈರುಧ್ಯಗಳು ಅಸಮಾನತೆಯನ್ನು ಜತನದಿಂದ ಪೋಷಿಸುವ ಸಮಾಜದಲ್ಲಿ ಮಾತ್ರ ಜೀವಂತವಾಗಿರಲು ಸಾಧ್ಯ. ಆಧುನಿಕತೆ ತನ್ನೆಲ್ಲ ತಂತ್ರಜ್ಞಾನದಿಂದ ಮತ್ತು ಸಮಗ್ರವಾಗಿ ವ್ಯಾಪಿಸುವ ತನ್ನ ಆಗಾಧ ಶಕ್ತಿಯಿಂದ ಭಾರತದ ಸಾಂಪ್ರದಾಯಿಕ ಸಮಾಜಗಳನ್ನು ಬದಲಿಸಿಬಿಡಬಹುದೆಂದು ಮೊದಲಿಗೆ ನಂಬಲಾಗಿತ್ತು. ಆದರೆ ಈ ಸಮಾಜವು ಊಳಿಗಮಾನ್ಯ ಸ್ಥಿತಿಯಿಂದ ವಸಾಹತುಶಾಹಿಗೆ, ವಸಾಹತುಶಾಹಿಯಿಂದ ಬಂಡವಾಳಶಾಹಿಯ ಕಡೆಗೆ ನಡೆದು ಹೋಯಿತು. ಹೀಗೆ ಬದಲಾದ ಆರ್ಥಿಕ ಸಂದರ್ಭದಲ್ಲಿ ಈ ದೇಶದ ಶೋಷಿತರ ಸ್ಥಿತಿ ಯಾವ ವಿಧದಲ್ಲೂ ಉತ್ತಮಗೊಳ್ಳಲಿಲ್ಲ. ಇದಕ್ಕೆ ಉದಾಹರಣೆಗಳು ಹೆಳವರಂತಹ ಅಲೆಮಾರಿ ಸಮುದಾಯಗಳಿವೆ.

ಈವತ್ತೂ ಸಹ ಹೆಳವರ ವಿವಿಧ ಪಂಗಡಗಳು ತಮ್ಮ ಪಾರಂಪರಿಕ ವೃತ್ತಿಯಲ್ಲಿ ಬದುಕುತ್ತಾ ಹಿಂದುಳಿದಿವೆ. ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕು ಚಕೇಲಿ ಅಡವಿಯಲ್ಲಿ ಅಡವಿ ಹೆಳವರ ಒಂದು ಪಂಗಡವಿದೆ.[6] ಇಂತಹ ಉದಾಹರಣೆಗಳನ್ನು ಇಟ್ಟುಕೊಂಡು ನಾವು ೨೧ ನೇ ಶತಮಾನಕ್ಕೆ ಹೋಗುತ್ತಿದ್ದೇವೆ ಎಂದರೆ ಅದಕ್ಕಿಂತ ಆಶ್ಚರ್ಯ ಮತ್ತೊಂದಿಲ್ಲ. ಈ ದೇಶದ ಸಮಾಜದಲ್ಲಿ ವೈರುಧ್ಯಗಳನ್ನು ಉದ್ದೇಶಪೂರ್ವಕವಾಗಿ ಆಳುವ ವರ್ಗ ಜೀವಂತವಾಗಿಟ್ಟುಕೊಂಡು ಬಂದಿದೆ. ಅದರಲ್ಲೂ ಪಾರಂಪರಿಕ ವೃತ್ತಿಯನ್ನು ಅನುಸರಿಸುವ ಕೆಳಜಾತಿ ಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕನ್ನು ರಕ್ಷಿಸಬೇಕು ಎಂಬ ಶೈಕ್ಷಣಿಕ ಚರ್ಚೆಗಳು ನಡೆಯುತ್ತಿವೆ. ಆದರೆ ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ನಮ್ಮ ಚರಿತ್ರೆಯ ವಿಕಾಸದ ಯಾವುದೋ ಹಂತದಲ್ಲಿ ಕಾಲೂರಿ ನಿಂತಿರುವ ಸಮುದಾಯಗಳು ಹಾಗೆಯೇ ಮೂಲ ಸ್ಥಿತಿಯಲ್ಲಿ, ಮ್ಯೂಸಿಯಂ ಪೀಸ್‌ಗಳ ತರಹ ಇರಬೇಕೆಂದು ಹಲವು ಜನ ಬಯಸುತ್ತಿದ್ದಾರೆ. ಹೆಳವ ಸಮುದಾಯದ ಕೆಲವು ಗುಂಪುಗಳೂ, ಅದರಲ್ಲೂ ಪಾರಂಪರಿಕ ವೃತ್ತಿಯಲ್ಲಿರುವ ಅಲೆಮಾರಿಗಳು ಇಂದಿಗೂ ತಮ್ಮ ವೃತ್ತಿಯನ್ನು ಬಿಟ್ಟುಕೊಡದೆ ಊರೂರು ತಿರುಗುತ್ತ ವಂಶಾವಳಿ ಹೇಳುವುದನ್ನು ಮುಂದುವರೆಸಿರುವುದು ಇನ್ನೊಂದು ಬಗೆಯ ದುರಂತವೆಂದೇ ಭಾವಿಸಬೇಕಾಗುತ್ತದೆ. ಇದರಿಂದಾಗಿ ಹೆಳವರಂತಹ ಸಮುದಾಯಗಳು ಇಂದಿಗೂ ಆಧುನಿಕತೆ ಮತ್ತು ವರ್ತಮಾನದ ಅನೇಕ ಲಾಭಗಳಿಂದ ದೂರವೇ ಉಳಿದಿವೆ.

[1] H.V. Nanjundiah, ananth krishnna Iyer, the mysore tribes and castes, p3 11, 1922

[2] Enthoven R E, The Tribes And Castes Of Bomby, Vol, 2, p 72, 1922

[3] Syed Siraj Ui Hasan, The Castes And Tribes Of The H E H The Nizames Dominion, P 569, 1950

[4] ಹರಿಲಾಲ್ಪವಾರ್, ಹೆಳವರಸಂಸ್ಕೃತಿ, ಪು೨೧, ೨೨, ೨೩, ೧೯೯೩

[5] ನಾಗೇಗೌಡಎಚ್ಎಲ್, ಹೆಳವರುಮತ್ತುಅವರಕಾವ್ಯಗಳು, ಪುxxvii, ೧೯೮೨

[6] ಹರಿಲಾಲ್ಪವಾರ್, ಹೆಳವರಸಂಸ್ಕೃತಿ, ಪು೧೯, ೧೯೯೩

# ೪. ಹೆಳವ ಸಮುದಾಯದ ಆರ್ಥಿಕತೆ

## ಪೀಠಿಕೆ

ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿದಂತೆ ಇಂಡಿಯಾದ ಜಾತಿ ಸಮುದಾಯವೆಂದರೆ ಅದೊಂದು ಸ್ವತಂತ್ರ್ಯ ಉತ್ಪಾದನ ಘಟಕ, ಪ್ರತಿಯೊಂದು ಜಾತಿ ಒಂದು ಸ್ವಯಂಪೂರ್ಣ ಉತ್ಪಾದನಾ ಘಟಕ, ಜಾತಿಯೊಂದು ತನ್ನನ್ನು ಇನ್ನೊಂದು ಜಾತಿಯಿಂದ ಬೇರ್ಪಡಿಸಿಕೊಳ್ಳುವುದು ತಾನು ಅನುಸರಿಸುವ ಪಾರಂಪರಿಕ ಕಸುಬಿನಿಂದ. ಹೀಗಾಗಿ ಜಾತಿಯ ಪ್ರತ್ಯೇಕತೆಯಾಗಲಿ ಮತ್ತು ಶ್ರೇಣೀಕರಣವಾಗಲಿ ಸಮಾಜದ ಆರ್ಥಿಕತೆಯ ವಿಭಜನೆಯಿಂದಾಗಿಯೇ ರೂಪುಗೊಂಡಿವೆ. ಈ ಕಾರಣದಿಂದ ಭಾರತದ ಉತ್ಪಾದನಾ ಶಕ್ತಿಗಳನ್ನು, ಸಮಾಜದ ಒಟ್ಟು ಉತ್ಪಾದನೆಯ ವಿವಿಧ ಹಂತದಲ್ಲಿ ನಿಯುಕ್ತಗೊಳಿಸಿರುವುದರಿಂದಾಗಯೇ ಜಾತಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿದೆ. ಇದರ ಜೊತೆಗೆ ಉತ್ಪಾದನೆಯಲ್ಲಿನ ಶ್ರೇಷ್ಠ, ಕನಿಷ್ಠಗಳ ಪರಿಗಣನೆಯು ಸಾಮಾಜಿಕ ಶ್ರೇಣೀಕರಣವನ್ನು ಸಹಜವಾಗಿ ಹುಟ್ಟು ಹಾಕಿದೆ. ಭಾರತದಲ್ಲಿ ಇದೊಂದು 'ಜಾತಿ' ಎಂದು ಗುರುತಿಸಲ್ಪಡುವ ಪ್ರತಿ ಸಮುದಾಯಕ್ಕೂ ಒಂದು ಪಾರಂಪರಿಕ ಕಸುಬು ಇರುವುದು ಸಾಮಾನ್ಯ ಸಂಗತಿ. ಆದರೆ ಪ್ರತಿ ಜಾತಿಗಳೂ ಇಂಡಿಯಾದಲ್ಲಿ ನಿಶ್ಚಿತ ಸ್ವಾಲಲಂಬಿ ಆರ್ಥಿಕ ಮೂಲಗಳನ್ನು ಪಾರಂಪರಿಕವಾಗಿ ಹೊಂದಿವೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಇಂಡಿಯಾದ ಕೆಳಜಾತಿ ಸಮುದಾಯಗಳಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದ ಕಾರಣಕ್ಕಾಗಿಯೇ ಅವು ಸಾಮಾಜಿಕವಾಗಿ ಕನಿಷ್ಠ ಸ್ಥಾನಮಾನಗಳನ್ನು ಹೊಂದಿರುವುದು. ಬಹುಸಂಖ್ಯಾತ ದುಡಿವ ಕೆಳಜಾತಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ನಿರಾಕರಿಸುವ ಮೂಲಕವೇ ಇಂದಿಗೂ ಶ್ರೇಣೀಕರಣ ಜ್ವಲಂತವಾಗಿದೆ.

ಬಹುಸಂಖ್ಯಾತ ದುಡಿವ ವರ್ಗದ ಜನರ ಶ್ರಮವನ್ನು ಬಂಡವಾಳವನ್ನಾಗಿಸಿಕೊಂಡು ಬದುಕುವ ಅಲ್ಪಸಂಖ್ಯಾತ ಆಳುವ ವರ್ಗ ಯಾವುದೋ ಮಾಯೆಯ ಮೂಲಕ ಅಸಮಾನತೆಯನ್ನು ಚಿರಂತನಗೊಳಿಸಲು ಶ್ರೇಣೀಕರಣವನ್ನು ಸಮರ್ಥಿಸುವ ಪ್ರಯತ್ನಗಳು ಭಾರತದ ಸಾಮಾಜದ ಚರಿತ್ರೆಯಲ್ಲಿ ನಿರಂತರವಾಗಿ ನಡೆದು ಬಂದಿವೆ. ರಾಜಕೀಯವಾಗಿ ಆರ್ಥಿಕವಾಗಿ ಸೋತ ಸಮುದಾಯಗಳು ಆಳುವ ವರ್ಗಗಳಿಗೆ ಅಧೀನಗೊಂಡೇ ಚರಿತ್ರೆಯದ್ದಕ್ಕೂ ಬದುಕಿ ಬಂದಿವೆ. ಯಾವ ಆರ್ಥಿಕ ಚಟುವಟಿಕೆಗಳು ದುಡಿವ ವರ್ಗದ ಸಮುದಾಯಗಳಿಗೆ ಸಾಮಾಜಿಕ ಮತ್ತು ರಾಜಕೀಯ ಅಧಿಕಾರಗಳು ಲಭ್ಯವಾಗುವಂತೆ ಮಾಡಬೇಕಿತ್ತೋ ಆ ಚಟುವಟಿಕೆಳೇ ಊನಗೊಂಡಿದ್ದವು. ಭಾರತದ ಸಾಮಾಜಿ ನಿಯಮಗಳು ಪರಂಪರೆಯ ಹೆಸರಲ್ಲಿ ಬಹುಸಂಖ್ಯಾತ ದುಡಿವವರ್ಗಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ನಿರಾಕರಿಸುತ್ತಲೇ ಬಂದವು. ದುಡಿವ ವರ್ಗಗಳು ಸಾಮಾಜಿಕವಾಗಿ ಸ್ವಾತಂತ್ರ್ಯವನ್ನು ನಿರಾಕರಿಸುತ್ತಲೇ ಬಂದವು. ದುಡಿವ ವರ್ಗಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಆಳುವ ವರ್ಗಗಳನ್ನು ಅವಲಂಬಿಸುವ ಅನಿವಾರ್ಯತೆ ಈ ದೇಶದಲ್ಲಿ ಯಾವತ್ತೂ ಜೀವಂತವಾಗಿ ಉಳಿದುಕೊಂಡು ಬಂದಿದೆ. ಇನ್ನೊಂದು ದುರಂತವೆಂದರೆ, ಭಾರತದ ಕೆಳಜಾತಿಗಳು ಮತ್ತು ಸ್ಪೃಶ್ಯರು ಯಾವ ಆರ್ಥಿಕ ಮೂಲಗಳಿಗೂ ಒಡೆಯರಾಗುವಂತಿಲ್ಲ ಎಂಬ ಪಾರಂಪರಿಕ ಕಾನೂನು ಈವತ್ತಿಗೂ ಜೀವಂತವಾಗಿದೆ. ಇಂತಹ ಸಂಪ್ರದಾಯಬದ್ಧ ಸಮಾಜದಲ್ಲಿ ಕೆಲಜಾತಿಗಳು ಮತ್ತು ಕುಶಲಕರ್ಮಿವರ್ಗಗಳು ಮತ್ತು ಸೇವಕ ಸಮುದಾಯಗಳು ಈ ದೇಶದ ಚರಿತ್ರೆಯುದ್ದಕ್ಕೂ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಬದುಕಿ ಬಂದಿವೆ.

ಅದರಲ್ಲೂ ಊಳಿಗಮಾನ್ಯ ಕಾಲಘಟ್ಟದ ಸೇವಕ ಸಮುದಾಯಗಳು ಆರ್ಥಿಕವಾಗಿ ಹೀನಾಯ ಸ್ಥಿತಿಯನ್ನು ತಲುಪಿದವು. ಜೊತೆಗೆ ಯಾವಾಗ ಊಳಿಗಮಾನ್ಯ ಸಮಾಜ ಬಂಡವಾಳವಾದಿ ಉತ್ಪಾದನಾ ವಿಧಾನವನ್ನು ಒಪ್ಪಿಕೊಂಡತೋ ಆಗ ಸೇವಕ ವರ್ಗಗಳು ದಿಕ್ಕೆಟ್ಟು ಹೋದವು. ಈ ಹಂತದಲ್ಲಿಯೇ ಅಲೆಮಾರಿಗಳೂ ರೂಪುಗೊಂಡಿರುವ ಸಾಧ್ಯತೆಗಳಿವೆ. ಅಲ್ಲದೆ ಯಾವತ್ತು ಈ ದೇಶದ ಕೃಷಿ ವ್ಯವಸ್ಥೆ ಬಂಡವಾಳಶಾಹಿ ಉತ್ಪಾದನ ಪದ್ಧತಿಯನ್ನು ಅವಲಂಬಿಸಲಾರಂಭಿಸಿತೋ, ಆಗಿನಿಂದ ಕೃಷಿ ಉತ್ಪಾದನೆಯು ತನ್ನ ಪಾರಂಪರಿಕ ಮತ್ತು ಸಾಮಾಜಿಕ ಕರುಳು ಬಳ್ಳಿ ಸಂಬಂಧಗಳನ್ನು ಕಳೆದುಕೊಂಡಿತು. ಆಗ ಪಾರಂಪರಿಕ ಕೃಷಿ ವ್ಯವಸ್ಥೆಯ ಜೊತೆ ನೇರ ಸಂಬಂಧಗಳನ್ನು ಹೊಂದಿದ್ದ ಸೇವಕ ಸಮುದಾಯಗಳು ಇದ್ದ ಬದ್ದ ಆರ್ಥಿಕ ಮೂಲಗಳನ್ನು ಕಳೆದುಕೊಂಡವು. “ಒಂದು ಕಾಲದಲ್ಲಿ ಜಮೀನ್ದಾರರು ಅನೇಕ ಕುಶಲಕರ್ಮಿಗಳನ್ನು, ಸೇವಕ ಸಮುದಾಯಗಳನ್ನು ಪೋಷಿಸಿಕೊಂಡು ಬರುತ್ತಿದ್ದರು. ಬೊಂಬೆ ಅಡಿಸುವವರನ್ನು, ಮಾಂತ್ರಿಕರನ್ನು ಮತ್ತು ದೊಂಬರಾಟವನ್ನು ಆರ್ಥಿಕವಾಗಿ ಜಮೀನ್ದಾರಿ ವ್ಯವಸ್ಥೆ ಪೋಷಿಸುವಾಗ ಈ ಸಮುದಾಯಗಳಿಗೆ ಸಾಮಾಜಿಕ ಸ್ಥಾನಮಾನಗಳೂ ಲಭ್ಯವಾಗಿದ್ದವು. ಆದರೆ ಯಾವಾಗ ಜಮೀನ್ದಾರಿ ಪದ್ಧತಿಯನ್ನು ಕಾನೂನುಗಳು ರದ್ದು ಮಾಡಿದವೋ ಅಂದಿನಿಂದ ಈ ಸಮುದಾಯಗಳಿಗೆ ಆರ್ಥಿಕ ಪೋಷಣೆ ಇಲ್ಲದಂತಾಯ್ತು. ಈ ಸಮುದಾಯಗಳು ಚದುರಿ ಹೋಗಿ ಬೇರೆ ಬೇರೆ ಕಡೆ ಪ್ರದರ್ಶನ ಮಾಡಿ ಭಿಕ್ಷೆ ಬೇಡಿ ಬದುಕಲಾರಂಭಿಸಿದವು. ಈ ಬದಲಾವಣೆಯಿಂದ ಈ ಪ್ರದರ್ಶನಕಾರ ಸಮುದಾಯಗಳಿಗೆ ನಿಶ್ಚಿತ ಪ್ರದೇಶದಲ್ಲಿ ಬದುಕಿಗೆ ಸಾಕಾಗುವಷ್ಟು ಆರ್ಥಿಕತೆ ಲಭ್ಯವಾಗದ ಕಾರಣ ಅವು ಅಲೆಮಾರಿಗಳಾಗಿ ಬದುಕಲಾರಂಭಿಸಿದವು”[1] ಮೂಲತಃ ಆರ್ಥಿಕವಾಗಿ ಜಮೀನ್ದಾರರನ್ನೇ ನಂಬಿ ಬದುಕುತ್ತಿದ್ದ ಮತ್ತು ಅವರಿಂದ ದೊರೆಯುವ ನಿಶ್ಚಿತ ಆದಾಯ ಮೂಲವನ್ನೇ ಅವಲಂಬಿಸಿದ್ದ ಈ ಸಮುದಾಯಗಳು ಬದಲಾದ ಆರ್ಥಿಕ ವ್ಯವಸ್ಥೆಯಲ್ಲಿ ತಲ್ಲಣಗೊಂಡವು ಅಲೆಮಾರಿ ಸ್ಥಿತಿ ಇವರಿಗೆ ಅನಿವಾರ್ಯವಾಯಿತು.

ಹೆಳವ ಸಮುದಾಯವೂ ಸಹ ಇದಕ್ಕೆ ಹೊರತಾಗೇನು ಇರಲಿಲ್ಲ. ಹೆಳವರು ಚಾರಿತ್ರಿಕವಾಗಿ ಆಳುವ ವರ್ಗವನ್ನು ಅವಲಂಬಿಸಿದ್ದ ಸೇವಕ ಸಮುದಾಯವಾಗಿಯೇ ರೂಪುಗೊಂಡಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ.

**ಹೆಳವ ಸಮುದಾಯದ ಪಾರಂಪರಿಕ ಕಸಬು**

ಹೆಳವರಿಗೆ ಪರಂಪರೆಯಿಂದ ಬಂದ ಕಸಬು ವಂಶಾವಳಿ ಹೇಳುವುದು. ಇವರು ಸಾಂಪ್ರದಾಯಿಕ ವಂಶಾವಳಿಶಾಸ್ತ್ರಜ್ಞರು (Genologists). ಇವರ ಪಾರಂಪರಿಕ ಆರ್ಥಿಕ ಮೂಲವೂ ಇದೇ ಆಗಿದೆ. ಒಂದು ಬಗೆಯಲ್ಲಿ ಕೃಷಿಕರನ್ನು, ಅದರಲ್ಲೂ ಆಳುವ ವರ್ಗದ ಆರ್ಥಿಕ ಚಟುವಟಿಕೆಗಳನ್ನು ಆಶ್ರಯಿಸಿಯೇ ಬದುಕುವ ಅವಲಂಬಿತ ಸಮುದಾಯವಿದು. ಈ ಸಮುದಾಯದ ಎರಡು ಮುಖ್ಯ ಪಂಗಡಗಳೆಂದರೆ, ೧. ಎತ್ತಿನ ಹೆಳವು, ೨. ಗಂಟೆ ಹೆಳವರು. ಈ ಎರಡೂ ಪಂಗಡಗಳ ಮುಖ್ಯ ವೃತ್ತಿ ವಂಶಾವಳಿ ಹೇಳುವುದು.

**೧. ಎತ್ತಿನ ಹೆಳವರು**

ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಧಾರವಾಡ, ಬಿಜಾಪುರ, ಬೆಳಗಾಂವ್ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಇವರು ಹೆಚ್ಚಾಗಿ ಕಂಡು ಬರುತ್ತಾರೆ. ಇವರು ಈವತ್ತಿಗೂ ಅಲೆಮಾರಿಗಳಾಗಿಯೇ ಬದುಕುತ್ತಿದ್ದಾರೆ. 'ಚೆಪ್ಪೋಡು' ಎಂದು ಕರೆಯಲ್ಪಡುವ ಬೃಹತ್ ಪುಸ್ತಕದಲ್ಲಿ ತಾವು ಭೇಟಿ ಕೊಡುವ ಒಕ್ಕಲು ಮನೆಗಳ ಸದಸ್ಯರ ವಿವರಗಳನ್ನು ಇದರಲ್ಲಿ ದಾಖಲಿಸಿಕೊಳ್ಳುತ್ತಾರೆ. ಬಂಡಿಗಳನ್ನು ಕಟ್ಟಿಕೊಂಡು ಊರೂರಿಗೆ ಅಲೆಯುತ್ತಾ ತಮ್ಮ ಒಕ್ಕಲ ಮನೆಗಳನ್ನು ಸಂದರ್ಶಿಸುತ್ತಾರೆ. ಇವರು ಒಕ್ಕಲು ಮನೆಗಳಿಗೆ ಎತ್ತಿನ ಮೇಲೆ ಹತ್ತಿಕೊಂಡು, ಬಲಗಾಲನ್ನು ಪೂರ್ಣವಾಗಿ ಬಟ್ಟೆಯಿಂದ ಮರೆಮಾಡಿಕೊಂಡು ಚೆಪ್ಪೋಡುಗಳ ಸಮೇತ ಹೋಗುತ್ತಾರೆ. ಸಹಜವಾಗಿ ಇವರ ಒಕ್ಕಲುಗಳೆಂದರೆ ಕೃಷಿಕರು ಮತ್ತು ಪಶುಪಾಲಕರು. ಕೃಷಿಕರಲ್ಲಿ ಪ್ರಮುಖವಾಗಿ ಮಧ್ಯಮ ಜಾತಿಗಳಿಗೆ ಸೇರಿದ ಭೂಮಾಲಿಕರು ಮತ್ತು ಪಶುಪಾಲಕ ಸಮುದಾಯಗಳು. ಇವರು ಶ್ರೇಣಿಕೃತ ವ್ಯವಸ್ಥೆಯಲ್ಲಿ ತಮಗಿಂತ ಕೆಳ ಹಂತದಲ್ಲಿರುವ ಜಾತಿಗಳನ್ನು ತಮ್ಮ ಒಕ್ಕಲೆಂದು ಪರಿಗಣಿಸುವುದಿಲ್ಲ. ಸಾಮಾನ್ಯವಾಗಿ ತಮ್ಮ ಒಕ್ಕಲು ಮನೆಗಳಲ್ಲಿ ಹೆಳವರು ಧಾನ್ಯ ಇಲ್ಲವೆ ದನಕರುಗಳನ್ನು ಕೊಡುಗೆಯಾಗಿ

ಸ್ವೀಕರಿಸುತ್ತಾರೆ. ಆದರೆ ಈಚೆಗೆ ಇವರ ಕುರಿತು ಒಕ್ಕಲು ಮನೆಗಳಿಗೆ ಅಂತಹ ಒಲವಾಗಲಿ, ನಂಬಿಕೆಯಾಗಲಿ ಇದ್ದಂತೆ ಕಾಣುವುದಿಲ್ಲ. ಅಲ್ಲದೆ ತಮ್ಮ ಪಾರಂಪರಿಕ ಕಸುಬನ್ನು ಉಗ್ರವಾಗಿ ವಿರೋಧಿಸುವ ಜನರೂ ಹೆಳವ ಸಮುದಾಯದಲ್ಲಿಯೇ ಇದ್ದಾರೆ.

**೨. ಗಂಟೆ ಹೆಳವರು**

ಇವರು ಸಾಮಾನ್ಯವಾಗಿ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ, ಅದರಲ್ಲೂ ಮಂಡ್ಯ ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಾಣಸಿಗುತ್ತಾರೆ. ಗಂಟೆ ಹೆಳವರಲ್ಲಿ ಎರಡು ವಿಧದ ಗುಂಪುಗಳನ್ನು ಜೀ.ಶಂ.ಪ ಗುರುತಿಸುತ್ತಾರೆ. ೧. ಕಂಚಿನ ಗಂಟೆಯವರು, ೨. ಮರದ ಗಂಟೆಯವರು[2]. ಎಷ್ಟೋ ಸಲ ಈ ಗಂಟೆಗಳನ್ನು ಒಕ್ಕಲುಗಳೇ ಹೆಳವರೆ ಉಡುಗೊರೆಯಾಗಿ ನೀಡುತ್ತಾರೆ. ಗಂಟೆ ಹೆಳವರೂ ಸಹ ತಮ್ಮ ಒಕ್ಕಲು ಮನೆಗಳಿಗೆ ಹೋಗಿ ವಂಶಾವಳಿ ಹೇಳುತ್ತಾರೆ. ಆದರೆ ಇವರು ಎತ್ತಿನ ಮೇಲೆ ಹೋಗದೆ ನಡೆದುಕೊಂಡೇ ಮನೆಗಳಿಗೆ ಹೋಗುತ್ತಾರೆ. ಒಟ್ಟಿನಲ್ಲಿ ತಮ್ಮ ಒಕ್ಕಲು ಮನೆಗಳ ಸದಸ್ಯರ ವಿವರಗಳನ್ನು ದಾಖಲಿಸುವುದು ಮತ್ತು ಕಾಲನಂತರ ಆ ಮನೆಗಳಿಗೆ ತೆರಳಿ ಅವರ ವಂಶದ ಸದಸ್ಯರ ಹೆಸರುಗಳನ್ನು ಹೇಳುತ್ತಾ, ಗುಣಗಾನ ಮಾಡಿ ಹಾಡುತ್ತಾ ದಾನಗಳನ್ನು ಕೊಡುವಂತೆ ಆಗ್ರಹಿಸುವುದು ಹೆಳವರ ಮೂಲ ವೃತ್ತಿಯಗಿದೆ. ಒಂದು ಅರ್ಥದಲ್ಲಿ ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಇವರು ಸೇವಕ ವರ್ಗವಾಗಿ ಬದುಕಿ ಬಂದಿರುವುದನ್ನು ಕಾಣಬಹುದಾಗಿದೆ. ಕುಶಲಕರ್ಮಿಗಲು, ಪ್ರದರ್ಶಕ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳು ಮತ್ತು ಸೇವಕ ಸಮುದಯಗಳು ಒಂದೇ ಬಗೆಯ ಆರ್ಥಿಕ ವಾತಾವರಣದಲ್ಲಿ ಬದುಕಿ ಬಂದಿರುವುದನ್ನು ಕಾಣಬಹುದಾಗಿದೆ.

**ಅಲೆಮಾರಿಗಳ ಚಾರಿತ್ರಿಕ ರೂಪಾಂತರಗಳು**

ಹೆಳವರಂತಹ ಸೇವಕ ವರ್ಗದ ಸಮುದಾಯಗಳು ಯಾವತ್ತೂ ಆರ್ಥಿಕವಾಗಿ ಮೇಲ್ವರ್ಗಗಳನ್ನು ಅವಲಂಬಿಸಿಕೊಂಡೇ ಬಂದವುಗಳಾಗಿವೆ. ಈ ಸಮುದಾಯಗಳು ಉತ್ಪಾದಕ ಸಮುದಾಯಗಳಾಗಿದ್ದರೂ ಸಹ ಆರ್ಥಿಕವಾಗಿ ಮೇಲ್ವರ್ಗಗಳನ್ನು ಅವಲಂಬಿಸಿಕೊಂಡೇ ಬಂದಂತಹ ಸಮುದಾಯಗಳು. ಈ ಕಾರಣದಿಂದ ಕಾಲದಿಂದ ಕಾಲಕ್ಕೆ ಬದಲಾಗುತ್ತಿದ್ದ ಆರ್ಥಿಕ ಸನ್ನಿವೇಶಗಳಿಗೆ ಅನುಗುಣವಾಗಿ ಅಲೆಮಾರಿಗಳು ತಮ್ಮ ಚುಟುವಟಿಕೆಗಳನ್ನು ರೂಪಾಂತರಿಸಿಕೊಳ್ಳುತ್ತಲೇ ಬಂದಿದ್ದಾರೆ. ಈ ಬದಲಾವಣೆ ಒಂದು ರೀತಿಯಲ್ಲಿ ಬಲವಂತದ ಬದಲಾವಣೆ. ಈ ಕಾರಣಕ್ಕಾಗಿ ಕರ್ನಾಟಕದ ಅಲೆಮಾರಿಗಳ ಬದುಕಲ್ಲಿ ಅನೇಕ ರೂಪಾಂತರಗಳು ಸಂಭವಿಸಿವೆ. ಮತ್ತು ಒಂದು ಅರ್ಥದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಭಗ್ನಗೊಂಡ ಸ್ಥಿತಿಯಲ್ಲಿ ಈ ಸಮುದಾಯಗಳು ಬದುಕುತ್ತಿವೆ.

ಇನ್ನು ಅಲೆಮಾರಿಗಳ ಆರ್ಥಿಕ ಮೂಲಗಳು ಮತ್ತು ಅವು ಬೆಳೆದು ಬರಲು ಕಾರಣವಾದ ಚಾರಿತ್ರಿಕ ಅನಿವಾರ್ಯತೆಗಳನ್ನು ಗಮನಿಸಬಹುದಾಗಿದೆ. ಅಲೆಮಾರಿಗಳನ್ನು ನಾನು ಇಲ್ಲಿ ಐದು ಭಾಗಗಳಲ್ಲಿ ವಿಂಗಡಿಸಿದ್ದೇನೆ.

೧. ಪ್ರದರ್ಶಕ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳು
೨. ಕರಕುಶಲ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳು
೩. ಧಾರ್ಮಿಕ ಸಂಬಂಧೀ ವೃತ್ತಿಗಳನ್ನು ಅವಲಂಬಿಸಿರುವವರು
೪. ಪಾರಂಪರಿಕ ಮೂಲ ವೃತ್ತಿಗಳಲ್ಲೇ ಇರವ ಸಮುದಾಯಗಳು
೫. ಬೇಟೆ, ಪಶುಪಾಲನೆ ಮತ್ತು ಆಹಾರ ಸಂಗ್ರಹಣೆಯಂತಹ ಮೂಲ ಕಸಬುಗಳನ್ನು ಇನ್ನೂ ಅವಲಂಬಿಸಿರುವವರು.

ಹೀಗೆ ಐದು ವಿಧಗಳಲ್ಲಿ ಅಲೆಮಾರಿಗಳನ್ನು ವಿಂಗಡಿಸಬಹುದು. ಈ ವಿಂಗಡಣೆಯ ಚೌಕಟ್ಟಿಗೆ ಬಾರದ ಅಲೆಮಾರಿಗಳೂ ಸಹ ಕರ್ನಾಟಕದಲ್ಲಿರಬಹುದು. ಮೊದಲನೆಯದಾಗಿ ಪ್ರದರ್ಶಕ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳನ್ನು ನೋಡೋಣ.

**೧. ಪ್ರದರ್ಶನ ಕಲೆಗಳನ್ನು ಅವಲಂಬಿಸಿರುವವರು**

ಮುಖ್ಯವಾಗಿ ಇವರು ತಮ್ಮ ಪಾರಂಪರಿಕ ಸರಂಜಾಮುಗಳನ್ನು ಬಳಸಿಯೇ ಜನರನ್ನು ರಂಜಿಸಲೆತ್ನಿಸುತ್ತಾರೆ. ಆಧುನಿಕ ಮನರಂಜನಾ ಮಾಧ್ಯಮಗಳು ವಿಧಿಸುವ ನಿಶ್ಚಿತ ಶುಲ್ಕ, ಇಲ್ಲವೆ ನಿಯಮಗಳು ಇಲ್ಲಿರುವುದಿಲ್ಲ. ಡೊಂಬರಾಟದವನಿಗೆ, ಜಾತಿಗಾರರಿಗೆ, ಕಸರತ್ತುಗಳನ್ನು ಪ್ರದರ್ಶಿಸಲು ಬೀದಿಯ ಪಕ್ಕದ ಯಾವುದೇ ಬಯಲಾದರೂ ಆದೀತು. ಇಲ್ಲಿ ಪ್ರೇಕ್ಷಕ ತನಿಗಿಚ್ಚೆ ಬಂದಂತೆ ಹಣ ನೀಡಬಹುದು. ಇಲ್ಲವೆ ನೀಡದೆಯೂ ಇರಬಹುದು. ಈ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳೆಂದರೆ, ಡೊಂಬರು, ಜಾತಿಗಾರು, ಕಿಳ್ಳೆಕ್ಯಾತರು, ಹಗಲುವೇಷಗಾರರು, ಕವಲೆತ್ತಿನವರು, ದೊಂಬಿದಾಸರು, ಕಿನ್ನರಿ ಜೋಗಿಗಳು, ಬುಡಬುಡಿಕೆ, ಗೊಂದಲಿಗರು, ಮೋಡಿಕಾರರು ಮುಂತದ ಸಮುದಾಯಗಳು ಈ ಗುಂಪಿಗೆ ಸೇರುತ್ತವೆ.

**೨. ಕರಕುಶಲ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳು**

ಇವರು ಪಾರಂಪರಿಕವಾಗಿ ತಮ್ಮ ಕರಕುಶಲ ವೃತ್ತಿಗಳನ್ನೇ ಅವಲಂಬಿಸಿ ಕೊಂಡಿರುವಂಥವರು. ಸಾಂಪ್ರದಾಯಿತ ಉತ್ಪಾದನಾ ಸಾಧನಗಳಿಂದ ಹಳ್ಳಿಗರಿಗೆ ಉಪಯುಕ್ತವಾಗಬಲ್ಲ, ಕೃಷಿ ಸಂಬಂಧಿ ಇಲ್ಲವೆ ಗೃಹೋಪಯೋಗಿ ಉಪಕರಣಗಳನ್ನು ತಯಾರಿಸುತ್ತಾರೆ. ಇವರಲ್ಲಿ ಪ್ರಮುಖರು ಬಯಲು ಪತ್ತರ, ಬಯಲು ಕಮ್ಮಾರ, ಮೇದರು, ಪಿಂಜಾರರು, ಮುದ್ದೆಕಮ್ಮಾರರು, ಹಂಡಿಜೋಗಿಗಳು ಮುಂತಾದ ಸಮುದಾಯಗಳು ಈ ಗುಂಪಿಗೆ ಸೇರುತ್ತವೆ.

**೩. ಧಾರ್ಮಿಕ ಸಂಬಂಧೀ ವೃತ್ತಿಗಳನ್ನು ಅವಲಂಬಿಸಿರುವವರು**

ಇವರು ಮುಖ್ಯವಾಗಿ ಕೆಲವು ಅನುಭಾವಿ ಪಂಥಗಳಿಗೆ ಸೇರಿದವರು. ಅಲ್ಲದೆ ಶಕ್ತಿ ಆರಾಧಕರು. ಇವರು ದಾಸರ ಮತ್ತು ಅನುಭಾವಿಗಳ ಕಾವ್ಯಗಳನ್ನು, ತತ್ವಪದಗಳನ್ನ ಹಾಡುತ್ತ ಊರೂರು ಅಲೆಯುವವುರ. ಇವರಲ್ಲಿ ದುರುಗ ಮುರುಗಿಯರು, ಗೊರವರು, ದೊಂಬಿದಾಸರು. ಸುಡುಗಾಡು ಸಿದ್ದರು. ಅರ್ಜುನಜೋಗಿಗಳು, ಭೈರಾಗಿಗಳು ಮುಂತಾದವರು ಮುಖ್ಯರು.

**೪. ಪಾರಂಪರಿಕ ಮೂಲ ವೃತ್ತಿಗಳಲ್ಲೇ ಇರುವ ಸಮುದಾಯಗಳು**

ಈ ಗುಂಪಿಗೆ ಸೇರಿದ ಸಮುದಾಯಗಳು ಆರ್ಥಿಕವಾಗಿ ಸಮಾಜದ ಪ್ರಬಲ ಸಮುದಾಯಗಳನ್ನು ಪಾರಂಪರಿಕವಾಗಿ ಅವಲಂಬಿಸಿರುವವರು. ಅವರಲ್ಲಿ, ಹೆಳವರು, ದಕ್ಕಲರು, ಮೊಂಡುರ ಪ್ರಮುಖರು, ಹಲವು ಪಾಳೇಗಾರರಿಗೆ, ಭೂಮಾಲಿಕರಿಗೆ 'ಮನೆಮಕ್ಕಳಾಗಿ' ಇವರು ಸೇವೆ ಸಲ್ಲಿಸುತ್ತಾರಲ್ಲದೆ, ಊರೂರು ಸುತ್ತಿ ಅವರ ವಂಶಾವಳಿಯನ್ನು ದಾಖಲಿಸುತ್ತಾರೆ.

**೫. ಬೇಟೆ, ಪಶುಪಾಲನೆ ಮತ್ತು ಆಹರ ಸಂಗ್ರಹನೆಯಂತಹ ಮೂಲ ಕಸಬುಗಳನ್ನು ಇನ್ನು ಅವಲಂಬಿಸಿರುವವರು**

ಈ ಗುಂಪಿಗೆ ಸೇರಿದ ಇನ್ನೂ ಬೇಟೆಯನ್ನು, ಪಶುಪಾಲನೆಯನ್ನು ಮತ್ತು ಆಹರ ಸಂಗ್ರಹಣೆಯನನ್ನು ನಂಬಿದವರು. ಅಡವಿ ಚೆಂಚರು, ಯಾನಾದಿಗಳು. ಹಕ್ಕಿಪಿಕ್ಕಿಗಳು ಇನ್ನೂ ಬೇಟೆಯನ್ನೇ ನಂಬಿಕೊಂಡಿದ್ದಾರೆ. ಅಲೆಮಾರಿ ಕುರುಬರು ಪಶುಪಾಲನೆಯನ್ನು, ಗೋಸರಂಗಿಗಳೂ, ಕಿಳ್ಳೆಕ್ಯಾತರು, ಒಳನಾಡ ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ. ಇನ್ನೂ ಪಾರಂಪರಿಕ ವೈದ್ಯವನ್ನೇ ನಂಬಿರುವ ರಾಜಗೊಂಡರು ಮತ್ತು ಅಲೆಮಾರಿ ವರ್ತಕರಾಗಿಯೇ ಜೀವಿಸುತ್ತಿರುವ ೨೪ ಮನೆ ತೆಲುಗು ಶೆಟ್ಟರು ಸಹ ಕರ್ನಾಟಕದಲ್ಲಿದ್ದಾರೆ.

ಈ ವಿಂಗಡಣೆಯನ್ನು ನಾವು ಇನ್ನೂ ಸೂಕ್ಷ್ಮವಾಗಿ ಪರಿಶೀಲಿಸಬಹುದಾಗಿದೆ. ಮೇಲೆ ನಾನು ಐದು ಭಾಗದಲ್ಲಿ ಪಟ್ಟಿಮಾಡಿರುವ ಅಲೆಮಾರಿ ಸಮುದಾಯಗಳನ್ನು ಮತ್ತು ಅವರುಗಳ ಆರ್ಥಿಕ ಮೂಲಗಳನ್ನು ಗಮನಿಸಿ, ಕೆಲವು ಅಲೆಮಾರಿಗಳ ಕಸಬುಗಳನ್ನು ಕೈಗಾರಿಕೀಕರಣ ತನ್ನೆಲ್ಲ ಚಮತ್ಕಾರಿಕ ತಂತ್ರಜ್ಞಾನದ ಮೂಲಕ ಬಂಡವಾಳಶಾಹಿಗಳ ಕೈಗೆ ಒಪ್ಪಿಸಿಯಾಗಿದೆ. ಏಕೆಂದರೆ

ಇಂಡಿಯಾದ ಅಸಮಾನ ಸಮಾಜದಲ್ಲಿ ಯಾವ ಬಗೆಯ ಆರ್ಥಿಕ ಅಧಿಕಾರಗಳನ್ನು ಹೊಂದದ ಇಲ್ಲಿನ ಕುಶಲಕರ್ಮಿಗಳಿಗೆ ತಮ್ಮ ಪರಂಪರಿಕ ಕೌಶಲಗಳನ್ನು ಉದ್ಯಮವಾಗಿಸುವ ಅವಕಾಶಗಳೇ ಇರಲಿಲ್ಲ. ಆಧುನಿಕ ಉದ್ಯಮಗಳು ಸ್ಥಳೀಯ ಕೌಶಲಗಳನ್ನು ಮಾತ್ರ ಅಲವಡಿಸಿಕೊಂಡು, ಆ ಕೌಶಲಗಳನ್ನು ರೂಪಿಸಿಕೊಂಡು ಬಂದಿದ್ದ ಸಮುದಾಯಗಳನ್ನು ಕೈಬಿಟ್ಟವು. ಇನ್ನು ಪ್ರದರ್ಶಕ ಕಲೆಗಳನ್ನು ನಂಬಿಕೊಂಡು ಬಂದಿದ್ದ ಸಮುದಾಯಗಳ ಕಥೆ ಇನ್ನೂ ಚಿಂತಾಜನಕವಾದದ್ದು. ಆಧುನಿಕ ಮಾಧ್ಯಮಗಳು ತಮ್ಮೆಲ್ಲ ಥಳುಕಗಳಿಂದ ಈ ಪಾರಂಪರಿಕ ಪ್ರದರ್ಶನಕಾರರನ್ನು ಮೂಲೆಗೆ ತಳ್ಳಿದವು. ಪಾರಂಪರಿಕ ಪ್ರದರ್ಶನ ಕಲೆಗಳಿಗೆ, ಆಧುನಿಕ ಮಾಧ್ಯಮಗಳು ಹಂಚುವ ರೋಮಾಂಚನಗಳನ್ನು ನೀಡಲು ಸಾಧ್ಯವಾಗಲೇ ಇಲ್ಲ. ಇನ್ನು ಊಳಿಗಮಾನ್ಯ ವ್ಯವಸ್ಥೆಯ ಭಾಗವಾಗಿ ತಮ್ಮ ವೃತ್ತಿಗಳಲ್ಲಿ ತೊಡಗಿದ್ದ ಹೆಳವರನ್ನು, ದಕ್ಕಲರನ್ನು ಸಾಕುವಷ್ಟು ಶಕ್ತಿಯನ್ನು ಊಳಿಗಮಾನ್ಯ ಪ್ರಭುಗಳು ಹಂತಹಂತವಾಗಿ ಕಳೆದುಕೊಳ್ಳುತ್ತಾ ಬಂದರು. ಇನ್ನೂ ಮುಖ್ಯವಾದ ಸಂಗತಿಯೆಂದರೆ, ಉಚಲ್ಯಾದಂತಹ ಸಮುದಾಯಗಳು ತಮಗೆ ಶಾಪದಂತೆ ಅಂಟಿಕೊಂಡು ಬಂದಿದ್ದ ತಮ್ಮ ಕಸುಬುಗಳನ್ನು ತಾವೇ ಬಿಟ್ಟುಕೊಡಲು ಸಿದ್ಧವಾದವು. ಮಲ ಹೊರುವ, ಆ ಕಾರಣಕ್ಕಾಗಿಯೇ ಅಸ್ಪೃಶ್ಯರಾಗಿಯೇ ಉಳಿವ ಸಮುದಾಯಗಳು ಹೇಗೆ ತಾನೇ ತಮ್ಮ ಮೂಲವೃತ್ತಿಗಳಲ್ಲಿ ಉಳಿಯಲು ಸಾಧ್ಯ? ಒಟ್ಟಿನಲ್ಲಿ ಇಲ್ಲಿನ ಸಮುದಾಯಗಳು ಬದಲಾದ ಸಂದರ್ಭಗಳಲ್ಲೆಲ್ಲ ತಮ್ಮ ತಮ್ಮ ಪಾರಂಪರಿಕ ಆರ್ಥಿಕ ಮೂಲಗಳನ್ನು ಉಳಿಸಿಕೊಳ್ಳುವ ಇಲ್ಲವೆ ಬಿಟ್ಟು ಕೊಡುವ ಸಂದಿಗ್ಧಗಳಿಗೆ ಮುಖಾಮುಖಿಯಾಗುತ್ತಲೇ ಬಂದಿವೆ. ಹೀಗಾಗಿ ಅಲೆಮಾರಿಗಳು ಚರಿತ್ರೆಯ ಉದ್ದಕ್ಕೂ ಅತ್ಯಂತ ಅನಿಶ್ಚಿತ ಆರ್ಥಿಕ ಮೂಲಗಳನ್ನೇ ನಂಬಿಕೊಂಡು ಬಂದಿದ್ದಾರೆ.

**ದುರ್ಗಮ ದಾರಿಯಲ್ಲಿ ಅಲೆಮಾರಿಗಳು**

ಈವತ್ತು ಅಲೆಮಾರಿಗಳೆಂದು ಕರೆಸಿಕೊಳ್ಳುವ ಬಹುತೇಕ ಎಲ್ಲ ಸಮುದಾಯಗಳಿಗೆ ಅವುಗಳ ಚರಿತ್ರೆಯಲ್ಲಿ ನಿಶ್ಚಿತ ಆದಾಯವನ್ನು ತಂದುಕೊಡುವ ಸ್ಥಿರಾಸ್ತಿಗಳಿರಲಿಲ್ಲ. ಆರ್ಥಿಕವಾಗಿ ಅಲೆಮಾರಿಗಳು ಉತ್ಪಾದಕ ಸಮುದಾಯಗಳನ್ನು ಅವಲಂಬಿಸಲೇಬೇಕಿತ್ತು. ಭಾರತದ ಸಮುದಾಯಗಳ ಮೂಲ ಕಸುಬಾದ ಕೃಷಿಯನ್ನು ಇವರು ಕೈಗೊಳ್ಳುವ ಯಾವ ಪಾರಂಪರಿಕ ಸಿದ್ಧತೆಗಳೂ ಇಲ್ಲದ ಕಾರಣಕ್ಕಾಗಿ ಇವರು ಕೃಷಿಕರಾಗುವ ಸಾಧ್ಯತೆಗಳಿರಲಿಲ್ಲ. ಪ್ರಾಸಂಗಿಕವಾಗಿ ದತ್ತಿಯ ಮೂಲಕ ಬಂದ ಜಮೀನನ್ನು ಅವರು ಉಳುಮೆ ಮಾಡಲಿಲ್ಲ. ಅಲೆಮಾರಿ ಡೊಂಬರ ಸಮುದಾಯದಿಂದ ಪ್ರತ್ಯೇಕಗೊಂಡು, ಇನ್ನೂ ಅಲೆಮಾರಿಗಳಾಗಿರುವ ಮತ್ತು ಬೀದಿ ಬದಿಯ ಕಸರತ್ತುಗಳನ್ನೇ ಅವಲಂಬಿಸಿರುವ ಜಾತಿಗಾರರು ಈವತ್ತು ಇದೇ ಸಮಸ್ಯೆಯಿಂದ ಚಡಪಡಿಸುತ್ತಿದ್ದಾರೆ. ಯಾವುದೋ ಹಂತದಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಡೊಂಬರೇ ಜಾತಿಗಾರರಾಗಿ ರೂಪಗೊಂಡಿದ್ದಾರೆ. ಅವರು ಸಾಹಸಗಳನ್ನು, ಕಸರತ್ತುಗಳನ್ನು ತಮ್ಮ ವೃತ್ತಿಯನ್ನಾಗಿಸಿಕೊಂಡವರು. ಇವರಿಗೆ ದಾನವಾಗಿ ಕೃಷಿ ಜಮೀನು ಸಿಕ್ಕರೂ ಇವರು. ಕೃಷಿಕರಾಗಲಿಲ್ಲ. ಮಧ್ಯಕಾಲದ ಆರ್ಥಿಕ ವ್ಯವಸ್ಥೆಯೇ ಅವರನ್ನು ತಮ್ಮ ಮೂಲ ವೃತ್ತಿಯಲ್ಲೇ ಮುಂದುವರಿಯುವಂತೆ ಪ್ರೇರೇಪಿಸಿದಂತಿದೆ. ಭೂಮಿ ಸಿಕ್ಕರೂ ಅವರು ಕೃಷಿಕರಾಗಿಲ್ಲ. "ಮುಧೋಳ್ ತಾಲೂಕಿನ ಮಂಟೂರು, ಜಮಖಂಡಿ ತಾಲೂಕಿನ ಸಾವಳಗಿ, ಗೋಠೆ, ಗದ್ಯಾಳ ಮುಂತಾದ ಹಲವು ಕಡೆ ತಮ್ಮ ಜಾತಿಯಲ್ಲಿಯ ಶ್ರೇಷ್ಠರಾದ ಹಿರಿಯರಿಗೆ ಇನಾಮಾಗಿ ದೊರೆತ ಭೂಮಿಗಳಿರುವುದಾಗಿ ಈ ಜಾತಿಗಾರರಲ್ಲಿಯ ವಯೋವೃದ್ಧರು ಅತ್ಯಂತ ಅಭಿಮಾನದಿಂದ ಹೇಳುತ್ತಾರೆ. ಹೀಗೆ ಇನಾಮು ದೊರೆತ ಜಮೀನುಗಳು ಹೆಚ್ಚಾಗಿ ವಿಜಾಪುರ ಜಿಲ್ಲೆಯಲ್ಲಿಯೇ ಇರುವುದು ಗಮನಾರ್ಹ ಸಂಗತಿಯಾಗಿದೆ. ಆದರೆ ಇಂಥ ಬಹುಪಾಲು ಜಮೀನುಗಳು ಇಂದು ಅವರ ಕೈಯಲ್ಲಿ ಉಳಿದಿಲ್ಲ. ಕೆಲವನ್ನು ಇವರು ಎಂದೋ ಮಾರಿಕೊಂಡಿದ್ದಾರೆ. ಇನ್ನು ಕೆಲವು ಜಮೀನುಗಳು ರೈತರಿಗೆ ದಕ್ಕಿಹೋಗಿವೆ. ಏಕೆಂದರೆ ಜಮೀನುಗಳನ್ನು ಇನಾಮಾಗಿ ಪಡೆದ ಮೇಲೆಯೂ ಇವರಾರೂ ಸಾಮಾನ್ಯವಾಗಿ ಒಕ್ಕಲುತನ ವೃತ್ತಿಗಿಳಿದಿಲ್ಲ. ಮತ್ತು ಆ ಊರುಗಳಲ್ಲಿ ಇವರು ಶಾಶ್ವತವಾಗಿ ನೆಲೆಸಿಯೂ ಇಲ್ಲ. ತಮ್ಮ ಕಸರತ್ತು ಮತ್ತು ಸೋಗುಗಳನ್ನು ಪ್ರದರ್ಶಿಸುತ್ತ ಊರಿಂದೂರಿಗೆ ಅಲೆದಾಡುವ ವೃತ್ತಿಯನ್ನೇ ಜಾತಿಗಾರರು ಒಗ್ಗಿಸಿಕೊಂಡಿದ್ದಾರೆ"[3] ಹೀಗಾಗಿ ಇಂತಹ ಅಲೆಮಾರಿಗಳಿಗೆ ಭೂಮಿ ದಕ್ಕಿದರೂ ಅವರಿಗೆ ಅದು ಆರ್ಥಿಕ ಮೂಲವಾಗಲಿಲ್ಲ. ಅಲ್ಲದೆ "ಕೃಷಿ ಪೂರಕ ಚಟುವಟಿಕೆಗಳನ್ನು ಅವಲಂಬಿಸಿದ್ದ ಕರಕುಶಲ ಕರ್ಮಿಗಳಿಗೆ ಮತ್ತು ಮನರಂಜಕ ಸಮುದಾಯಗಳಿಗೆ ಕೊಡುತ್ತದ್ದ ಕೃಷಿ ಭೂಮಿಯು ಸ್ಥಳೀಯ ಭೂಮಾಲಿಕನ ವಿವೇಚನೆಗೆ ಒಳಪಡುತ್ತಿತ್ತು. ಮತ್ತು ಅದು ಭೂಮಾಲಿಕ ವ್ಯವಸ್ಥೆಯ ಎಲ್ಲ ಕಾನೂನುಗಳಿಗೂ ಬದ್ಧವಾಗಿರುತ್ತಿತ್ತು. ಅಲ್ಲದೆ ನಿಯಮಕ್ಕೊಳಪಟ್ಟ ಗ್ರಾಮದ ಒಟ್ಟು ಉತ್ಪಾದನಾ ಚಟುವಟಿಕೆಗಳ

ಭಾಗವಾಗಿ ಈ ದಾನದ ಪ್ರಕ್ರಿಯೆ ಜಾರಿಯಲ್ಲಿರುತ್ತಿತ್ತು. ಭೂಮಾಲಿಕ ಇಚ್ಛೆಪಡದ ಸಂದರ್ಭದಲ್ಲಿ ಈ ದಾನದ ಜಮೀನು ಬೇರೆಯವರಿಗೆ ಸಂದಾಯವಾಗುತ್ತಿತ್ತು. ಇಲ್ಲವೆ ರದ್ದಾಗುತ್ತಿತ್ತು."[4]ಮಧ್ಯಕಾಲದ ಭೂಮಾಲಿಕ ವ್ಯವಸ್ಥೆಯು, ಭೂಮಿಯನ್ನು ಮತ್ತು ಕೃಷಿಕ ಸಮುದಾಯಗಳ ಒಟ್ಟು ವ್ಯವಸಾಯೀ ಚಟುವಟಿಕೆಗಳನ್ನು, ಅಂದಿನ ಮೊಘಲ್ ಆಡಳಿತ ರೂಪಿಸಿದ್ದ ಭೂನಿಯಮಗಳನ್ನು ವಿಕೃತಗೊಳಿಸಿಕೊಂಡು ನಿಯಂತ್ರಿಸುತ್ತಿತ್ತು. ಹೀಗೆ ಈ ಬಗೆಯ ಸಮುದಾಯಗಳಿಗೆ ನೀಡುತ್ತಿದ್ದ ದಾನದ ಜಮೀನು ಸಹ ಅನೇಕ ರೀತಿಯ ನಿಯಮಗಳಿಗೆ ಬದ್ಧವಾಗಿರಬೇಕಿತ್ತು.

"ಎರಡು ಬಗೆಯಲ್ಲಿ ಭೂಮಿಯನ್ನು ದಾನ ಮಾಡಲಾಗುತ್ತಿತ್ತು. ಒಂದನೆಯದು, ಒಂದು ಗ್ರಾಮದ ಒಟ್ಟು ಕೃಷಿ ಉತ್ಪಾದನೆಯಲ್ಲಿ ಸಹಾಯಕರಾಗಿರುತ್ತಿದ್ದ ಭೂರಹಿತ ಸಮುದಾಯಗಳಿಗೆ ಕೃಷಿ ಭೂಮಿಯನ್ನು ದಾನ ಮಾಡಲಾಗುತ್ತಿತ್ತು. ಎರಡನೆಯದು, ದತ್ತಿದಾನವಾಗಿತ್ತು. ಈ ದತ್ತಿ ಭೂಮಿಯನ್ನು ಪುರೋಹಿತರಿಗೆ, ಮಠಗಳಿಗೆ ಕೊಡಲಾಗುತ್ತಿತ್ತು. ಇಂತಹದನ್ನು ಇನಾಮು ಭುಮಿ ಎಂದು ಕರೆಯಲಾಗುತ್ತದೆ. ಆದರೆ ಈ ಎರಡು ಭೂದಾನಗಳಲ್ಲಿ ಅನೇಕ ವ್ಯತ್ಯಾಸಗಳಿವೆ. ಮೊದಲನೆಯ ಭೂದಾನದಲ್ಲಿ, ಕೃಷಿಪೂರಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿದ್ದ ಸಮುದಾಯಗಳಿಗೆ ಮತ್ತು ವೈದ್ಯರಿಗೆಕ, ಪ್ರದರ್ಶಕ ಕಲೆಗಳನ್ನು ಅವಲಂಬಿಸಿದವರಿಎ, ಉದಾ. ಡೊಂಬರಂತಹ ಸಮುದಾಯಗಳಿಗೆ ಕೊಡುವ ದಾನವು ಪಾರಂಪರಿಕವಾಗಿ 'ಶ್ರಮವನ್ನು ತೆಗೆದುಕೊಳ್ಳುವ ಮತ್ತು ಕೊಡುವ' ಪ್ರಕ್ರಿಯೆಯನ್ನು ಅವಲಂಬಿಸಿರುತ್ತದೆ. ಅಂದರೆ ಇಡೀ ಗ್ರಾಮದ ಉತ್ಪಾದನೆಯಲ್ಲಿ ಪೂರಕ ಕೆಲಸಗಳನ್ನು ನಿರ್ವಹಿಸುವ ಸಮುದಾಯಗಳಿಗಿಗೆ ಕೊಡಲೇ ಬೇಕಾದ ದಾನವಾಗಿರುತ್ತದೆ. ಆದರೆ ಹಳ್ಳಿಯ ಮುಖ್ಯವಸ್ಥ ಅಥವಾ ಅಧಿಕಾರಿ ವರ್ಗ ಈ ಜಮೀನುಗಳನ್ನು ಕೆಲವು ಶರತ್ತುಗಳ ಮೇಲೇಯೇ ದಾನ ಮಾಡಿರುತ್ತದೆ. ಶರತ್ತುಗಳು ಉಲ್ಲಂಘನೆಯಾದಾಗ ಸಹಜವಾಗಿಯೆ ಅಧಿಕಾರಿ ವರ್ಗ ತನ್ನ ನಿಯಮದ ಪ್ರಕರ ದಾನ ಮಾಡಿದ ಜಮೀನನ್ನು ಮರುವಶಪಡಿಸಿಕೊಳ್ಳುವ ಅಧಿಕಾರವನ್ನೂ ಪಡೆದುಕೊಂಡಿತ್ತು"[5] ಹೀಗೆ ದಾನವಾಗಿ ಬಂದ ಕೃಷಿ ಭೂಮಿಯಿಂದ ಸಹ ಈ ಸಮುದಾಯಗಳಿಗೆ ನಿಶ್ಚಿತ ಆದಾಯ ಬರುವ ಭರವಸೆಯೇನೂ ಇರಲಿಲ್ಲ. ಈ ಜಮೀನುಗಳು ಮೇಲು ನೋಟಕ್ಕೆ ತೆರಿಗೆ ಮುಕ್ತ ಅಥವಾ ಕಂದಾಯ ರಹಿತ ಜಮೀನುಗಳಾಗಿದ್ದರೂ, ಅದರ ಎಲ್ಲ ಅನುಕೂಲಗಳನ್ನೂ ಅನುಭವಿಸುತ್ತಿದ್ದವರು ಮಾತ್ರ ಸ್ಥಳೀಯ ಭೂಮಾಲಿಕ ವರ್ಗವೇ ಆಗಿರುತ್ತಿತ್ತು. "ಹೀಗೆ ತೆರಿಗೆ ಮುಕ್ತವಾಗಿ ಸಿಕ್ಕ ಕೃಷಿ ಭೂಮಿಯನ್ನು ಈ ಕುಶಲಕರ್ಮಿ ಮತ್ತು ಮನರಂಜಕ ವರ್ಗಗಳು ಉಳುಮೆ ಮಾಡುತ್ತಿರಲಿಲ್ಲ. ದಲಿಗೆ ಇಡೀ ಹಳ್ಳಿ ಆ ಜಮೀನುಗಳ ಉಸ್ತುವಾರಿ ನೊಡಿಕೊಳ್ಳುತ್ತಿತ್ತು. ಮತ್ತು ಸುಗ್ಗಿಯ ಸಂದರ್ಭದಲ್ಲಿ ಕುಶಲಕರ್ಮಿಗಳಿಗೆ ಇಂತಿಷ್ಟು ಎಂದು ಪಾಲನ್ನು ನೀಡಲಾಗುತ್ತಿತ್ತು. ಆದರೆ ಪಾಲು ಅಥವಾ ಆಯ ಪಡೆಯುತ್ತಿದ್ದ ಈ ಅವಲಂಬಿತ ಸಮುದಾಯಗಳಲ್ಲೂ ಸಮಾನತೆ ಇರಲಿಲ್ಲ. ಇವರು ತಮ್ಮ ಗ್ರಾಮದ ಕೃಷಿಕರ ಕೃಪಾಕಟಾಕ್ಷಕ್ಕೆ ಒಳಗಾಗಿಯೇ ಬದುಕಬೇಕಿತ್ತು. ಅಲ್ಲದ ಗ್ರಾಮದ ಮುಖ್ಯಸ್ಥ ಮೇಲ್ಜಾತಿಯವನೇ ಆಗಿದ್ದರಿಂದಾಗಿ ಈ ಕೆಳಜಾತಿಯ ಜನ ಭೂಮಾಲಿಕನಿಂದ ಸತತ ಶೋಷಣೆಗೆ ಒಳಗಾಗಲೇ ಬೇಕಿತ್ತು."[6] ಮೇಲಿನ ಉಲ್ಲೇಖಗಳನ್ನು ಗಮನಿಸಿದಾಗ ಈ ಸಮುದಾಯಗಳು ಆರ್ಥಿಕವಾಗಿ ಪರಾವಲಂಬಿಗಳಾಗಿಯೇ ಇರಬೇಕಿತ್ತು. ಭೂಮಿ ಸಿಕ್ಕರೂ ಅವರು ಅದರ ಒಡೆಯಾರಾಗುವ ಅವಕಾಶವಿರಲಿಲ್ಲ. "ಕರ್ನಾಟಕದ ಯಾವ ಶಾಸನದಲ್ಲಾಗಲಿ, ಸಾಹಿತ್ಯ ಕರತಿಯಲ್ಲಾಗಲಿ ಹೊಲೆಯರು ಭೂಮಿಗೆ ಒಡೆಯರಾಗಿದ್ದರೆಂಬುದಕ್ಕೆ ಯವುದೇ ಸೂಚನೆ ಇಲ್ಲ. ವೃತ್ತಿಯಾಗಿ ವ್ಯವಸಾಯ ಅವರಿಗೆ ನಿಷಿದ್ಧ"[7] ಈ ಬಗೆಯ ನಿಷೇಧಕ್ಕೂ ಹಿಂದೂ ಧಜರ್ಮಶಾಸ್ತ್ರಗ್ರಂಥಗಳು ಹೇಳುವ ಇಂಡಿಯಾದ ಸಾಮಾಜಿಕ ಕಾನೂನುಗಳಿಗೆ ನೇರ ಸಂಬಂಧವಿದೆ. ಕುಶಲಕರ್ಮಿ ಮತ್ತು ಪ್ರದರ್ಶಕ ಕಲೆಗಳನ್ನು ನಂಬಿದ್ದ ಸಮುದಾಯಗಳು ಯಾವತ್ತೂ ಜಾತಿ ಶ್ರೇಣೀಕರಣದ ಅಂಚಿನ ಸಮುದಯಗಳಾಗಿಯೆ ಇದ್ದವು. "ಇವರಿಗೆ ಗ್ರಾಮದ ಹೊರಗೆ ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿತ್ತು. ಮತ್ತು ಇವರಿಗೆ ಕೊಡುವ ದಾನದ ಕೃಷಿ ಜಮೀನು ಸಹ ಉತ್ಕೃಷ್ಟವಾಗೇನು ಇರುತ್ತಿರಲಿಲ್ಲ. ಜೊತೆಗೆ ಈ ಜಮೀನಿನ ಮೇಲೆ ಅವರಿಗೆ ಒಡೆತನವೂ ಇರದ ಕಾರಣ, ಕೃಷಿಕರೇ ಆ ಜಮೀನನ್ನು ಉತ್ತು ಸುಗ್ಗಿಯ ಸಂದರ್ಭದಲ್ಲಿ ಇಂತಿಷ್ಟು ಎಂದು ಪಾಲು ಕೊಡುತ್ತಿದ್ದರು"[8] ಈ ಕಾರಣದಿಂದಾಗಿ ಕುಶಲಕರ್ಮಿ ಮತ್ತು ಪ್ರದರ್ಶಕ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳ ಆರ್ಥಿಕ ಸ್ಥಿತಿಗತಿಗಳನ್ನು ಇಂಡಿಯಾದ ಪಾರಂಪರಿಕ ಸಮಾಜದ ನಿಯಮಗಳ ಆಚೆಗಿಟ್ಟು ನೋಡಾಲಾಗುವುದಿಲ್ಲ. "ಈ ಸಮುದಾಯಗಳು ಹಳ್ಳಿಗಳಿಗೆ ಸಲ್ಲಿಸುತ್ತಿದ್ದ ಸೇವೆಯನ್ನು ಭೂಮಾಲಿ ವರ್ಗವುಗುತ್ತಿಗೆ ಆಳಿನ ಸೇವೆಯನ್ನು ಪಡೆದಂತೆಯೇ ಪಡೆಯುತ್ತಿತ್ತು"[9] ಸೇವೆಯನ್ನು ಪಡದುಕೊಳ್ಳುವುದಕ್ಕೆ ಪ್ರತಿಯಾಗಿ ನಿಯಮಬದ್ಧ ದಾನಗಳನ್ನು ಮಾತ್ರ ಪಡೆಯಲು ಈ ಸಮುದಾಯಗಳಿಗೆ ಸಾಧ್ಯವಿತ್ತು. ಶ್ರೇಣೀಕರನಾದ ಕೊನೆಯಲ್ಲಿರುವ ಜನ ಮೇಲ್ಜಾತಿಗಳ

ಸೇವೆಯನ್ನು ಮಾಡಲೆಂದೇ ಹುಟ್ಟಿದ್ದಾರೆ ಎಂದು ಹೇಳುವ ಹಿಂದೂ ಕರ್ಮಸಿದ್ಧಾಂತಕ್ಕೆ ಮೇಲಿನ ನಿಯಮ ಪೂರಕವಾಗಿಯೇ ಇದೆ. ಮಧ್ಯಕಾಲೀನ ಭೂಮಾಲಿಕ ವ್ಯವಸ್ಥೆ ತನ್ನನ್ನು ಸಮರ್ಥಿಸಿಕೊಳ್ಳಲು ಪರಂಪರೆಯಲ್ಲಿನ ಪುರಾವೆಗಳನ್ನೇ ಬಳಸಿಕೊಂಡಿತ್ತು. ಆದ್ದರಿಂದ "ಜಾತಿ ವ್ಯವಸ್ಥೆಯನ್ನು ಬದಿಗಿಟ್ಟು ಭೂಮಾಲಿಕ ವ್ಯವಸ್ಥೆಯನ್ನು ನೋಡಲು ಸಾಧ್ಯವಿಲ್ಲ. ಭೂಮಾಲಿಕತ್ವವು ಭಾರತದ ಶ್ರೇಣೀಕರಣದ ಅವಿಭಾಜ್ಯ ಅಂಗ"[10] ಈ ಕಾರಣಕ್ಕಾಗಿ ಸೇವೆಯನ್ನು ಒದಗಿಸುವ ಈ ಸಮುದಾಯಗಳು ಆರ್ಥಿಕವಾಗಿ ಪರಾವಲಂಬಿಗಳಾಗುವ ಅನಿವಾರ್ಯತೆಯನ್ನು ಭೂಮಾಲಿಕ ಪ್ರಧಾನ ಸಮಾಜ ಸೃಷ್ಟಿಸಿಬಿಟ್ಟಿತ್ತು.

ಮಧ್ಯಕಾಲೀನ ಭಕ್ತಿ ಚಳುವಳಿಗಳು ಮತ್ತು ಸಮಾಜ ಸುಧಾರಕ ಪಂಥಗಳು ಈ ಬಗೆಯ ಸಮುದಾಯಗಳ ಸಬಲೀಕರಣಕ್ಕೆ ಯತ್ನಿಸಿದವಾದರೂ, ಅಂತಹ ದೊಡ್ಡ ಯಶಸ್ಸನ್ನು ಅವು ಕಾಣಲಾಗಲಿಲ್ಲ. ಕಾರಣ ಈ ಚಳುವಳಿಗಳಿಗೆ ಸ್ಪಷ್ಟ ರಾಜಕೀಯ ಸಿದ್ಧಾಂತದ ತಳಹದಿಯ ಕೊರತೆ ಇತ್ತು. ಕೆಳಜಾತಿ ಸಮುದಾಯಗಳ ಬಡತನವನ್ನೇ ಅವು ವೈಭವೀಕರಿಸಿ, ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸಿದವು. ಆದರೆ ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸುವ ಆರ್ಥಿಕತೆಯ ಕುರಿತು ಈ ಚಳುವಳಿಗಳು ಅಷ್ಟಾಗಿ ಗಮನಹರಿಸಲಿಲ್ಲ. ಇದ್ದ ವ್ಯವಸ್ಥೆಯಲ್ಲಿಯೇ ಸುಧಾರಣೆ ತರುವುದು ಈ ಚಳುವಳಿಗಳ ಮುಖ್ಯ ಉದ್ದೇಶವಾಗಿತ್ತು. ಈ ಚಳುವಳಿಗಳು "ಸಾಮಾಜಿಕ ಅಸಮಾನತೆಯನ್ನು ಖಂಡಿಸಿದಂತೆ ಆರ್ಥಿಕ ಅಸಮಾನತೆಯನ್ನು ಖಮಡಿಸಲಿಲ್ಲ. ಟೀಕೆ ಆಕ್ರೋಶ, ಕ್ರೋಧಗಳಿಗೆ ಬ್ರಾಹ್ಮಣ ಗುರಿಯಾದಂತೆ ವೈಶ್ಯನೋ ಬಣಜಿಗಣೋ ಅಧಿಕಾರಿಯೋ ರಾಜನೋ ಗುರಿಯಾಗಲಿಲ್ಲ. ಅದಕ್ಕೆ ಅಂದಿನ ಚಳುವಳಿಯ ಚೌಕಟ್ಟಿನ ಮಿತಿ ಕಾರಣ"[11] ಇದರಿಂದಾಗಿ ಕೆಳಜಾತಿ ಮತ್ತು ಕರಕುಶಲಕರ್ಮಿ ಸಮುದಾಯಗಳಿಗೆ ಒಂದು ಬಗೆಯಲ್ಲಿ ಆತ್ಮಪ್ರತ್ಯಯವನ್ನು ತರುವ ಪ್ರಯತ್ನ ಈ ಚಳುವಳಿಗಳಿಂದ ನಡೆಯಿತೇ ಹೊರತು, ಆರ್ಥಿಕ ಸಮಾನತೆಯನ್ನು ತರುವುದು ಈ ಚಳುವಳಿಗಳ ಉದ್ದೇಶವಾಗಿರಲಿಲ್ಲ. ಆರ್ಥಿಕ ಸಮಾನತೆಯು ಸಂಘರ್ಷದಿಂದ ಲಭಿಸುತ್ತದೆ. ಆದರೆ ಭಕ್ತಿ ಚಳುವಳಿಗಳು ಅತ್ಯಂತ ಸಾತ್ವಿಕ ನೆಲೆಯಲ್ಲಿ ಸಮಾಜ ಸುಧಾರಣೆಗೆ ಪ್ರತಯತ್ನಿಸಿದವು. ಇದರಿಂದಾಗಿ ಮಧ್ಯಕಾಲದಲ್ಲಿ ಕೆಳಜಾತಿಗಳು ಮತ್ತು ಆರ್ಥಿಕವಾಗಿ ಭೂಮಾಲಿಕತ್ವವನ್ನು ಅವಲಂಬಿಸಿದ್ದ ಸಮುದಾಯಗಳು "ತಮ್ಮ ಪಾರಂಪರಿಕ ಉದ್ಯೋಗಗಳನ್ನು ಕೈಬಿಡಲು ಅವರಿಗೆ ಆ ದಿನಗಳಲ್ಲಿ ಅವಕಾಶವಿರಲಿಲ್ಲ"[12] ಹೀಗಾಗಿ ಮಧ್ಯಕಾಲೀನ ಭಾರತದಲ್ಲಿ ಇಂತಹ ಸಮುದಾಯಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗುವ ಸಾಧ್ಯತೆಗಳಿರಲಿಲ್ಲ. ಒಂದೆಡೆ ಹುಟ್ಟಿನ ಕಾರಣಕ್ಕಾಗಿ ಹೇರಲ್ಪಟ್ಟ ಕೆಳಜಾತಿಯ ಸ್ಥಾನಮಾನ ಮತ್ತು ಅದೇ ಕಾರಣಕ್ಕೆ ಅವಲಂಬಿಸಿದ ವೃತ್ತಿಯಿಂದಾಗಿ ಪ್ರಾಪ್ತವಾಗಿದ್ದ ಆರ್ಥಿಕ ಪರಾವಲಂಬಿತನಗಳು ಈ ಸಮುದಾಯಗಳಿಗೆ ಸ್ಥಿರತೆಯನ್ನು ತುರವುದು ಸಾಧ್ಯವಿರಲಿಲ್ಲ.

"ವೃತ್ತಿಗಾಯಕರು ಮತ್ತು ಪ್ರದರ್ಶಕ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳು ಸಾಮಂತಶಾಹಿ ಮತ್ತು ರಾಜಶಾಹಿಯನ್ನು ಮತ್ತು ರಾಜಶಾಹಿಯನ್ನು ಅವಲಂಬಿಸಿಯೇ ಬದುಕಬೇಕಿತ್ತು. ಅವರ ದತ್ತಿ ದಾನಗಳನ್ನು ಸದಾ ನಿರೀಕ್ಷಿಸುತ್ತಲೇ ಇರಬೇಕಿತ್ತು. ಶ್ರೀಮಂತರು, ಭೂಮಾಲಿಕರು ಕೆಲವು ವಿಶೇಷ ಸಂದರ್ಭಗಳಲ್ಲಿ ಈ ಕಲಾವಿದರನ್ನು ಕರೆಸಿ ಹಾಡಿಸಿ ಕುಣಿಸಿ ಆನಂದಿಸುತ್ತಿದ್ದರು. ಇದಕ್ಕೆ ಪ್ರತಿಯಾಗಿ ಕಾಣಿಕೆಗಳನ್ನು ಕೊಡುತ್ತಿದ್ದರು. ಜೊತೆಗೆ ಹಳ್ಳಿಗರು 'ಆಯ' ಕೊಟ್ಟು ಇವರನನ್ನು ಪೋಷಿಸುತ್ತಿದ್ದರು. ಇಂತಹ ಅವಕಾಶಗಳನ್ನು ಈ ಸಮುದಾಯಗಳು ಎದುರು ನೋಡುತ್ತಾ ಬದುಕಬೇಕಿತ್ತು. ವೃತ್ತಿ ಸಂಗೀತಗಾರರು, ವೇಷಗಾರರು, ಕಸರತ್ತುಗಳನ್ನು ಮಾಡುವರು, ಡೊಂಬರಾಟದವರು ತಮ್ಮ ಸುತ್ತಲ ಜನಸಮುದಾಯಗಳನ್ನು ರಂಜಿಸುತ್ತಲೇ ಬದುಕಿ ಬಂದರು. ಅವರಿಗೆ ರಾಜ ಇಲ್ಲವೆ ಭೂಮಾಲಿಕರಿಂದ ಉಳಿಗ ಮತ್ತು ದತ್ತಿಗಳು ಅಲ್ಪಸ್ವಲ್ಪವಾದರೂ ದಕ್ಕುತ್ತಿದ್ದವು. ಆದರೆ ಯಾವತ್ತು ಭೂಮಿ ಮುಖ್ಯ ಆರ್ಥಿಕ ಮೂಲವಾಗಿ ಪರಿಗಣಿತವಾಯಿತೋ ಅಂದಿನಿಂದ ಈ ಅವಲಂಬಿತ 'ಅನುತ್ಪಾದಕ' ಸಮುದಾಯಗಳೂ ಆರ್ಥಿಕವಾಗಿ ಕುಸಿದು ಹೋದವು. ನಿಶ್ಚಿತ ಆರ್ಥಿಕಮೂಲಗಳನ್ನು ಹುಡುಕಿಕೊಂಡು ಹೋಗುವುದು ಈ ಸಮುದಾಯಗಳಿಗೆ ಅನಿವಾರ್ಯವೂ ಆಯಿತು"[13] ಈ ಕಾರಣದಿಂದಾಗಿ ಇಂಡಿಯಾದ ಮಧ್ಯಕಾಲೀನ ಚರಿತ್ರೆಯುದ್ದಕ್ಕೂ ಅಲೆಮಾರಿಗಳು ಆರ್ಥಿಕವಾಗಿ ಪರಾವಲಂಬಿಗಳಾಗಿಯೂ ಮತ್ತು ಸಮಾಜದ ಒಟ್ಟು ಉತ್ಪಾದನಾ ವ್ಯವಸ್ಥೆಯಲ್ಲಿ 'ಅನುತ್ಪಾದಕ' ಗುಂಪುಗಳಾಗಿಯೂ ಬದುಕಿ ಬಂದವು. ಇವರ ಪಾರಂಪರಿಕ ವೃತ್ತಿಗಳು ಆಳುವ ವರ್ಗವನ್ನು ಆರ್ಥಿಕವಾಗಿ ಅವಲಂಬಿಸಲೇಬೇಕಿತ್ತು. ಆಳುವ ವರ್ಗಗಳ ದತ್ತು, ದಾನಗಳನ್ನ ಉಳಿಗವನ್ನು ನಿರೀಕ್ಷಿಸಲೇಬೇಕಿತ್ತು. ಈ ಕಾರಣದಿಂದಾಗಿ ಮಧ್ಯಕಾಲೀನ ಭಾರತದ ಕಾಲಘಟ್ಟದಲ್ಲಿ ಕರಕುಶಲ ಕರ್ಮಿಗಳು ಮತ್ತು ಪ್ರದರ್ಶಕ ಕಲೆಗಳನ್ನು ನಂಬಿದ್ದ ಸಮುದಾಯಗಳು ನಿಶ್ಚಿತ ಆರ್ಥಿಕ ಮೂಲಗಳನ್ನು ಹುಡುಕಿಕೊಂಡು ವಲಸೆ ಹೋಗುವುದು

ಅನಿವಾರ್ಯವಾಯಿತು. ಏಕೆಂದರೆ ಅಲೆಮಾರಿಗಳೆಂದು ನಾವು ಈಗ ಪಟ್ಟಿ ಮಾಡಿರುವ ಸಮುದಾಯಗಳು ಆಳುವ ವರ್ಗದ ಕೆಲವು ಅನಿಶ್ಚಿತ ಆರ್ಥಿಕ ಕೊಡುಗೆಗಳನ್ನೇ ನಂಬಿಕೊಂಡು ಬಂದಿರುವುದನ್ನು ನಾವೀಗಾಗಲೇ ನೋಡಿದ್ದೇವೆ. ರಾಜರ ದತ್ತಿಗಳನ್ನು ಇನಾಮು ಭೂಮಿಗಳನ್ನು ನಂಬಿಕೊಂಡು ಬಂದ ಈ ಸಮುದಾಯಗಳ ಪಾರಂಪರಿಕ ಹಕ್ಕುಗಳನ್ನು ಇಲ್ಲವಾಗಿಸಿದವು. ಈ ಕುರಿತು ಖ್ಯಾತ ಇತಿಹಾಸಕಾರರಾದ ಇರ್ಫಾನ್ ಹಬೀಬರ ಮತ್ತು ರಷ್ಯಾದ ಲೇಖಕ ಮಿದವೊಯ್‌ರವರ ಬರಹಗಳನ್ನು ಪರಿಶೀಲಿಸಬಹುದಾಗಿದೆ. "ಮಧ್ಯಕಾಲೀನ ಮೊಘಲ್ ಆಳ್ವಿಕೆಯ ಸಂದರ್ಭದಲ್ಲಿ ವಿಶೇಷವಾಗಿ ಉತ್ತರ ಬಾರತದಲ್ಲಿ ಕೃಷಿ, ಒಟ್ಟು ರಾಜ್ಯದ ರಾಜ್ಯಾದಾಯವನ್ನು ನಿರ್ಣಯಿಸುವ ಉದ್ಯಮವಾಗತೊಡಗಿದ ಮೇಲೆ, ಕೃಷಿಗೆ ವಿಶೇಷ ಮಹತ್ವ ಒದಗತೊಡಗಿತು. ಅಲ್ಲದೆ ಹೆಚ್ಚಿನ ಭೂಮಿ ಕೃಷಿಗೆ ಒಳಪಟ್ಟಿತು."[14] ಅಲ್ಲದೇ ಕೃಷಿ ಭೂಮಿಗೆ ಸಂಬಂಧಿಸಿದ ಮತ್ತು ಭೂಕಂದಾಯಕ್ಕೆ ಸಂಬಂಧಿಸಿದ ಕಾನೂನುಗಳು ರೂಪಗೊಂಡವು. ಮೊಘಲರ ಜಮೀನ್ದಾರಿ ಪದ್ಧತಿ ಮೊದಲ ಬಾರಿಗೆ ಭೂಮಿಯನ್ನು ಖಾಸಗಿ ಆಸ್ತಿಯನ್ನಾಗಿ ಪರಿಗಣಿಸಿತು. ರೈತರು ಕೇವಲ ಗೇಣಿದಾರರಾದರು. ಇನಾಮು ಭೂಮಿಗಳು ಜಮೀನ್ದಾರರ ವಶವಾದವು. ಏಕೆಂದರೆ ಯಾವ ಸಮುದಾಯಗಳು ಕಂದಾಯ ಪಾವತಿಸಲು ವಿಫಲವಾಗುತ್ತಿದ್ದವೋ ಆ ಸಮುದಾಯಗಳ ಜಮೀನುಗಳನ್ನು ಜಮೀನ್ದಾರರು ವಶಪಡಿಸಿಕೊಳ್ಳುತ್ತಿದ್ದರು. ಹೀಗೆ ವಶಪಡಿಸಿಕೊಂಡ ಜಮೀನುಗಳು, ಬಹುತೇಕ ಕುಶಲಕರ್ಮಿಗಳು ಮತ್ತು ಪ್ರದರ್ಶಕ ಕಲೆಗಳನ್ನು ನಂಬಿಕೊಂಡು ಬಂದ್ದ ಸಮುದಾಯಗಳು ವಂಶಪಾರಂಪರ್ಯವಾಗಿ ರಾಜರುಗಳಿಂದ ಪಡದ ಇನಮು ಜಮೀನುಗಳೇ ಆಗಿದ್ದವು. ಈ ಬಗೆಯಲ್ಲಿ ಕುಶಲಕರ್ಮಿ ಮುಂತಾದ ಕೃಷಿಯೇತರ ಸಮುದಾಯಗಳಿಗೆ ಭೂಮಿಯನ್ನು ಕಲವು ನಿಯಮಗಳ ಕೊಡಲಾಗುತ್ತಿತ್ತು. ಮಧ್ಯಕಾಲೀನ ದಕ್ಷಿಣ ಭಾರತದ ವ್ಯವಸಾಯ ಸಂರಚನೆಯ ವಿಶೇಷ ಅಧ್ಯಯನ ಮಾಡಿರುವ ಹಿರೋಷಿ ಫಕಜವಾ ಮೂರು ತರಹದ ಭೂಹಿಡುವಳಿಯನ್ನು ಉಲ್ಲೇಖಿಸುತ್ತಾನೆ. 'ಮಿರಾಸಿಗಳೂ', ಅಂದರೆ ಶಾಸ್ವತವಾಗಿ ಭೂಒಡೆತನವನ್ನು ವಂಶ ಪಾರಂಪರ್ಯವಾಗಿ ಹೊಂದಿದವರು. 'ಉಪೇರರು' ಅಂದರೆ ರೈತರು. ಇವರು ಸರಕಾರದಿಂದ ಭೂಮಿಯನ್ನು ಕೃಷಿಗಾಗಿ ಪಡೆದುಕೊಂಡು ನಿಶ್ಚಿತ ಕಂದಾಯವನ್ನು ಕಟ್ಟುವ ಸಾಮಾನ್ಯ ರೈತರು. ಮೂರನೆಯ ಗುಂಪಿನವರು ಇನಾಮ್‌ದಾರರು. ಇವರು ತೆರಿಗೆ ರಹಿತ ಮತ್ತು ಕೆಲವು ಸಲ ಅಲ್ಪ ತೆರಿಗೆ ಕಟ್ಟುವುದರ ಮೂಲಕ ಕೃಷಿ ಭೂಮಿಯನ್ನು ಸರಕಾರದಿಂದ ಪಡೆದವರು. ಇವರಿಗೂ ಕೃಷಿ ಜಮೀಣು ಅನುವಂಶಿಕವಾಗಿಯೇ ಇರುತ್ತದೆ.[15] ಆದರೆ ಈ ಬಗೆಯ ಅನುವಂಶಿಕ ಒಡೆತನಕ್ಕೆ ಅನೇಕ ನಿಯಮಗಳಿರುವುದನ್ನು ಹಿರೋಷಿ ದಾಖಲಿಸುತ್ತಾರೆ. ಈ 'ಇನಾಮು'ದಾರರು ಸಾಮಾನ್ಯವಾಗಿ ಕರಕುಶಲ ಮತ್ತು ಪ್ರದರ್ಶಕ ಕಲೆಗಳನ್ನೇ ಅವಲಂಬಿಸಿದವರು. ಇವರು ಕೆಲವು ಸಲ ವಲಸೆ ಹೋಗುವುದು ಸಾಮಾನ್ಯ. ಇಂತಹ ಸಮುದಾಯಗಳು ದೀರ್ಘಕಾಲದವರೆಗೆ ಕಣ್ಮರೆಯಾಗುವ ಸಂದರ್ಭಗಳು ಒದಗುತ್ತವೆ. ಹಿರೋಷಿ ಇಂತಹ ಸಮುದಾಯಗಳನ್ನು ಕಣ್ಮರೆಯಾದ ಸಮುದಾಯ (Extinct Families) ಎಂದು ಕರೆಯುತ್ತಾನೆ. "ಹೀಗೆ ವಂಶ ಪಾರಂಪರ್ಯ ಒಡೆತನವಿರುವ ಭೂಮಿಯನ್ನು ಅನುಭವಿಸುವ ಕುಟುಂಬ ಕಣ್ಮರೆಯಾದರೆ, ದೀರ್ಘಕಾಲದವರೆಗೆ ಕಾಣೆಯಾದ ಆ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ಮತ್ತು ಅದನ್ನು ತನ್ನ ಖಾಸಗಿ ಆಸ್ತಿಯನ್ನಾಗಿಸಿಕೊಳ್ಳುವ ಅಧಿಕಾರವನ್ನು ಊರ ಪಟೇಲನಿಗೆ ಅಥವಾ ಗ್ರಾಮದ ಮುಖ್ಯಸ್ಥನಿಗೆ ಕೊಡ ಮಾಡಲ್ಪಟ್ಟಿರುತ್ತದೆ. ಅಲ್ಲದೆ ಗ್ರಾಮದ ಬಂಜರು, ಇಲ್ಲವೆ ಕೃಷಿಯೇತರ ಭೂಮಿಯನ್ನೂ ಸಹ ಪಟೇಲನ ಗ್ರಾಮಾಧಿಕಾರದ ವ್ಯಾಪ್ತಿಗೆ ಅಂದಿನ ಸರಕಾರ ಒಳಪಡಿಸಿತ್ತು."[16] ಈ ಎಲ್ಲ ಕಾರಣಗಳಿಂದಾಗಿ ಕೃಷಿಯೇತರ ಸಮುದಾಯಗಳಿಗೆ ಇನಾಮಾಗಿ ಬರುತ್ತಿದ್ದ ಕೃಷಿ ಜಮೀನಿನ ಮೇಲೆ ಯಾವ ನ್ಯಾಯಬದ್ಧ ಅಧಿಕಾರಗಳಿರುತ್ತಿರಲಿಲ್ಲ. ಅದರಲ್ಲೂ ಕಂಪನಿ ಆಡಳಿತದ ಸಂದರ್ಭದಲ್ಲಿ ಕೃಷಿ ಸಂಬಂಧಗಳು ಇನ್ನೂ ನಿಯಮಕ್ಕೊಳಪಟ್ಟ ಮೇಲೆ ಮೊದಲ ಬಾರಿಗೆ ಈ ಸಮುದಾಯಗಳ ನಿಶ್ಚಿತ ಆದಾಯದ ಮೇಲೆ ಹೊಡೆತ ಬಿದ್ದಿತು. ಅವರ ಪಾಲಿಗೆ ತಮ್ಮ ಪಾರಂಪರಿಕ ವೃತ್ತಿ ಮಾತ್ರ ಆದಾಯದ ಮೇಲೆ ಹೊಡೆತ ಬಿದ್ದಿತು. ಅವರ ಪಾಲಿಗೆ ತಮ್ಮ ಪಾರಂಪರಿಕ ವೃತ್ತಿ ಮಾತ್ರ ಉಳಿಯಿತು. ಆ ಪಾರಂಪರಿಕ ವೃತ್ತಿಗಳನ್ನು ಸದರಿ ಸಮುದಾಯಗಳು ಅವಲಂಬಿಸಲೇ ಬೇಕಾಯ್ತು. ಆದ್ದರಿಂದ ಅಲೆಮಾರಿಗಳಾಗದೆ ಇವರು ಯಾವ ಸಾಧ್ಯತೆಗಳೂ ಇವರಿಗಿರಲಿಲ್ಲ.

ಇನ್ನು ಮೊಘಲ್ ಆಳ್ವಿಕೆಯ ನಂತರದ ವಸಾಹತುಶಾಹಿ ಕಾಲಘಟ್ಟದಲ್ಲಿ ಭೂಮಿ ಮತ್ತು ಭೂಕಂದಾಯಕ್ಕೆ ಸಂಬಂಧಿಸಿದ ಕಾಯ್ದೆಗಳು ಇನ್ನೂ ಕಠಿಣಗೊಂಡವು. ಏಕೆಂದರೆ ಬ್ರಿಟಿಷರು ಭಾರತದ ನೈಸರ್ಗಿಕ ವೈವಿಧ್ಯತೆಯನ್ನು ಕೊಳ್ಳೆ ಹೊಡೆಯಲೆಂದೇ ಇಲ್ಲಿಗೆ ಬಂದವರಾದ್ದರಿಂದ, ಆದಿವಾಸಿಗಳ ಮತ್ತು ಕೃಷಿಯೇತರ ಸಮುದಾಯಗಳ ಜಮೀನುಗಳನ್ನು ಹಿಂಸಾತ್ಮಕವಾಗಿಯೇ ವಶಪಡಿಸಿಕೊಂಡರು. ಮೊಘಲರ ಭೂಕಾಯ್ದೆಗೆ ೧೭೮೩ರಲ್ಲಿ ವಾರನ ಹೇಸ್ಟಿಂಗ್ಸ್ ಹಲವು ತಿದ್ದಪಡಿಗಳನ್ನು ಮಾಡಿ ಜಾರಿಗೆ

ತರುತ್ತಾನೆ. ವಸಾಹತುಶಾಹಿ ಕಾಲಘಟ್ಟದ ಭಾರತದ ಆರ್ಥಿಕ ಸ್ಥಿತಿಗತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ರಷ್ಯನ ಲೇಖಕ ಎ. ಐ. ಮಿದವೋಯ್ ಅವರು ಹೀಗೆ ವಿವರಿಸುತ್ತಾರೆ.

[1] Mishra P K, The Study of Nomads, p 160, 1970

[2] ಪರಮಶಿವಯ್ಯಜೀಶಂ, ದಕ್ಷಿಣಕರ್ನಾಟಕದಜನಪದಕಾವ್ಯಪ್ರಕಾರಗಳು, ಪು.೨೬೫, ೧೯೭೯

[3] ಜ್ಯೋತಿಹೊಸೂರು, ಜಾತಿಗಾರರಜಾತಕ, ಪು. ೧೦೦೧೧, ೧೯೮೫

[4] Saki, Making History, Karnataka's people and their past, Vol – 1, p 173, 1998

[5] Andre Wink, Land and Souereignty in India, Agrarian Socie p 214 – 215, 1996

[6] Irfan habib, The Agrarian System of Mughal India 1556 – 1707, p 157 – 158, 1999

[7] ಚಿದಾನಂದಮೂರ್ತಿ, ಮಧ್ಯಕಾಲೀನಕನ್ನಡಸಾಹಿತ್ಯಮತ್ತುಅಸ್ಪೃಶ್ಯತೆ, ಪು೫೬ – ೫೭. ೧೯೮೫

[8] Irfan Habib, The Agrarian System of Mughal India 1556 – 1707, p 156, 1999

[9] Saki, Making History, Karnataka's people and their past, Vol – 1, p 175, 1998

[10] Ibid, p 175

[11] ಚಿದಾನಂದಮೂರ್ತಿ, ಮಧ್ಯಕಾಲೀನಕನ್ನಡಸಾಹಿತ್ಯಮತ್ತುಅಸ್ಪೃಶ್ಯತೆ, ಪು – ೧೦೯ – ೧೯೮೫

[12] ಅದೇ – ಪು. ೧೪೩.

[13] Stephen Fuchs, At the Bottom of Indian Society, P 127, 1981

[14] Irfan Habib, Essays on Indian History, p92, 1995

[15] Hiroshi Fukazawa, The Medieval Deccan, Peasants, Social Systems and States, Sixteenth to Eighteenth centuries, p 153, 1998

[16] Ibid, p 154

## ಹೆಳವ ಸಮುದಾಯದ ಆರ್ಥಿಕತೆ

"೧೭೯೩ರಲ್ಲಿ ಜಾರಿಗೆಬಂದ 'ಶಾಶ್ವತ ಜಮೀನ್ದಾರಿ' ಶಾಸನವು ಕಟ್ಟುನಿಟ್ಟಾಗಿ ಜಾರಿಗೆ ಬಂದದ್ದು ಉತ್ತರ ಭಾರತದಲ್ಲಿ. ಈ ಶಾಸನದಿಂದಾಗಿ, ಇನಾಮು ಭೂಮಿಗಳನ್ನು ಪಡೆದು, ಅನುವಂಶಿಕವಾಗಿ ಅದರ ಒಡೆತನವನ್ನು ಹೊಂದಿದ್ದ ಪ್ರದರ್ಶಕ ಕಲೆ ಮತ್ತು ಕರಕುಶಲ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳ ಜಮೀನುಗಳು ಶಾಶ್ವತವಾಗಿ ಜಮೀನ್ದಾರರ ಮತ್ತು ಕಂದಾಯ ವಸೂಲಿದಾರರ ವಶವಾದವು. ಬ್ರಿಟೀಷರು ತಮ್ಮ ಕಂಪನಿಗೆ ಬರಬೇಕಿದ್ದ ಭೂಕಂದಾಯವನ್ನು ನಿರಾಯಾಸವಾಗಿ ಖಜಾನೆಗೆ ತುಂಬಿಕೊಳ್ಳುವ ನಿಟ್ಟಿನಿಲ್ಲಿ ತಂದ ಅಪ್ಪಟ ಊಳಿಗಮಾನ್ಯ ಗುಣವುಳ್ಳ ಭೂಕಾಯ್ದೆ ಇದು. ಇದರಿಂದಾಗಿ ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರ, ಓರಿಸ್ಸಾ ಮತ್ತು ಅಂಧ್ರಪ್ರದೇಶದಿಂದ ಅನೇಕ ಸಮುದಾಯಗಳು ದಕ್ಷಿಣಕ್ಕೆ ವಲಸೆ ಬರಬೇಕಾಯ್ತು. ಅಲ್ಲದೆ ಉತ್ತರ ಭಾರತವನ್ನು ದಿಢೀರನೆ ಲಗ್ಗೆ ಹಾಕಿದ ಕೈಗಾರಿಕೆಗಳಿಂದಾಗಿ ಗುಡಿಕೈಗಾರಿಕೆಗಳನ್ನು ನಂಬಿದ್ದ ಸಮುದಾಯಗಳು ವಲಸೆ ಅನಿವಾರ್ಯವೂ ಆಗಿತ್ತು."[1] ಇದಕ್ಕೆ ಪೂರಕವಾಗಿ ಇರ್ಫಾನ್ ಹಬೀಬ್ ಅವರು "೧೮೨೦ ರಿಂದ ೧೮೫೦ರ ನಡುವೆ ಉತ್ತರ ಭಾರತದ ವಾಯುವ್ಯ ಮತ್ತು ಪಶ್ಚಿಮ ರಾಜ್ಯಗಳಲ್ಲಿ ವಿಶೇಷವಾಗಿ ಭೂಕಂದಾಯ ಅತಿ ಹೆಚ್ಚಿನ ಪ್ರಮಾಣದ್ದಾಗಿತ್ತು"[2] ಎನ್ನುತ್ತಾರೆ. ವಾಣಿಜ್ಯ ಬೆಳೆಗಳನ್ನು ಬೆಳೆಯುವ ಬ್ರಿಟಿಷರ ದುರಾಸೆಗೆ ಎಲ್ಲ ದುರ್ಬಲ ವರ್ಗಗಳ ಜಮೀನುಗಳು ವಶವಾಗಿ ಹೋದವು. ಹೀಗೆ ಮಧ್ಯ ಮತ್ತು ಉತ್ತರ ಭಾರತದ ವ್ಯವಸಾಯೀ ಸಂರಚನೆಯಲ್ಲಾದ ಬದಲಾವಣೆಗಳು ಅವಲಂಬಿತ ಸಮುದಾಯಗಳನ್ನು ತೊಂದರೆಗೀಡು ಮಾಡಿದವು. ದತ್ತಿ ಇನಾಮು ಮತ್ತು ಊಳಿಗಗಳು ನಿಂತುಹೋದ ಮೇಲೆ, ಮೊಘಲ್ ಆಡಳಿತ ಅಷ್ಟು ಪ್ರಬಲವಾಗಿಲ್ಲದಿದ್ದ

ದಕ್ಷಿಣಭಾರತಕ್ಕೆ ಈ ಸಮುದಾಯಗಳು ವಲಸೆ ಬರುವುದು ಅನಿವಾರ್ಯವಾಯಿತು. ಈವತ್ತು ಕರ್ನಾಟಕ ದಲ್ಲಿರುವ ಬಹುತೇಕ ಅಲೆಮಾರಿಗಳೂ ಮಹಾರಾಷ್ಟ್ರ, ಓರಿಸ್ಸಾ, ಅಸ್ಸಾಂ, ಬಂಗಾಳ, ಗುಜರಾತ್, ರಾಜಸ್ಥಾನ ಮತ್ತು ಆಂದ್ರಪ್ರದೇಶದ ಉತ್ತರಭಾಗದಿಂದ ವಲಸೆ ಬಂದಿರುವುದಾಗಿ ಹೇಳಿಕೊಳ್ಳುತ್ತಾರೆ. ಇದಕ್ಕೆ ಮುಖ್ಯ ಕಾರಣ ವ್ಯವಸಾಯೀ ಸಂಬಂಧಗಳು ಮೊಘಲ್ ಮತ್ತು ಕಂಪನಿ ಆಡಳಿತದ ಸಂದರ್ಭದಲ್ಲಿ ಹೆಚ್ಚು ಸಂಕೀರ್ಣಗೊಂಡದ್ದು. "ಆಧುನಿಕ ಭೂಮಾಲಿಕತ್ವದಿಂದ ಕೃಷಿಯು ಹೆಚ್ಚು ವಾಣಿಜ್ಯೀಕೃತಗೊಂಡಿತು. ಭೂಮಿಯಿಂದ ಅಧಿಕ ಲಾಭ ಬರಲಾರಂಭಿಸಿದ ಮೇಲೆ, ಭೂವಿಯ ಮೇಲಿನ ಒಡೆತನದ ಕುರಿತ ನಿಯಮಗಳೂ ನಿಖರವಾದವು. ಕಂಪನಿ ಆಡಳಿತದ ಅವಧಿಯಲ್ಲಿ ಕೃಷಿ ಹೆಚ್ಚು ವಾಣಿಜ್ಯೀಕರಣಗೊಂಡ ಮೇಲೆ ಚಿಕ್ಕ ರೈತರೆಲ್ಲ ಭೂಮಿಯನ್ನು ಕಳೆದುಕೊಂಡು. ೧೯ನೇ ಶತಮಾನದ ಹೊತ್ತಿಗೆ ಭೂಮಾಲಿಕರು ಮತ್ತು ಭೂರಹಿತರು ಎಂಬ ಪ್ರಬಲ ವರ್ಗಗಳು ಬೆಳದು ನಿಂತವು"[3] ಈ ಹಂತದಲ್ಲಿಯೇ ಭಾರತದಲ್ಲಿ ಆದಿವಾಸಿಗಳ ಭೂಹೋರಾಟಗಳು ಪ್ರಾರಂಭವಾದವು. ಭೂಮಿಯನ್ನು ಕಳೆದುಕೊಂಡ ಅನೇಕ ಆದಿವಾಸಿಗಳು ಮತ್ತು ಕೆಳಜಾತಿಗಳೂ ಕಂಪನಿ ಆಡಳಿತದ ವಿರುದ್ಧ ಬಂಡೆದ್ದರು. ಇದೇ ಹೊತ್ತಿಗೆ ಉತ್ತರ ಭಾರತದಲ್ಲಿ ಮೊದಲ ಬಾರಿಗೆ ಒಂದು ಮಾರಾಣಾಂತಿಕ ಕಾಯ್ದೆಯನ್ನು ತರಲಾಯಿತು. ಅದು ೧೮೭೧ರ Criminal Tribal Act. ಈ ಅಪರಾಧಿ ಬುಡಕಟ್ಟುಗಳ ಕಾಯ್ದೆಯಡಿ ಬಂದ ಸಮುದಾಯಗಳನ್ನು ಜಿ.ಎನ್. ದೇವಿ ಹೀಗೆ ಪಟ್ಟಿ ಮಾಡಿದ್ದಾರೆ. "ಅಲೆಮಾರಿ ಗಾಯಕ ಪರಂಪರೆಯ ಸಮುದಾಯಗಳೂ, ಫಕ್ಕೀರರು, ಚಿಕ್ಕ ವರ್ತಕರು, ಪ್ರದರ್ಶನ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳು, ಸಾಮಾನು ಸರಂಜಾಮುಗಳನ್ನು ಸಾಗಿಸುತ್ತಿದ್ದವರನ್ನು ಈ ಅಪರಾಧಿ ಬುಡಕಟ್ಟುಗಳ ಕಾಯ್ದೆಯಡಿ ತರಲಾಯಿತು. ಈ ಕಾಯ್ದೆ ಮೊದಲ ಬಾರಿಗೆ ಜಾರಿಗೆ ಬಂದ್ದು ಉತ್ತರ ಭಾರತ, ಮಧ್ಯಭಾರತ ಮತ್ತು ವಾಯುವ್ಯ ಭಾರತದ ರಾಜ್ಯಗಳಲ್ಲಿ."[4] ಕಾನೂನುಬದ್ಧ ಜಮೀನ್ದಾರಿ ಪದ್ಧತಿಯಿಂದಾಗಿ ಮತ್ತು ವಾಣಿಜ್ಯೀಕೃತ ಕೃಷಿ ಜಾರಿಗೆ ಬಂದ ಮೇಲೆ ಕರಕುಶಲ ಕರ್ಮಿಗಳು ಮತ್ತು ಪ್ರದರ್ಶಕ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳ ಆರ್ಥಿಕ ವ್ಯವಸ್ಥೆಯೇ ಕುಸಿದು ಬಿದ್ದಿತು. ಯಾವ ವರ್ಗವನ್ನು ತಾವು ಆರ್ಥಿಕವಾಗಿ ಅವಲಂಬಿಸಿದ್ದರೋ, ಆ ಆಳುವ ವರ್ಗ ಹೆಚ್ಚು ಅಮಾನವೀಯವೂ, ಯಾಂತ್ರಿಕವೂ ಆದ ಸಮಾಜವನ್ನು ರೂಪಿಸಲಾರಂಭಿಸಿದ ಮೇಲೆ ಈ ಸಮುದಾಯಗಳು ಬದುಕುಗಳ ದಿಕ್ಕೆಟ್ಟು ಹೋದವು. ಕೊಡುಕೊಳುವಿಕೆಯ ಮೇಲೆ ನಿಂತಿದ್ದ ಮತ್ತು ಹೆಚ್ಚು ಮಾನವೀಯವಾಗಿದ್ದ ಬಾರತದ ಪಾರಂಪರಿಕ ಕೃಷಿಯು ಬಂಡವಾಳಶಾಹಿ ಕೃಷಿಯಾಗಿ ಮಾರ್ಪಟ್ಟ ಮೇಲೆ, ಅದು ತನ್ನ ಪರಂಪರೆಯ ಗುಣಗಳನ್ನು ಕಳಚಿಕೊಂಡಿತು. ಬಂಡವಾಳಶಾಹಿ ಕೃಷಿಗೆ ಆಧಿಕ ಉತ್ಪಾದನೆ ಮತ್ತು ಅಧಿಕ ಲಾಭ ಮಾತ್ರ ಗುರಿಯಾಗಿತ್ತೇ ವಿನಹ, ಉಳಿದ ವಿಷಯಗಳು ಗೌಣವಾದವು. ಅಲ್ಲದೆ ಕೃಷಿಯಲ್ಲಿ ಯಂತ್ರಗಳನ್ನು ಬಳಸಲು ಪ್ರಾರಂಭಿಸಿದ ಮೇಲೆ ಕರಕುಶಲಕರ್ಮಿಗಳು, ವ್ಯವಸಾಯೀ ಸಂರಚನೆಯ ಪಾರಂಪರಿಕ ಸಂಬಂಧಗಳಿಂದ ಕಳಚಿಬಿದ್ದರು. ಅಲ್ಲದೆ ಮನರಂಜನೆಯ ಮಾಧ್ಯಮಗಳೂ ಹೆಚ್ಚು ತಾಂತ್ರೀಕೃತವಾದ ಮೇಲೆ ಪಾರಂಪರಿಕ ಮನರಂಜಕರು ಇಡಿಯಾಗಿ ತಮ್ಮ ರೂಢಿಗತ ಅವಲಂಬನೆಯಿಂದ ವಂಚಿತರಾದರು. ಈ ಹಂತದಲ್ಲಿ ಇಂತಹ ಸಮುದಾಯಗಳು ಅನಿವಾರ್ಯವಾಗಿ ಅಲೆಮಾರಿಗಳಾಗಿ ಪರಿವರ್ತನೆಗೊಂಡವು. ಅಲ್ಲದೆ ತಮ್ಮ ಪಾರಂಪರಿಕ ಅವಲಂಬನೆಯನ್ನು ನಾಶ ಮಾಡಿದ ಆಧುನಿಕ ವ್ಯವಸ್ಥೆಯ ಮೇಲೆ ಇವರು ಸಹಜವಾಗಿಯೇ ಕೋಪಗೊಂಡಿದ್ದರು, ಸಮಯ ಸಿಕ್ಕಾಗಲೆಲ್ಲ ಈ ದಿಕ್ಕೆಟ್ಟ ಸಮುದಾಯಗಳು ವ್ಯವಸ್ಥೆಯನ್ನು ಉಗ್ರವಾಗಿ ಪ್ರತಿಭಟಿಸಲಾರಂಭಿಸಿದವು. "ಉತ್ತರಭಾರತದಲ್ಲಿ ರಜಪೂತರ ಅವನತಿಯ ನಂತರ 'ಅಪರಾಧಿ ಗುಂಪುಗಳು ತಮ್ಮ ಮೂಲವನ್ನು ರಜಪೂತರೊಂದಿಗೆ ಗುರುತಿಸಿಕೊಳ್ಳುತ್ತವೆ. ರಜಪೂತ ಆಳ್ವಿಕೆ ಕೊನೆಗೊಂಡು, ಮುಸ್ಲಿಂ ಆಳ್ವಿಕೆಯ ಮತ್ತು ಕಂಪನಿ ಆಡಳಿತದ ಸಂದರ್ಭದಲ್ಲಿ ಇಲ್ಲಿನ ಕೃಷಿಕ ಸಮುದಾಯಗಳೂ ಸಹ ತಮ್ಮ ಕೃಷಿ ಜಮೀನುಗಳನ್ನು ಕಳೆದುಕೊಂಡುವು. ರಜಪೂತ ಸೈನ್ಯದಕಲ್ಲಿ ಸೈನಿಕರಾಗಿದ್ದ ಮತ್ತು ಸೈನಿಕರಿಗೆ ಸಹಾಯಕರಾಗಿದ್ದ ಅನೇಕ ಸಮುದಾಯಗಳು ನೆಲೆಕಳೆದುಕೊಂಡವು. ಈ ನೆಲೆ ಕಳೆದುಕೊಂಡು ಸಮುದಾಯಗಳೇ ನಂತರ ಅಪರಾಧಿ ಚಟುವಟಿಕೆಗಳಲ್ಲಿ ತೊಡಗಿದವು"[5] ಹೀಗೆ ಉತ್ತರ ಭಾರತದಲ್ಲಿ ತಮ್ಮ ಆರ್ಥಿಕ ನೆಲೆಗಳನ್ನು ಕಳೆದುಕೊಂಡ ಅನೇಕ ಸಮುದಾಯಗಳು ಕಂಪನಿ ಆಡಳಿತದ ವಿರದ್ಧ ಸಹಜವಾಗಿಯೇ ತಿರುಗಿಬಿದ್ದವು. ಅಲ್ಲದೆ ಸ್ಥಳೀಯ ಪಾಳೇಗಾರರ ಸೈನ್ಯದಲ್ಲಿ ಈ ಪ್ರತಿಭಟನೆಗಳು ಕಂಪನಿ ಆಡಳಿತದ ವಿರುದ್ಧ ಉಗ್ರವಾಗಿಯೇ ವ್ಯಕ್ತವಾಗತೊಡಗಿದವು. ಈ ಹಂತದಲ್ಲಿ ಕಂಪನಿ ಆಡಳಿತವು ದೇಶೀಯ ಸಂಸ್ಥಾನಗಳನ್ನು ವಶಪಡಿಸಿಕೊಳ್ಳಲು ಅನೇಕ ಕಾನೂನುಗಳನ್ನೇ ಜಾರಿಗೆ ತಂದಿತು. ಸಹಾಯಕ ಸೈನ್ಯ ಪದ್ಧತಿ, ರೌಲತ್ ಕಾಯ್ದೆ ಇವೆಲ್ಲ ಸ್ಥಳೀಇ ಸೈನ್ಯವನ್ನು ರದ್ದುಪಡಿಸುವ ಮತ್ತು ಸ್ಥಳೀಯರು. ಆಯುಧಗಳನ್ನು ಹೊಂದುವುದನ್ನು ನಿಷೇಧಿಸುವುದಕ್ಕಾಗಿಯೇ ರೂಪಗೊಂಡ ಕಾಯ್ದೆಗಳಾಗಿವೆ.

**ಆಧುನಿಕಪೂರ್ವ ಕಾಲಘಟ್ಟದಲ್ಲಿ ಅಲೆಮಾರಿಗಳು**

“೧೭೭೪ ಮತ್ತು ೧೮೭೧ರ ನಡುವಿನ ಇತಿಹಾಸ ಅತ್ಯಂತ ರಕ್ತಪಾತದಿಂದ ಕೂಡಿದ ಇತಿಹಾಸವಾಗಿದೆ. ಭಾರತದ ಸ್ಥಳೀಯ ರಾಜ್ಯಗಳ ವಿರುದ್ಧ ಈ ಅವಧಿಯಲ್ಲಿ ಕಂಪನಿ ಆಡಳಿತವು ಅತ್ಯಂತ ಕ್ರೂರ ಯುದ್ಧಗಳನ್ನು ಮಾಡಿತು. ಆಂಗ್ಲೋ ಮರಾಠ ಯುದ್ಧ, ಮೈಸೂರು ಯುದ್ಧ, ಹೋಳ್ಕರ ಶರಣಾಗತಿ, ಪೇಶ್ವೆಗಳ ಸೋಲು, ವೆಲ್ಲೂರಿನ ಸಿಪಾಯಿದಂಗೆ ಮೈಸೂರು ಮತ್ತು ಕೂರ್ಗ್‌ಗಳನ್ನು ವಶಪಡಿಸಿಕೊಂಡಿದ್ದು, ಸಂಧ್, ಸಿಖ್, ಔಧ್ ಪ್ರದೇಶಗಳನ್ನು ಯುದ್ಧಗಳ ಮೂಲಕ ವಶಪಡಿಸಿಕೊಂಡದ್ದು ಮತ್ತು ೧೮೫೭ರಲ್ಲಿ ನಡೆದ ಸಿಪಾಯಿ ದಂಗೆಗಳು, ಹಲವು ಸ್ಥಳೀಯ ಸಮುದಾಯಗಳನ್ನು ನೆಲೆ ಇಲ್ಲದಂತೆ ಮಾಡಿದವು. ಈ ಸಮುದಾಯಗಳೇ ಮುಂದೆ ಅಲೆಮಾರಿಗಳಾಗಿ ಪರಿವರ್ತಿತ ವಾದವು.”[6] ಮುಖ್ಯವಾಗಿ ಆಧುನಿಕಪೂರ್ವ ಭಾರದ ಅನೇಕ ಪಾಳೆಪಟ್ಟುಗಳು ಮತ್ತು ಸ್ಥಳೀಯ ರಾಜರು ಅನಿವಾರ್ಯವಾಗಿ ಕಂಪನಿ ಆಡಳಿತದ ಜೊತೆ ಕೈಜೋಡಿಸಬೇಕಿತ್ತು. ಇಲ್ಲವೆ ಅವರೊಡನೆ ಕಾದಾಡಬೇಕಿತ್ತು. ಈ ಎರಡೂ ಸಂದರ್ಭದಲ್ಲಿ ದೇಶೀಯ ಶ್ರಮ ಜೀವಿಗಳು ಆರ್ಥಿಕವಾಗಿ ಕುಸಿದು ಹೋಗುವುದು ಅನಿವಾರ್ಯವಾಗಿತ್ತು. ಕಂಪನಿ ಆಡಳಿತವನ್ನು ಒಪ್ಪಿಕೊಂಡರೆ ಅದರ ಸೈನ್ಯವನ್ನು ಸ್ಥಳೀಯ ರಾಜರು ಸಾಕಬೇಕಿತ್ತು. ಅಕಸ್ಮಾತ್ ಕಂಪನಿ ಆಡಳಿತದ ವಿರುದ್ಧ ತಿರುಗಿ ಬಿದ್ದು ಕಾದಿದರೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಅಪಾಯದಲ್ಲಿ ಇಂಡಿಯಾದ ಎಲ್ಲ ಸ್ಥಳೀಯ ಸಂಸ್ಥಾನಗಳು ಸಿಲುಕಿ ಕೊಂಡವು. ಆದರೆ ಬಹುತೇಕ ಎಲ್ಲ ಸಂಸ್ಥಾನಗಳನ್ನು ಬ್ರಿಟೀಷ್ ಆಡಳಿತ ತನ್ನ ತಂತ್ರಗಳ ಮೂಲಕ ವಶಪಡಿಸಿಕೊಳ್ಳುತ್ತಲೇ ಹೋಯಿತು. ತಿರುಗಿಬಿದ್ದ ಸಮುದಾಯಗಳನ್ನು ಕಾನೂನುಗಳ ಮೂಲಕ ಹತ್ತಿಕ್ಕಲು ಕೆಲವು ನಿಯಮಗಳನನ್ನು ರೂಪಿಸಿತು. ಈ ಹಂತದಲ್ಲಿಯೇ Criminal Tribal Act ಜಾರಿಗೆ ಬಂದಿತು.

“೧೮೭೧ರಲ್ಲಿ Criminal Tribal Act ಜಾರಿಗೆ ಬಂದರೂ, ಉತ್ತರ ಭಾರತದಲ್ಲಿ ಕಂಪನಿ ಸರಕಾರವು ೧೭೯೩ರಲ್ಲಿಯೇ ಕೆಲವು ಸಮುದಾಯಗಳನ್ನು ಪಟ್ಟಿ ಮಾಡಿ ಇನ್ನು ಅಪಾಯಕಾರಿಗಳೆಂದು ಗುರುತಿಸಿತು. ಆ ಪಟ್ಟಿ ನಮಗೆ ಈಗ ಲಭ್ಯವಿಲ್ಲ. ಆದರೆ ಅತ್ಯಂತ ಶಾಮತವಾಗಿದ್ದ, ಶ್ರಮಜೀವಿಗಳೇ ಬದುಕುತ್ತಿದ್ದ ರೋಹಿಲ್‌ಖಂಡ್‌ನ್ನು ವಶಪಡಿಸಿಕೊಳ್ಳು ಬ್ರಿಟೀಷ್‌ರು ೧೭೭೦ರಲ್ಲಿ ಒಂದು ಭೀಕರ ಯುದ್ಧವನ್ನೇ ನಡೆಸಿದರು. ಭಯಂಕರ ರಕ್ತಪಾತ ಮತ್ತು ಸಾವು ನೋವುಗಳು ಸಂಭವಿಸಿದವು. ರೋಹಿಲ್‌ಖಂಡ್ ಬ್ರಿಟೀಷ್ ವಶವಾಯಿತು. ಆದರೆ ಅಲ್ಲಿ ಮುಗ್ಧವಾಗಿ ಬದುಕಿ ಬಂದಿದ್ದ ದುಡಿಮೆಗಾರರು ದಿಕ್ಕೆಟ್ಟು ಹೋದರು. ಅಲ್ಲದೆ ಇವರು ಕಂಪನಿ ಆಡಳಿತದ ಮೇಲೆ ಉಗ್ರವಾದ ಸಿಟ್ಟನ್ನು ಬೆಳೆಸಿಕೊಂಡರು. ಬ್ರಿಟೀಷರ ಮೇಲೆ ಸೇಡುತೀರಿಸಿಕೊಳ್ಳಲು ಹವನಿಸಲಾರಂಭಿಸಿದರು. ಮತ್ತು ಇಲ್ಲಿನ ಬಹುತೇಕ ಶ್ರಮಜೀವಿಗಳು ಮತ್ತು ಆದಿವಾಸಿಗಳೂ ತಮ್ಮ ನೆಲೆಗಳನ್ನು ಕಳೆದುಕೊಂಡು ಅಲೆಮಾರಿಗಳಾದರು.”[7] ಕಂಪನಿ ಆಡಳಿತ ಪ್ರಬಲವಾಗುತ್ತಿದ್ದಂತೆ ಈ ದೇಶದ ಸ್ಥಳೀಯ ರಾಜರು ನಿವೃತ್ತರಾಗಿ ಪಿಂಚಣಿ ಪಡೆಯಲಾರಂಭಿಸಿದರು. ಭೂಮಾಲಿಕರು ರಾಜಿ ಮಾಡಿಕೊಂಡು ತಮ್ಮ ಆಸ್ತಿಗಳನ್ನು ರಕ್ಷಿಸಿಕೊಂಡರು. ಆದರೆ ಎಲ್ಲವನ್ನೂ ಕಳೆದುಕೊಂಡದ್ದು ಶ್ರಮಜೀವಿ ವರ್ಗ ಮಾತ್ರ. ಕಂಪನಿ ಆಡಳಿತದ ವಿರುದ್ಧ ಇವರು ಹೋರಾಡಲೇಬೇಕಾದ ಚಾರಿತ್ರಿಕ ಅನಿವಾರ್ಯತೆ ಏರ್ಪಟ್ಟಿತು. ಮತ್ತು ಈ ಹೋರಾಟ ಸ್ಪಷ್ಟ ರಾಜಕೀಯ ತಳಹದಿಯ ಮೇಲೆ ರೂಪಗೊಂಡಿತ್ತು. ಮನುಷ್ಯನ ಸಹಜ ಹಕ್ಕುಗಳಾದ, ಮಾತನಾಡುವ, ಪ್ರಶ್ನಿಸುವ, ಸ್ವತಃ ತಮ್ಮನ್ನು ಆಳಿಕೊಳ್ಳುವ, ತಮ್ಮ ಆಸ್ತಿ ರಕ್ಷಣೆ ಮಾಡಿಕೊಳ್ಳುವ ಮತ್ತು ತಮ್ಮ ಅನನ್ಯತೆಗಳನ್ನು ಉಳಿಸಿಕೊಳ್ಳುವ ಜನತಾಂತ್ರಿಕ ಆಶಯಗಳಿಂದಲೇ ಈ ಹೋರಾಟಗಳು ರೂಪಗೊಂಡಿದ್ದವು. ಆದರೆ ಅರಾಜಕಗೊಂಡಿದ್ದ ಭಾರತದ ರಾಜಕೀಯ ಸಂದರ್ಭವು ಶೂನ್ಯಾವಸ್ಥೆಗೆ ತಲುಪಿಬಿಟ್ಟಿತ್ತು. ಆದರೆ ಅಲ್ಲಲ್ಲಿ ಜೀವಂತವಿದ್ದ ಸ್ವಾಭಿಮಾನಿ ಸಂಸ್ಥಾನಗಳು ಮಾತ್ರ ಬ್ರಿಟೀಷ್ ಆಡಳಿತದ ವಿರುದ್ಧ ಉಗ್ರವಾಗಿಯೇ ತಿರುಗಿ ಬೀಳುತ್ತಿದ್ದವು. “ಯಾವ ಸಮುದಾಯಗಳು ಸ್ಥಳೀಯ ರಾಜರ ಸೈನ್ಯದಲ್ಲಿದ್ದು ಕಂಪನಿ ಆಡಳಿತದ ವಿರುದ್ಧ ಹೋರಾಡುತ್ತಿದ್ದವೋ ಆ ಎಲ್ಲ ಸಮುದಾಯಗಳನ್ನು ಕಂಪನಿ ಸರಕಾರ ಯುದ್ಧಾನಂತರ ಅವರ ಸೈನ್ಯವನ್ನು ಬ್ರಿಟೀಷರು ಇನ್ನಿಲ್ಲದಂತೆ ನಾಶಮಾಡಿದರು. ಅವರಿಗೆ ಭಾರತದ ಸಮಾಜದ ಕುರಿತು ಸರಿಯಾದ ಕಲ್ಪನೆಯೇ ಇರಲಿಲ್ಲ. ಅಲೆಮಾರಿ ಪಶುಪಾ”ಲಕರು, ವೃತ್ತಿ ಸಂಗೀತಗಾರರು, ಆದಿವಾಸಿಗಳು, ದೊಂಬರಾಟದವರು, ಜಿಪ್ಸಿಗಳು, ಹಾವಾಡಿಸುವವರು, ಅಲೆಮಾರಿ ವೈದ್ಯರು, ಈ ಸಮುದಾಯಗಳನ್ನು ಬ್ರೀಟೀಷ್‌ರು ಅರ್ಥಮಾಡಿಕೊಳ್ಳಲಿಲ್ಲ. ಈ ಸಮುದಾಯಗಳನ್ನು ಅವರು ಸದಾ ಅನುಮಾನಿಸುತ್ತಲೇ ಬಂದರು. ಸಹಜವಾಗಿಯೇ ಈ ಸಮುದಾಯಗಳು ಅಪರಾಧಿ ಸಮುದಾಯಗಳ ಪಟ್ಟಿಗೆ ಸೇರಿಸಲ್ಪಟ್ಟವು.”[8]

೧೮೭೧ರಲ್ಲಿ ಕ್ರಿಮಿನಲ್ ಟ್ರೈಬಲ್ ಕಾಯ್ದೆ ಸಿದ್ಧವಾಗಿ ಜಾರಿಗೆ ಬಂದಿತು. ದುರಂತವೆಂದರೆ ಈ ಪಟ್ಟಿಯಲ್ಲಿದ್ದ ಸಮುದಾಯಗಳನ್ನು ಕಂಪನಿ ಸರಕಾರವು ಜನ್ಮತಃ ಅಪರಾಧಿಗಳು (Born Criminals) ಎಂದು ಪರಿಗಣಿಸಿಬಿಟ್ಟಿತು. ಪೋಲಿಸರಿಗೆ ತರಬೇತಿ ಕೊಡುತ್ತಿದ್ದ ಸಂದರ್ಭದಲ್ಲಿ, ಅಲ್ಲಿನ ಪಠ್ಯಕ್ರಮದಲ್ಲಿ, ಅಪರಾಧಿ ಬುಡಕಟ್ಟುಗಳನ್ನು ಗುರುತಿಸುವದು ಮತ್ತು ಕಾನೂನಿನ ಮೂಲಕ ಅವರನ್ನು ಹೇಗೆ ನಿಯಂತ್ರಿಸುವುದು ಎಂಬ ಕುರಿತು ಪಾಠಗಳನ್ನು ಸೇರಿಸಿತು. ತಮಾಷೆಯೆಂದರೆ, ಸ್ವಾತಂತ್ರ್ಯ ನಂತರ ೧೯೫೨ರಲ್ಲಿ ಈ ಕಾಯ್ದೆ'ಯ ಪಾಠಗಳು ತೊಲಗಲಿಲ್ಲ. ಅವರನ್ನು ಸ್ವತಂತ್ರ ಭಾರತದ ಸರಕಾರವು 'ಪಾರಂಪರಿಕ ಅಪರಾಧಿ ಕಾಯ್ದೆ'ಯ (Habitual Offender Act) ಅಡಿಯಲ್ಲಿ ಗುರುತಿಸಬೇಕೆಂದು ತಮ್ಮ ಪೋಲೀಸರಿಗೆ ಬೋಧಿಸಲಾರಂಭಿತು. ಸ್ವತಂತ್ರ್ಯ ಬಂದರೂ ಈವತ್ತೂ ಕೆಲವು ಸಮುದಾಯಗಳು ಅಮವಾಸೆಯ ದಿನ ಪೋಲೀಸ್ ಠಾಣೆಗೆ ಹೋಗಿ ಮಲಗುವ ನಿಯಮಗಳು ಜಾರಿಯಲ್ಲಿವೆ.

"೧೯೨೧ರಲ್ಲಿ Criminal Tribal Act ಮದ್ರಾಸ್, ಹೈದರಾಬಾದ್ ಮತ್ತು ಮೈಸೂರು ಪ್ರಾಂತ್ಯಗಳಿಗೆ ವಿಸ್ತರಿಸಲ್ಪಟ್ಟಿತು. ಭಾರತದ ಸ್ವಾತಂತ್ರ್ಯಾ ಸಂಗ್ರಾಮಕ್ಕೆ ಮಹಾತ್ಮಾ ಗಾಂಧೀಜಿಯ ಪ್ರವೇಶವಾಗುವ ಸಂದರ್ಭವದು, ಭಾರತದ ಎಲ್ಲ ನಾಗರಿಕರು ಅಪರಾಧಿ ಬುಡಕಟ್ಟುಗಳನ್ನು ನಿರ್ವಿಕಾರ ಸ್ಥಿತಿಯಲ್ಲಿಯೇ ನೋಡುತ್ತಿದ್ದರು. ಆದರೆ ವಸಾಹತು ಸರಕಾರ ದಕ್ಷಿಣದಲ್ಲೂ ಅನೇಕ ಶ್ರಮಜೀವಿಗಳನ್ನು 'ಅಪರಾಧಿಗಳ ಪಟ್ಟಿಗೆ' ಸೇರಿಸುತ್ತಲೇ ಹೋಯಿತು"[9]

**ನಿಲ್ಲದ ಯಾತನೆಯ ಪಯಣ**

ಇಂತಹ ಸಂದರ್ಭದಲ್ಲಿ ಈ ಸಮುದಾಯಗಳು ಮುಖ್ಯವಾಹಿನಿಯ ಕಣ್ಣುತಪ್ಪಿಸಿ ಊರಿಂದ ಹೊರಗೆ ಕಾಡುಗಳಲ್ಲಿ ಬದುಕಲಾರಂಭಿಸಿದವು. ಅಪರಾಧಿ ಬುಡಕಟ್ಟು ಕಾಯ್ದೆಯು, ಪೊಲಿಸರಿಗೆ ಈ ಸಮುದಾಯಗಳನ್ನು ವಿಶೇಷ ಸಂದರ್ಭದಲ್ಲಿ ಕಂಡಲ್ಲಿ ಕೊಂದು ಹಾಕುವ ಅಧಿಕಾರವನ್ನೂ ಕೊಟ್ಟುಬಿಟ್ಟಿತ್ತು. ಈ ಕಾಲಘಟ್ಟದಲ್ಲಿ 'ಅಲೆಮಾರಿತ್ವ' ಸಹಜವಾಗಿಬಿಟ್ಟಿತು. ಕೇವಲ ಆರ್ಥಿಕ ಮೂಲಗಳನ್ನು ಮಾತ್ರ ಈ ಸಮುದಾಯಗಳು ಕಳೆದುಕೊಳ್ಳಲಿಲ್ಲ. ಬದುಕಲು ನೆಲ ಮತ್ತು ಬದುಕುವ ಅವಕಾಶ ಎರಡನ್ನೂ ಕಳೆದುಕೊಂಡು ಸುರಕ್ಷಿತ ನೆಲೆಗಳನ್ನು ಹುಡುಕಿಕೊಂಡು ಅಲೆಯಲಾರಂಭಿಸಿದವು. "ಅಲೆಮಾರಿ ಸಮುದಾಯಗಳನ್ನು 'ಕ್ರಿಮಿನಲ್ ಜಾತಿಗಳು' ಎಂದು ಪರಿಗಣಿಸಿ ಅವರ ಮಾನವ ಹಕ್ಕುಗಳನ್ನು ಕಸಿದುಕೊಳ್ಳಲಾಯ್ತು. ಈ ವಿಪರೀತ ಕಾನೂನಿನ ಅಮಾನವೀಯ ನಿಯಮಗಳ ಮೂಲಕ ಸದರಿ ಸಮುದಾಯಗಳನ್ನು ನಡೆಸಿಕೊಳ್ಳಲಾಯ್ತು ಅವರ ಆರ್ಥಿಕ ಅವಲಂಬನೆಗಳು ನಾಶವಾದ ಮೇಲೆ, ಸಹಜವಾಗಗಿಯೇ ಅವರು ಅಪರಾಧಿ ಚಟುವಟಿಕೆಗಳಲ್ಲಿ ತೊಡಗಿದರು. ಅಪರಾಧ ಮಾಡಲು ಈ ವ್ಯವಸ್ಥೆಯೇ ಅವರನ್ನು ಪ್ರೇರೇಪಿಸಿತು."[10] ಒಂದು ಕಾಲದಲ್ಲಿ ಇದ್ದುದರಲ್ಲಿಯೇ ಸ್ವಾವಲಂಬಿಗಳಾಗಿ, ಶ್ರಮಜೀವಿಗಳಾಗಿ ಬದುಕುತ್ತಿದ್ದ ಸಮುದಾಯಗಳು ತಾವು ಕಳೆದುಕೊಂಡಿದ್ದ ಆರ್ಥಿಕ ಮೂಲಗಳನ್ನು ಮರಳಿ ಪಡೆಯಲು ಪ್ರತಿಭಟಿಸಿದ್ದಕ್ಕಾಗಿ ಅಪರಾಧಿಗಳಾಗಿ ಬಿಟ್ಟವು. ಜಗತ್ತಿನಲ್ಲಿ, ಮಾನವಹಕ್ಕುಗಳ ಮೇಲಿನ ದಾಳಿ ಇದ್ದಕ್ಕಿಂತ ಭೀಕರವಾದದ್ದು ಇನ್ನೊಂದು ನಡೆದಿರಲು ಸಾಧ್ಯವಿಲ್ಲ. ತಮ್ಮ ಹಕ್ಕುಗಳಿಗೆ ಹೋರಾಡಿದವರನ್ನು ಕಾನೂನ ದೃಷ್ಟಿಯಲ್ಲಿ ಅಪರಾಧಿಗಳನ್ನಾಗಿಸಿ ಅವರ ಆತ್ಮಪ್ರತ್ಯಯವನ್ನು ನಾಶಪಡಿಸಲಾಯ್ತು. ಈ ಜನ ಒಂದು ಕಾಲದಲ್ಲಿ, ತನ್ನ ಸುತ್ತಲ ಜಗತ್ತನ್ನು ಕಟ್ಟಿ ಎತ್ತಿ ನಿಲ್ಲಿಸಿದವರು, ಆ ಜಗತ್ತನ್ನು ರಂಜಿಸಿದವರು, ಆ ಜಗತ್ತಿನ ಒಳಿತಿಗಾಗಿ ಬೆವರು ಹರಿಸಿದವರು, ಸೈನ್ಯದಲ್ಲಿದ್ದುಕೊಂಡು ಜೀವಕೊಟ್ಟವರು, ಕೋಟೆಗಳನ್ನು ಕಟ್ಟಿದವರು. ಆದರೆ ಅವರು ಮಾತ್ರ 'ಕೋಟೆಯ' ಆಚೆಗೆ ಎಸೆಯಲ್ಪಟ್ಟು ನಿರ್ಗತಿಕರಾಗಿ ಹೋದರು.

ಇದೇ ಕಾಯ್ದೆ ದಕ್ಷಿಣಕ್ಕೆ ಬಂದದ್ದು ೧೯೨೧ರಲ್ಲಿ. ನಾವು ಇಂದು ಯಾರನ್ನು ಅಲೆಮಾರಿಗಳೆಂದು ಪಟ್ಟಿ ಮಾಡುತ್ತೇವೋ ಅವರಲ್ಲಿ ಶೇ ೯೫ ಸಮುದಾಯಗಳು ಈ Criminal Tribal Act ಅಡಿಯಲ್ಲಿ ಬರುವ ಸಮುದಾಯಗಳೇ ಆಗಿವೆ. ಹೀಗಾಗಿ ಕರ್ನಾಟಕದಲ್ಲಿರುವ ಬಹುತೇಕ ಅಲೆಮಾರಿಗಳು, ವಾಯುವ್ಯ ಭಾರತ, ಮಧ್ಯಭಾರತ ಇಲ್ಲವೆ ಓರಿಸ್ಸಾ, ಆಂಧ್ರಪ್ರದೇಶಗಳಿಂದ ಇಲ್ಲಿಗೆ ವಲಸೆ ಬಂದವರೇ ಆಗಿದ್ದಾರೆ. ಇದಕ್ಕೆ ಕಾರಣಗಳೂ ತುಂಬಾ ಸ್ಪಷ್ಟವಾಗಿಯೇ ಇವೆ. ಲಂಬಾಣಿಗರು ವಾಯುವ್ಯ ರಾಜ್ಯಗಳಿಂದ ದಕ್ಷಿಣಕ್ಕೆ ವಲಸೆ ಬಂದ ವಿವರಗಳನ್ನು ಶ್ರೀ ಖಂಡೋಬ ಅವರ 'ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯಲ್ಲಿ ವಿವರವಾಗಿ ಗಮನಿಸಬಹುದಾಗಿದೆ.

ಇನ್ನು ವಸಾಹತುಶಾಹಿ ಆಡಳಿತದ ಬಾಗವಾಗಿ ಇಲ್ಲಿ ಸಂಭವಿಸಿದ ಕೈಗಾರಿಕೀರಣದಿಂದಾಗಿ ಭಾರತದ ಗುಡಿಕೈಗಾರಿಕೆಗಳು ನಾಶವಾಗಿ, ಕರಕುಶಲ ಕಲೆಗಳನ್ನು ನಂಬಿದ್ದ ಸಮುದಾಯಗಳು ಆರ್ಥಿಕವಾಗಿ ನೆಲೆ ತಪ್ಪಿಹೋದವು. ಗುಡಿಕೈಗಾರಿಕೆಗಳನ್ನು ಕರಕುಶಲ ಕಲೆಗಳನ್ನು, ಪ್ರದರ್ಶಕ ಕಲೆಗಳನ್ನು ಪಾರಂಪರಿಕವಾಗಿ ಅವಲಂಬಿಸಿಕೊಂಡ ಬಂದ ಸಮುದಾಯಗಳು ಆಧುನಿಕ ತಂತ್ರಜ್ಞಾನದ ಮುಂದೆ ಇನ್ನಿಲ್ಲದಂತೆ ಸೋತುಹೋದವು. ಬುಟ್ಟಿ ಹೆಣೆಯುವ ಮೇದರು, ಕೃಷಿಯ ಉಪಕರಣಗಳನ್ನು ತಯಾರಿಸುವ ಕಮ್ಮಾರ, ಡೊಂಬರಾಟವನ್ನೇ ಅವಲಂಬಿಸಿದ ಡೊಂಬರು, ತೊಗಲು ಬೊಂಬೆ ಕುಣಿಸುವ ಕಿಳ್ಳೆಕ್ಯಾತರು ಆಧುನಿಕ ತಂತ್ರಜ್ಞಾನ ಮತ್ತು ಮನರಂಜಕ ಎಲೆಕ್ಟ್ರಾನಿಕ್ ಮಾಧ್ಯಮಗಳ ಮುಂದೆ ಸಪ್ಪೆಯಾದರು. ವಸಾಹತುಶಾಹಿ ಕಾಲಘಟ್ಟದ ಕೈಗಾರಿಕೀಕರಣದ ಈ ಬಿರುಸಿನ ಕಾರ್ಯಾಚರಣೆಯಿಂದಾಗಿ ಭಾರತದ ಸ್ವಯಂಪೂರ್ಣ ಉತ್ಪಾದನಾ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು. ವಸಾಹತುಶಾಹಿಗಳು ಮೂರನೇ ಜಗತ್ತಿನ ಮಾನವ ಸಂಪತ್ತು ಮತ್ತು ನೈಸರ್ಗಿಕ ಸಂಪತ್ತುಗಳನ್ನು ಕೊಳ್ಳೆ ಹೊಡೆಯಲೆಂದೇ ಇಲ್ಲಿ ತಮ್ಮ ಕೈಗಾರಿಕೆಗಳನ್ನು ಪ್ರಾರಂಭಿಸಿದರು.

ಈ ಪ್ರಕ್ರಿಯೆಯಲ್ಲಿ ಭಾರತದ ಪಾರಂಪರಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಾದರೂ, ಈ ಬದಲಾವಣೆಗಳು ಕೇವಲ ಅನುಷಾಂಗಿಕ. ಆಧುನಿಕ ಜಗತ್ತಿನಲ್ಲಿ ತನ್ನ ಪಾರಂಪರಿಕ ಕಸುಬನ್ನು ಎತ್ತಿ ನಿಲ್ಲಿಸಲಾರದ ಜಾತಿ ಸಮುದದಾಯಗಳು ನೆಲೆ ತಪ್ಪಿಹೋದವು. ತಮ್ಮ ಪರಾರಂಪರಿಕ ಆರ್ಥಿಕ ಮೂಲಗಳನ್ನು ಆಧುನಿಕ ಜಗತ್ತಿನಲ್ಲಿ ಬಂಡವಾಳವನ್ನಾಗಿ ಪರಿವರ್ತಿಸದ ಜಾತಿಗಳು ದಿಕ್ಕೆಟ್ಟು ಹೋದವು. ಅಂತಹ ಸಮುದಾಯಗಳಲ್ಲಿ ಕರಕುಶಲ ಕಲೆಗಳನ್ನು ನಂಬಿದ್ದ ಸಮುದಾಯಗಳು ಮತ್ತು ಪ್ರದರ್ಶಕ ಕಲೆಗಳನ್ನು ರೂಢಿಸಿಕೊಂಡಿದ್ದ ಸಮುದಾಯಗಳು ಪ್ರಮುಖವಾದವು. ಆಧುನೀಕರಣ ಮತ್ತು ಕೈಗಾರಿಕೀಕರಣವು ಭಾರತದಲ್ಲಿ ಕ್ರಾಂತಿಕಾರಿ ಸಾಮಾಜಿಕ ಬದಲಾವಣೆಗಳನ್ನು ತಂದಿತು ಎನ್ನುವ ಎಂ. ಎನ್. ಶ್ರೀನಿವಾಸ್‌ರಂತಹ ಸಮುದಾಯಗಳು ಯಾವ ಬಗೆಯ ತಲ್ಲಣಗಳಿಗೆ ಒಳಗಾದವು ಎಂಬುದನ್ನು ಮರೆತುಬಿಡುತ್ತಾರೆ. ಪಾರಂಪರಿಕ ಊಳಿಗಮಾನ್ಯ ಹಿಡಿತದಿಂದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಕಡೆಗೆ ಭಾರತದ ಸಮಾಜ ನಡೆದುಹೋದರೂ ಸಹ, ಭಾರತದ ಕೆಳಜಾತಿ ಸಮುದಾಯಗಳ ಸಾಮಾಜಿಕಾರ್ಥಿಕ ಸ್ಥಿತಿಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಸಂಭವಿಸಲಿಲ್ಲ. ಕೆಳಜಾತಿಗಳಿಗೆ ಆಧುನಿಕತೆಯು ಕೆಲವು ರಿಯಾಯಿತಿಗಳನ್ನು ತೋರಿದಂತೆ ಕಂಡುಬಂದರೂ ಸಹ ಭಾರತದ ಆರ್ಥಿಕ ಅಸಮಾನತೆಯಲ್ಲಿ ಯಾವ ಮೂಖ್ಯ ಬದಲಾವಣೆಗಳು ಸಂಭವಿಸಲಿಲ್ಲ. ಆಧುನಿಕತೆಯ ಕುರಿತು ನಮ್ಮಲ್ಲಿ ಅನನೇಕ ಮೂಢನಂಬಿಕೆಗಳು ಬೆಳೆದು ಬಂದಿವೆ. ಆಧುನಿಕತೆ ತನ್ನೆಲ್ಲಲ ತಂತ್ರಜ್ಞಾನದಿಂದ, ಭಾರತದ ಸಾಂಪ್ರದಾಯಿಕ ಮತ್ತು ಅಸಮಾನ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸುತ್ತದೆ. ಉತ್ಪಾದನಾ ಸಾಧನಗಳ ಕ್ರಾಂತಿಕಾರಿ ಬದಲಾವಣೆಗಳಿಂದ ಭಾರತದಂತಹ ಪಾರಂಪರಿಕ ಉತ್ಪಾದನಾ ವ್ಯವಸ್ಥೇಯ್ಲಲಿ ಆಗಾಧ ರೂಪಾಂತರಗಳು ಸಂಭವಿಸುತ್ತವೆ. ಮತ್ತು ಸಾಮಾಜಿಕ ಸಂಬಂಧಗಳ ಸ್ವರೂಪದಲ್ಲಿ ಸಹ ಅದು ನಿಚ್ಚಳ ಬದಲಾವಣೆಗಳನ್ನು ತರಬಲ್ಲದೆಂದು ನಂಬಲಾಗಿತ್ತು. ಆದರೆ ಆಧುನಿಕತೆಯು ತಂತ್ರಜ್ಞಾನದ ಜೊತೆಯಲ್ಲಿಯೇ ಬಂಡವಾಳಶಾಹಿ ಮನೋಧರ್ಮವನ್ನು ಇಂಡಿಯಾಕ್ಕೆ ಹೊತ್ತು ತಂದಿತು. ಈ ಆಧುನಿಕತೆ ಊಳಿಗಮಾನ್ಯಶಾಹಿ ಸಾಮಾಜಿಕ ಸಂಬಂಧಗಳನ್ನು, ಬಂಡವಾಳಶಾಹಿ, ಉತ್ಪಾದನಾ ವ್ಯವಸ್ಥೆಯ ಚೌಕಟ್ಟಿಗೆ ತಂದು ಜೋಡಿಸಿತು. ಹೀಗೆ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಗೆ ಸಮಾಜ ತನ್ನನ್ನು ಹೊಂದಿಸಿಕೊಳ್ಳುವ ಹಂತದಲ್ಲಿ, ಈ ಶ್ರೇಣೀಕೃತ ವಿಷಮ ಸಾಮಾಜಿಕ ಸಂಬಂಧಗಳಲ್ಲಿ ಕೆಲವು ಬದಲಾವಣೆಗಳು ಸಂಭವಿಸಿದವು. ಆದರೆ ಭಾರತದ ಒಟ್ಟು ಆರ್ಥಿಕ ಅಸಮಾನತೆಯಲ್ಲಿ ಯಾವ ದೊಡ್ಡ ಬದಲಾವಣೆಗಳೂ ಸಂಭವಿಸಲಿಲ್ಲ.

**ಪಾರಂಪರಿಕ ಕಸಬುದಾರರ ಸ್ಥಿತಿಗತಿಗಳು**

ಇಂದು ಅನೇಕ ಅಲೆಮಾರಿಗಳು ನೆಲೆನಿಂತು ಬದುಕುತ್ತಿದ್ದರೂ ಸಹ ಕೆಲವು ಗುಂಪುಗಳು ಇನ್ನೂ ಅಲೆಮಾರಿಗಳಾಗಿಯೇ ಇದ್ದುಕೊಂಡು ಪಾರಂಪರಿಕ ಕಸಬನ್ನೇ ಮುಂದುವರೆಸಿದ್ದಾರೆ. ಡೊಂಬರು, ಗೊಂದಲಿಗರು, ಕಿಳ್ಳೇಕ್ಯಾತರು. ಹಕ್ಕಿಪಿಕ್ಕಿಗಳು ಮತ್ತು ಹೆಳವರೂ ಸೇರಿದಂತೆ ಅನೇಕ ಅಲೆಮಾರಿ ಸಮುದಾಯಗಳ ಹಲವು ಗುಂಪುಗಳು ಇಂದಿಗು ಪಾರಂಪರಿಕ ವೃತ್ತಿಗಳನ್ನು ಅವಲಂಬಿಸಿ ಬದುಕುತ್ತಿವೆ. ಆರ್ಥಿಕವಾಗಿ ಈ ಸಮುಧಯಗಳು ಕಾಲದ ಪ್ರವಾಹದಲ್ಲಿ ಯಾವುದೋ ಹಮತದಲ್ಲಿ ಜಡವಾಗಿ ನೀಂತು ಬಿಟ್ಟಂತೆ ಭಾಸವಾಗುತ್ತಿದೆ. ಇಂಡಿಯಾದ ಸಮಾಜದ ನಿರಂತರ ಬದಲಾವಣೆಯ ವಿವಿಧ ಹಂತಗಳಲ್ಲಿ ಅನೇಕ ಸಮುದಾಯಗಳು

ಸ್ಥಿತ್ಯಂತರಗಳಿಗೆ ತಮ್ಮನ್ನು ಒಡ್ಡಿಕೊಂಡು ಮುಖ್ಯಪ್ರವಾಹದಲ್ಲಿ ಒಂದಾಗಿದ್ದಾರೆ. ಆಧುನಿಕ ಜಗತ್ತಿನ ವಿರಾಟ್ ಅವಕಾಶಗಳಲ್ಲಿ ಪಾಲು ಪಡೆಯಲು ಎಲ್ಲಾ ಬಗೆಯ ಸಿದ್ಧತೆಗಳನ್ನು ಮಾಡಿಕೊಂಡು ಸ್ಪರ್ಧಿಸುತ್ತಿವೆ. ಆದರೆ ಇಂದಿಗೂ ಅಲೆಮಾರಿ ಸಮುದಾಯಗಳ ಹಲವು ಗುಂಪುಗಳು ಪಾರಂಪರಿಕ ಕಸಬುಗಳನ್ನೇ ಮುಂದುವರೆಸುತ್ತಿವೆ. ಹೆಳವರಲ್ಲೂ ಈ ಬಗೆಯ ಹಲವು ಗುಂಪುಗಳನ್ನು ನಾವು ಕಾಣಬಹುದಾಗಿದೆ. ಮುಖ್ಯವಾಗಿ ಬೆಳಗಾಂ, ಬೀದರ್ ಮತ್ತು ದಕ್ಷಿಣ ಕರ್ನಾಟಕದ ಎತ್ತಿನ ಹೆಳವರು, ಗಂಟೆ ಹೆಳವರು ಮತ್ತು ಚಾಪೆ ಹೆಳವರು ಹಲವು ಗುಂಪುಗಳು ಪಾರಂಪರಿಕ ವೃತ್ತಿಯಲ್ಲಿಯೇ ತೊಡಗಿರುವುದು ಕಂಡು ಬರುತ್ತದೆ. ಇದರಲ್ಲಿ ಎತ್ತಿನ ಹೆಳವ ಪಂಗಡದ ಗುಂಪುಗಳು ಹೆಚ್ಚಾಗಿ ಅಲೆಮಾರಿಗಳಾಗಿ ಬದುಕುವುದು ಕಂಡು ಬರುತ್ತದೆ.

ಭಾರತದ ಹಲವು ಕಸಬುದಾರ ಸಮುದಾಯಗಳು ತೀವ್ರವಾದ ಕೈಗಾರಿಕರಣದಿಂದ ತಮ್ಮ ಪಾರಂಪರಿಕ ಕಸಬುಗಳನ್ನು ಕಳೆದುಕೊಂಡು ಅನಿವಾರ್ಯವಾಗಿ ಪರ್ಯಾಯ ಕಸಬುಗಳನ್ನು ಅವಲಂಬಿಸಬೇಕಾಯ್ತು. ತಮ್ಮ ವೃತ್ತಿಗಳನ್ನು ಇವರು ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಜೊತೆ ಸ್ಪರ್ಧಿಸಲಾರದೆ ಈ ಕಸಬುದಾರ ಸಮುದಾಯಗಳು ಬಿಟ್ಟು ಕೊಡಬೇಕಾಯ್ತು. ಆದರೆ ಸಾಮಾಜಿಕ ಅವಮಾನಕ್ಕೆ ಕಾರಣವಾಗುವ ವೃತ್ತಿಗಳನ್ನು ಅನುಸರಿಸುತ್ತಿದ್ದ ಕೆಳಜಾತಿಗಳು ತಮ್ಮ ಪಾರಂಪರಿಕ ಕಸಬುಗಳಲ್ಲಿ ಮುಂದುವರೆಯಲು ಬಯಸಲಿಲ್ಲ. ಅಲ್ಲದೆ ಸಾಮಾಜಿಕ ಅವಮಾನಕ್ಕೆ ಕಾರಣವಾಗುವ ತಮ್ಮ ಪಾರಂಪರಿಕ ವೃತ್ತಿಗಳನ್ನು ಬಿಟ್ಟುಕೊಡಲು ಈ ಸಮುದಾಯಗಳು ಹಾತೊರೆದವು. ವಿದ್ವಾಂಸರು ಸಂಸ್ಕೃತಿ ಚಿಂತಕರು ನಮ್ಮ ಪರಂಪರೆ, ಸಂಸ್ಕೃತಿ ವೈವಿಧ್ಯತೆಗಳೆಲ್ಲ ಉಳಿಯಬೇಕೆಂದು ಬೊಬ್ಬೆ ಹೊಡೆಯತುತ್ತಾರೆ. ಆದರೆ 'ತಾವು ಅನುಸರಿಸುತ್ತಿರುವ ವೃತ್ತಿಯ ಕಾರಣಕ್ಕಾಗಿಯೇ ಅತ್ಯಂತ ಹೀನಯ ಸಾಮಾಜಿಕ ಅವಮಾನವನ್ನು ಶತಮಾನಗಳಿಂದ ಅನುಭವಿಸುತ್ತಿರುವ ಸಮುದಾಯಗಳು ತಮ್ಮ ಪಾರಂಪರಿಕ ವೃತ್ತಿಗಳ ಕುರಿತು ಹೇಗೆ ಯೋಚಿಸುತ್ತಿವೆ' ಎಂಬ ಪ್ರಾಥಮಿಕ ಪ್ರಶ್ನೆಯನ್ನು ನಾವು ಕೇಳಿಕೊಂಡಿಲ್ಲ. ವೇಗವಾಗಿ ಚಲಿಸುತ್ತಿರುವ ಜಗತ್ತಿನಲ್ಲಿ ಯಾರು ಯಾವ ವೃತ್ತಿಯನ್ನಾದರೂ ಹಿಡಿಯಬಹುದು, ಹೇಗೆ ಬೇಕಾದರೂ ತಮ್ಮ ಬದುಕಿನ ವಿಧಾನಗಳನ್ನು ಬದಲಿಸಿಕೊಳ್ಳಬಹುದು. ಆರ್ಥಿಕವಾಗಿ ಸಬಲಗೊಳ್ಳಲು ಆಧುನಿಕ ಜಗತ್ತಿನ ಯಾವ ವೃತ್ತಿಯನ್ನಾದರೂ ಅವಲಂಬಿಸಬಹುದು ಎಂಬ ಸ್ವಾಂತಂತ್ರ್ಯವನ್ನು 'ಆಧುನಿಕ ಸಮುದಾಯವನ್ನಾದರೂ ಅವಲಂಬಿಸಬಹುದು ಎಂಬ ಸ್ವಾತಂತ್ರ್ಯವನ್ನು 'ಆಧುನಿಕ ಸಮುದಾಯಗಳು' ಅನುಭವಿಸುತ್ತಿವೆ. ಈ 'ಆಧುನಿಕ ಸಮಾಜಗಳು' ಬಿಟ್ಟುಕೊಟ್ಟಿರುವ 'ಪರಂರಪೆ'ಯ ಕುರಿತು ಯಾವ ಸಂಸ್ಕೃತಿ ಚಿಂತಕರೂ ತಲೆಕೆಡಿಸಿಕೊಳ್ಳುವುದಿಲ್ಲ. 'ಭಾರತೀಯ ಸಂಸ್ಕೃತಿಯ' ನಿರ್ಮಾತೃಗಳು ಮತ್ತು ಅದರ ನಿಜ ವಾರಸುದಾರರೆಂದು ಹೇಳಿಕೊಳ್ಳುವ ಅವರೇ ತಮ್ಮ ಪರಂಪರೆಯ ವೃತ್ತಿಗಳನ್ನು ಯಾವ ಮುಲಾಜು ಇಲ್ಲದೆ ಬಿಟ್ಟುಕೊಟ್ಟು, ವಿವಿಧ ಆಧುನಿಕ ವೃತ್ತಿಗಳನ್ನು ಹಿಡಿದು ಸಂತೃಪ್ತಿಯಿಂದಿದ್ದಾರೆ. ಇವರೆಲ್ಲ ಈ ದೇಶದ ಪ್ರಬಲ ಜಾತಿಗಳಿಗೆ ಸೇರಿದವರು. ಇವರನ್ನು ಯಾರೂ ನಿಮ್ಮ ಸಂಸ್ಕೃತಿಯನ್ನು ಯಾಕೆ ಬಿಟ್ಟುಕೊಟ್ಟಿರಿ? ಎಂದು ಪ್ರಶ್ನಿಸಲಾರರು. ಆದರೆ ಕೆಳಜಾತಿಗಳು, ಆದಿವಾಸಿಗಳು 'ಆಧುನಿಕ'ವಾಗಲು ಹೊರಟವೆಂದರೆ ಸಾಕು ಈ ಪಂಡಿತರು ಚಡಪಡಿಸಲಾರಂಭಿಸುತ್ತಾರೆ ಕನ್ನಡವನ್ನು 'ದಲಿತರು ಮಾತ್ರ ಉಳಿಸಬಲ್ಲರು' ಎಂಬ ಒಣತರ್ಕಗಳನ್ನು ಹರಿಬಿಡುತ್ತಾರೆ. ಈ ಆಧುನಿಕೋತ್ತರ ನವ ಸಂಪ್ರದಾಯವಾದಿಗಳು ಭಾರತದ ಬಹುತ್ವ 'ಉಳಿಯಲೇಬೇಕು', ಅದು ಉಳಿಯಬೇಕೆಂದರೆ ಪರಂಪರೆಯ ತಿಳುವಳಿಕೆ ಮತ್ತು ಚಹರೆಗಳು ಉಳಿಯಬೇಕು ಎನ್ನುತ್ತಾರೆ. ಇದು ಬುದ್ಧಿ ಜೀವಿಗಳೆನ್ನಿಸಿಕೊಳ್ಳುವವರ ಒಳಗೇಇರುವ ಸುಪ್ತ ಮೂಲಭೂತವಾದವೇ ಆಗಿದೆ. ಭಾರತದ ಬಹುತ್ವ ಅಂದೂ ಮತ್ತು ಇಂದು ಜೀವಂತವಿರುವುದು ಈ ದೇಶದ ಶ್ರಮಜೀವಿಗಳಿಂದಾಗಿ. ಅವರೇ ಈ ದೇಶದ ನಿಜ ಸಂಸ್ಕೃತಿಯ ವಾರಸುದಾರರು. ಆಳುವ ವರ್ಗದ ಎಲ್ಲ ಬಗೆಯ ಹಿಂಸೆ, ಮತ್ತು ಕ್ರೌರ್ಯಗಳನ್ನು ಅನುಭವಿಸಿಯೂ ಈ ನೆಲದ ಅನನ್ಯತೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಆ ಕಾರಣಕ್ಕಾಗಿ ಸಾಮಾಜಿಕ ಮತ್ತು ರಾಜಕೀಯಾರ್ಥಿಕ ಸ್ವಾತಂತ್ರ್ಯಗಳನ್ನು ಶತಮಾನಗಳಿಂದ ಕಳೆದುಕೊಳ್ಳುತ್ತಲೇ ಬಂದಿದ್ದಾರೆ.

ಆದರೆ ಇಂದು ದುಡಿವ ವರ್ಗದ ಜನ ತಮ್ಮ ವೃತ್ತಿಗಳನ್ನು ಬಿಟ್ಟುಕೊಡಲು ಯೋಚಿಸುತ್ತಿದ್ದಾರೆ. ಕೃಷಿಕರಲ್ಲದ, ಸಾಮಾಜಿಕವಾಗಿ 'ಹೀನ' ವೃತ್ತಿಗಳನ್ನು ಅವಲಂಬಿಸಿರುವ ಬಹುತೇಕ ಎಲ್ಲ ಸಮುದಾಯಗಳು ಸಾಮಾಜಿಕ ಅವಮಾನವನ್ನು ಮೀರಿ ನಿಲ್ಲಲು ತಮ್ಮ ವೃತ್ತಿಗಳನ್ನು ಬಿಟ್ಟು ಕೊಡಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಈ ಸಮುದಾಯಗಳು, ಇಂಡಿಯಾವೆಂಬ ದೇಶವೊಂದಿದೆಯೋ ಇಲ್ಲವೋ, ಅದರ ಸಾಂಸ್ಕೃತಿಕ ಬಹುತ್ವ ಇರಬೇಕೋ, ನಾಶವಾಗಬೇಕೋ ಎಂಬುದಕ್ಕಿಂತ ಒಂದು ಹೊತ್ತಿನ ಊಟದ ಕುರಿತು ಮತ್ತು ತಲೆ ಎತ್ತಿ

ನಿಲ್ಲಿಸುವ ಆತ್ಮ ಪ್ರತ್ಯಯದ ಕುರಿತು ಯೋಚಿಸುತ್ತಿವೆ. ಆಧುನಿಕ ಜಗತ್ತಿನಲ್ಲಿ ಬಿಡಿಗಾಸನ್ನೂ ತರದ ಮತ್ತು ಹಿಂಸಾತ್ಮಕ ಸಾಮಾಜಿಕ ಅವಮಾನಕ್ಕೆ ಕಾರಣವಾಗುವ ಪಾರಂಪರಿಕ ವೃತ್ತಿಗಳನ್ನು ಅವರು ಬಿಟ್ಟುಕೊಡುತ್ತಿದ್ದಾರೆ. ಆದರೆ ಅಲೆಮಾರಿಗಳಿಗೆ ಈ ಅನುಕೂಲತೆಯೂ ಇಲ್ಲ. ಈ ಸಮುದಾಯಗಳು ಒಪ್ಪೊತ್ತಿನ ಊಟಕ್ಕೆ ತಮ್ಮ ವೃತ್ತಿಗಳನ್ನು ಇನ್ನೂ ಅನುಸರಿಸಲೇ ಬೇಕಾದ ಕ್ರೂರ ಅನಿವಾರ್ಯತೆಯ ಮುಂದೆ ಮಂಡಿಯೂರಿಬಿಟ್ಟಿವೆ.

ಆದರೆ ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ಅಲೆಮಾರಿಗಳು ಶುದ್ಧ ಅಲೆಮಾರಿಗಳಾಗಿ ಉಳಿಯಲಿಲ್ಲ. ಅಲೆಮಾರಿಗಳ ಮೇಲ್‌ಸ್ತರದ ಜನ ಮುಖ್ಯಪ್ರವಾಹಕ್ಕೆ ಬರುವ ನಿಟ್ಟಿನಲ್ಲಿ ಯೋಚಿಸತೊಡಗಿದರು. ತಮ್ಮ ಪಾರಂಪರಿಕ ವೃತ್ತಿಗಳನ್ನು ಕೆಲವರು ಬಿಟ್ಟುಕೊಟ್ಟು ಕೃಷಿಕರಾಗಲು ಯತ್ನಿಸಿದರು. ಶಿಕ್ಷಣ ಪಡೆದು ಔದ್ಯೋಗಿಕ ರಂಗಗಳಲ್ಲಿ ಪ್ರವೇಶ ಪಡೆದರು. ಆದರೆ ಇವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ೧೯೫೨ರಲ್ಲಿ ಕ್ರಿಮಿನಲ್ ಟ್ರೈಬಲ್ ಆಕ್ಟ್‌ನ್ನು ರದ್ದುಗೊಳಿಸಿ, ಆ ಪಟ್ಟಿಯಲ್ಲಿದ್ದ ಸಮುದಾಯಗಳನ್ನು ಡಿನೋಟಿಫೈಡ್ ಸಮುದಾಯಗಳೆಂದು ಪರಿಗಣಿಸಲಾಯ್ತು. ಆದರೆ ಮೀಸಲಾತಿಗೆ ಸಂಬಂಧಿಸಿದಂತೆ ಇವರಿಗೆ ಯಾವ ಅನುಕೂಲತೆಗಳೂ ಇರಲಿಲ್ಲ. ಕರ್ನಾಟಕದಲ್ಲಿ ಈ ಸಮುದಾಯಗಳು ೧೯೭೭ರ ವರೆಗೂ ಸರಕಾರದ ಯಾವ ಸೌಲಭ್ಯಗಳನ್ನು ಪಡೆಯಲು ಅನರ್ಹವಾಗಿದ್ದವು. ಏಕೆಂದರೆ ಡಿನೋಟಿಫೈಡ್ ಸಮುದಾಯಗಳಿಗೆ ಕೊಡದೇ ಮಾಡುವ ಯಾವ ಕಾರ್ಯ ಕ್ರಮಗಳಾಗಲಿ, ಯೋಜನೆಗಳಾಗಲಿ ಸರಕಾರದ ಮುಂದಿರಲಿಲ್ಲ. ಬದಲಿಗೆ ಕಂಪನಿ ಆಡಳಿತ ಈ ಸಮುದಾಯಗಳನ್ನು ಹೇಗೆ ನಡೆಸಿಕೊಂಡಿತೋ ಅದೇ ಅಬೆಯಲ್ಲಿ ಸ್ವತಂತ್ರ ಭಾರತದ ಸರಕಾರವೂ ನಡೆಸಿಕೊಂಡಿತು. ಯಾವುದೇ ಊರಲ್ಲಿ ಕಳ್ಳತನವಾದರೂ ಮೊದಲು ಬಂಧಿಸುವುದು, ಆ ಊರಿನ ಹೊರಗೆ ಗುಡಿಸಲು ಹಾಕಿಕೊಂಡು ತಾತ್ಕಾಲಿಕವಾಗಿ ಬದುಕುವ ಅಲೆಮಾರಿಗಳನ್ನ. ಹೊಸಪೇಟೆ ಬಳಿ ಇರುವ ಹಕ್ಕಿಪಿಕ್ಕಿಗಳು ಸ್ವಾತಂತ್ರ ಬಂದು ೫೭ ವರ್ಷಗಳು ಕಳೆದು ಹೋಗಿದ್ದರೂ ಅಮಾವಾಸೆಯ ರಾತ್ರಿ ಪೋಲೀಸ್ ಠಾಣೆಯಲ್ಲಿ ಹೋಗಿ ಮಲಗುವ ಪರಿಸ್ಥಿತಿ ಇತ್ತು. ಹೊಟ್ಟೆ ಪಾಡಿಗೆ ಯಾರಾದರೂ ಹಕ್ಕಿಪಿಕ್ಕಿಗಳು ಯಾವುದೋ ಪಕ್ಷಿಯನ್ನು ಹೊಡೆದು ತಿಂದು ಬಿಟ್ಟರೆ ಅವರನ್ನು ಬಂಧಿಸಿ ಫೋಟೋ ತೆಗೆಸಿ ನಮ್ಮ ಪೋಲೀಸರು ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳಲು ಈಗಲೂ ಹಾತೊರೆಯುತ್ತಾರೆ. ಒಂದು ಅಮಾಯಕ ಸಮುದಾಯದ ಬದುಕನ್ನು ಹಸನು ಮಾಡದ ವ್ಯವಸ್ಥೆಗೆ ಎಷ್ಟೇ ವರ್ಷದ ಇತಿಹಾಸವಿದ್ದರೂ, ಅದಕ್ಕೆ ಮಾನವಂತ ಭವಿಷ್ಯ ರೂಪಗೊಳ್ಳಲಾರದು. ಹಕ್ಕಿಪಿಕ್ಕಿಯಂತಹ ಸಮುದಾಯಗಳಿಗೆ ಈ ದೇಶದ ಯಾವ ಹಕ್ಕುಗಳು ದಕ್ಕದೇ ಇದ್ದ ಸಂದರ್ಭದಲ್ಲಿ ಅವರನ್ನು ಕಾನೂನಿನ ಮೂಲಕ ದಂಡಿಸುವ ಯೋಚನೆಯೇ ಅತ್ಯಂತ ಅಮಾನವೀಯವಾದದ್ದು. ನಾಗರಿಕವಾಗಿ ಈ ದೇಶದ ಸಂಪತ್ತಿನಲ್ಲಿ ಅವರಿಗೆ ಸಮಪಾಲಿದೆ. ಬದುಕುವ ಹಕ್ಕು. ಶಿಕ್ಷಣ ಪಡೆವ ಹಕ್ಕು, ಮಾತನಾಡುವ ಹಕ್ಕುಗಳಿವೆ. ಆದರೆ ನಮ್ಮ ಸರ್ಕಾರ ಇನ್ನೂ ಕಂಪನಿ ಆಡಳಿತದ ಕಾನೂನುಗಳ ಗುಂಗಿನಿಂದ ಹೊರ ಬಂದಿಲ್ಲ.

ಈವತ್ತು ಒಂದು ಕಾಲದ ಅಲೆಮಾರಿಗಳು ನೆಲೆನಿಲ್ಲಲು ಇನ್ನಿಲ್ಲದಂತೆ ಯತ್ನಿಸಿದ್ದಾರೆ. ಈಗಾಗಲೆ ಬಹುತೇಕ ಅಲೆಮಾರಿಗಳು ನೆಲೆ ನಿಂತಿದ್ದಾರೆ. ಆದರೆ ಮುಖ್ಯವಾಹಿನಿಯ ಆರ್ಥಿಕ ಚಲನೆಗಳ ಜೊತೆ ಅವರಿಗೆ ಅನುಸಂಧಾನ ಸಾಧ್ಯವಾಗುತ್ತಿಲ್ಲ. ಅಲೆಮಾರಿಗಳ ವರ್ತಮಾನದ ಸ್ಥಿತಿಗತಿಗಳಿಗೂ ಮತ್ತು ಕೆಲಜತಿ ಸಮುದಾಯಗಳ ಸ್ಥಿತಿಗತಿಗಳಿಗೂ ಭಾತದ ಸಾಮಾಜಿಕ ಅಧಿಕಾರದ ಹಂಚಿಕೆಯ ವ್ಯವಸ್ಥೆಯಲ್ಲಿ ಒಂದೇ ಬಗೆಯ ಕಾರಣಗಳಿದ್ದರೂ ಸಹ, ಅಲೆಮಾರಿಗಳ ಸಮಸ್ಯೆ ತುಸು ಸಂಕೀರ್ಣವಾಗಿದೆಯೆಂದೇ ನನ್ನ ಅಭಿಪ್ರಾಯ. ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ವಲಯಗಳಲ್ಲಿ ಅರ್ಹ ಸೌಲಭ್ಯಗಳನ್ನು ಪಡೆಯುವಾಗ ಈ ಸಮುದಾಯಗಳು ತಲ್ಲಣಗೊಳ್ಳುತ್ತವೆ. ಜಾತಿಪ್ರಮಾಣ ಪತ್ರ ಪಡೆಯುವ ಪ್ರಾಥಮಿಕ ಹಂತದಿಂದಲೂ ಇವು ಹೋರಾಟ ನಡೆಸಬೇಕಿದೆ. ಇನ್ನು ಮೀಸಲಾತಿಯೊಂದಿಗೆ ಮುಖ್ಯಪ್ರವಾಹದ ವೇಗದ ಲಯಕ್ಕೆ ಅಲೆಮಾರಿಗಳು ಒಗ್ಗುವುದಕ್ಕೆ ಎಷ್ಟು ತಲೆಮಾರುಗಳು ಬೇಕು? ನಾವೆಲ್ಲ ಮತ್ತೆ ಮತ್ತೆ ಈ ಕುರಿತು ಯೋಚಿಸಬೇಕಿದೆ.

ಅಲೆಮಾರಿ ಹೆಳವರು ಈವತ್ತು ಅವರಿರುವ ಸ್ಥಿತಿಯಲ್ಲಿ ಆಧುನಿಕ ಜಗತ್ತಿನ ಯಾವ ಸವಲತ್ತುಗಳನ್ನು ಪಡೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ಒಂದು ಅರ್ಥದಲ್ಲಿ ಅಲೆಮಾರಿ ಹೆಳವರು ತಮ್ಮ ಪಾರಂಪರಿಕ ವೃತ್ತಿಗೆ ತೀವ್ರವಾಗಿ ನಿಷ್ಠರಾಗಿದ್ದಾರೆ. ಪಾರಂಪರಿಕ ಕಸುಬನನ್ನು ಅತ್ಯಂತ ಭಾವುಕವಾಗಿ ವರ್ತಮಾನದಲ್ಲಿ ಮುಂದುವರಿಸುತ್ತಿರುವುದರ ಕುರಿತು ಅವರು ಮಾತನಾಡುತ್ತಾರೆ. ಭಾಗಲಕೋಟೆ ಜಿಲ್ಲೆಯ

ಬೀಳಗಿ ಬಳಿಯಲ್ಲಿ ಬೀಡು ಬಿಟ್ಟದ್ದ ಅಲೆಮಾರಿ ಹೆಳವರ ಗುಂಪೊಂದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಾನು ಬೇಟಿ ಮಾಡುವ ಸಂದರ್ಭ ಬಂದಿತು.

ಒಂದು ಮಧ್ಯಾಹ್ನದ ಇಳಿ ಹೊತ್ತಿನಲ್ಲಿ ಹೊಲವೊಂದರಲ್ಲಿ ಹೆಳವರು ಊಟದ ತಯಾರಿಯಲ್ಲಿದ್ದರು. ಕಪ್ಪು ಮಣ್ಣಿನ ಹೊಲದಲ್ಲಿ ಅವರ ೨೫ ಕ್ಕೂ ಹೆಚ್ಚು ಬಂಡಿಗಳು ಬೀಡುಬಿಟ್ಟಿದ್ದವು. ಜೊತೆಗೆ ಆಕಳು, ಕುರಿಗಳು ಮತ್ತು ಕೋಳಿಗಳು ಸಹ ಇದ್ದವು. ಹೆಂಗಸರು ಅಡುಗೆ ತಯಾರಿ ಮಾಡುತ್ತಿದ್ದರೆ ಗಂಡಸರೆಲ್ಲ ಬೀಡಿ ಸೇದುತ್ತಾ ಅಲ್ಲಲ್ಲಿ ಮಾತನಾಡುತ್ತ ಕುಳಿತಿದ್ದರು. ಅವರೆಲ್ಲ ಎತ್ತಿನ ಹೆಳವ ಪಂಗಡಕ್ಕೆ ಸೇರಿದವರು. ನಾವು ಕ್ಷೇತ್ರಕಾರ್ಯಕ್ಕೆ ತೆಗೆದುಕೊಂಡು ಹೋಗಿದ್ದ ವಾಹನವನ್ನು ರಸ್ತೆ ಬದಿಗೆ ನಿಲ್ಲಿಸಿ ಅವರ ಬಳಿ ಹೋದೆವು. ಸುಮಾರು ಐವತ್ತು ವರ್ಷದ ಬಲಿಷ್ಠ ವ್ಯಕ್ತಿ ನಮ್ಮನ್ನು ಎದುರ್ಗೊಂಡಿತು. ನಾನು ನನ್ನ ಪರಿಚಯ ಹೇಳಿಕೊಂಡು ಆತನನ್ನು ವಿಶ್ವಾಸಕ್ಕೆ ತೆಗೆದುಕೊಂಡೆ. ಲೋಕಾಭಿರಾಮದ ಚರ್ಚೆಯ ನಂತರ ನಾನು ಅವರ ಸಾಮಾಜಿಕ ಮತ್ತು ಆರ್ಥಿಕ ಬದುಕಿನ ನಿರ್ವಹಣೆಯ ಕುರಿತು ಪ್ರಶ್ನೆ ಕೇಳಲಾರಂಭಿಸಿದೆ. ಜೊತೆಗೆ ಅವರ ಬಳಿ ಇದ್ದ ಚಿಪ್ಪೋಡುಗಳನ್ನು ತೋರಿಸಲು ಕೇಳಿಕೊಂಡ ಯಾವಾಗ ನನ್ನ ಪ್ರಶ್ನೆಗಳು ಅವರ ಬದುಕಿನ ಸೂಕ್ಷ್ಮ ವಿವರಗಳನ್ನು ಕೆದಕಲು ತೊಡಗಿದವೋ ನನ್ನ ಜೊತೆ ಚರ್ಚಿಸುತ್ತಿದ್ದ ವ್ಯಕ್ತಿ ಗಂಭೀರವಾಗಿತೊಡಗಿದ. ನನ್ನ ಪ್ರಶ್ನೆಗಳಿಗೆ ಉತ್ತರಿಸಲು ಮೆದುವಾಗಿಯೇ ನಿರಾಕರಿಸತೊಡಗಿದ. ಅಷ್ಟರಲ್ಲಿ ಆತ ತನ್ನ ಬಳಿ ಇದ್ದ ಚಿಪ್ಪೋಡನ್ನು ತಂದು ತೋರಿಸಿದ. ನಾನು ಅದರ ಪುಟಗಳನ್ನು ತಿರುವಿ ಹಾಕಲು ಪ್ರಯತ್ನಿಸುತ್ತಿದ್ದಂತೆ ಆ ವ್ಯಕ್ತಿ ನನ್ನ ಕೈಯಲ್ಲಿದ್ದ ಚಿಪ್ಪೋಡನ್ನು ಮೆಲ್ಲನೆ ಕಿತ್ತುಕೊಂಡ . ಅಷ್ಟರಲ್ಲಿ ಬೇರೆ ಬೇರೆ ಬಂಡಿಗಳ ಬಳಿ ಬೀಡಿ ಸೇದುತ್ತ ಕುಳಿತಿದ್ದ ಹೆಳವರ ಜನ ನಾವು ಚರ್ಚಿಸುತ್ತದ್ದ ಸ್ಥಳಕ್ಕೆ ಬಂದರು ಅಷ್ಟರಲ್ಲಿ ಆಗಲೇ ನನ್ನ ಜೊತೆ ಮಾತಾಡುತ್ತಿದ್ದ ವ್ಯಕ್ತಿಗೆ ಚರ್ಚೆ ಬೇಡವಾಗಿತ್ತು ನಾನು ಅವರ ನೆಲೆನಿಂತು ಮಕ್ಕಳಿಗೆ ಶಿಕ್ಷಣ ಕೊಡಿಸಿ ಅವರ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ಪೋಷಿಸುವ ಕುರಿತು ಅವರಿಗೆ ವಿವರಿಸುತ್ತಿದ್ದೆ. ಅಷ್ಟರಲ್ಲಿ ಆಗ ತಾನೇ ನಮ್ಮನ್ನು ಸುತ್ತುವರೆದಿದ್ದ ಹೆಳವರ ಗುಂಪಿನ ಸದಸ್ಯರಲ್ಲಿ ಒಬ್ಬಾತ ಮುಂದಕ್ಕೆ ಬಂದು ಚರ್ಚಿಸತೊಡಗಿದ. ತಲೆಗೆ ಗಾಂಧೀ ಟೋಪಿ ಹಾಕಿದ್ದ ಆತ ಮೊದ ಮೊದಲು ಮೆಲುದನಿಯಲ್ಲಿಯೇ ಮಾತಾಡಿದ. ನಂತರ ಆತನ ದನಿ ಗಡುಸಾಯಿತು. ಆತ ನನ್ನನ್ನು ಅನುಮಾನಿಸತೊಡಗಿದ. ಜೊತೆಗೆ ತಮ್ಮ ಅಲೆಮಾರಿತನವನ್ನು ಆತ ಸಮರ್ಥಿಸತೊಡಗಿದ. ತಮ್ಮ ಬಳಿ ಇರುವ ಚಿಪ್ಪೊಡುಗಳಲ್ಲಿನ ದಾಖಲೆಗಳನ್ನು ಸುಪ್ರಿಂಕೋರ್ಟ್ ಒಪ್ಪಿಕೊಳ್ಳುತ್ತಿರುವುದರ ಕುರಿತು ಹೇಳಿದ. ತಮಗೆ ಬೇರೆ ಯಾವ ಉದ್ಯೋಗವೂ ಬೇಕಿಲ್ಲ. ತಮ್ಮ ವೃತ್ತಿ ಯಾವ ಕಾರಣಕ್ಕೂ ನಿಲ್ಲಿಸದೆ ಮುಂದುವರಸುವುದರ ಕುರಿತು ಆತ ಒರಟಾಗಿಯೇ ನನಗೆ ಹೇಳಿದ. 'ನಮಗೆ ಈ ವೃತ್ತಿಯನ್ನು ದೇವರೇ ಕೊಟ್ಟಿದ್ದಾನೆ ಅದನ್ನು ನಾವು ಮುಂದುವರೆಸುತ್ತೇವೆ. ಇದರಲ್ಲಿ ನಾವು ಸುಖವಾಗಿದ್ದೇವೆ. ನಮ್ಮಲ್ಲಿನ ದಾಖಲೆಗಳನ್ನು ಕೋರ್ಟುಗಳು ನಂಬಿ ತೀರ್ಪುಕೊಡುತ್ತವೆ. ನಮ್ಮ ಒಕ್ಕಲುಗೂಳು ನಮಗೆ ಬೇಕಾದ ಎಲ್ಲವನ್ನೂ ಕೊಡುತ್ತಾರೆ. ನಾವು ಈಗಿರುವ ಸ್ಥಿತಿಯಲ್ಲಿಯೆ ಚೆನ್ನಾಗಿದ್ದೇವೆ' ಎಂದ ಆತ ನನ್ನ ಬಳಿ ಮತ್ತೆ ಮಾತನಡಲು ಬಯಸಲಿಲ್ಲ. ನನ್ನನ್ನು ಯಾವುದೋ ಗೂಢಚಾರ ಎಂಬ ಗುಮಾನಿಯಿಂದಲೇ ಆತ ಅನುಮಾನಿಸ ತೊಡಗಿದ. ಆವರನನ್ನು ವಿಶ್ವಾಸಕ್ಕೆ ತೆಗೆದುಕೊಳ್ಳು ನನ್ನೆಲ್ಲ ಬುದ್ಧಿಶಕ್ತಿ ವಿನಿಯೋಗಿಸಿದರೂ ಸಾಧ್ಯವಾಗಲೇ ಇಲ್ಲ. ಕೊನೆಗೆ ಅವರು ತಮ್ಮ ಬಳಿಯಲ್ಲಿನ ಚಿಪ್ಪೋಡುಗಳನ್ನು ಮುಚ್ಚಿಟ್ಟರು. ಅವರ ಜೊತೆ ಮತ್ತೆ ಚರ್ಚೆ ಸಾಧ್ಯವಿಲ್ಲ ಎಂದು ಹೊರಟು ಬಂದೆವು.

ನಾನು ಬೇಟಿ ಮಾಡಿ ಚರ್ಚಿಸಿದ ಹೆಳವ ಸಮುದಾಯದ ಜನರಲ್ಲಿ ನಾನು ಮೂರು ಬಗೆಯ ಗುಂಪುಗಳನ್ನು ಕಂಡುಕೊಂಡೆ.

೧. ಪಾರಂಪರಿಕ ವೃತ್ತಿಯಲ್ಲಿ ಅಪಾರ ನಿಷ್ಠೆ ಹೊಂದಿ, ಅದನ್ನು ಈವತ್ತೂ ಮುಂದುವರೆಸಿಕೊಂಡು ಬದುಕುತ್ತಿರುವ ಅಲೆಮಾರಿ ಗುಂಪುಗಳು

೨. ಪಾರಂಪರಿಕ ವೃತ್ತಿಯಲ್ಲಿ ಗೌರವವಿಟ್ಟುಕೊಂಡೂ, ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿಕೊಳ್ಳಲು ಭಿನ್ನ ವೃತ್ತಿಗಳನ್ನು ಅವಲಂಬಿಸಿರುವವರು

೩. ಪಾರಂಪರಿಕ ವೃತ್ತಿಯಲ್ಲಿ ಯಾವ ಗೌರವವೂ ಇಲ್ಲದೆ ಬೇರೆ ವೃತ್ತಿಗಳನ್ನು ಉದಾ. ಕೃಷಿ ವ್ಯಾಪಾರ, ಸರ್ಕಾರಿ ಉದ್ಯೋಗದಲ್ಲಿರುವವರು.

ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡ ಈ ಮೂರು ಗುಂಪುಗಳಲ್ಲಿ ಎರಡು ಮತ್ತು ಮೂರನೇ ಗುಂಪಿನ ಜನ ಬದಲಾವಣೆಗೆ ತೀವ್ರವಾಗಿ ಹಂಬಲಿಸುವವರು. ಆದರೆ ಅಲೆಮಾರಿಗಳೂ ಪಾರಂಪರಿಕ ವೃತ್ತಿಯಲ್ಲಿಯೇ ಇರುವುದರಿಂದ, ಸಾಮಾಜಿಕ ಬದುಕನ್ನು ತೀವ್ರವಾಗಿ ಬದಲಿಸುವ ಆಧುನಿಕ ಆರ್ಥಿಕ ಚುಟುವಟಿಕೆಗಳು ಅವರಿಗೆ ಸಾಧ್ಯವಾಗಿಲ್ಲ, ಈ ಕಾರಣದಿಂದ ಅವರ ಸಾಮಾಜಿಕಾರ್ಥಿಕ ಬದುಕಲ್ಲಿ ಅಂತಹ ವ್ಯತ್ಯಾಸಗಳು ಸಂಭವಿಸಿಲ್ಲ. ದುರಂತವೆಂದರೆ ನಾನು ಮೇಲೆ ಉಲ್ಲೇಖಿಸಿದ ಮೂರು ಗುಂಪಿನ ಜನ ಒಂದೇ ಮನೆಯಲ್ಲಿ ವಾಸಿಸುವ ಉದಾಹರಣೆಗಳನ್ನು ನಾನು ಬೆಳಗಾಂ ಜಿಲ್ಲೆಯಲ್ಲಿ ನೋಡಿದೆ. ಒಂದೇ ಮನೆಯಲ್ಲಿ ಅಣ್ಣತಮ್ಮಂದಿರು ಈ ಬಗೆಯ ಅಗಾಧ ಭಿನ್ನಾಭಿಪ್ರಾಯಗಳನ್ನಿಟ್ಟುಕೊಂಡು ಒಂದೇ ಸೂರಿನಡಿ ಬದುಕುತ್ತಿರುವುದು ನಿಜಕ್ಕೂ ಆಶ್ಚರ್ಯದ ಸಂಗತಿ. ಬೆಳಗಾಂ ಜಿಲ್ಲೆಯ ಗೋಕಾಕ್‌ನಲ್ಲಿನ ಅಮೃತ್ ಹೆಳವಿ ಎನ್ನುವವರು ಎಲ್ ಐ ಸಿ ಯ ಏಜೆಂಟ್ ಆಗಿ ಆರ್ಥಿಕವಾಗಿ ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿದ್ದರೂ ಅವರ ಸ್ವಂತ ಸಹೋದರ ಊರೂರು ಸುತ್ತುತ್ತಾ ಹೆಳವ ವೃತ್ತಿಯನ್ನು ಅನುಸರಿಸುತ್ತಿದ್ದಾನೆ. ಅಮೃತ್ ಹೆಳವಿಗೆ ತಮ್ಮ ಕಸುಬಿನ ಬಗ್ಗೆ ಗೌರವವಿದೆ. ಅವರು ತಮ್ಮ ಅಣ್ಣನ ನಿಲುವನ್ನು ಗೌರವಿಸುತ್ತಾರೆ. ಆದರೆ ಇವರ ಮಾವ ತಮ್ಮ ಕುಲಕಸಬನ್ನ ಅಪಾರವಾಗಿ ತಿರಸ್ಕರಿಸುತ್ತಾರೆ. ಕೆಲವು ಒರಟು ಮಾತುಗಳನ್ನು ಬಳಸಿಯೇ ಅವರು ತಮ್ಮ ಕುಲಕಸಬನ್ನು ಜರಿಯತೊಡಗಿದರು. ಜೊತೆಗೆ 'ಎಲ್ಲಿಯವರೆಗೆ ನಾವು ಕುಲಕಸುಬನ್ನು ಬಿಡಲಾರವೋ ಅಲ್ಲಿಯವರೆಗೆ ನಾವು ಉದ್ಧಾರವಾಗಲಾರೆವು' ಎಂದು ಅವರು ಮಾತು ಮುಗಿಸಿದರು.

ಈವತ್ತಿಗೂ ಅಲೆಮಾರಿಗಳಾಗಿ ಬದುಕುತ್ತಿರುವ ಗುಂಪಿನ ಸದಸ್ಯರಿಗೆ ತಮ್ಮ ಪಾರಂಪರಿಕ ಕುಲಕಸಬಿನ ಮೇಲೆ ಇನ್ನಿಲ್ಲದ ಗೌರವವಿರುವುದು ಮೇಲು ನೋಟಕ್ಕೇ ಕಂಡು ಬರುತ್ತದೆ. ಇದರಿಂದಾಗಿ ಈ ಸಮುದಾಯದಲ್ಲಿ ಇನ್ನೂ ಈಗಾಗಲೇ ಭಿನ್ನ ವೃತ್ತಿಗಳಲ್ಲಿದ್ದು ನೆಲೆನಿಂತಿರುವ ಸಮುದಾಯದ ಜನ, ಅಲೆಮಾರಿಗಳ ಜೊತೆ ರಕ್ತ ಸಂಬಂಧ ಬೆಳೆಸಲು ಹಿಂಜರಿಯುತ್ತಿದ್ದಾರೆ. ಆ ಗುಂಪಿನ ಜನ ಊರೂರು ತಿರುಗುತ್ತಿರುವ ಕಾರಣಕ್ಕಾಗಿ ಹೆಣ್ಣು ಕೊಡುವುದಾಗಲಿ, ಅಲ್ಲಿಂದ ಹೆಣ್ಣನ್ನು ತರುವುದಾಗಲೀ ಉಚಿತವಲ್ಲ ಎಂಬ ತೀರ್ಮಾನಕ್ಕೆ ನೆಲೆನಿಂತ ಜನ ಬಂದಿದ್ದಾರೆ. ಈ ಕಾರಣಕ್ಕಾಗಿ ಅಲೆಮಾರಿಗಳ ಸಾಮಾಜಿಕ ವ್ಯಾಪ್ತಿ ಒಂದು ಅರ್ತದಲ್ಲಿ ಕುಗ್ಗುತ್ತಿರುವ ಸೂಚನೆಗಳಿವೆ. ಏಕೆಂದರೆ ಒಂದು ಸರಕಾರಿ ಕೆಲಸದಲ್ಲಿರುವ ವ್ಯಕ್ತಿಯೊಬ್ಬ ಅಲೆಮಾರಿ ಗುಂಪಿನ ಹುಡಿಗಿಯೊಬ್ಬಳನ್ನು ಮದುವೆಯಾಗಲು ಸಹಜವಾಗಿಯೆ ತಿರಸ್ಕರಿಸುತ್ತಾನೆ. ಆಗ ಅಲೆಮಾರಿಗಳು ತಮ್ಮ ತಮ್ಮಲ್ಲಿಯೇ ರಕ್ತ ಸಂಬಂಧ ಏರ್ಪಡಿಸಿಕೊಳ್ಳಲು ತೊಡಗುತ್ತಾರೆ.

ಅಷ್ಟರ ಮಟ್ಟಿಗೆ ಅಲೆಮಾರಿಗಳ ಸಾಮಾಜಿಕ ವ್ಯಾಪ್ತಿ ಕಿರಿದಾಗುತ್ತಾ ಹೋಗುತ್ತದೆ. ಈ ಸ್ಥಿತಿ ಹೀಗೆಯೇ ಮುಂದುವರಿದರೆ ನೆಲೆನಿಂತ ಹೆಳವರು ತಮ್ಮನ್ನು ಒಂದು ಪ್ರತ್ಯೇಕ ಸಾಮಾಜಿಕ ಗುಂಪು ಎಂದು ಗುರುತಿಸಿಕೊಳ್ಳಬಹುದು. ಶಾಶ್ವತವಾಗಿ ರಕ್ತ ಸಂಬಂಧಗಳು ಏರ್ಪಡುವುದು ನಿಂತೂ ಬಿಡಬಹುದು.

[1] ಮಿದವೋಯ್‌ಎ.ಪಿ. ಭಾರತದಆರ್ಥಿಕವ್ಯವಸ್ಥೆ, ಪು. ೩೯, ೧೯೮೭

[2] Irfan Habib, Essays on Indian History, p 313, 1995

[3] Irfan Habib, The Agrarian System of Mughal India 1556 – 1707, p 143, 1999

[4] Devi G N, The Branded Tribes of India, p 1, 1998

[5] Stephen Fuchs, At the Bottom of Indian Society, p 154, 1981

[6] Mahaswetha Devi, An Act was Born, p 3, 1998

[7] Ibid, p3

[8] Ibid, p3

[9] Devi G N, The Branded Tribes Of India, p 1, 1998

[10] Stephen Fuchs, At the Bottom of Indian Society, p 55, 1981

**ಚಾಪೆ ಹೆಳವರು**

ಹೆಳವ ಸಮುದಾಯದಲ್ಲಿ ಇನ್ನೂ ಹಲವು ವೃತ್ತಿಗಳಲ್ಲಿ ತೊಡಗಿರುವ ಗುಂಪುಗಳಿವೆ. ಅದರಲ್ಲಿ ಇನ್ನೊಂದು ಪ್ರಮುಖ ಪಂಗಡ ಚಾಪೆ ಹೆಳವರು. ಚಾಪೆ ಹಳವರು ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಚಾಪೆ ಹೆಳವರು ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಚಾಪೆ ಹೆಳವರು ಚಾಪೆಗಳನ್ನು ಮಾರಿಯೇ ಬದುಕನ್ನು ಸಾಗಿಸಬೇಕಿದೆ. ಅಲ್ಲದೆ ಇವರು ಕಸಬರಿಗೆ, ಬುಟ್ಟಿಗಳನ್ನು ಮಾಡಿ ಮಾರುತ್ತಾರೆ... ಇದಕ್ಕೆ ಪರ್ಯಾವಾಗಿ ಇವರು ಹಂದಿ ಸಾಕಾಣಿಕೆಯನ್ನು ಮಾಡುತ್ತಾರೆ. ಇಷ್ಟೇ ಇವರ ಆದಾಯದ ಮೂಲಗಳು. ಪಟ್ಟಣ ಮತ್ತು ನಗರಗಳಿಗೆ ಹತ್ತಿರವಿರುವವರಲ್ಲಿ ಕೆಲವರು ಮಾತ್ರ ಪ್ಲಾಸ್ಟಿಕ್ ವಸ್ತುಗಳು, ಪಾತ್ರೆ ವ್ಯಾಪಾರವನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇದು ಒಂದೆರೆಡು ಕಡೆ ಮಾತ್ರ ಕಾಣಿಸುವುದು. ಇದಲ್ಲದೆ ಇವರು ಮೀನುಗಾರರ ಬಳಿ ಮೀನು ಹಿಡಿಯಲು ಕೂಲಿ ಮಾಡತ್ತದ್ದಾರೆ. ಇಂದಿಗೂ ಇವರು ಗುಡಿಸಲುಗಳ್ಳಲಿಯೇ ವಾಸ ಮಾಡುತ್ತಿದ್ದಾರೆ. ಗಂಟೆ ಹೆಳವರು ಮತ್ತು ಎತ್ತಿನ ಹೆಳವರಿಗಿಂತ ಚಾಪೆ ಹೆಳವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನಿಕೃಷ್ಟ ಸ್ಥಿತಿಯಲ್ಲಿದ್ದಾರೆ.

**ಹೆಳವರ ವರ್ತಮಾನದ ಇತರೆ ಕಸಬುಗಳು**

ಭಾರತದ ಸಾಂಪ್ರದಾಯಿಕ ಸಮಾಜದಲ್ಲಿ ಯಾವುದೇ ಸೇವಕ ಸಮುದಾಯವು ಪಾರಂಪರಿಕವಾಗಿ ಆಳುವ ವರ್ಗದ ಆರ್ಥಿಕತೆಯನ್ನು ಅವಲಂಬಿಸಿಯೇ ಬದುಕಿ ಬಂದಿದೆ. ಆಳುವ ವರ್ಗದ ಆರ್ಥಿಕ ಸ್ಥಿತಿಗತಿಗಳಲ್ಲಿ ಬದಲಾವಣೆಗಳಾದಂತೆ ಸೇವಕ ಸಮುದಾಯಗಳ ಒಟ್ಟಾರೆ ಸ್ಥಿತಿಗತಿಗಳಲ್ಲಿ ರೂಪಾಂತರುಗಳು ಸಂಭವಿಸುತ್ತವೆ. ಹೆಳವರು ಯಾವತ್ತೂ ಪಾರಂಪರಿಕವಾಗಿ ಆಳುವ ವರ್ಗದ ಸೇವಕ ಸಮುದಾಯವಾಗಿಯೇ ಬದುಕಿ ಬಂದಿದೆ. ಯವತ್ತೂ ಈ ದೇಶದ ಪಾರಂಪರಿಕ ಆರ್ಥಿಕ ವ್ಯವಸ್ಥೆ ಅಮೂಲಾಗ್ರವಾಗಿ ತನ್ನ ಸ್ಥಿತಿಯನ್ನು ಮತ್ತು ಸ್ವಭಾವಗಳ್ನು ಬದಲಿಸತೋ ಆ ಸಂದರ್ಭದಲ್ಲಿ ಸೇವಕ ಸಮುದಾಯಗಳೂ ತಮ್ಮ ಸಾಮಾಜಿಕಾರ್ಥಿಕ ಚಲನೆಗಳನ್ನು ಬದಲಿಸಿಕೊಳ್ಳಬೇಕಾದ ಅನಿವಾರ್ಯತೆ ಇಂಡಿಯಾದ ಸಾಮಾಜಿಕ ಚರಿತ್ರೆಯಲ್ಲಿ ತಲೆದೋರುತ್ತಲೇ ಬಂದಿದೆ. ಊಳಿಗಮಾನ್ಯ, ಅರೆ ಊಳಿಗಮಾನ್ಯ, ಆಧುನಿಕಪೂರ್ವ ಮತ್ತು ಆಧುನಿಕ ಇಂಡಿಯಾದಲ್ಲಿ ಆಳುವ ವರ್ಗಗಳ ಆರ್ಥಿಕ ಚಟುವಟಿಕೆಗಳಲ್ಲಿ ಆದ ಬದಲಾವಣೆಗಳು ಸೇವಕ ಸಮುದಾಯಗಳ ಬದುಕಿನ ವಿಧಾನಗಳನ್ನೂ ರೂಪಾಂತರಿಸಿವೆ. ಈ ರೂಪಾಂತರ ಸೇವಕ ಸಮುದಾಯಗಳನ್ನು ಆರ್ಥಿಕವಾಗಿ ಮಾತ್ರವಲ್ಲ ಸಾಮಾಜಿಕವಾಗಿಯೂ ಪಲ್ಲಟಗೊಳಿಸಿವೆ. ನೆಲೆತಪ್ಪಿದ ಸಮುದಾಯಗಳು ಜೀವನ ನಿರ್ವಹಣೆಗೆ ಸಹಜವಾಗಿಯೇ ಅಲೆಮಾರಿಗಳಾಗಿದ್ದಾರೆ. ಜೊತೆಗೆ ಪಾರಂಪರಿಕ ಕುಲಕಸಬನ್ನೂ ಬದಲಿಸಿಕೊಳ್ಳುವ ಅನಿವಾರ್ಯತೆಯೂ ಬಂದೊದಗಿತ್ತು. ಈ ಕಾರಣದಿಂದ ಆಧುನಿಕ ಪೂರ್ವ ಭಾರತದಲ್ಲಿ ಅಲೆಮಾರಿಗಳಾಗಿ ರೂಪಾಂತರಗೊಂಡ ಸೇವಕ ಸಮುದಾಯಗಳು ಅನೇಕ ಬಗೆಯ ವಿವಿಧ ವೃತ್ತಿಗಳನ್ನು ಸಹಜವಾಗಿಯೇ ಅನುಸರಿಸಿದವು. ವಿವಿಧ ವೃತ್ತಿಗಳನ್ನು ಅನುಸರಿಸಿದ ಪಂಗಡಗಳು ಬೇರೆ ಬೇರೆ ಸಾಮಾಜಿಕ ಗುಂಪುಗಳಾಗಿಯೇ ತಮ್ಮನ್ನು ಗುರುತಿಸಿಕೊಳ್ಳಲು ಹಂಬಲಿಸಿದವು. ಇದರಿಂದಾಗಿ ಹೆಳವರಲ್ಲಿಯೂ ಅನೇಕ ಬಗೆಯ ವೃತ್ತಿ ಪಂಗಡಗಳು ರೂಪುಗೊಂಡವು. ಹರಿಲಾಲ್ ಪವಾರ್ ಅವುಗಳನ್ನು ಹೀಗೆ ಗುರುತಿಸುತ್ತಾರೆ. "ಹಂದಿ ಹೆಳವುರ, ದೂದಿ ಹೆಳವರು, ತಿತ್ತಿನೆಳವರು, ಕೂಕಣಿ ಹೆಳವರು, ಮುಂದಲ ಹೆಳವರು, ಕಂಬಿ ಹೆಳವುರ, ಅಡವಿ ಹೆಳವರು, ಊರ

ಹೆಳವರು, ಸಾದು ಹೆಳವರು, ಜಾತಿ ಹೆಳವರು, ತಂಬೂರಿ ಹೆಳವರು"

[1] ಇನ್ನು ಮುಖ್ಯ ಪಂಗಡಗಳಾಗಿ ಎತ್ತಿನ ಹೆಳವರು. ಗಂಟೆ ಹೆಳವರು ಮತ್ತು ಚಾಪೆ ಹೆಳವರು ಹೆಚ್ಚಿನ ಸಂಖ್ಯೆಯಲ್ಲಿ ಬದುಕುತ್ತಿದ್ದಾರೆ. ಮೇಲೆ ಉಲ್ಲೇಖಿಸಿದ ಹೆಳವರ ವಿವಿಧ ಉಪ ಪಂಗಡಗಳು ಬೇರೆ ಬೇರೆ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ.

**೧. ಹಂದಿ ಹೆಳವರು**

ಹಂದಿ ಸಾಕಾಣಿಕೆ ಇವರ ಈವತ್ತಿನ ಕಸಬು, ಇವರು ಬೀದರ್ ಗುಲ್ಬರ್ಗಾ ಬಳ್ಳಾರಿ ಮತ್ತು ಆಂಧ್ರದ ಗಡಿಭಾಗದಲ್ಲಿ ಹೆಚ್ಚಾಗಿ ಕಾಣಸಿಗುತ್ತಾರೆ. ಹಂದಿಯ ಗೊಬ್ಬರವನ್ನು ಕೃಷಿಕರಿಗೆ ಮಾರಾಟ ಮಾಡಿ ಇವರು ಜೀವನ ನಿರ್ವಹಣೆ ಮಾಡುತ್ತಿದ್ದಾರೆ.

**೨. ದೂದಿ ಹೆಳವರು**

ದೂದಿ ಎಂದರೆ ಹತ್ತಿ, ಈ ಹತ್ತಿಯನ್ನು ಮಾರಾಟ ಮಾಡಿ ಈ ದೂದಿ ಹೆಳವರು ಬದುಕುತ್ತಿದ್ದಾರೆ. ಜೊತೆಗೆ ಚಾಪೆ ಹೆಣೆಯುವುದು ಮತ್ತು ಹಂದಿ ಸಾಕಣಿಕೆಯನ್ನೂ ಕ್ವಚಿತ್ತಾಗಿ ಮಾಡುತ್ತಾರೆ. ಇವರು ಬಳ್ಳಾರಿ, ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ.

**೩. ತಿತ್ತಿ ಹೆಳವರು**

ಇವರು ಚರ್ಮದಿಂದ ಮಾಡಿದ ತಿತ್ತಿ ವಾದ್ಯವನ್ನು ಬಳಸಿ ಹಾಡುತ್ತಾ ಭಿಕ್ಷೆ ಬೇಡುವ ಪಂಗಡವಾಗಿವೆ. ಈ ವಾದ್ಯವು ಚರ್ಮದಿಂದ ತಯಾರಿಸಲ್ಲಪಟ್ಟಿರುತ್ತದೆ. ಒಂದು ರೀತಿಯಲ್ಲಿ ಹಾವಾಡಿಗನ ಪುಂಗಿಯು ತರಹ ಇದು ಧ್ವನಿ ಹೊರಡಿಸುತ್ತದೆ. ಇವರೂ ಸಹ ಉತ್ತರ ಕರ್ನಾಟಕದ ಆಂಧ್ರದ ಗಡಿಗಳಲ್ಲಿ ಅಲೆಮಾರಿಗಳಾಗಿ ಬದುಕುತ್ತಿದ್ದಾರೆ.

**೪. ಕೂಕಣಿ ಹೆಳವರು**

ಕೂಕಣಿ ಹೆಳವರು ಊರೂರು ಸುತ್ತುತ್ತಾ ಜನ ಕಿವಿಗಳಲ್ಲಿನ ಗುಗ್ಗೆ (ಕೂಕಣಿ)ಯನ್ನು ಹೊರ ತೆಗೆಯುವುದನ್ನು ಮುಖ್ಯ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಜೊತೆಗೆ ಚಾಪೆ ಮತ್ತು ಕಸಬರಿಗೆಗಳನ್ನು ಈಚಲ ಗರಿಗಳಿಂದ ತಯಾರಿಸಿ ಮಾರುತ್ತಾರೆ. ಇವರು ರಾಯಚೂರು, ಬಳ್ಳಾರಿ, ಕೊಟ್ಟೂರು ಮತ್ತು ಕೂಡ್ಲಿಗಿ ತಾಲ್ಲೂಕುಗಳಲ್ಲಿ ವಾಸಿಸುತ್ತಿದ್ದಾರೆ.

**೫. ಮಂದಲ ಹಳವರು**

ಮಂದಲ ಎಂದರೆ ಮದ್ದು ಅಥವಾ ಔಷದಿ ಎಂಬ ಅರ್ಥವಿದೆ. ಈ ಪಂಗಡದವರು ಗಿಡ ಮೂಲಿಕೆಗಳಿಂದ ಔಷಧಿಗಳನ್ನು ತಯಾರಿಸಿ ಊರೂರು ತಿರುಗಿ ಮಾರುತ್ತಾ ಜೀವಿಸುತ್ತಾರೆ. ಬಳ್ಳಾರಿ, ಕೋಲಾರ, ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಇವರು ಹೆಚ್ಚಾಗಿ ಕಾಣಸಿಗುತ್ತಾರೆ. "ಮೈಸೂರು ಸಮಿಪದಲ್ಲಿರುವ 'ಹೆಳವರ ಹುಂಡಿ'ಯ ಗಂಟೆ ಹೆಳವರು ಹೆಚ್ಚಿನ ಸಂಖ್ಯೆಯಲ್ಲಿ ಈ ವೃತ್ತಿ ಕೈಗೊಂಡಿರುತ್ತಾರೆ" ಎಂದು ಹರಿಲಾಲ್ ಪವಾರ್ ಹೇಳುತ್ತಾರೆ.**[2]**

**೬. ಕಂಬಿ ಹೆಳವರು**

ಇವರು ತಮ್ಮ ಒಕ್ಕಲು ಮನೆಗಳಿಗೆ ಹೋಗಿ ವಂಶಾವಳಿಗಳನ್ನು ಹೇಳುತ್ತಾರೆ. ಆದರೆ ಇವರು ಎತ್ತಿನ ಹೆಳವ ಮತ್ತು ಗಂಟೆ ಹೆಳವರಿಗಿಂತ ಭಿನ್ನ ರೀತಿಯವರು. ಇವರು ಹೆಗಲು ಮೇಲಿನ ಬೊಂಬಿನ ಎರಡು ತುದಿಗಳಿಗೆ ಚಾಪೆಗಳನ್ನು ಇಳಿಬಿಟ್ಟುಕೊಂಡು ತಮ್ಮ ಒಕ್ಕಲು ಮನೆಗಳಿಗೆ ಹೋಗುತ್ತಾರೆ.

**೭. ಅಡವಿ ಹೆಳವರು**

"ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕು ಕಕೇಲಿ ಅಡವಿಯಲ್ಲಿ 'ಅಡವಿ ಹೆಳವುರ' ಎಂಬ ಒಂದು ಜನ ಸಮುದಾಯ ಇದೆ" ಎಂದು ಪವಾರ್ ಅವರು ಹೇಳುತ್ತಾರೆ.[3] ಇವರು ಕಾಡಲ್ಲಿದ್ದು ಈಚಲ ಗರಿಗಳಿಂದ ಚಾಪೆ ಹೆಣೆದು ಮಾರುತ್ತಾ ಜೀವನ ಸಾಗಿಸುತ್ತಾರೆ.

**೮. ಊರ ಹೆಳವರು**

ಊರ ಹೆಳವರು ಈಗಾಗಲೇ ನೆಲೆನಿಂತು ಕೃಷಿ ಮುಂತಾದ ಚಟುವಟಿಕೆಗಳಲ್ಲಿ ತೊಡಗಿ ಮುಖ್ಯ ಪ್ರವಾಹದ ಜೊತೆ ಬೆರೆತು ಹೋಗಿದ್ದಾರೆ. ಸಾಮಾನ್ಯವಾಗಿ ಉತ್ತರ ಕರ್ನಾಟಕದ ಹೆಳವರು ಗ್ರಾಮಗಳಲ್ಲಿ ಇತರ ಸಮುದಾಯಗಳ ಜೊತೆ ಬದುಕುತ್ತಿರುವ ಹೆಳವರು ತಮ್ಮನ್ನು ಹೀಗೆ ಕರೆದುಕೊಳ್ಳುತ್ತಾರೆ.[4]

**೯. ಸಾದು ಹೆಳವರು**

"ಇವರು ಸಾದುಗೌಡ ಅಂದರೆ ಸಾದು ಲಿಂಗಾಯ್ತರೆಂದು ಹೇಳುತ್ತಾರೆ. ಸಾಮಾನ್ಯವಾಗಿ ಲಿಂಗಾಯ್ತರಲ್ಲಿ ಸಾಧು ಲಿಂಗಾಯ್ತರೇ ಜಿರಾಯ್ತು ಮಾಡುವ ಜನ"[5] ಎಂದು ಎಚ್.ಎಲ್. ನಾಗೇಗೌಡರು ಈ ಪಂಗಡವನ್ನು ವಿವರಿಸುತ್ತಾರೆ.

**೧೦. ಜಾತಿ ಹೆಳವರು**

"ಜಾತಿ ಹೆಳವರು ಎಂಬ ವಿಶಿಷ್ಟ ವರ್ಗವಿದೆಯೆಂದು ತಿಳಿದು ಬರುತ್ತದೆ. ಇವರೂ ಊರ ಹೆಳವರೂ ಒಂದೇ ಇರಬಹುದೇ"[6] ಎಂದು ನಾಗೇಗೌಡರು ಈ ಪಂಗಡವನ್ನು ಉಲ್ಲೇಖಿಸುತ್ತಾರೆ.

**೧೧. ತಂಬೂರಿ ಹೆಳವರು**

ಇವರು ಆಂಧ್ರದ ಗಡಿ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತಾರೆ. ಮೂಲತಃ ಇವರು ತೆಲುಗರು, ಇವರು ಊರೂರು ಅಲೆಯುತ್ತಾ ಆಂಧ್ರದ ರೆಡ್ಡಿ ಭೂಮಾಲಿಕರ ಮನೆಗಳಿಗೆ ಹೋಗಿ ತಂಬೂರಿ ಬಾರಿಸುತಾ ಅವರ ಕುಲದ ವಿವರಗಳನ್ನು ಹಾಡುತ್ತಾರೆ. ಜೊತೆಗೆ "ಮಲ್ಲಿಕಾರ್ಜುನ, ಸಾಸುರ ಚೆನ್ನಮ್ಮ ಮುಂತಾದ ದೇವತೆಗಳ ಮೇಲೆ ಹಡಿ ಹನ ಸಂಗ್ರಹಿಸುತ್ತಾರೆ".[7]

ಈ ಎಲ್ಲ ಪಂಗಡಗಳು 'ಹೆಳವ' ಸಮಾಜದಿಂದ ಅನಿವಾರ್ಯ ಕಾರಣಗಳಿಗಾಗಿ ಬೇರೆ ಆರ್ಥಿಕ ಮೂಲಗಳನ್ನು ಹುಡಕಿಕೊಂಡು ಹೋದ ಗುಂಪುಗಳೇ ಆಗಿವೆ. ಪ್ರಾಯಶಃ ಆಧುನಿಕ ಪೂರ್ವ ಭಾರತದ ಚರಿತ್ರೆಯಲ್ಲಿ ಆದ ಅನೇಕ ರಾಜಕೀಯ ಪಲ್ಲಟಗಳಿಂದಾಗಿ ಈ ಬಗೆಯ ಅಲೆಮಾರಿ ಸಮುದಾಯಗಳು ಭಿನ್ನ ಆರ್ಥಿಕ ಚಟುವಟಿಕೆಗಳನ್ನು ರೂಢಿಸಿಕೊಳ್ಳುವುದು ಅನಿವಾರ್ಯವಾಗಿರಬಹುದು. ಮೂಲದಲ್ಲಿ ಈ ಎಲ್ಲ ಉಪಪಂಗಡಗಳು ಹೆಳವ ಸಮುದಾಯದ ವಿವಿಧ ಗುಂಪುಗಳೇ ಆಗಿವೆ.

ಬಹುತೇಕ ಹೆಳವುರ ಇಂದು ಆರ್ಥಿಕವಾಗಿ ಹಿಂದುಳಿದವರೇ ಆಗಿದ್ದಾರೆ. ಇದಕ್ಕೆ ಮುಖ್ಯ ಕಾರಣ ಇಂದಿಗೂ ಪಾರಂಪರಿಕ ವೃತ್ತಿಯನ್ನು ಅವಲಂಭಿಸಿರುವುದು. ಈ ವೃತ್ತಿಯ ಜೊತೆಗೆ ಇವರು ಪರ್ಯಾಯ ವೃತ್ತಿಗಳನ್ನು ಅವಲಂಭಿಸದಿರುವುದರಿಂದ ಈ ರೀತಿಯ ಸಮಸ್ಯೆಯನ್ನು ಎದುರಿಸುವಂತಾಗಿದೆ. ಇನ್ನು ಕೆಲವು ಕಡೆಗಳಲ್ಲಿ ಪಾರಂಪರಿಕ ವೃತ್ತಿ ಬಿಟ್ಟು ತಮಗಿರುವ ತುಂಡು ಭೂಮಿಯಲ್ಲಿಯೇ ಕೃಷಿ ಚಟುವಟಿಕೆಗಳನ್ನು ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ಮತ್ತೆ ಕೆಲವುರ ಬೇರೆಯವರ ಭೂಮಿಯಲ್ಲಿ ಕೂಲಿ ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ಮತ್ತೆ ಕೆಲವರು ಬೇರೆಯವರ ಭೂಮಿಯಲ್ಲಿ ಕೂಲಿ ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ನಗರಗಳಿಗೆ ಹತ್ತಿರವಿರುವವರು ಪರ್ಯಾಯ ವ್ಯವಸ್ಥೆಯನ್ನು ಕಂಡುಕೊಂಡಿದ್ದಾರೆ. ಗ್ಯಾರೇಜುಗಳಲ್ಲಿ ಕೆಲಸ ಮಾಡುವ ಯುವಕರು, ಶ್ರೀಮಂತರ ಮನೆಗಳಲ್ಲಿ ಕೆಲಸ ಮಾಡುವವರು, ಊದು ಬತ್ತಿ ಮಾಡಿ ಮಾರುವವರು, ವ್ಯಾಪಾರಿಗಳು ಹೀಗೆ ವಿವಿಧ ವೃತ್ತಿಗಳನ್ನು ಅವಲಂಭಿಸಿರುವುದು ಕಂಡು ಬರುತ್ತದೆ. ಆದರೆ ಹೆಣ್ಣು ಮಕ್ಕಳು ಮಾತ್ರ ಎಲ್ಲಿಯೂ ಕೆಲಸಕ್ಕೆ ಹೋಗುವುದುಕಂಡು ಬರುವುದಿಲ್ಲ. ಪಟ್ಟಣ, ನಗರಗಳಿಂದ ದೂರವಿರುವ ಹಳ್ಳಿಗಳಲ್ಲಿ ಹೆಣ್ಣು ಮಕ್ಕಳು ಬೀಡಿಕಟ್ಟುವುದು, ಮತ್ತು ಟೈಲರಿಂಗ್ ಮಾಡುವುದು ಹೆಚ್ಚಾಗಿ ಕಂಡು ಬರುತ್ತದೆ. ಗಂಡಸರಿಲ್ಲದ ಮನೆಗಳಲ್ಲಿ ಹೆಣ್ಣು ಮಕ್ಕಳೇ ಕುಲಕೊಂಡಾಡಲು ಹೋಗುತ್ತಾರೆ. ಜೊತೆಗೆ ಇವರು ಕುರಿ, ಕೋಳಿ, ದನಕರುಗಳನ್ನು ಸಾಕಿ ಅವುಗಳಿಂದ ಆದಾಯ ಗಳಿಸುವ ಪರಿಪಾಠವೂ ಇವರಲ್ಲಿದೆ.

**ಕೃಷಿ : ಭೂ ಹಿಡುವಳಿ**

ಕರ್ನಾಟಕದ ಏಳು ಜಿಲ್ಲೆಗಳ ೧೩ ತಾಲೂಕುಗಳಲ್ಲಿನ ೧೦೦೦ ಕುಟುಂಬಗಳ ಗಣತಿಯನ್ನು ಪ್ರಸ್ತುತ ಅಧ್ಯಯನಕ್ಕಾಗಿ ಕೈಗೊಳ್ಳಲಾಗಿದೆ. ೧೦೦೦ ಕುಟುಂಬಗಳಲ್ಲಿ ೪೬೩೮ ಜನಸಂಖ್ಯೆಯನ್ನು ಹೊಂದಿವೆ. ಒಂದು ಸಾವಿರ ಕುಟುಂಬಗಳ ಭೂ ಹಿಡುಳಿಯ ಕೋಷ್ಟಕವನ್ನು ಮುಂದಿನ ಪುಟದಲ್ಲಿ ನೀಡಲಾಗಿದೆ.

ಗಣತಿಗೆ ಒಳಪಟ್ಟ ಒಟ್ಟು ೧೦೦೦ ಕುಟುಂಬಗಳ ಪೈಕಿ ಭೂಮಿಯನ್ನು ಹೊಂದಿರುವ ಕುಟುಂಬಗಳೂ ೨೩೯ ಮಾತ್ರ. ೭೬೧ ಕುಟುಂಬಗಳು ಭೂ ರಹಿತವಾಗಿವೆ. ಭೂಮಿಯನ್ನು ಹೊಂದಿರುವ ೨೩೯ ಕುಟುಂಬಗಳು ಒಟ್ಟು ೪೨೯ ಎಕರೆ ಜಮಿನನ್ನು ಹಂಚಿಕೊಂಡಿವೆ. ಅಂದರೆ ಪ್ರತಿ ಕುಟುಂಬ ಸರಾಸರಿ ೧.೭೯ ಎಕರೆ ಜಮೀನನನ್ನು ಕೃಷಿಗೆ ಬಳಸುತ್ತಿರುವುದು ಕಂಡು ಬರುತ್ತದೆ. ಈ ೪೨೯ ಎಕರೆ ಕೃಷಿ ಭೂಮಿಯಲ್ಲಿ ನೀರಾವರಿ ವ್ಯವಸ್ಥೆ ಇರುವುದು ಕೇವಲ ೩೩ ಎಕರೆ ಜಮೀನಿಗೆ ಮಾತ್ರ. ಈ ೩೩ ಎಕರೆ ಜಮೀನು ಇರುವುದು ಹಿರಿಯೂರು ತಾಲೂಕು, ಗೋಕಾಕ್ ಮತ್ತು ಕಡೂರು ತಾಲೂಕುಗಳಲ್ಲಿ. ಹಿರಿಯೂರು ತಾಲೂಕಿನಲ್ಲಿ ಆಣೆಕಟ್ಟೆಯಿಂದ ಕೆಲ ಜಮೀನಿಗೆ ನೀರಾವರಿ ದೊರೆತರೆ, ಗೋಕಾಕ್ ತಾಲೂಕಿನಲ್ಲಿ ನದಿ ದಂಡಯ ಜಮೀನುಗಳಿಗೆ ನೀರು ಸಿಗುತ್ತದೆ. ಅದು ಬಿಟ್ಟರೆ ಕಡೂರು ಮಲೆನಾಡಿನಲ್ಲಿ ಪ್ರದೇಶದಲ್ಲಿರುವುದರಿಂದ ಅಲ್ಲಿ ಸಹಜವಾಗಿಯೇ ನೀರಾವರಿ ವ್ಯವಸ್ಥೆಯು ಲಭ್ಯವಾಗುತ್ತದೆ.

ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೇನೆಂದರೆ ರಾಜ್ಯದ ಯಾವ ಯಾವ ತಾಲೂಕುಗಳಲ್ಲಿ ಹೆಳವರು ಪಾರಂಪರಿಕ ವೃತ್ತಿಯನ್ನು ಅನುಸರಿಸುತ್ತಿದ್ದಾರೋ ಆ ತಾಲೂಕುಗಳಲ್ಲಿ ಬಹುತೇಕ ಕುಟುಂಬಗಳೂ ಭೂ ರಹಿತವಾಗಿವೆ. ಉದಾಹರಣೆಗೆ ಗೋಕಾಕ್ ತಾಲೂಕಿನ ಕುಟುಂಬಗಳು ಭೂ ರಹಿತವಾಗಿವೆ. ಉದಾಹರಣೆಗೆ, ಗೋಕಾಕ್ ತಾಲೂಕಿನ ಎತ್ತಿನ ಹೆಳವರ ೨೭೦ ಕುಟುಂಬಗಳ ಪೈಕಿ ೨೦೧ ಕುಟುಂಬಗಳು ಭೂ ರಹಿತ ಕುಟುಂಬಗಳಾಗಿವೆ. ಈ ತಾಲೂಕಿನಲ್ಲಿ ಹೆಚ್ಚಾಗಿ ಹೆಳವರು ಪಾರಂಪರಿಕ ವೃತ್ತಿಯನ್ನು (ವಂಶಾವಳಿ ಹೇಳುವುದು) ಅವಲಂಬಿಸಿದ್ದಾರೆ. ಅದೆ ರೀತಿ ಬೀದರ್ ಜಿಲ್ಲೆಯ ಬೀದರ್ ಮತ್ತು ಔರಾದ್ ತಾಲೂಕಿನ ೧೫೨ ಕುಟುಂಬಗಲಲ್ಲಿ ೧೫೦ ಕುಟುಂಬಗಳು ಭೂ ರಹಿತ ಕುಟುಂಬಳಾಗಿವೆ. ಇಲ್ಲಿಯ 'ಚಾಪೆ ಹೆಳವರು' ಚಾಪೆ ಹೆಣೆಯುವ ವೃತ್ತಿಯನ್ನು ಅವಲಂಬಿಸಿರುವ ಕಾರಣಕ್ಕಾಗಿ ಬೀದರ್ ಜಿಲ್ಲೆಯಲ್ಲಿ ಅತಿಹೆಚ್ಚು ಭೂರಹಿತ ಕುಟುಂಬಗಳಿವೆ. ಜೊತೆಗೆ ಮಂಡ್ಯ ಜಿಲ್ಲೆಯಲ್ಲಿ 'ಗಂಟೆ ಹೆಳವರ' ೭೪ ಕುಟುಂಬಗಳಲ್ಲಿ ೪೯ ಕುಟುಂಬಗಳು ಭೂ ರಹಿತವಾಗಿವೆ. ಅಲ್ಲಿ ಕೇವಲ ೧೧ ಎಕರೆ ಜಮೀನು ೨೪ ಕುಟುಂಬಗಳಿಗೆ ಹಂಚಿಕೆಯಾಗಿದೆ. ಇಲ್ಲಿಯೂ 'ಗಂಟೆ ಹೆಳವರ' ಕುಟುಂಬಗಳು ಪಾರಂಪರಿಕ ವೃತ್ತಿಯನ್ನು (ವಂಶಾವಳಿ ಹೇಳುವುದು) ಅವಲಂಬಿಸಿದ್ದಾರೆ. ಇನ್ನು ಗುಲ್ಬರ್ಗಾ ಜಿಲ್ಲೆಯ ೧೧೦ ಕುಟುಂಬಗಳಲ್ಲಿ ೧೦೬ ಕುಟುಂಬಗಳು ಭೂರಹಿತವಾಗಿವೆ. ಕೇವಲ ೯ ಎಕರೆ ಕೃಷಿ ಭೂಮಿಯು ಕುಟುಂಬಗಳಲ್ಲಿ ೧೦೬ ಕುಟುಂಬಗಳೂ ಭೂರಹಿತವಾಗಿವೆ. ಕೇವಲ ೯ ಎಕರೆ ಕೃಷಿ ಭೂಮಿಯು ೬ ಕುಟುಂಬಗಳಲ್ಲಿ ಹಂಚಿಕೆಯಾಗಿದೆ. ಉಳಿದಂತೆ ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲೂ ಭೂರಹಿತ ಕುಟುಂಬಗಳೇ ಹೆಚ್ಚಾಗಿವೆ.

**ಕೋಷ್ಟಕ ೨: ಹೆಳವರ ಜಿಲ್ಲಾ ಮತ್ತು ತಾಲೂಕುವಾರು ಭೂ ಹಿಡುವಳಿ**

| ಕ್ರ ಸಂ | ಜಿಲ್ಲೆ | ತಾಲೂಕು | ಕುಟುಂಬಗಳ ಸಂಖ್ಯೆ | ಹೊಂದಿರುವ ಕೃಷಿ ಭೂಮಿ ಎಕರೆಗಳಲ್ಲಿ | | | ಭೂ ರಹಿತರು |
|---|---|---|---|---|---|---|---|
| | | | | ಒಣ | ನೀರಾವರಿ | ಒಟ್ಟು | |
| ೧ | ಚಿಕ್ಕಮಗಳೂರು | ಕಡೂರು | ೮೦ | ೨೪ | ೦೬ | ೩೦ | ೬೨ |
| ೨ | ಚಿತ್ರದುರ್ಗ | ಹಿರಿಯೂರು | ೯೦ | ೨೮ | ೦೭ | ೩೫ | ೮೦ |
| | | ಚಳ್ಳಕೆರೆ | ೧೩೮ | ೧೧೮ | ೦೧ | ೧೧೯ | ೮೧ |
| ೩ | ಮಂಡ್ಯ | ಶ್ರೀರಂಗಪಟ್ಟಣ | ೩೪ | ೦೦ | ೦೦ | ೦೦ | ೩೪ |
| | | ಪಾಂಡವಪುರ | ೪೦ | ೧೧ | ೦೦ | ೧೧ | ೩೨ |
| ೪ | ಬೀದರ್ | ಬೀದರ್ | ೧೩೭ | ೦೨ | ೦೨ | ೦೪ | ೧೩೫ |

| | | | | | | | |
|---|---|---|---|---|---|---|---|
| | | ಔರಾದ್ | ೧೫ | ೦೦ | ೦೦ | ೦೦ | ೧೫ |
| ೫ | ಗುಲ್ಬರ್ಗಾ | ಗುಲ್ಬರ್ಗಾ | ೫೩ | ೦೫ | ೦೦ | ೩೫ | ೪೮ |
| | | ಚಿಂಚೋಳಿ | ೧೦ | ೦೦ | ೦೦ | ೦೦ | ೧೦ |
| | | ಅಳಂದ | ೦೩ | ೦೪ | ೦೦ | ೦೪ | ೦೨ |
| | | ಸುರಪುರ | ೪೪ | ೦೦ | ೦೦ | ೦೦ | ೪೪ |
| ೬ | ಬೆಳಗಾಂ | ಗೋಕಾಕ್ | ೨೭೦ | ೫೭ | ೧೫ | ೭೨ | ೨೦೧ |
| ೭ | ಹಾವೇರಿ | ಹಾನಗಲ್ | ೮೬ | ೧೪೮ | ೦೨ | ೧೪೯ | ೩೪ |
| | | ಒಟ್ಟು | ೧೦೦೦ | ೩೯೬ | ೩೩ | ೪೨೯ | ೭೬೧ |

ಮೇಲಿನ ಕೋಷ್ಠಕದ ಆಧಾರದ ಮೇಲೆ ಕೆಲವು ಮುಖ್ಯ ಅಂಶಗಳ ಕುರಿತು ಚರ್ಚೆಯನ್ನು ಬೆಳೆಸಬಹುದಾಗಿದೆ. ಸಮುದಾಯಗಳ ಆರ್ಥಿಕ ಅವಲಂಬನೆ ಮತ್ತು ಉತ್ಪಾದನೆಯ ವಿಧಗಳನ್ನು ಆಧರಿಸಿ ದುಡಿಮೆಯ ಸ್ವರೂಪವನ್ನು ಪ್ರಾಥಮಿಕ ವಲಯ, ದ್ವತೀಯ ವಲಯ ಮತ್ತು ತೃತೀಯ ವಲಯ ಎಂದು ವಿಭಾಗಿಸಲಾಗಿದೆ.[8] ಪ್ರಾಥಮಿಕ ವಲಯದಲ್ಲಿ ದುಡಿಮೆಗೆ ತೊಡಗಿಕೊಂಡಿರುವ ಸಮುದಾಯಗಳು ಹೆಚ್ಚಾಗಿ ಕೃಷಿ, ಗಣಿಗಾರಿಕೆ, ಮೀನುಗಾರಿಕೆ, ಕಲ್ಲು ಹೊಡೆಯುವುದು[9] ಮುಂತಾದ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಈ ಪ್ರಾಥಮಿಕ ವಲಯದಲ್ಲಿ ಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನ ಹೆಚ್ಚಾಗಿ ತೊಡಗಿಕೊಂಡಿರುತ್ತರೆ. ದ್ವಿತೀಯ ವಲಯವೆಂದರೆ ಸೇವಾ ವಲಯ ಮತ್ತು ತೃತೀಯ ವಲಯವೆಂದರೆ ಬಂಡವಾಳಶಾಹಿ ಉತ್ಪಾದನಾ ವಲಯ. ಈ ಸೇವಾ ವಲಯ ಮತ್ತು ಬಂಡವಾಳಶಾಹಿ ಉತ್ಪಾದನಾ ವಲಯದಲ್ಲಿ ಹೆಚ್ಚಾಗಿ ಮೇಲ್ವರ್ಗ / ಮೇಲ್ಜಾತಿಗಳು ಹೆಚ್ಚಾಗಿ ತೊಡಗಿಕೊಂಡಿರುವುದು ಕಂಡು ಬರುತ್ತದೆ. ಕೊನೆಯ ಈ ಎರಡು ವಲಯಗಳಲ್ಲಿ ಸರಕಾರದ ಮತ್ತು ಖಾಸಗಿ ಬಂಡವಾಳವು ಹೆಚ್ಚು ಸಂಚಯಗೊಂಡಿರುತ್ತದೆ. ಮತ್ತು ಈ ವಲಯದಲ್ಲಿ ಹೆಚ್ಚು ಮೇಲ್ವರ್ಗ / ಮೇಲ್ಜಾತಿಯ ಅಕ್ಷರಸ್ಥ ಜನ ಪ್ರಭಾವ ಶಾಲಿಗಳಾಗಿರುತ್ತಾರೆ. ಆದರೆ ಹೆಳವರಂತಹ ಸಮುದಾಯವು ಮೇಲೆ ಕಾಣಿಸಿದ ಯಾವ ವಲಯಗಳಲ್ಲೂ ಪ್ರಭಾವಶಾಲಿ ಸ್ಥಾನಮಾನಗಳನ್ನು ಪಡೆದಿಲ್ಲ. ಶೇ. ೭೫ ಕ್ಕೂ ಹೆಚ್ಚು ಜನ ಇನ್ನೂ ಪ್ರಾಥಮಿಕ ವಲಯವನ್ನೂ ಪ್ರವೇಶಿಸದೆ 'ಆದಿಮ' ಹಂತದಲ್ಲಿಯೇ ಇದ್ದಾವೆ. ಅಂದರೆ ಇಂತಹ ಜನ ಸಮುದಾಯಗಳು ನಾಡಿನ 'ಮುಖ್ಯವಾಹಿನಿಯ' ಉತ್ಪಾದನಾ ವ್ಯವಸ್ಥೆಯ ಒಳಗೆ ಪ್ರವೇಶವನ್ನೇ ಪಡೆದಿಲ್ಲ ಅಂದರೆ ಇವರು 'ಆದಿಮ ವಲಯ'ದ ಜನರೇ ಆಗಿದ್ದಾರೆ. ಈ ವಲಯದ ಜನ ಹೆಚ್ಚಾಗಿ ಆರ್ಥಿಕವಾಗಿ ಅವಲಂಬಿತರು. ನೆಲೆ ಇಲ್ಲದವರು ಮತ್ತು ಯಾವುದನ್ನು ನಾವು ರಾಷ್ಟ್ರೀಯ ತಲೆ ಆದಾಯ ಎಂದು ಗುರುತಿಸುತ್ತೇವೋ ಆ ಲೆಕ್ಕಾಚಾರದಿಂದ ದೂರ ಉಳಿಯುವ ಅನಾಮಿಕ ಗುಂಪಿಗೆ ಸೇರಿದವರು.

ಅಂದರೆ ಉತ್ಪಾದನೆಯ ವಿಷಯದಲ್ಲಿ ಹೆಳವರು ಇನ್ನೂ 'ಆದಿಮ' ಹಂತದ ಬುಡಕಟ್ಟು ಸ್ಥಿತಿಯಲ್ಲಿಯೇ ಇದ್ದಾರೆ ಎಂಬುದು ಈ ಚರ್ಚೆಯಿಂದ ಗೊತ್ತಾಗುತ್ತದೆ. ಅಂದರೆ ಅರ್ಥಶಾಸ್ತ್ರ ಮತ್ತು ಅಭಿವೃದ್ಧಿ ಸಿದ್ಧಾಂತಗಳಲ್ಲಿ ಪ್ರತಿಪಾದಿತವಾಗುತ್ತಿರುವ ಪ್ರಮೇಯವೆಂದರೆ ಯಾವ ಆರ್ಥಿಕತೆಯಲ್ಲಿ ದುಡಿಮೆಗಾರ ವರ್ಗ ಅಧಿಕವಾಗಿ ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡಿರುವುದು ಅಲ್ಲಿ ಆರ್ಥಿಕ ದುಸ್ಥಿತಿ ತೀವ್ರವಾಗಿರುತ್ತದೆ.[10] ಆದರೆ ಪ್ರಾಥಮಿಕ ವಲಯಕ್ಕೇ ಸೇರದ ಹೆಳವರಂತಹ ಸಮುದಾಯದ ಆರ್ಥಿಕತೆಯನ್ನು ಯಾವ ಅಭಿವೃದ್ಧಿ ಅರ್ಥಶಾಸ್ತ್ರದ ಮೂಲಕ ಅಳತೆ ಮಾಡಲು ಸಾಧ್ಯ? ಈ ಕಾರಣದಿಂದಾಗಿ ಭಾರತದ ಉತ್ಪಾದನ ವಲಯದ ಹಂತಗಳ ಲೆಕ್ಕಚಾರದಲ್ಲಿ ಈ ಬಗೆಯ ಸಮುದಾಯಗಳಿಗೆ ಇನ್ನೂ ಪ್ರವೇಶವೇ ಸಿಕ್ಕಿಲ್ಲ. ಹೀಗೆ ಪ್ರವೇಶ ಪಡೆಯದವರೆಂದರೆ ಅಲೆಮಾರಿಗಳು ಮತ್ತು 'ಮುಖ್ಯವಾಹಿನಿ' ಯಿಂದ ದೂರ ಇರುವ ಕಾಡೊಳಗಿನ ಆದಿವಾಸಿ ಸಮುದಾಯಗಳು. ಈ ಸಮುದಾಯಳು ದೇಶದ ತಲೆ ಆಧಾಯದ ಲೆಕ್ಕಾಚಾರದಲ್ಲಿ ಮಾತ್ರವಲ್ಲ ಜನಗಣತಿಯ ಸಾಮಾನ್ಯ ವರದಿಯಲ್ಲೂ ಇವರು ದಾಖಲಾಗುವುದಿಲ್ಲ.

**ಹೆಳವರು ಅವಲಂಬಿಸಿರುವ ಕಸಬುಗಳು**

ಈ ಮೊದಲೇ ಹೇಳಿದಂತೆ ಶೇ ೭೫ ಕ್ಕೂ ಹೆಚ್ಚು ಜನ ಹೆಳವ ಸಮುದಾಯಗಳಲ್ಲಿ ಭೂರಹಿತರಾಗಿದ್ದಾರೆ. ಅಂದರೆ ಈ ಶೇ. ೭೫ ಜನರಲ್ಲಿ ಅಲೆಮಾರಿಗಳು ಪಾರಂಪರಿಕ ವೃತ್ತಿಯನ್ನು ಅವಲಂಬಿಸಿರುವವರು ಹೆಚ್ಚಾಗಿ ಕಂಡು ಬರುತ್ತಾವೆ. ಇನ್ನು ಶೇ. ೨೫ ಜನರು ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡಿರುವುದು ಕಂಡು ಬರುತ್ತದೆ.

ಮುಂದಿನ ಪುಟದಲ್ಲಿನ ಕೋಷ್ಟಕವನ್ನು ಹೀಗೆ ವಿಶ್ಲೇಷಿಸಬಹುದಾಗಿದೆ. (ಅನುಬಂಧದಲ್ಲಿ ಹೆಳವರು ಅವಲಂಬಿಸಿರುವ ವೃತ್ತಿಗಳ ಕೋಷ್ಟಕವನ್ನು ನೀಡಲಾಗಿದೆ) ೧೦೦೦ ಕುಟುಂಬಗಳ ಸಾವಿರ ಕುಟುಂಬಗಳಲ್ಲಿ ೭೬೧ ಕುಟುಂಬಗಳು ಭೂ ರಹಿತ ಕುಟುಂಬಗಳಾಗಿವೆ. ಉಳಿದ ೨೨೯ ಕುಟುಂಬಗಳಲ್ಲಿ ೭೬೧ ಕುಟುಂಬಗಳು ಭೂ ರಹಿತ ಕುಟುಂಬಗಳಾಗಿವೆ. ಉಳಿದ ೨೯ ಕುಟುಂಬಗಳು ೪೨೯ ಎಕರೆ ಕೃಷಿಭೂಮಿಯನ್ನು ಹೊಂದಿವೆ. ಅಂದರೆ ಪ್ರತಿ ಕುಟುಂಬವು ಸರಾಸರಿ ೧.೯ ಎಕರೆ ಜಮೀನನ್ನು ಹೊಂದಿದಂತಾಗುತ್ತದೆ. ಆದರೆ ಪ್ರತಿ ಕುಟುಂಬ ತಾನು ಪಡೆಯಬಹುದಾದ ೧.೭೯ ಎಕರೆ ಕೃಷಿ ಭೂಮಿಯಲ್ಲಿ ವರ್ಷವಿಡೀ ಬದುಕಲು ಸಾಧ್ಯವಿಲ್ಲ. ಈ ಕಾರಣಕ್ಕೆ ಜಮೀನು ಹೊಂದಿದ ಕುಟುಂಬಗಳಲ್ಲಿ ಅನಿವಾರ್ಯವಾಗಿ ಕೃಷಿಕೂಲಿ, ಇಲ್ಲವೆ ಪಾರಂಪರಿಕ ವೃತ್ತಿಯನ್ನು ಅವಲಂಬಿಸುವುದು ಅನಿವಾರ್ಯವಾಗಿದೆ. ನಾನು ಸಂದರ್ಶಿಸಿದ ಅಲೆಮಾರಿ ಹೆಳವರಿಗೂ ಸಹ ಸ್ವಲ್ಪ ಮಟ್ಟಿಗಿನ ಕೃಷಿ ಭೂಮಿ ಇರುವುದು ಕಂಡು ಬಂತು. ಆದರೆ ತಮಗೆ ದೊರೆತ ಅಲ್ಪ ಜಮೀನಿನಲ್ಲಿ ದತ್ತವಾಗುವ ವಾರ್ಷಿಕ ಆದಾಯವು ಸಾಲದ್ದಕ್ಕಾಗಿಯೇ ತಾವು ಪಾರಂಪರಿಕ ವೃತ್ತಿಯನ್ನು ಅವಲಂಬಿಸಬೇಕಾಯಿತು. ಎಂದು ಅಲೆಮಾರಿಗಳು ಪ್ರತಿಕ್ರಿಸಯಿಸಿದ್ದಾರೆ. ಈ ಕಾರಣದಿಂದಾಗಿಯೇ ೪೬೩೮ ಜನರಲ್ಲಿ ಕೆಲವು ೭೧ ಜನ ಮಾತ್ರ ಕೃಷಿಯನ್ನು ಅವಲಂಬಿಸಿ ಬದುಕುತ್ತಿದ್ದಾರೆ. ಈ ೭೧ ಜನರಲ್ಲಿ ಹೆಚ್ಚಿನವರು ಹಾವೇರಿ, ಚಿಕ್ಕಮಗಳೂರು ಮತ್ತು ಬೆಳಗಾಂ ಜಿಲ್ಲೆಗೆ ಸೇರಿದವರು.ಉಳಿದಂತೆ ಹೆಚ್ಚಿನವರು ವಿವಿಧ ಬಗೆಯ ದಿನಗೂಲಿಗಳಾಗಿ ಮತ್ತು ಪಾರಂಪರಿಕ ವೃತ್ತಿಯನ್ನು ಅವಲಂಬಿಸಿ ಅಲೆಮಾರಿಗಳಾಗಿ ಬದುಕುತ್ತಿದ್ದಾರೆ. ಪಾರಂಪರಿಕ ವೃತ್ತಿಯನ್ನು ಅವಲಂಬಿಸಿ ಅಲೆಮಾರಿ ಜೀವನ ನಡೆಸುತ್ತಿರುವವರು ಹೆಚ್ಚಾಗಿ ಬೆಳಗಾಂ, ಮಂಡ್ಯ, ಚಿತ್ರದುರ್ಗ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಹೆಚ್ಚಾಗಿ ಸಿಗುತ್ತಾರೆ. ಸರಕಾರಿ ನೌಕರಿಯಲ್ಲಿರುವವರು (ಖಾಸಗಿ ಮತ್ತು ಸರಕರಿ ವಲಯದಲ್ಲಿ) ೨೭ ಜನ. ಚಿಕ್ಕ ಪುಟ್ಟ ವ್ಯಾಪಾರ ಮಾಡುತ್ತಿರುವವರು ೫ ಜನ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ನಾನು ಗಣತಿ ಮಾಡಿದ ೪೬೩೮ ಜನರಲ್ಲಿ ಶೇ ೪೫% ರಷ್ಟು ಜನ ಕೃಷಿಕೂಲಿ ಮತ್ತು ವಿವಿಧ ಬಗೆಯ ದಿನಗೂಲಿಗಳಲ್ಲಿ ತೊಡಗಿಕೊಂಡಿದ್ದರೆ, ಶೇ ೨೦% ರಷ್ಟು ಜನ ಪಾರಂಪರಿಕ ವೃತ್ತಿ (ವಂಶಾವಳಿ ಹೇಳುವುದು)ಯನ್ನು ಅವಲಂಬಿಸಿದ್ದಾರೆ. ಅಂದರೆ ನಮ್ಮ ಉತ್ಪಾದನಾ ವ್ಯವಸ್ಥೆಯ ಪ್ರಾಥಮಿಕ ವಲಯವನ್ನೂ ಹೆಳವ ಸಮುದಾಯದ ಶೇ ೬೫% ರಷ್ಟು ಜನ ಇನ್ನೂ ಪ್ರವೇಶಿಸಿಯೇ ಇಲ್ಲ. ಇದನ್ನು ಒಂದು ಕೋಷ್ಟಕದ ಮೂಲಕ ಸ್ಪಷ್ಟಗೊಳಿಸಿಕೊಳ್ಳಬಹುದಾಗಿದೆ. ಕರ್ನಾಟಕದ ಉತ್ಪಾದನೆಯ ವಿವಿಧ ವಲಯಗಳನ್ನು ೧೯೯೧ರ ಜನಗಣತಿ ಆಧರಿಸು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮುಂದುವರಿದ (ಶಿಷ್ಠ) ವರ್ಗ ಸಮುದಾಯಗಳನ್ನು ವಿಂಗಡಿಸಿ ಆಯಾ ವಲಯಗಳಲ್ಲಿ ದುಡಿಯುತ್ತಿರುವ ಜನರ ತೊಡಗಿಸಿಕೊಳ್ಳುವಿಕೆಯನ್ನು ಈ ಕೋಷ್ಠಕ ವಿವರಿಸುತ್ತದೆ.

**ಕೋಷ್ಟಕ ೩: ಕರ್ನಾಟಕ : ದುಡಿಮೆಯ ರಾಚನಿಕ ಸ್ವರೂಪ : ಶಿಷ್ಟ – ಪರಿಶಿಷ್ಟ ನೆಲೆಗಳು ೧೯೯೧**

(ಸಂಖ್ಯೆ : ಲಕ್ಷಗಳಲ್ಲಿ)

| ವಿವರಗಳು | ಪ್ರಾಥಮಿಕ ವಲಯ ಸಂಖ್ಯೆ ಶೇಕಡಾ | ದ್ವಿತೀಯವಲಯ ಸಂಖ್ಯೆ ಶೇಕಡಾ | ತೃತೀಯಾ ವಲಯ ಸಂಖ್ಯೆ ಶೇಕಡಾ | ಒಟ್ಟು ಸಂಖ್ಯೆ ಶೇಕಡಾ |
|---|---|---|---|---|
| ಪರಿಶಿಷ್ಟರು / ದಲಿತರು | ೩೧.೧೫೮೦.೨೨ | ೩.೭೨೯.೫೮ | ೩.೯೬೧೦.೨೦ | ೩೮.೮೩೧೦೦.೦೦ |
| ಶಿಷ್ಟರು | ೮೫.೩೪೬೩.೬೪ | ೧೯.೦೭೧೪.೨೨ | ೨೯.೬೮೨೨.೧೪ | ೧೩೪.೯೧೦೦.೦೦ |

| | | | | |
|---|---|---|---|---|
| ಒಟ್ಟು | ೧೧೬.೪೯೬೭.೩೭ | ೨೨.೭೯೧೩.೧೮೩೩.೬೪ | ೧೯.೪೫ | ೧೭೨.೯೨೧೦೦.೦೦ |

ಟಿಪ್ಪಣಿ : ಈ ವಿವರಗಳನ್ನು ೧೯೯೧ಕ್ಕೆ ಸೀಮಿತಗೊಳಿಸಿಕೊಳ್ಳಲಾಗಿದೆ. ದುಡಿಮೆಗಾರರ ವಲಯವಾರು ಹಂಚಿಕೆಯ ೨೦೦೧ರ ಜನಗಣತಿ ವಿವರಗಳು ಇನ್ನೂ ಲಭ್ಯವಾಗಿಲ್ಲ. (ಟಿ ಆರ್ ಚಂದ್ರಶೇಖರವರ ಅಸ್ಪೃಸ್ಯತೆ, ಆರ್ಥಿಕತೆ ಮತ್ತು ಅಭಿವೃದ್ಧಿ ಲೇಖನದಿಂದ ಮೇಲಿನ ಕೊಷ್ಟಕವನ್ನು ಉಲ್ಲೇಖಿಸಲಾಗಿದೆ)

ಮೇಲಿನ ಕೋಷ್ಟಕದ ಪ್ರಕಾರ ಪ್ರಾಥಮಿಕ ವಲಯ ಅಂದರೆ ಕೃಷಿ, ಗಣಿಗಾರಿಕೆ, ಇತರ ನಿತ್ಯದ ಉತ್ಪಾದನೆಯಲ್ಲಿ ತೊಡಗಿಕೊಂಡಿರುವವರು ಹೆಚ್ಚಾಗಿ ಪರಿಶಿಷ್ಟ ಜಾತಿಮತ್ತು ಪರಿಶಿಷ್ಟ ಪಂಗಡದವರು. ಅಂದರೆ ಈ ಎರಡೂ ಪಂಗಡಕ್ಕೆ ಸೇರಿದ ಸೇ ೮೦.೨೨% ರಷ್ಟು ಜನ ಹೆಚ್ಚು ಲಾಭ ತರದ ಪ್ರಾಥಮಿಕ ವಲಯದ ದುಡಿಮೆಯಲ್ಲಿ ನಿರತರಾಗಿದ್ದಾರೆ. ದ್ವಿತೀಯ ಮತ್ತು ತೃತೀಯ ವಲಯದಲ್ಲಿ ಈ ಸಮುದಾಯಗಳ ತೊಡಗಿಸಿಕೊಳ್ಳುವಿಕೆ ಬೆರಳೆಣಿಕೆ ಮಾತ್ರ ಆದರೆ ಹೆಳವರಲ್ಲಿ ಕೃಷಿಕೂಲಿಯನ್ನೂ ಸೇರಿ ಇತರೆ ಕೂಲಿ ಕೆಲಸದಲ್ಲಿ ನೂರಿತರಾಗಿದವರು ಶೇ ೪೫% ರಷ್ಟು ಜನ. ಇನ್ನೂ ಅಲೆಮಾರಿ ಸ್ಥಿತಿಯಲ್ಲಿರುವವರು ಮತ್ತು ಆರ್ಥಿಕವಾಗಿ ಭೂಮಾಲಿಕ ವ್ಯವಸ್ಥೆಯನ್ನು ಅವಲಂಬಿಸಿರುವವರು ಶೇ ೨೦% ರಷ್ಟು ಜನ. ಅಂದರೆ ಶೇ ೬೫% ರಷ್ಟು ಜನ ಇನ್ನೂ ನಿಶ್ಚಿತ ಆರ್ಥಿಕ ಮೂಲಗಳೂ ಇಲ್ಲದ ಆದಿಮ ವಲಯ್ಕಕೆ ಸೇರಿದವರು. ಆದರೆ ನಿತ್ಯದ ದುಡಿಮೆ ಮತ್ತು ಆದಾಯಗಳೆರಡೂ ಅನಿಶ್ಚಿತ ಸ್ಥಿತಿಯಲ್ಲಿಯೇ ಇರುವಂತಹ ಸ್ಥಿತಿಗಿಂತ ಅಲೆಮಾರಿ ಹೆಳವರ ಆರ್ಥಿಕ ಸ್ಥಿತಗತಿ ಉತ್ತಮವಾಗೇನೂ ಇಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

**ಹೆಳವರ ಶೈಕ್ಷಣಿಕ ಸ್ಥಿತಿಗತಿ**

ಶಿಕ್ಷಣ ಭಾರತದಂತಹ ದೇಶದಲ್ಲಿ ಮೇಲ್ವರ್ಗಗಳ ಅಥವಾ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವವರ ಸ್ವತ್ತಾಗಿಯೇ ಉಳಿದುಬಿಟ್ಟಿದೆ. ಈವತ್ತು ಉನ್ನತ ಶಿಕ್ಷಣ ಕೇವಲ ಶ್ರೀಮಂತ ವರ್ಗಗಳಿಗೆ ಮೀಸಲು ಎಂಬ ಸ್ಥಿತಿ ನಿರ್ಮಾಣವಾಗಿದೆ. ಆದರೆ ಒಂದು ದೇಶದ ಶಿಕ್ಷಣ ವ್ಯವಸ್ಥೆಯ ಸ್ಥಿತಿಗತಿಯನ್ನು ಆ ದೇಶದಲ್ಲಿ ಬದುಕುತ್ತಿರುವ ಜನರ ಸಾಕ್ಷರತೆಯ ಮೂಲಕ, ಅಂದರೆ ಅಕ್ಷರ ಬರೆಯಲು ಮತ್ತು ಓದಲು ಬರು 'ಪ್ರಾಥಮಿಕ ಹಂತವನ್ನು' ಮಾನದಂಡವನ್ನಾಗಿಸಿಕೊಂಡು ಈ ಲೆಕ್ಕಾಚಾರ ಮಾಡಲಾಗುತ್ತದೆ. ಆದರೆ ಭಾರತದಂತಹ ಅಸಮಾನ ನೆಲೆಯ ಸಮಾಜದಲ್ಲಿ ಅಸಾಧಾರಣ ಏರು ಪೇರುಗಳಿವೆ. ಶಿಕ್ಷಣ 'ಇಂತವರಿಗೆ' ಮಾತ್ರ 'ಮೀಸಲು' ಎನ್ನುವ ಸಾಮಾಜಿಕ ಕಾನೂನುಗಳನ್ನು ಸಾವಿರಾರು ವರ್ಷಗಳಿಂದ ಪೋಷಿಸಿಕೊಂಡು ಬಂದ ದೇಶ ಇದು. ಇಂತಹ ದೇಶದಲ್ಲಿ ಈ ಸಮಾಜದ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಮತ್ತು ಅಂಚಿನ ಸಮುದಾಯಗಳಿಗೆ ಶಿಕ್ಷಣವೆಂಬುದು ಗಗನ ಕುಸುಮ. ಈ ಕಾರಣದಿಂದಾಗಿ ಈ ಸಮುದಾಗಳು ಕೇವಲ ಶ್ರಮದಾಯಕ ದುಡಿಮೆಗಳಲ್ಲಿ ಮಾತ್ರ ಶತಮಾನಗಳಿಂದ ತೊಡಗಿಕೊಂಡೇ ಬಂದರು. ಆದರೆ ಕಳೆದ ನೂರು ವರ್ಷಗಳಲ್ಲಿ ಈ ಸಮುದಾಯಗಳ ಶೈಕ್ಷಣಿಕ ಸ್ಥಿತಿಗತಿ ಹಂತಹಂತವಾಗಿ ಸುಧಾರಿಸುತ್ತಾ ಬಂದಿದೆ. ಆದರೆ ಒಟ್ಟಾರೆ ಭಾರತದ ಮತ್ತು ಕರ್ನಾಟಕದ ಸಾಕ್ಷರತೆಯ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಮತ್ತು ಅಂಚಿನ ಸಮುದಾಯಗಳ ಸಾಕ್ಷರತೆಯ ಪ್ರಮಾಣವು ನಿರೀಕ್ಷಿತ ಮಟ್ಟವನ್ನು ತಲುಪಿಲ್ಲದಿರುವುದ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಕರ್ನಾಟಕದ ಒಟ್ಟಾರೆಯ ಸಾಕ್ಷರತೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಾಕ್ಷರತೆಯ ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದ ಮೂಲಕ ಕಂಡುಕೊಳ್ಳಬಹುದಾಗಿದೆ. ಈ ಕೆಳಗಿನ ಅಂಕಿ ಅಂಶಗಳನ್ನು ೨೦೦೧ರ ಜನಗಣತಿಯಿಂದ ಪಡೆದುಕೊಳ್ಳಲಾಗಿದೆ.

**ಕೋಷ್ಟಕ ೪: ಸಾಕ್ಷರತೆ : ಜನಗಣತಿ ಮಾಹಿತಿ : ೨೦೦೧**

| ಕ್ರ. ಸಂ. | ವಿವರಗಳು | ಒಟ್ಟು | ಮಹಿಳೆಯರು | ಪುರುಷರು |
|---|---|---|---|---|
| ೧. | ರಾಜ್ಯದ ಒಟ್ಟು ಜನಸಂಖ್ಯೆ | ಶೇ. ೬೭.೦೪ | ೫೭.೪೫ | ೭೬.೨೯ |
| ೨. | ಪರಿಶಿಷ್ಟ ಜಾತಿ | ಶೇ. ೫೨.೯೦ | ೪೧.೭೦ | ೬೩.೮೦ |

| | | | | |
|---|---|---|---|---|
| ೩. | ಪರಿಶಿಷ್ಟ ವರ್ಗ | ಶೇ. ೪೮.೩೦ | ೩೬.೬೦ | ೫೯.೭೦ |
| ೪. | ಅಂತರ : ಪ. ಜಾ. (೧-೨) | -೪.೧೪ | -೧೫.೭೫ | -೧೨.೪೯ |
| ೫. | ಅಂತರ : ಪ.ಪಂ. (೧-೩) | -೧೮.೭೪ | -೨೦.೮೫ | -೧೬.೫೯ |

ಈ ಕೋಷ್ಟಕದ ಪ್ರಕಾರ ಪರಿಶಿಷ್ಟೇತರ ಶಿಷ್ಟ ವರ್ಗಗಳ ಸಾಕ್ಷರತೆಯ ಪ್ರಮಾಣ ಶೇ ೬೭.೦೪ ರಷ್ಟಿದೆ. ಮಹಿಳೆಯರು ಶೆ. ೫೭.೪೫% ಮತ್ತು ಪುರುಷರು ೭೬.೨೯% ರಷ್ಟು ಸಾಕ್ಷರರಾಗಿದ್ದಾರೆ. ಆದರೆ ಪರಿಶಿಷ್ಟ ಜಾತಿಯ ಒಟ್ಟಾರೆಯ ಸಾಕ್ಷರತೆ ಶೇ. ೫೨.೯೦ ರಷ್ಟಿದ್ದರೆ. ಪುರುಷರು ಸೇ ೬೩.೮೦ ಮತ್ತ ಸ್ತ್ರೀಯರು ಸೇ. ೪೧.೭೦ ರಷ್ಟಿದೆ. ಪರಿಶಿಷ್ಟ ಪಂಗಡದ ಒಟ್ಟಾರೆ ಸಾಕ್ಷರತೆ ೪೮.೩೦. ಇವರಲ್ಲಿ ಶೇ ೫೯.೭೦ ರಷ್ಟು ಪುರುಷರು ಮತ್ತು ಶೇ. ೩೬.೬೦ ರಷ್ಟು ಸ್ತ್ರೀಯರು ಸಾಕ್ಷರತೆಯನ್ನು ಹೊಂದಿದ್ದಾರೆ. ಈ ಅಂಕೆಸಂಖ್ಯೆಗಳನ್ನು ಇಟ್ಟುಕೊಂಡು ಹೆಳವ ಸಮುದಾಯದ ಸಾಕ್ಷರತೆಯು ಸ್ಥಿತಿಗತಿಯನ್ನು ವಿವರಿಸಿಕೊಳ್ಳಬಹುದಾಗಿದೆ.

**ಕೋಷ್ಟಕ ೫: ಹೆಳವರ ಸಾಕ್ಷರತೆಯ ಪ್ರಮಾಣ**

**ಸಾಕ್ಷರತೆ : ಜನಗಣತಿ ಮಾಹಿತಿ : ೨೦೦೧**

| ಕ್ರ.ಸಂ. | ವಿವರಗಳು | ಒಟ್ಟು | ಮಹಿಳೆಯರು | ಪುರುಷರು |
|---|---|---|---|---|
| ೧. | ರಾಜ್ಯದ ಒಟ್ಟು ಜನಸಂಖ್ಯೆ | ಶೇ.೬೭.೦೪ | ೫೭.೪೫ | ೭೬.೨೯ |
| ೨. | ಪರಿಶಿಷ್ಟ ಜಾತಿ | ಶೇ. ೫೨.೯೦ | ೪.೭೦ | ೬೩.೮೦ |
| ೩. | ಪರಿಶಿಷ್ಟ ವರ್ಗ | ಶೇ. ೪೮.೩೦ | ೩೬.೬೦ | ೫೯.೭೦ |
| ೪. | ಅಂತರ : ಪ.ಜಾ. (೧-೨) | -೧೪.೧೪ | -೧೫.೭೫ | -೧೨.೪ |
| ೫. | ಅಂತರ : ಪ.ಪಂ. (೧-೩) | -೧೮.೭೪ | -೨೦.೮೫ | -೧೬.೫೯ |
| ೬. | ಹೆಳವರ ಸಾಕ್ಷರತೆ | ಶೇ. ೩೯.೦೦ | ೨೭.೦೦ | ೫೧.೦೦ |
| ೭. | ಆಂತರ : (ಹೆಳವರು) | -೨೮.೦೪ | -೩೦.೪೫ | -೨೫.೨೯ |

೨೦೦೧ ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟಾರೆಯ ಸಾಕ್ಷರತೆಯ ಪ್ರಮಾಣಕ್ಕಿಂತ ಹೆಳವರ ಸಾಕ್ಷರರ ಪ್ರಮಾಣ ಗಣನೀಯವಾಗಿ ಇಳಿಮುಖವಾಗಿರುವುದು ಈ ಕೋಷ್ಟಕದಿಂದ ಕಂಡು ಬರುತ್ತದೆ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಾಕ್ಷರತೆಗಿಂತಲೂ ಹೆಳವರ ಸಾಕ್ಷರತೆಯ ಪ್ರಮಾಣವು ಅತ್ಯಂತ ಕಡಿಮೆ ಇರುವುದು ಕಂಡು ಬರುತ್ತದೆ. ಅದರಲ್ಲೂ ಮಹಿಳೆಯರು ಹೆಳವರ ಸಮುದಾಯದಲ್ಲಿ ಗಣನೀಯ ಪ್ರಮಾಣದಲ್ಲಿ ಅನಕ್ಷರಸ್ಥರಿರುವುದು ಕಂಡು ಬರುತ್ತದೆ. ಇದಕ್ಕೆ ಕಾರಣ ಈ ಸಮುದಾಯದ ಆರ್ಥಿಕ ಸ್ತಿತಿ ಎಂಬುದು ಸ್ಪಷ್ಟವಾಗುತ್ತದೆ. ಸದರಿ ಸಮುದಾಯದ ಶೇ ೬೫ರಷ್ಟು ಜನ ನಿತ್ಯದ ಬದುಕನ್ನು ನಿರ್ವಹಿಸುವಲ್ಲಿ ಮತ್ತು ಎರಡು ಹೊತ್ತಿನ ಊಟದ ಪ್ರಶ್ನೆಯೇ ಮೂಖ್ಯವಾಗಿರುವಲ್ಲಿ ಇವರು ಹೇಗೆ ಅಕ್ಷರ ಲೋಕಕ್ಕೆ ಪ್ರವೇಶ ಪಡೆಯಲು ಸಾಧ್ಯ? ಸಮುದಾಯಗಳು ಆರ್ಥಿಕವಾಗಿ ಸಬಲಗೊಳ್ಳದೆ ವಿಪರೀತ ಸ್ಪರ್ಧೆಯ ವರ್ತಮಾನವನ್ನು ಹೇಗೆ ತಾನೇ ಎದುರಿಸಲು ಸಾಧ್ಯ? ಹೆಳವರು ವಾಸಿಸುತ್ತಿರುವ ಯಾವ ಯಾವ ಜಿಲ್ಲೆಗಳಲ್ಲಿ ಸಮುದಾಯವು ಆರ್ಥಿಕವಾಗಿ ದುಸ್ಥಿತಿಯಲ್ಲಿದೆಯೋ ಆ ಎಲ್ಲ ಜಿಲ್ಲೆಗಳಲ್ಲಿ ಸದರಿ ಸಮುದಾಯದ ಸಾಕ್ಷರತೆಯ ಪ್ರಮಾಣವು ಅತ್ಯಂತ ಹೀನಾಯ ಸ್ಥಿತಿಯಲ್ಲಿರುವುದು ಕಂಡು ಬರುತ್ತದೆ. (ಅನುಬಂಧದಲ್ಲಿ ಆಯಾ ಜಿಲ್ಲೆಗಳ ಸಾಕ್ಷರತೆಯ ಪ್ರಮಾಣವನ್ನು ಕೋಷ್ಟಕಗಳಲ್ಲಿ ನೀಡಲಾಗಿದೆ) ಅದರಲ್ಲೂ ಈ ಸಮುದಾಯದ ಮಹಿಳೆಯ ಸಾಕ್ಷರತೆಯ ಪ್ರಮಾಣವು ಕಳವಳಕರಿ ಸ್ಥಿತಿಯಲ್ಲಿರುವುದನ್ನು ಗಮನಿಸಿಬಹುದಾಗಿದೆ.

ಇದಕ್ಕೆ ಕಾರಣ ಹೆಳವರಿಗೆ ನಿಶ್ಚಿತ ಆರ್ಥಿಕ ಮೂಲಗಳಿಲ್ಲದೇ ಇರುವುದು. ಯಾವ ಸಮುದಾಯವು ಕೇವಲ ಅನಿಶ್ಚಿತ ಮತ್ತು ಅವಲಂಬಿತ ಆರ್ಥಿಕ ಮೂಲಗಳನ್ನು ನೆಚ್ಚಿಕೊಂಡಿರುತ್ತದೋ, ಆ ಸಮುದಾಯವು ಸಾಮಾಜಿಕವಾಗಿ, ಮತ್ತು ಶೈಕ್ಷಣಿಕವಾಗಿ ಯಾವತ್ತೂ ಹಿನ್ನೆಡೆಯನ್ನು ಅನುಭವಿಸುತ್ತಲೇ ಇರುತ್ತದೆ. ವರ್ತಮಾನವನ್ನು ಚರಿತ್ರೆಯ ನೆನಪುಗಳಿಂದ ಎದುರಿಸುವುದು ಸಾಧ್ಯವಿಲ್ಲ. ಹೀಗಾಗಿ ಸಮುದಾಯವೊಂದಕ್ಕೆ ಸಾಂಸ್ಕೃತಿಕವಾಗಿ ಶತಮಾನಗಳ ಇತಿಹಾಸವಿದ್ದರೂ, ವರ್ತಮಾನವನ್ನು ಎದುರಿಸುವ ಆಧುನಿಕ

ಕೌಶಲಗಳಿಲ್ಲದೇ ಹೋದರೆ ಅಂತಹ ಸಮುದಾಯಗಳು ಭವಿಷತ್ತಿನಲ್ಲಿ ಮೂಲೆಗುಂಪಾಗುತ್ತವೆ. ಹೆಳವರು ಆರ್ಥಿಕವಾಗಿ ಚರಿತ್ರೆಯ ಹೆಜ್ಜೆಗಳಲ್ಲಿಯೆ ತಮ್ಮ ಹೆಜ್ಜೆಗಳನ್ನು ಮೂಡಿಸಲು ಯತ್ನಿಸುತ್ತಿದ್ದಾರೆ. ಆರ್ಥಿಕವಾಗಿ ಊಲೀಗಮಾನ್ಯವ ವ್ಯವಸ್ಥೆಯನ್ನೇ ಅವಲಂಬಿಸುತ್ತಿದ್ದಾರೆ. ಆ ಕಾರಣದಿಂದಾಗಿಯೇ ಆರ್ಥಿಕವಾಗಿ ಹಿನ್ನೆಡೆ ಅನುಭವಿಸುವುದರ ಜೊತೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ರಂಗಗಳಲ್ಲಿಯೂ ಶೋಚನೀಯವಾಗಿ ಹಿಂದುಳಿದಿದ್ದಾರೆ. ಈ ಸಮುದಾಯವನ್ನು ವ್ಯವಸ್ಥಿತವಾಗಿ ಆರ್ಥಿಕವಾಗಿ ಮುನ್ನೆಡೆಸದಿದ್ದಲ್ಲಿ, ಇವರನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಸಬಲೀಕರಿಸಲು ಸಾಧ್ಯವಿಲ್ಲ. ಅದರಲ್ಲೂ ಶೈಕ್ಷಣಿಕವಾಗಿ ಸಬಲಗೊಳ್ಳದ ಹೆಳವ ಸಮುದಾಯವನ್ನು ಆರ್ಥಿಕವಾಗಿ ಸಬಲಗೊಳಿಸಿದರೆ ಅದು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಸಬಲಗೊಳ್ಳಲು ಸಾಧ್ಯವಾಗುತ್ತದೆ.

[1] ಹರಿಲಾಲ್ ಪವಾರ್, ಹೆರವರ ಸಂಸ್ಕೃತಿ, ಪು. ೧೭, ೧೯೯೩

[2] ಅದೇ, ಪು. ೧೯, ೧೯೯೩

[3] ಅದೇ, ಪು. ೧೯, ೧೯೯೩

[4] ಅದೇ, ಪು. ೧೯, ೧೯೯೩

[5] ನಾಗೇಗೌಡಎಚ್‌ಎಲ್, ಹೆಳವರಮತ್ತುಅವರಕಾವ್ಯಗಳು, ಪು. xxxviii -೧೯೮೭

[6] ಅದೇಪು. ಪು. xxxiii - ೧೯೮೭

[7] ಹರಿಲಾಲ್ಪವಾರ್, ಹೆಳವರಸಂಸ್ಕೃತಿ, ಪು. ೨೦, ೧೯೯೩

[8] ನೋಡಿ, ಟಿಆರ್ಚಂದ್ರಶೇಖರ, ಅಸ್ಪೃಸ್ಯತೆ, ಆರ್ಥಿಕತೆಮತ್ತುಅಭಿವೃದ್ಧಿ, ಅಭಿವೃದ್ಧಿಅಧ್ಯಯನ, ೨೦೦೭

[9] ನೋಡಿ. ಅದೇ

[10] ಟಿಅರ್ಚಂದ್ರಶೇಖರ, ನೋಡಿ. ಅಸ್ಪೃಸ್ಯತೆ, ಆರ್ಥಿಕತೆಮತ್ತುಅಭಿವೃದ್ಧಿ, ಅಭಿವೃದ್ಧಿಅಧ್ಯಯನ, ೨೦೦೭

## ೫. ಹೆಳವರು ಮತ್ತು ವರ್ತಮಾನ

ಇಂಡಿಯಾದಲ್ಲಿ ಜಾತಿಯೊಂದು ಒಂದು ಸ್ವಯಂಪೂರ್ಣ ಉತ್ಪಾದನ ಘಟಕ. ಈವತ್ತು ಒಂದು ಜಾತಿ ಎಂದು ಗುರುತಿಸುವ ಪ್ರತಿ ಸಮುದಾಯವೂ ಈ ದೇಶದ ಪರಂಪರೆಯಲ್ಲಿ ಒಂದು ನಿಶ್ಚಿತ ಆರ್ಥಿಕ ಚಟುವಟಿಕೆಯನ್ನು ನಿರ್ವಹಿಸುತ್ತಲೇ ಬಂದಿದೆ. ಶ್ರಮ ವಿಭಜನೆಯ ಕಾರಣಕ್ಕೆ ಪ್ರತ್ಯೇಕಗೊಂಡ ಸಾಮಾಜಿಕ ಗುಂಪುಗಳು ಜಾತಿಗಳಾಗಿ ರೂಪಾಂತರಗೊಂಡವು. ಈ ಪ್ರತ್ಯೇಕತೆಯು ಮುಂದೊಂದು ದಿನ ಸಾಮಾಜಿಕ ನಿಯಮಗಳ ಮೂಲಕ ನಿಯಂತ್ರಣಕ್ಕೊಳಪಟ್ಟಿತು. ಶ್ರಮ ವಿಭಜನೆಯಲ್ಲಿನ ಭಿನ್ನ ವೃತ್ತಿಗಳು ಶ್ರೇಷ್ಠ, ಮಧ್ಯಮ ಮತ್ತು ಕನಿಷ್ಟಗಳ ಆಧಾರದ ಮೇಲೆ ಆಯಾ ವೃತ್ತಿಗಳನ್ನು ನಿರ್ವಹಿಸುವ ಉತ್ಪಾದಕ ಗುಂಪಗುಳ ಸಾಮಾಜಿಕ ಸ್ಥಾನಮಾನಗಳು ನಿರ್ಧರಿತವಾದವು. ಈ ಸ್ಥಾನಮಾನಗಳನ್ನು ಜೀವಂತವಾಗಿರಿಸಲು ಇಂಡಿಯಾದಲ್ಲಿ ಸಾಮಾಜಿಕ ಕಾನೂನುಗಳು ಬಿಗಿಯಾಗುತ್ತಲೇ ಹೋದವು. ಈ ಕಾನುನುಗಳನ್ನು ರೂಪಿಸುತ್ತದಿದವರು ಆಳುವ ವರ್ಗದ ಜನ. ಈ ಅಲ್ಪಸಂಖ್ಯಾತ ಆಳುವ ವರ್ಗದ ಜನ ದುಡಿವ ವರ್ಗಗಳ ಉತ್ಪಾದನೆಯ ಮೇಲೆ ನಿರಂತರ ಒಡೆತನ ಸಾಧಿಸುವ ಕಾರಣಕ್ಕಾಗಿಯೇ ಸಾಮಾಜಿಕ ನಿಯಮಗಳನ್ನು ಉಗ್ರವಾಗಿ ರೂಪಿಸಿದರು. ಜೊತೆಗೆ ದುಡಿವ ವರ್ಗದ ಸಾಮಾಜಿಕ ಗುಂಪುಗಳಿಗೆ ಆರ್ಥಿಕ ಒಡೆತನವನ್ನು ನಿರಾಕರಿಸಿದರಯು. ಈ ಕಾರಣದಿಂದ ಇಂಡಿಯಾದ ದುಡಿವ ವರ್ಗವೆಂದರೆ, ಇಲ್ಲಿನ ಕೆಳಜಾತಿಗಳು. ಈ ಕೆಳಜಾತಿಗಳಲ್ಲಿ ಬಹುತೇಕ ಸಮುದಾಯಗಳು ಉತ್ಪಾದನೆಯಲ್ಲಿ ತೊಡಗಿದ್ದರೆ, ಕೆಲವು ಸಮುದಾಯಗಳು ಸೇವಕ ವರ್ಗವಾಗಿ ರೂಪುಗೊಂಡಿದ್ದವು. ಈ ಸೇವಕ ವರ್ಗದಲ್ಲಿ ಮನರಂಜಕರು, ಊಳಿಗದವರು, ಕುಶಲಕರ್ಮಿಗಳು ಮತ್ತು 'ಅನುತ್ಪಾದಕ ಸೇವೆಗಳ' ಮೂಲಕ ಆಳುವ ವರ್ಗವನ್ನು ಆಶ್ರಯಿಸಿದ್ದ ಸಮುದಾಯಗಳು ಪ್ರಮುಖವಾದವು.

ಈ ಸೇವಕ ವರ್ಗ ಯಾವತ್ತೂ ಆರ್ಥಿಕವಾಗಿ ಆಳುವ ವರ್ಗವನ್ನು ಆಶ್ರಯಿಸಿಯೇ ಬದುಕಬೇಕಿತ್ತು. ಈ ಕಾರಣದಿಂದ ಆಳುವ ವರ್ಗದ ಸ್ವರೂಪ ಬದಲಾದಂತೆ ಸೇವಕ ವರ್ಗದ ಸಾಮಾಜಿಕಾರ್ಥಿಕ ಸ್ಥಿತಿಗತಿಗಳೂ ಬದಲಾಗುತ್ತಿದ್ದವು. ಈ ಸೇವಕ ವರ್ಗದಲ್ಲಿ, ಗೊಂಬೆಕುಣಿಸುವ ಕಿಳ್ಳೆಕ್ಯಾತರು, ಕಸರತ್ತುಗಳನ್ನು ಮಾಡುವ ಡೊಂಬರು ಮತ್ತು ಜಾತಿಗಾರರು, ಹಗಲು ವೇಷದವರು, ಕವಲೆತ್ತಿನವರು, ದೊಂಬಿದಾಸರು, ಕಿನ್ನರಿ ಜೋಗಿಗಳು, ಗೊಂದಲಿಗರು, ಮೋಡಿಕಾರರು, ಬುಡಬುಡಿಕೆಯವರು ಮುಖ್ಯವಾಗಿ ಮನರಂಜಕ ಸಮುದಾಯಗಳು. ಇನ್ನು ಕುಶಲಕರ್ಮಿಗಳಲ್ಲಿ ಬಯಲು ಪತ್ತಾರ, ಬಯಲು ಕುಮ್ಮಾರ, ಮೇದರು, ಪಿಂಜರರು, ಮುದ್ದೆಕಮ್ಮರರು, ಹಂಡಿ ಜೋಗಿಗಳು ಪ್ರಮುಖ ಸಮುದಾಯಗಳು. ಇನ್ನು ಊಳಿಗದವರಾಗಿ ಮತ್ತು ಅನುತ್ಪಾದಕ ಚಟುವಟಿಕೆಗಳ ಮೂಲಕ ಆಳುವ ವರ್ಗವನ್ನು ಆಶ್ರಯಿಸಿದ್ದವುರು, ಹೆಳವರು, ದಕ್ಕಲರು ಮತ್ಮತು ಮೊಂಡರು. ಇವರು 'ಮನೆ ಮಕ್ಕಳಂತೆ' ಆಳುವ ವರ್ಗದ ಸೇವೆ ಮಾಡುತ್ತಾ ಬದುಕಿ ಬಂದವರು. ಈ ಎಲ್ಲಾ ಸಮುದಾಯಗಳಿಗೆ ಪಾರಂಪರಿಕವಾಗಿ ನಿಶ್ಚಿತ ಆದಾಯದ ಮೂಲಗಳಿಲ್ಲ. ಇವರು ಅನಿವಾರ್ಯವಾಗಿ ಆಳುವ ವರ್ಗಗಳನ್ನು ಅವಲಂಬಿಸಲೇಬೇಕಿತ್ತು. ಜೊತೆಗೆ ಆಳುವ ವರ್ಗವೂ ಈ ಸಮುದಾಯಗಳನ್ನು ಪೋಷಿಸುತ್ತಲೂ ಬಂದಿತು. ಆದರೆ ಈ ಆಳುವ ವರ್ಗದ ಬದಲಾದ ಸ್ವರೂಪಕ್ಕೆ ತಕ್ಕಂತೆ ಆವಲಂಬಿತ ಸಮುದಾಯಗಳ ಬದುಕುಗಳೂ ರೂಪಾಂತರಗೊಳ್ಳುತ್ತಿದ್ದವು.

ಇಂಡಿಯಾದ ಮಧ್ಯಕಾಲೀನ ರಾಜಕೀಯ ಕ್ಷೇತ್ರದಲ್ಲಿ ಸಂಭವಿಸಿದ ವಿಶ್ಲೇಷಣೆಗಳ ಕಾರಣಕ್ಕಾಗಿ ಇಲ್ಲಿನ ಪಾರಂಪರಿಕ ಉತ್ಪಾದನ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆದು ಹೋದವು. ಅದರಲ್ಲೂ ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಭಾರತದ ಆರ್ಥಿಕ ಕ್ಷೇತ್ರವನ್ನು ಬ್ರಿಟಿಷರು ನಿರ್ಣಾಯಕವಾಗಿ ನಿಯಂತ್ರಣಕ್ಕೆ ತೆಗೆದುಕೊಂಡರು. ಆಗ ಭಾರತದ ಪಾರಂಪರಿಕ ಉತ್ಪಾದನಾ ಸಂದರ್ಭಗಳಲ್ಲಿ ಭಾರೀ ಬದಲಾವಣೆಗಳು ಸಂಬವಿಸಿದವು. ಜೊತೆಗೆ ಸಂಕೀರ್ಣಗೊಂಡ ಆರ್ಥಿಕ ಚಟುವಟಿಕೆಗಳ ಕಾರಣಕ್ಕಾಗಿ ಸೇವಕ ವರ್ಗವು ನೆಲೆತಪ್ಪಿ ಹೋಯಿತು. ತಮ್ಮನ್ನು ಪೋಷಿಸುತ್ತಿದ್ದ ಆಳುವ ವರ್ಗವೇ ಕಂಪಿ ಆಡಳಿತದಿಂದಾಗಿ ತನ್ನ ಸ್ವಭಾವವನ್ನು ಬದಲಿಸಿಕೊಂಡ ಕಾರಣಕ್ಕೆ ಈ ಸೇವಾ ವರ್ಗವು ದಿಕ್ಕೆಟ್ಟು ಹೋಯಿತು. ಆರ್ಥಿಕ ಮೂಲಗಳನ್ನು ಕಂಡುಕೊಳ್ಳಲು ಅಲೆಮಾರಿ ಬದುಕನ್ನು ರುಪಿಸಿಕೊಳ್ಳಲೇ ಬೇಕಿತ್ತು. ಇಂತಹ ಅಲೆಮಾರಿ ಸಮುದಾಯಗಳಲ್ಲಿ ಹೆಳವರ ಸಮುದಾಯವೂ ಒಂದು.

ಹೆಳವರು ಪಾರಂಪರಿಕವಾಗಿಯೆ ಊಳಿಗಮಾನ್ಯತೆಯನ್ನು ಅವಲಂಬಿಸಿದ್ದ ಮತ್ತು ಈಗಲೂ ಈ ಸಮುದಾಯದ ಅಲೆಮಾರಿ ಗುಂಪು ಊಳಿಗಮಾನ್ಯತೆಯನ್ನು ಅವಲಂಬಿಸಿಯೇ ಇದೆ. ಈ ಅಲೆಮಾರಿ ಗುಂಪುಗಳು ನಮ್ಮ ಸಾಮಾಜಿಕ ಚರಿತ್ರೆಯುದ್ದಕ್ಕೆ ಆಳುವ ವಾಗ್ವಾದವನ್ನು ಆರ್ಥಿಕವಾಗಿ ಅವಲಂಬಿಸಿಕೊಂಡೇ ಬಂದವು. ಯಾವತ್ತೂ ಭಾರತದ ಸಾಂಪ್ರದಾಯಿಕ ಉತ್ಪಾದನ ಸಂಬಂಧಗಳು ಬದಲಾದವೋ ಆಗ ಈ ಅವಲಂಬಿತ ಸಮುದಾಯಗಳ ಬದುಕುಗಳೂ ರೂಪಾಂತರಗೊಂಡವು. ಹೆಳವರು ಆಧುನಿಕಪೂರ್ವ ಕಾಲಘಟ್ಟದಲ್ಲಿ ಊಳಿಗಮಾನ್ಯ ಉತ್ಪಾದನಾ ವ್ಯವಸ್ಥೆ ನಿರಸನಗೊಂಡ ನಂತರ ಅತಂತ್ರ ಅಲೆಮಾರಿಗಳಾಗಿ ರೂಪಾಂತರಗೊಂಡಂತೆ ಕಾಣುತ್ತದೆ. ಸಹಜವಾಗಿಯೇ ತಮ್ಮ ಕುಲಕೊಂಡಾಡುವ ಮತ್ತು ವಂಶಾವಳಿಯ ವಿವರಗಳನ್ನು ದಾಖಲಿಸುತ್ತಾ ಅದನ್ನೆ ತಮ್ಮ ಆರ್ಥಿಕ ಚಟುವಟಿಕೆಯಾಗಿ ಮುಂದುವರೆಸಿದರು. ಈ ಚಟುವಟಿಕೆಯೇ ಅವರನ್ನು ಅಲೆಮಾರಿಗಳನ್ನಾಗಿಸಿತು. ಜೊತೆಗೆ ಹೆಳವರು ತಮ್ಮ ಪಾರಂಪರಿಕ ವ್ಯಕ್ತಿಯನ್ನು ಬಿಟ್ಟು ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಬೇಕಾಯ್ತು. ಅದೇ ಕಾರಣಕ್ಕಾಗಿ ಹೆಳವರಲ್ಲಿ ಅನೇಕ ಪಂಗಡಗಳು ಮತ್ತು ಉಪಪಂಗಡಗಳೂ ರೂಪುಗೊಂಡವು. ಈವತ್ತು ಹೆಳವರಲ್ಲಿ ಅನೇಕ ಉಪಪಂಗಡಗಳು ಅಸ್ತಿತ್ವದಲ್ಲಿವೆ. ಆದರೆ ಇವರು ಮೂಲತಃ ಒಂದೇ ಗುಂಪಿಗೆ ಸೇರಿದವರು ಎಂಬುದಕ್ಕೆ ಅವರಲ್ಲಿ ಅನೇಕ ಎತ್ನೋಗ್ರಫಿಕಲ್ ಸಾಮ್ಯತೆಗಳು ಇಂದಿಗೂ ಉಳಿದುಕೊಂಡು ಬಂದಿವೆ.

ಭಾರತದಲ್ಲಿ ಬದಲಾದ ರಾಜಕೀಯಾರ್ಥಿಕ ಸನ್ನಿವೇಶಗಳಿಗೆ ತಕ್ಕಂತೆ ಹೆಳವರೂ ತಮ್ಮ ಸಾಮಾಜಿಕಾರ್ಥಿಕ ಸ್ಥಿತಿಗತಿಗಳನ್ನು ಬದಲಿಸಿಕೊಳ್ಳುತ್ತಲೇ ಬಂದಿದ್ದರೆ. ಈವತ್ತು ಹೆಳವರು 'ಕ್ರೀಮ್ ಲೇಯರ್'ನ ಜನ ಆಧುನಿಕ ಶಿಕ್ಷಣ ಪಡೆದು ಸರಕಾರಿ ಉದ್ಯೋಗದಲ್ಲಿದ್ದಾರೆ. ಕೃಷಿಕರಾಗಿ ಕೆಲವುರ ಉತ್ತಮ ಸ್ಥಿತಿಯನ್ನು ತಲುಪಿದ್ದಾರೆ. ಆದರೆ ಪಾರಂಪರಿಕ ವೃತ್ತಿಯಲ್ಲಿಯೇ ಮುಂದುವರೆದಿರುವವರು ಅಲೆಮಾರಿಗಳಾಗಿಯೇ ಬದುಕುತ್ತಿದ್ದಾರೆ. ಜೊತೆಗೆ ನಿಶ್ಚಿತ ಆದಾಯ ಮೂಲಗಳಿಲ್ಲದೆ ಈ ಸಮುದಾಯದ ಜನ ಕೃಷಿಕೂಲಿಗಳಾಗಿ, ಕಾರ್ಮಿಕರಾಗಿ ಆರ್ಥಿಕವಾಗಿ ಅತ್ಯಂತ ಹೀನಯ ಸ್ಥಿತಿಯಲ್ಲಿದ್ದಾರೆ. ಈ ಸಮುದಾಯದಲ್ಲಿ ಆರ್ಥಿಕವಾಗಿ

ಹೀನಯ ಸ್ಥಿತಿಯಲ್ಲಿರುವ ಜನರೇ ಹುಸಂಖ್ಯಾತರು. ಪ್ರಸ್ತುತ ಅಧ್ಯಯನವು ಹೆಳವ ಸಮುದಾಯದ ಸಾಮಾಜಿಕಾರ್ಥಿಕ ಸ್ತಿತಿಗತಿಗಳನ್ನು ವಿವರಿಸುವ ಪ್ರಯತ್ನವಾಗಿದೆ. ಈ ಅಧ್ಯಯನ ಹಲವು ಮಿತಿಗಳನ್ನು ಒಳಗೊಂಡಿದ್ದರೂ, ಈ ಶೈಕ್ಷಣಿಕ ಪ್ರಯತ್ನದ ಹಿಂದೆ ಹೆಳವ ಸಮುದಾಯದ ಜನರ ಅಭಿವೃದ್ಧಿಯ ಹಂಬಲಗಳಿವೆ.

**ಅಧ್ಯಯನದ ಫಲಿತಗಳು**

೧. ಭಾರತದ ಸಾಮಾಜದ ಶ್ರೇಣಿಕೃತ ವ್ಯವಸ್ಥೆಯು ಶ್ರಮ ವಿಭಜನೆಯ ನೆಪದಲ್ಲಿ ಸಮಾಜವನ್ನು ವಿಷಮಗೊಳಿಸಿತು.

೨. ಈ ವಿಷಯ ಸಮಾಜವನ್ನು ಪೋಷಿಸಲೆಂದೇ ಆರ್ಥಿಕ ಅಧಿಕಾರಗಳನ್ನು ದುಡಿವ ವರ್ಗಗಳಿಗೆ ನಿರಾಕರಿಸಲಾಯಿತು.

೩. ಉತ್ಪಾದಿತ ಮಿಗುತಾಯದ ಮೇಲೆ ಒಡೆತನ ಸಾಧಿಸಿದ ಆಳುವ ವರ್ಗವು. ಉತ್ಪಾದನಾ ಶಕ್ತಗಳನ್ನು ಜಾತಿಯ ಹೆಸರಲ್ಲಿ ಸ್ವಯಂಪೂರ್ಣಗೊಳಿಸಿ ಸಾಮಾಜಿಕ ಅಸಮಾನತೆಗೆ ಧಾರ್ಮಿಕ ನ್ಯಾಯಬದ್ಧತೆಯನ್ನು ಒದಗಿಸಿತು.

೪. ಭಾರತದ ಕೆಳಜಾತಿಗಳೆಂದರೆ ಆರ್ಥಿಕತೆಯ ಮೇಲೆ ಯವ ಒಡೆತನವನ್ನು ಹೊಂದಲಾರದ ಅಸಹಾಯಕ ದುಡಿವ ಸಮುದಾಯಗಳು.

೫. ಈ ಸಮುದಾಯಗಳಲ್ಲಿ ಸೇವಕ ವರ್ಗವಾಗಿ ಅನೇಕ ಸಮುದಾಯಗಳು ರೂಪಗೊಂಡವು. ಇವು ಆಳುವ ವರ್ಗಕ್ಕೆ ಮತ್ತು 'ಉತ್ಪಾದಕ' ವರ್ಗಕ್ಕೆ ಸೇತುವೆಯಂತೆ ಬದುಕಿ ಬಂದ ಸಮುದಾಯಗಳಿವು.

೬. ಈ ಸೇವಕ ಸಮುದಾಯಗಳು ಆರ್ಥಿಕವಾಗಿ ಆಳವ ವರ್ಗವನ್ನು ಅವಲಮಬಿಸಿಕೊಂಡೇ ಬಂದವು. ಈ ಸಮುದಾಯಗಳ ಆರ್ಥಿಕ ಮೂಲವೆಂದರೆ ಆಳುವ ವರ್ಗದ ಅವಲಂಬನೆ.

೭. ಈ ಕಾರಣದಿಂದ ಆಳುವ ವರ್ಗದ ಸಾಮಾಜಿಕಾರ್ಥಿಕ ಚಟುವಟಿಕೆಗಳಲ್ಲಿ ಬದಲಾವಣೆಗಳಾದಾಗೆಲ್ಲ ಸೇವಕ ಸಮುದಾಯಗಳ ಬದುಕಿನ ಸ್ವರೂಪಗಳು ಬದಲಾಗುತ್ತಾ ಬಂದವು.

೮. ಮಧ್ಯಕಾಲೀನ ಸಮಾಜವು ವಸಾಹತು ಆಡಳಿತದ ಆಳ್ವಿಕೆಯಡಿ ಬಂದ ನಂತರ ಸೇವಕ ಸಮುದಾಯಗಳನ್ನು ಪೋಷಿಸುತ್ತಿದ್ದ ಅಳುವ ವರ್ಗಗಳಲ್ಲಿ ಅನೇಕ ಬದಲಾವಣೆಗಳು ಸಂಭವಿಸಿದವು.

೯. ಭಾರತದ ಸಾಂಪ್ರದಾಯಿಕ ಆಳುವ ವರ್ಗವು ವಸಾಹತು ಆಡಳಿತದ ಸಂದರ್ಭದಲ್ಲಿ ಅನಿವಾರ್ಯವಾಗಿ ತನ್ನ ಆರ್ಥಿಕ ಚಟುವಟಿಕೆಗಳನ್ನು ಬದಲಾದ ನಿಯಮಗಳಿಗೆ ತಕ್ಕಂತೆ ರೂಪಾಂತರಿಸಿಕೊಳ್ಳಬೇಕಿತ್ತು. ಆಗ ಅದು ತನ್ನ ಸೇವಕ ವರ್ಗವನ್ನು ಬಿಟ್ಟುಕೊಡುವುದೂ ಅನಿವಾರ್ಯವಾಗಿತ್ತು.

೧೦. ಈ ಸೇವಕ ಸಮುದಾಯಗಳೇ ಮುಂದೆ ಆರ್ಥಿಕವಾಗಿ ನೆಲೆ ಇಲ್ಲದಂತಾಗಿ ಆದಾಯದ ಮೂಲಗಳನ್ನು ಹುಡುಕಿಕೊಂಡು ಅಲೆಯ ತೊಡಗಿದವು. ಈ ಕಾರಣಕ್ಕಾಗಿ ಈ ಸಮುದಾಯಗಳು ಅಲೆಮಾರಿಗಳಾಗಿ ರೂಪಾಂತರಗೊಂಡವು.

೧೧. ಸೇವಕ ಸಮುದಾಯಗಳು ಅಲೆಮಾರಿಗಳಾಗಿ ರೂಪಾಂತರಗೊಂಡಿದ್ದಕ್ಕೆ ಅವುಗಳಿಗೆ ಯಾವ ಪಾರಂಪರಿಕ ನಿಶ್ಚಿತ ಆದಾಯದ ಮೂಲಗಳಿಲ್ಲದೇ ಇರುವುದು ಮುಖ್ಯ ಕಾರಣ.

೧೨. ಈ ಕಾರಣದಿಂದಾಗಿ ಅಲೆಮಾರಿಗಳು ಭಾರತದ ಸಾಮಾಜಿಕಾರ್ಥಿಕ ವ್ಯವಸ್ಥೆಯಲ್ಲಿ ಚಾರಿತ್ರಿಕವಾಗಿ ರೂಪುಗೊಂಡಿದ್ದಾರೆ.

೧೩. ಇಂತಹ ಅಲೆಮಾರಿಗಳಲ್ಲಿ ಹೆಳವರೂ ಸೇರಿದ್ದಾರೆ, ಮೂಲತಃ ಇವರು ಊಳಿಗಮಾನ್ಯ ಜಾತಿ ವ್ಯವಸ್ಥೆಯ ಸೃಷ್ಟಿಗಳು.

೧೪. ಇವರು ತಮ್ಮನ್ನು ಪೋಷಿಸುವ ಸಮುದಾಯಗಳ ಕುಲ ಕೊಂಡಾಡುವ ಮತ್ತು ಅವುಗಳ ಕೌಟುಂಬಿಕ ವಿವರಗಳನ್ನು ದಾಖಲಿಸುವ ವೃತ್ತಿಯನ್ನು ಪಾರಂಘರಿಕವಾಗಿ ಅವಲಂಬಿಸಿಕೊಂಡು ಬಂದರು.

೧೫. ಯಾವತ್ತೂ ಊಳಿಗಮಾನ್ಯ ವ್ಯವಸ್ಥೆಯು ವಸಾಹತು ಕಾಲಘಟ್ಟದಲ್ಲಿ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯಲ್ಲಿ ಸಮ್ಮಿಳನ ಗೊಂಡಿತೋ ಆಗ ಈ ದೇಶದ ಪಾರಂಪರಿಕ ಉತ್ಪಾದನಾ ವ್ಯವಸ್ಥೆಯಲ್ಲಿ ಗುರುತರ ಬದಲಾವಣೆಗಳಾದವು.

೧೬. ಈ ಬದಲಾವಣೆಗಳಿಂದ ಅವಲಂಬಿತ ಸೇವಕ ಸಮುದಾಯಗಳು ನೆಲೆ ಕಳೆದುಕೊಂಡು ಅಲೆಮಾರಿಗಳಾದವು. ಊಳೀಗಮಾನ್ಯ ವ್ಯವಸ್ಥೆಯು ಬಂಡವಾಳಶಾಹಿ ವ್ಯವಸ್ಥೆಯಾಗಿ ತನ್ನ ರೂಪವನ್ನು ಬದಲಿಸಿದ್ದು ಇದಕ್ಕೆ ಕಾರಣ.

೧೭. ಹೆಳವರು ತಮ್ಮ 'ಪಾರಂಪರಿಕ ಪೋಷಕರನ್ನು' ಕಳೆದುಕೊಂಡ ಮೇಲೆ ಅಲೆಮಾರಿಗಳಾದರು. ಭೀನ್ನ ವೃತ್ತಿಗಳನ್ನೂ ಅವಲಂಬಿಸಿದರು. ಇದರಿಂದಾಗಿ ಹೆಳವರಲ್ಲಿ ಅನೇಕ ಉಪಂಗಡಗಳು ರೂಪುಗೊಂಡವು.

೧೮. ಈವತ್ತು ಅಲೆಮಾರಿಗಳಾಗಿರುವವರು ವಸಾಹತು ಆಡಳಿತದ ಅವಧಿಯಲ್ಲಿ ಕ್ರಿಮಿನಲ್ ಸಮುದಾಯಗಳ ಪಟ್ಟಿಯಲ್ಲಿ ನಮೂದಾಗಿರುವ ಸಮುದಾಯಗಳು. ಆಗಿನ ಕಂಪನಿ ಆಡಳಿತ ಈ ಅಲೆಮಾರಿಗಳನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಂಡಿದೆ.

೧೯. ಕ್ರಿಮಿನಲ್ ಟ್ರೈಬಲ್ ಆಕ್ಟ್‌ನ್ನು ೧೮೯೪ ರಲ್ಲಿ ಉತ್ತರ ಭಾರತದಲ್ಲಿ ಜಾರಿಯಾದರೆ, ೧೯೧೧ ರಲ್ಲಿ ಮದ್ರಾಸ್ ಪ್ರಸಿಡೆನ್ಸಿಯಲ್ಲಿ ಜಾರಿಯಾಯಿತು. ಆದರೆ ದಕ್ಷಿಣ ಭಾರತದಲ್ಲಿ ೧೯೧೧ ರಿಂದ ಕಂಪನಿ ಆಡಳಿತವು ಈ ಅಲೆಮಾರಿ ಸಮುದಾಯಗಳನ್ನು ಎಲ್ಲಾ ವಿಧದಲ್ಲೂ ಶೋಷಣೆ ಮಾಡಿದೆ.

೨೦. ಇವರನ್ನು ಜನ್ಮತಃ ಅಪರಾಧಿ ಸಮುದಾಯಳು (Habitual oftenders) ಎಂದು ಪರಿಗಣಿಸಿದ್ದರಿಂದ ಕಂಪನಿ ಆಡಳಿತವು ಈ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಇನ್ನಿಲ್ಲದಂತೆ ನಾಶ ಮಾಡಿದೆ.

೨೧. ಸ್ವಾತಂತ್ರ್ಯ ಬಂದ ಮೇಲೆ ಸಂವಿಧಾನಾತ್ಮಕವಾಗಿ ಈ ದೇಶದ ಶೋಷಿತ ಜನರಿಗೆ ಲಭ್ಯವಾಗುವ ಸವಲತ್ತುಗಳನ್ನು, ಆಯಾ ಶೋಷಿತ ಸಮುದಾಯಗಳ ಕ್ರಿಮ್ ಲೇಯ್‌ನ ಜನ ಬಳಸಿಕೊಂಡರು. ಇಲ್ಲವೆ ಶೋಷಿತ ಸಮುದಾಯಗಳಲ್ಲಿನ ಪ್ರಬಲ ಜಾತಿಗಳು ಬಳಸಿಕೊಂಡವು. ಇಲ್ಲವೆ ಮೇಲ್ಜಾತಿಯ ಜನರು ಶೋಷಿತ ಸಮುದಾಯಗಳಿಗೆ ಇದ್ದ ಮೀಸಲಾತಿ ಮತ್ತು ಉಳಿದ ಸಂವಿಧಾನಿಕ ಸೌಲಭ್ಯಗಳು ಕ್ರಮವಾಗಿ ಜಾರಿಯಾಗದಂತೆ ನೋಡಿಕೊಂಡರು.

೨೨. ಕ್ರಿಮಿನಲ್ ಟ್ರೈಬಲ್ ಪಟ್ಟಿಯಲ್ಲಿದ್ದ ಹಲವು ಸಮುದಾಯಗಳನ್ನು ಅವುಗಳ ಸಾಮಾಜಿಕಾರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿಸಲಾಯಿತು. ಆದರೆ ಈ ಪಟ್ಟಿಯಲ್ಲಿನ ಕೆಲವು ಸಮುದಾಯಳನ್ನು ಮೇಲಿನ ಎರಡೂ ಪಟ್ಟಿಗೂ ಸೇರಿಸಲಿಲ್ಲ. ಕ್ರಿಮಿನಲ್ ಟ್ರೈಬ್ ಪಟ್ಟಿಯಲ್ಲಿದ್ದು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಪಟ್ಟಿಗೆ ಸೇರಲೇ ಬೇಕಿದ್ದ ಈ ಸಮುದಾಯಗಳು ಅಂತಿಮವಾಗಿ ಆ ಪಟ್ಟಿಯಲ್ಲಿ ಜಾಗ ದೊರಕಿಸಿಕೊಳ್ಳಲಾಗಲಿಲ್ಲ.

೨೩. ಹೀಗೆ ಸಂವಿಧಾನಾತ್ಮಕ ಸೌಲಭ್ಯಗಳನ್ನು ಪಡೆಯಲು ಅರ್ಹವಾಗಿದ್ದ ಸಮುದಾಯಗಳು ಅನುಸೂಚಿತ ಪಟ್ಟಿಯಲ್ಲಿ ಜಾಗ ಪಡೆಯಲಾಗದಿದ್ದಕ್ಕೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲಗೊಳ್ಳಲಿಲ್ಲ. ಇಂತಹ ಸಮುದಾಯಗಳು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಸಮುದಾಯಗಳಿಗಿಂತ ಆರ್ಥಿಕವಾಗಿ ಹೀನಾಯ ಸ್ಥಿತಿಯಲ್ಲಿವೆ.

೧೪. ಹೆಳವರು ಇಂದು ಶುದ್ಧಾಂಗವಾಗಿ ಅಲೆಮಾರಿಗಳಾಗಿಲ್ಲ. ಇವರು ಅರೆ ಅಲೆಮಾರಿಗಳು, ಮತ್ತು ಈ ಸಮುದಾಯದ ಕ್ರೀಮ್ ಲೇಯರ್‌ನ ಜನ ಕೃಷಿಕರಾಗಿ, ವ್ಯಾಪಾರಿಗಳಾಗಿ ಮತ್ತು ಆಧುನಿಕ ಶಿಕ್ಷಣ ಪಡೆದು ಸರಕಾರ ನೌಕರಿ ಪಡೆದು ಉತ್ತಮ ಸ್ಥಿತಿಯಲ್ಲಿದ್ದಾರೆ.

೧೫. ಆದರೆ ಅಲೆಮಾರಿಗಳು ಈ ಸಮುದಾಯದಲ್ಲಿ ಅಸ್ತಿತ್ವದಲ್ಲಿರುವುದು ಮತ್ತು ಅವರು ತಮ್ಮ ಪಾರಂಪರಿಕ ವೃತ್ತಿಯನ್ನು ಸಮರ್ಥಿಸಿಕೊಂಡು ಅದನ್ನು ಮುಂದುವರೆ ಸುತ್ತಿರುವುದು ಮಾತ್ರ ಆಶ್ಚರ್ಯಕರ ಸಂಗತಿ

೧೬. ಹೆಳವರಲ್ಲಿ ಮುಖ್ಯವಾಗಿ ಮೂರು ಭಿನ್ನ ಮನಸ್ಥಿತಿಯ ಗುಂಪುಗಳನ್ನು ಕಂಡುಕೊಳ್ಳಲಾಗಿದೆ. ಪ್ರಾಯಶಃ ಎಲ್ಲ ಅಲೆಮಾರಿಗಳಲ್ಲಿ ಈ ಬಗೆಯ ಗುಂಪುಗಳು ಇರಬಹುದು.

ಅ. ಪಾರಂಪರಿಕ ವೃತ್ತಿಯಲ್ಲಿಯೇ ಮುಂದುವರೆದು ಅಲೆಮಾರಿಗಳಾಗಿ ಬದುಕುತ್ತಿರುವವರು.

ಆ. ಪಾರಂಪರಿಕ ವೃತ್ತಿಯಲ್ಲಿ ಗೌರವವನ್ನಿಟ್ಟುಕೊಂಡೂ ಸಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿಕೊಳ್ಳಲು ಭಿನ್ನ ವೃತ್ತಿಗಳನ್ನು ಅವಲಂಬಿಸಿರುವವರು.

ಇ. ಪಾರಂಪರಿಕ ವೃತ್ತಿಯಲ್ಲಿ ಯಾವ ಗೌರವೂ ಇಲ್ಲದೆ ಆಧುನಿಕ ಶಿಕ್ಷಣ ಪಡೆದು ಸರಕಾರಿ ಉದ್ಯೋಗದಲ್ಲಿರುವವರು, ಕೃಷಿಕರಾಗಿ, ವ್ಯಾಪಾರಿಗಳಾಗಿ ಬದುಕುತ್ತಿರುವವರು.

೧೭. ಹೆಳವರು ಸಾಮಾನ್ಯವಾಗಿ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಅದು ಬೆಳಗಾಂ, ಬೀದರ್, ಬಳ್ಳಾರಿ, ರಾಯಚೂರು ಮತ್ತು ದಕ್ಷಿಣ ಕರ್ನಾಟಕದ ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಪಾರಂಪರಿಕ ವೃತ್ತಿಯನ್ನು ಅನುಸರಿಸುತ್ತಿರುವುದು ಕಂಡು ಬರುತ್ತದೆ.

೧೮. ಹೆಳವ ಸಮುದಾಯದಲ್ಲಿ ಪ್ರಮುಖವಾಗಿ ಮೂರು ಪಂಗಡಗಳಿದ್ದು, ೧೧ ಉಪಪಂಗಡಗಳಿರುವುದು ಕಂಡು ಬರುತ್ತದೆ.

೧೯. ಚಾರಿತ್ರಿಕವಾಗಿ ಹೆಳವರು ಸೇವಕ ಸಮುದಾಯವಾಗಿದ್ದುಕೊಂಡು, ಊಳಿಗಮಾನ್ಯ ಕೃಷಿ ವ್ಯವಸ್ಥೆಯನ್ನು ಆರ್ಥಿಕವಾಗಿ ಅವಲಂಬಿಸಿಕೊಂಡು ಬಂದವರಾಗಿದ್ದಾರೆ.

೨೦. ನನ್ನ ಈ ಅಧ್ಯಯನಕ್ಕಾಗಿ ಕೈಗೊಂಡ ಗಣತಿಯಲ್ಲಿ ಶೇ. ೭೫ ಕ್ಕೂ ಹೆಚ್ಚು ಜನ ಇನ್ನೂ ದುಡಿಮೆಯ ಪ್ರಾಥಮಿಕ ವಲಯವನ್ನೂ ಪ್ರವೇಶಿಸದೆ 'ಆದಿಮ' ಹಂತದಲ್ಲಿಯೇ ಇದ್ದಾರೆ. ಅಂದರೆ ಇಂತಹ ಜನ ಸಮುದಾಯಗಳು ನಾಡಿನ 'ಮುಖ್ಯವಾಹಿನಿಯ' ಉತ್ಪಾದನಾ ವ್ಯವಸ್ಥೆಯ ಒಳಗೆ ಪ್ರವೇಶವನ್ನೇ ಪಡೆದಿಲ್ಲ. ಅಂದರೆ ಇವರು 'ಆದಿಮ ವಲಯ'ದ ಜನರೇ ಆಗಿದ್ದಾರೆ. ಈ ವಲಯದ ಜನ ಹೆಚ್ಚಾಗಿ ಆರ್ಥಿಕವಾಗಿ ಅವಲಂಬಿತರು. ನೆಲೆ ಇಲ್ಲದವರು ಮತ್ತು ಯಾವುದನ್ನು ನಾವು ರಾಷ್ಟ್ರೀಯ ತಲೆ ಆದಾಯ ಎಂದು ಗುರುತಿಸುತ್ತಾವೋ ಆ ಲೆಕ್ಕಚಾರದಿಂದ ದೂರ ಉಳಿಯುವ ಅನಾಮಿಕ ಗುಂಪಿಗೆ ಸೇರಿದವರು.

೨೧. ಹೆಳವ ಪಂಗಡಗಳಲ್ಲಿ ಬಹು ಸಂಖ್ಯಾತ ಜನ ಆರ್ಥಿಕವಾಗಿ ಅತ್ಯಂತ ದುರ್ಬಲರಾಗಿದ್ದು ನಿಶ್ಚಿತ ಆದಾಯವನ್ನು ತರುವ ಯಾವ ಆರ್ಥಿಕ ಮೂಲಗಳೂ ಇವರಿಗೆ ಲಭ್ಯವಾಗಿಲ್ಲ.

೨೨. ರಾಜ್ಯದ ಯಾವ ಯವ ತಾಲೂಕುಗಳಲ್ಲಿ ಹೆಳವರು ಪಾರಂಪರಿಕ ವೃತ್ತಿಯನ್ನು ಅನುಸರಿಸುತ್ತಿದ್ದಾರೋ ಆ ತಾಲೂಕುಗಳಲ್ಲಿ ಬಹುತೇಕ ಕುಟುಂಬಗಳು ಭೂ ರಹಿತವಾಗಿವೆ. ಉದಾಹರಣೆಗೆ ಗೋಕಾಕ್ ತಾಲೂಕಿನ ಕುಟುಂಬಗಳು ಭೂ ರಹಿತವಾಗಿವೆ. ಉದಾಹರಣೆಗೆ, ಗೋಕಾಕ್ ತಾಲೂಕಿನ ಎತ್ತಿನ ಹೆಳವರ ೧೭೦ ಕುಟುಂಬಗಳ ಪೈಕಿ ೧೦೧ ಕುಟುಂಬಗಳೂ ಭೂ ರಹಿತ ಕುಟುಂಬಗಳಾಗಿವೆ.

೩೩. ಗಣತಿಗೆ ಒಳಪಟ್ಟ ಒಟ್ಟು ೧೦೦೦ ಕುಟುಂಬಗಳ ಪೈಕಿ ಭೂಮಿಯನ್ನು ಹೊಂದಿರುವ ಕುಟುಂಬಗಳು ೨೩೯ ಮಾತ್ರ. ೭೬೧ ಕುಟುಂಬಗಳು ಭೂ ರಹಿತವಾಗಿವೆ. ಭೂಮಿಯನ್ನು ಹೊಂದಿರುವ ೨೩೯ ಕುಟುಂಬಗಳು ಒಟ್ಟು ೪೨೯ ಎಕರೆ ಜಮೀನನ್ನು ಹಂಚಿಕೊಂಡಿವೆ. ಅಂದರೆ ಪ್ರತಿ ಕುಟುಂಬ ಸರಾಸರಿ ೧.೭೯ ಎಕರೆ ಜಮಿನನ್ನು ಕೃಷಿಗೆ ಬಳಸುತ್ತಿರುವುದು ಕಂಡು ಬರುತ್ತದೆ. ಈ ೪೨೯ ಎಕರೆ ಕೃಷಿ ಭೂಮಿಯಲ್ಲಿ ನೀರಾವರಿ ವ್ಯವಸ್ಥೆ ಇರುವುದು ಕೇವಲ ೩೩ ಎಕರೆ ಜಮೀನಿಗೆ ಮಾತ್ರ.

೩೪. ಗಣತಿಗೆ ಒಳಪಟ್ಟ ೪೬೩೮ ಜನರಲ್ಲಿ ಕೆಲವು ೭೧ ಜನ ಮಾತ್ರ ಕೃಷಿಯನ್ನು ಅವಲಂಬಿಸಿ, ಬದುಕುತ್ತಿದ್ದಾರೆ. ಈ ೭೧ ಜನರಲ್ಲಿ ಹೆಚ್ಚಿನವುರ ಹಾವೇರಿ, ಚಿಕ್ಕಮಗಳೂರು ಮತ್ತು ಬೆಳಗಾಂ ಜಿಲ್ಲೆಗೆ ಸೇರಿದವರು. ಉಳಿದಂತೆ ಹೆಚ್ಚಿನವರು ವಿವಿಧ ಬಗೆಯ ದಿನಗೂಲಿಗಳಾಗಿ ಮತ್ತು ಪಾರಂಪರಿಕ ವೃತ್ತಿಯನ್ನು ಅವಲಂಬಿಸಿ ಅಲೆಮಾರಿಗಳಗಿ ಬದುಕುತ್ತಿದ್ಧಾರೆ. ಪಾರಂಪರಿಕ ವೃತ್ತಿಯನ್ನು ಅವಲಂಬಿಸಿ ಅಲೆಮಾರಿ ಜೀವನ ನಡೆಸುತ್ತಿರುವವರು ಹೆಚ್ಚಾಗಿ ಬೆಳಗಾಂ, ಮಂಡ್ಯ, ಚಿತ್ರದುರ್ಗ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಸಿಗುತ್ತಾರೆ.

೩೫. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಾಕ್ಷರತೆಗಿಂತಲೂ ಹೆಳವರ ಸಾಕ್ಷರತೆಯ ಪ್ರಮಾಣವು ಅತ್ಯಂತ ಕಡಿಮೆ ಇರುವುದು ಕಂಡು ಬರುತ್ತದೆ. ಅದರಲ್ಲೂ ಮಹಿಳೆಯರು ಹೆಳವ ಸಮುದಾಯದಲ್ಲಿ ಗಣನೀಯ ಪ್ರಮಾಣದಲ್ಲಿ ಅನಕ್ಷರಸ್ಥರಿರುವುದು ಕಂಡು ಬರುತ್ತದೆ. ಇದಕ್ಕೆ ಕಾರಣ ಈ ಸಮುದಾಯದ ಆರ್ಥಿಕ ಸ್ಥಿತಿ ಎಂಬುದು ಸ್ಪಷ್ಟವಾಗುತ್ತದೆ.

೩೬. ಹೆಳವರು ಆರ್ಥಿಕವಾಗಿ ಚರಿತ್ರೆಯ ಹೆಜ್ಜೆಗಳಲ್ಲಿಯೇ ತಮ್ಮ ಹೆಜ್ಜೆಗಳನ್ನು ಮೂಡಿಸಲು ಯತ್ನಿಸುತ್ತಿದ್ದಾರೆ. ಆರ್ಥಿಕವಾಗಿ ಊಳಿಗಮಾನ್ಯ ವ್ಯವಸ್ಥೆಯನ್ನೇ ಅವಲಂಬಿಸುತ್ತಿದ್ದಾರೆ. ಆ ಕಾರಣದಿಂದಾಗಿಯೇ ಆರ್ಥಿಕವಾಗಿ ಹಿನ್ನೆಡೆ ಅನುಭವಿಸುವುದರ ಜೊತೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ರಂಗಗಳಲ್ಲಿಯೂ ಶೋಚನೀಯವಾಗಿ ಹಿಂದುಳಿದಿದ್ದಾರೆ.

೩೭. ಹೆಳವ ಸಮುದಾಯದ ಕ್ರೀಮ್ ಲೇಯರ್‌ನ ಜನ ಮಾತ್ರ ಇಂದು ತಾವು ಅನುಸರಿಸುತ್ತಿರುವ ಭಿನ್ನ ಆರ್ಥಿಕ ಚಟುವಟಿಕೆಗಳ ಕಾರಣಕ್ಕಾಗಿ ಭಿನ್ನಾವಾದ ಸಾಮಾಜಿಕಾರ್ಥಿಕ ಅವಕಾಶದಲ್ಲಿ ಬದುಕುತ್ತಿದ್ದಾರೆ.

**ಕೆಲವು ಸಲಹೆಗಳು**

೧. ಅಲೆಮಾರಿತನ ಹೆಳವ ಸಮುದಾಯಗದ ಬಹುಸಂಖ್ಯಾತರನ್ನು ಆರ್ಥಿವಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣವಾಗಿದೆ. ಅಲೆಮಾರಿಗಳನ್ನು ನೆಲೆಗೊಳಿಸುವ ಪ್ರಯತ್ನ ಆಗಬೇಕಿದೆ.

೨. ಅಲೆಮಾರಿಗಳನ್ನು ಅಷ್ಟು ಸುಲಭವಾಗಿ ನೆಲೆನಿಲ್ಲಿಸಲು ಸಾಧ್ಯವಿಲ್ಲ. ಏಕೆಂದರೆ ತಮ್ಮ ಪಾರಂಪರಿಕ ವೃತ್ತಿಯ ಮೇಲೆ ಅವರಿಗೆ ವಿಶೇಷವಾದ ಮೋಹವಿದೆ. ಈ ಹೆಳವ ವೃತ್ತಿಯು ಯಾವ ಕಾರಣಕ್ಕೂ ಸದರಿ ಸಮುದಾಯವನ್ನು ಸಬಲೀಕರಿಸಲು ಸಾಧ್ಯವಿಲ್ಲ. ಸರಕಾರ ಈ ಅಲೆಮಾರಿಗಳನ್ನು ನೆಲೆನಿಲ್ಲಿಸಲು ವಿಶೇಷ ಪ್ರಯತ್ನಗಳನ್ನು ಕೈಗೊಳ್ಳಬೇಕಿದೆ.

೩. ಕುಲಕೊಂಡಾಡುವ ಮತ್ತು ವಾರ್ಷಿಕ ಪಾಲನ್ನು ಬೇಡಿ ಪಡೆಯುವ ತಮ್ಮ ಕುಲವೃತ್ತಿಯನ್ನು ಅಲೆಮಾರಿ ಹೆಳವರು ವಿಚಿತ್ರ ಕಾರಣಗಳಿಗೆ ಸಮರ್ಥಿಸಿಕೊಳ್ಳುತ್ತಾರೆ. ಅಸ್ಪೃಶ್ಯ ಮತ್ತು ಕೆಳಜಾತಿಗಳ ಕುಲವೃತ್ತಿಗಳು ಹೇಯವಾಗಿರುವುದರಿಂದ ಸಾಮಾಜಿಕ ಅವಮಾನದ ಕಾರಣಕ್ಕಾಗಿ ಈ ಸಮುದಾಯಗಳು ಅವುಗಳನ್ನು ಬಿಟ್ಟುಕೊಡುತ್ತಿವೆ. ಮತ್ತು ಈ ಸಮುದಾಯಗಳು ತಮ್ಮ ಮೂಲವೃತ್ತಿಗಳನ್ನು ಬಿಟ್ಟುಕೊಡುತ್ತಿರುವ ಕಾರಣಕ್ಕಾಗಿ ಅವರ ಮೇಲೆ ಹಿಂಸೆ ಮತ್ತು ಸಾಮಾಜಿಕ ಬಹಿಷ್ಕಾರಗಳು ಮೇಲ್ಜಾತಿಗಳಿಂದ ನಿರಂತರವಾಗಿ ನಡೆಯುತ್ತಿವೆ. ಅಸ್ಪೃಶ್ಯ ಮತ್ತು ಕೆಳಜಾತಿ ಸಮುದಾಯಗಳು ತಮ್ಮ ಕುಲದ ವೃತ್ತಿಗಳನ್ನು ಬಿಟ್ಟುಕೊಡಲೇಬೇಕಿದೆ. ಆದರೆ ಹೆಳವರ ಕುಲವೃತ್ತಿಗೆ ಊಳಿಗಮಾನ್ಯ ಜಾತಿ ವ್ಯವಸ್ಥೆಯಲ್ಲಿ ಅಸ್ಪೃಶ್ಯ ಜಾತಿಗಳ ವೃತ್ತಿಗಳಿಗಿರುವಂತೆ ಅವಮಾನಗಕರವಾದ ಸ್ಥಾನಮಾನಗಳಿಲ್ಲ. ಕೆಲವು ಕಡೆ ಊಳಿಗಮಾನ್ಯತೆ ಇಂದಿಗೂ ಹೆಳವರ ಕುಲಕೊಂಡಾಡುವ ಅವರ ಕಸಬನ್ನು ಪ್ರೋತ್ಸಾಹಿಸುತ್ತಿದೆ.

ಜೊತೆಗೆ ಹೆಳವರಿಗೆ ತಮ್ಮ ಮನೆಯೊಳಗೆ ಪ್ರವೇಶಿಸುವುದಕ್ಕೆ ಅವಕಾಶಕೊಟ್ಟು, ತಮ್ಮ ಪಾರಂಪರಿಕ ಗತ್ತುಗಳಿಂದ ಕುಲದ ಚರಿತ್ರೆಯನ್ನು ಕೇಳುವ ಪ್ರವೃತ್ತಿಯು ಹೆಳವರ ಕುಲಕಸಬನ್ನು ಒಂದು ಸಾಂಸ್ಕೃತಿಕ ಅವಕಾಶದಲ್ಲಿ (Space) ಗೌರವಿಸುತ್ತದೆ. ಹೆಳವರು ತಮ್ಮ ಕುಲಕಸಬನ್ನು ಈ ಕಾರಣದಿಂದಾಗಿಯೇ ಸಮರ್ಥಿಸಿಕೊಳ್ಳುವಂತೆ ಕಾಣುತ್ತದೆ.

೪. ಈಗಾಗಲೇ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲೀಕರಣಗೊಂಡ ಹೆಳವ ಸಮುದಾಯದ ಜನರನ್ನು ಮತ್ತು ಆಸಕ್ತ ಆಕ್ಟಿವಿಷ್ಟುಗಳನ್ನು ಬಳಸಿಕೊಂಡು ಅಲೆಮಾರಿ ಹೆಳವರನ್ನು ನೆಲೆನಿಲ್ಲಿಸಲು ಮನವೊಲಿಸುವ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು ಒಳ್ಳೆಯದು.

೫. ಈ ಶಿಬಿರಗಳನ್ನು ಒಂದು ಮುಕ್ತ ವಾತಾವರಣದಲ್ಲಿ ನಡೆಸುವುದರ ಜೊತೆಗೆ, ಪಾರಂಪರಿಕ ವೃತ್ತಿಯನ್ನು ಅನುಸರಿಸುತ್ತಿರುವ ಗುಂಪುಗಳ ಮನಃಪರಿವರ್ತನೆಗೆ ಬೇಕಾದ ಎಲ್ಲ ಬಗೆಯ ಅಭ್ಯಾಸ ಸಾಮಾಗ್ರಿಗಳನ್ನು ಬಳಸಿಕೊಂಡು, ಜನಪ್ರಿಯ ಮಾಧ್ಯಮಗಳ ಮೂಲಕ ಅವರಲ್ಲಿ ಅರಿವು ಮೂಡಿಸುವ ನಿರಂತರ ಶಿಬಿರಗಳು ನಡೆಯುವಂತಾಗಬೇಕು.

೬. ಅಲೆಮಾರಿಗಳಿಗಾಗಿ ಸರಕಾರದ ಯಾವ ಇಲಾಖೆಯಲ್ಲೂ ಅಭಿವೃದ್ಧಿಯ ಪ್ಯಾಕೇಜ್‌ಗಳಿರುವುದು ಕಂಡುಬರುವುದಿಲ್ಲ. ಸರಕಾರವು ಅಲೆಮಾರಿಗಳಿಗಾಗಿಯೇ ಅಭಿವೃದ್ಧಿ ಪ್ಯಾಕೇಜ್‌ನ್ನು ರೂಪಿಸಬೇಕು.

೭. ಅಲೆಮಾರಿಗಳನ್ನು ವಸ್ತುನಿಷ್ಠವಾಗಿ ಗುರುತಿಸಿ ಅವರಿಗೆ ಸಂವಿಧಾನ ಬದ್ಧ ಪ್ರತ್ಯೇಕ ಮೀಸಲಾತಿ ವ್ಯವಸ್ಥೆ ಮಾಡುವುದು.

೮. ಅಲೆಮಾರಿಗಳು ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿರುವುದು ಅವರಿಗೆ ನಿಶ್ಚಿತಿ ಆದಾಯದ ಮೂಲಗಳಿಲ್ಲದೇ ಇರವುದರಿಂದ. ಸರಕಾರ ಹೆಳವ ಸಮುದಾಯದ ಜನರ ಆಸಕ್ತಿಗಳಿಗೆ ಅನುಗುಣವಾಗಿ, ಕೃಷಿಭೂಮಿ, ವ್ಯಾಪಾರಕ್ಕಾಗಿ ಅಗತ್ಯ ಸಾಲ ಸೌಲಭ್ಯಗಳಂತಹ ವಿಶೇಷ ಯೋಜನೆಗಳನ್ನು ಹಮ್ಮಿಕೊಳ್ಳದಿದ್ದರೆ ಇವರು ಸಬಲೀಕರಣಗೊಳ್ಳಲು ಸಾಧ್ಯವಿಲ್ಲ ಈ ಹೊತ್ತಿಗೆ ಅಲೆಮಾರಿಗಳಿಗೆ ನಿಶ್ಚಿತ ಆಧಾಯ ತುರವ ಆರ್ಥಿಕ ಮೂಲಗಳ ಅಗತ್ಯವಿದೆ. ಸರಕಾರವು ಈ ಕುರಿತು ಗಂಭೀರವಾಗಿ ಯೋಚಿಸಬೇಕಿದೆ.

೯. ಅಲೆಮಾರಿ ಹೆಳವ ಸಮುದಾಯ ಮಕ್ಕಳ ಶಿಕ್ಷಣಕ್ಕಾಗಿ ವಸತಿ ಶಾಲೆ ಅಥವ ಆಶ್ರಮಶಾಲೆಗಳ ಮಾದರಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಬೇಕು. ಈ ಶಾಲೆಗಳು, ಅಲೆಮಾರಿಗಳು ಈವತ್ತೂ ಸಂಚಾರ ಮಾಡುವ ಪ್ರದೇಶಗಳಲ್ಲಿ ಪ್ರಾರಂಭವಾಗಬೇಕು. ಮತ್ತು ಅಲ್ಲಿ ಸಂಪೂರ್ಣ ಉಚಿತ ಶಿಕ್ಷಣ ಸಿಗುವಂತಾಗಬೇಕು.

೧೦. ಹೆಳವರನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ನಮೂದಿಸಲಾಗಿದೆ. ಸಂವಿಧಾನವು ಹಿಂದುಳಿದ ವರ್ಗಗಳನ್ನು ಗುರುತಿಸುವ ವಿಧಾನವನ್ನು ಇಂದಿಗೂ ಮುಕ್ತವಾಗಿರಿಸಿದೆ. ಅದು ಸಂದರ್ಭ ಮತ್ತು ಅಗತ್ಯಗಳಿಗೆ ಅನುಗುಣವಾಗಿರಬೇಕು ಎಂಬ ಆಶಯವನ್ನು ಇದು ಪ್ರತಿನಿಧಿಸಬಹುದು. ಆದರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಅನೇಕ ಅಲೆಮಾರಿಗೂ ಸೇರಿ ಹೋಗಿದ್ದಾರೆ. ಸಂವಿಧಾನ ೧೫ (೪) ಮತ್ತು ೧೬ (೪) ನೇ ಅನುಚ್ಛೇದಗಳು ಹಿಂದುಳಿದ ವರ್ಗಗಳ ಅಭಿವೃದ್ಧಿಯ ಸಲುವಾಗಿ ಕೆಲವು ಕಾರ್ಯಕ್ರಮಗಳನ್ನು ಸೂಚಿಸುತ್ತವೆ. ಆದರೆ ಈವತ್ತು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಬಲಾಢ್ಯ ಸಮುದಾಯಗಳು ಈ ಸಂವಿಧಾನಾತ್ಮಕ ಸೌಲಭ್ಯಗಳನ್ನು ಅನಾಯಾಸವಾಗಿ ದಕ್ಕಿಸಿಕೊಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ ಯಾವ ದನಿಯೂ ಇಲ್ಲದ ಅಲೆಮಾರಿಗಳು ಸಂವಿಧಾನಾತ್ಮಕ ಸೌಲಭ್ಯಗಳನ್ನು ಬಳಸಿಕೊಳ್ಳಲು ಸಾಧ್ಯವಾಗುವುದಿಲ್ಲ.

